ಶನಿವಾರ, ಏಪ್ರಿಲ್ 2, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಬೂಬಿಯಾ ಸೊಬಗು

ವಸಂತ ಋತುವನ್ನು ಬರಮಾಡಿಕೊಳ್ಳಲು ನಿಸರ್ಗವು ಸಜ್ಜಾಗಿದೆ. ಬೆಂಗಳೂರಿನ ನಾಗರಬಾವಿ ಬಳಿ ಹೂಗಳಿಂದ ಮೈದುಂಬಿಕೊಂಡ ತಬೂಬಿಯಾ ರೋಸಿಯಾ ಮರದ ಸೊಬಗು

ಶನಿವಾರ, ಏಪ್ರಿಲ್ 2, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 92 | ಪುಟ 30

www.prajavani.net | /prajavani.net | @prajavani | /prajavani | http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶುಭಕೃತು ಸಂವತ್ಸರ: ಶುಭವೇ ಹೆಚ್ಚಾಗಲಿರುವ ವರ್ಷ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
59, 276 ▲	17,670 ▲	₹53,540 (ಬೆಂಗಳೂರು) ▲	₹69,100 (ಬೆಂಗಳೂರು)

ಭೂಮಿಕಾ
ಯುಗಾದಿಯ ಸಮಯದಲ್ಲಿ ವಸಂತ ತುಂಬಿಕೊಡುವ ಸೊಗಸನ್ನು, ಸಂತಸವನ್ನು ಆಸ್ವಾದಿಸುವಾಗ ಬಾಲ್ಯದ ನೆನಪುಗಳು ಮೆರವಣಿಗೆ ಹೊರಡುತ್ತವೆ.

ಬಿಡುವು

ಪ್ರಿಯ ಓದುಗರು, ಜಾಹೀರಾತುದಾರರು, ಪತ್ರಿಕಾ ವಿತರಕರಿಗೆ ಯುಗಾದಿ ಹಬ್ಬದ ಶುಭಾಶಯಗಳು

ಯುಗಾದಿ ಪ್ರಯುಕ್ತ ಶನಿವಾರ ಕಚೇರಿಗೆ ಬಿಡುವು. ಹೀಗಾಗಿ ಭಾನುವಾರದ ಸಂಚಿಕೆ ಪ್ರಕಟವಾಗುವುದಿಲ್ಲ.
–ಸಂ

ದಿನದ ಬೆಳವಣಿಗೆಗಳ ಅಪ್‌ಡೇಟ್ಸ್‌ಗಾಗಿ www.prajavani.net ನೋಡಿ.

ಮತಬೇಟೆಯ ಮೊದಲಾಟ

ವಿಧಾನಸಭೆ ಚುನಾವಣೆಗೆ ಒಂದು ವರ್ಷ ಬಾಕಿ ಇರುವಾಗಲೇ ಮತಬೇಟೆಯ ಮೊದಲಾಟ ರಾಜ್ಯದಲ್ಲಿ ಶುರುವಾಗಿದೆ. 2023ರಲ್ಲೂ ಗೆದ್ದು ಅಧಿಕಾರದಲ್ಲಿ ಉಳಿಯಲು ‘ಕಮಲ’ ಪಡೆ ಕಣಕ್ಕೆ ಇಳಿದಿದೆ. ಬಿಜೆಪಿಯನ್ನು ಮಣಿಸಿ, ಗದ್ದುಗೆಗೇರುವ ತವಕದಲ್ಲಿರುವ ಕಾಂಗ್ರೆಸ್ ತಲೆಯಾಳುಗಳು ವೇದಿಕೆ ಸಜ್ಜುಗೊಳಿಸುತ್ತಿದ್ದಾರೆ. ಆಯಾ ಪಕ್ಷಗಳ ರಾಜ್ಯನಾಯಕರ ಮಧ್ಯದ ಸಣ್ಣಪುಟ್ಟ ಭಿನ್ನಮತ ಬದಿಗೆ ಸರಿಸಿ, ಒಗ್ಗಟ್ಟು ಮೂಡಿಸಲು ಎರಡೂ ಪಕ್ಷಗಳ ರಾಷ್ಟ್ರೀಯ ನಾಯಕರು ಶುಕ್ರವಾರ ಅಖಾಡಕ್ಕೆ ಇಳಿದರು. ಎರಡು ದಿನ ರಾಜ್ಯ ಪ್ರವಾಸದಲ್ಲಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತಮ್ಮ ಪಕ್ಷಗಳ ನಾಯಕರ ಜತೆ ಚರ್ಚಿಸಿ, ಚುನಾವಣೆಯ ತಾಲೀಮಿಗೆ ಅಧಿಕೃತ ಚಾಲನೆಯನ್ನೂ ಕೊಟ್ಟದ್ದಾರೆ.

ಮಿಷನ್ 150+ ಗುರಿ: ಶಾ

ಬೆಂಗಳೂರು: ವಿಧಾನಸಭಾ ಚುನಾವಣೆಯಲ್ಲಿ 150ಕ್ಕೂ (ಮಿಷನ್ 150 +) ಹೆಚ್ಚು ಸ್ಥಾನಗಳನ್ನು ಗೆಲ್ಲುವುದಕ್ಕೆ ಗುರಿ ನಿಗದಿ ಮಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಗುರಿ ಮುಟ್ಟಲು ರಾಜ್ಯದ ನಾಯಕರಿಗೆ ಮಹತ್ವದ ಸೂಚನೆಗಳನ್ನೂ ನೀಡಿದ್ದಾರೆ. ತಕ್ಷಣವೇ ‘ರೋಡ್ ಮ್ಯಾಪ್’ ಸಿದ್ಧಪಡಿಸುವಂತೆಯೂ ಸೂಚಿಸಿದ್ದಾರೆ.

ಬಿಜೆಪಿ ರಾಜ್ಯ ಕಚೇರಿಯಲ್ಲಿ ಪಕ್ಷದ ಪ್ರಮುಖರ ಸಭೆಯನ್ನು ಶುಕ್ರವಾರ ರಾತ್ರಿ ನಡೆಸಿದ ಅವರು, ‘ಈ ಹಿಂದೆ ಯಡವಟ್ಟು ಮಾಡಿಕೊಂಡಂತೆ ಈ ಬಾರಿ ಮಾಡಬಾರದು. ಕಳೆದ ಬಾರಿ 104 ಸ್ಥಾನ ಗೆಲ್ಲಲು ಮಾತ್ರ ಸಾಧ್ಯವಾಗಿತ್ತು. ಈ ಬಾರಿ 150 ಕ್ಕೂ ಕಡಿಮೆ ಆಗಬಾರದು’ ಎಂದು ಅವರು ತಾಕೀತು ಮಾಡಿದ್ದಾರೆ.

ಹಳೆ ಮೈಸೂರು ಭಾಗದಲ್ಲಿ ಹೆಚ್ಚು ಸ್ಥಾನ ಗೆಲ್ಲಲು ಗಮನ ಕೇಂದ್ರೀಕರಿಸಬೇಕು. ಜಾತಿ ಸಮೀಕರಣ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಆದ್ಯತೆ ನೀಡಬೇಕು. ಚುನಾವಣೆ ಯಾವಾಗ ನಡೆದರೂ ಒಂದೇ, ಅವಧಿಪೂರ್ವ ಮಾಡಬೇಕೆಂದೇನೂ ಇಲ್ಲ. ಪರಿಣಾಮ ಬೇರೆ ಆಗುವುದಿಲ್ಲ. ಸಂಘಟನೆಯಲ್ಲಿ ಸಚಿವರಾದಿಯಾಗಿ ಎಲ್ಲರೂ ಪ್ರಖರವಾಗಿ ತೊಡಗಿಸಿಕೊಳ್ಳಬೇಕು. ಮೀಸಲಾತಿಯಂತಹ ವಿಷಯವನ್ನು ಸೂಕ್ಷ್ಮವಾಗಿ ನಿಭಾಯಿಸಬೇಕು ಎಂದು ಶಾ ಸೂಚಿಸಿದರು. ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ‘ಈಗ ವಿಧಾನಸಭೆಯಲ್ಲಿ ನಮ್ಮ ಸಂಖ್ಯೆ 120 ಇದೆ. 150ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲು ಯಾವ ಮಾನದಂಡ ಅನುಸರಿಸಬೇಕು ಎಂಬ ಬಗ್ಗೆ ಮಾರ್ಗದರ್ಶನ ಮಾಡಿದರು. ಅದರ ಪ್ರಕಾರವೇ ಚುನಾವಣೆಗೆ ತಳಮಟ್ಟದಲ್ಲಿ ಸಿದ್ಧತೆ ನಡೆಸುತ್ತೇವೆ’ ಎಂದರು.

‘ಐದು ರಾಜ್ಯಗಳಲ್ಲಿ ಪಕ್ಷ ಅಭೂತಪೂರ್ವ ಗೆಲುವು ಸಾಧಿಸಿದ ಮೇಲೆ ಕಾಂಗ್ರೆಸ್ ಮತ್ತು ಇತರ ಪಕ್ಷಗಳಿಂದ ಬಿಜೆಪಿಗೆ ಬರಲು ಸಾಕಷ್ಟು ಜನ ಆಸಕ್ತಿ ತೋರಿದ್ದಾರೆ. ಇದಕ್ಕಾಗಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ನೇತೃತ್ವದಲ್ಲಿ ಒಂದು ತಂಡ ಮಾಡಲಾಗುವುದು. ಅಗತ್ಯ ಇರುವ ಕ್ಷೇತ್ರಗಳಲ್ಲಿ ಯಾರನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಈ ತಂಡ ತೀರ್ಮಾನಿಸುತ್ತದೆ’ ಎಂದು ರವಿ ಹೇಳಿದರು.

150 ಸ್ಥಾನ ಗೆಲ್ಲಲೇಬೇಕು: ರಾಹುಲ್

ಬೆಂಗಳೂರು: ‘ಎಲ್ಲರೂ ಒಗ್ಗಟ್ಟಿನಿಂದ ಹೋರಾಟ ನಡೆಸುವ ಮೂಲಕ 2023ರ ಚುನಾವಣೆಯಲ್ಲಿ ಕಾಂಗ್ರೆಸ್ 150ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆದ್ದು ಸ್ಪಷ್ಟ ಬಹುಮತ ಪಡೆಯುವ ಗುರಿ ಹೊಂದಬೇಕು’ ಎಂದು ಪಕ್ಷದ ನಾಯಕ ರಾಹುಲ್ ಗಾಂಧಿ ನಿರ್ದೇಶನ ನೀಡಿದ್ದಾರೆ.

ನಗರದಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ವಿಧಾನಸಭೆ ಚುನಾವಣೆಗೆ ರಣಕಹಳೆ ಮೊಳಗಿಸಿದ ಅವರು, ಚುನಾವಣೆಯಲ್ಲಿ ಗೆಲ್ಲುವ ಸೂತ್ರಗಳನ್ನು ಬಿಚ್ಚಿಟ್ಟರು. ಜತೆಗೆ, ಬಿಜೆಪಿಯ ಕೋಮುವಾದ, ದ್ವೇಷದ ರಾಜಕಾರಣ ಹಾಗೂ ಭ್ರಷ್ಟಾಚಾರದ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಅವಿಶ್ರಾಂತ ಹೋರಾಟ ನಡೆಸಬೇಕು ಎಂದು ಸಲಹೆ ನೀಡಿದರು.

‘ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಖರ್ಗೆ ಅವರೇ ನಿಮ್ಮ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ. ನಿಮ್ಮ ಜತೆ ಚುನಾವಣೆಯನ್ನೂ ನಡೆಸಿದ್ದೇನೆ. ನೀವೆಲ್ಲರೂ ಒಂದಾಗಿ ಕೆಲಸ ಮಾಡುತ್ತಿದ್ದೀರಿ. ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವ ವಿಷಯದಲ್ಲಿ ಇನ್ನಷ್ಟು ಸಂಘಟಿತರಾಗಿ, ಒಗ್ಗಟ್ಟಿನಿಂದ ಕೆಲಸ ಮಾಡಲೇಬೇಕಿದೆ. ವಿಧಾನಸಭೆ ಚುನಾವಣೆಯಲ್ಲಿ 150ಕ್ಕಿಂತ ಒಂದು ಸ್ಥಾನವೂ ಕಡಿಮೆಯಾಗಬಾರದು. ಅರ್ಹತೆ ಮತ್ತು ನಿಷ್ಠಾವಂತ ಕಾರ್ಯಕರ್ತರನ್ನು ಗುರುತಿಸಬೇಕು. ಅಧಿಕಾರಕ್ಕೆ ಬಂದ ನಂತರವೂ ಪಕ್ಷಕ್ಕೆ ರಕ್ತ ಬಸಿದವರಿಗೆ ಆದ್ಯತೆ ನೀಡಲಾಗುವುದು’ ಎಂದು ಸ್ಪಷ್ಟಪಡಿಸಿದರು.

‘20 ವರ್ಷಗಳ ಹಿಂದೆ ಕೆಲಸ ಮಾಡಿದ್ದಾರೆ ಎಂದು ಈಗ ಟಿಕೆಟ್ ನೀಡಲು ಸಾಧ್ಯವಿಲ್ಲ. ಪಕ್ಷಕ್ಕೆ ಈಗ ಯಾವ ರೀತಿ ಸೇವೆ ಮಾಡುತ್ತಿದ್ದಾರೆ ಎನ್ನುವುದು ಮುಖ್ಯವಾಗಬೇಕು. ಕಾರ್ಯಕರ್ತರು ಪಕ್ಷಕ್ಕೆ ಎಷ್ಟು ನಿಷ್ಠರಾಗಿದ್ದಾರೆ ಮತ್ತು ಸೇವೆ ಮಾಡಿದ್ದಾರೆ ಎನ್ನುವುದನ್ನು ಪರಿಗಣಿಸಿ ಟಿಕೆಟ್ ನೀಡಬೇಕು. ಯುವಕರು ಮತ್ತು ಮಹಿಳೆಯರಿಗೂ ಆದ್ಯತೆ ನೀಡಲಾಗುವುದು. ಈ ಮೂಲಕ ಸಂಪೂರ್ಣ ಶಕ್ತಿಯೊಂದಿಗೆ ಕರ್ನಾಟಕದಲ್ಲಿ ನವ ಕಾಂಗ್ರೆಸ್ ಹೊರಹೊಮ್ಮಬೇಕು’ ಎಂದು ಪ್ರತಿಪಾದಿಸಿದರು.

ಸೋಮಣ್ಣ ವಿರುದ್ಧ ಪ್ರಕರಣ: ತಡೆಗೆ ಹೈಕೋರ್ಟ್ ನಕಾರ

ಬೆಂಗಳೂರು: ‘ಆದಾಯ ಮೀರಿದ ಆಸ್ತಿ ಗಳಿಕೆ ಮತ್ತು ಭ್ರಷ್ಟಾಚಾರ ನಡೆಸಿದ್ದಾರೆ’ ಎಂಬ ಆರೋಪಕ್ಕೆ ಸಂಬಂಧಿಸಿ ಕ್ರಿಮಿನಲ್ ಪ್ರಕರಣದ ಆರೋಪ ಎದುರಿಸುತ್ತಿರುವ ವಸತಿ ಸಚಿವ ವಿ. ಸೋಮಣ್ಣ ಅವರ ವಿರುದ್ಧ ಜನಪ್ರತಿನಿಧಿಗಳ ಕೋರ್ಟ್ ವಿಚಾರಣೆಗೆ ಮಧ್ಯಂತರ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ. 5

ಚರ್ಚೆ
ಭಾರತಕ್ಕೆ ಕಾಂಗ್ರೆಸ್ ಪಕ್ಷ ಅನಿವಾರ್ಯವೇ? ಆ ಪಕ್ಷದ ಪುನರುತ್ಥಾನ ಸಾಧ್ಯವೇ? 7

ಹೋಟೆಲ್ ಆಹಾರ ದರ ಹೆಚ್ಚಳ ಸಾಧ್ಯತೆ 5

ಚಿನಕುರಳಿ
ಪ್ರಕಾಶ್ ಶೆಟ್ಟಿ

ರಷ್ಯಾ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಹೇಳಿಕೆ

‘ಭಾರತ ಬಯಸಿದ್ದನ್ನು ಪೂರೈಸುತ್ತೇವೆ’

ನವದೆಹಲಿ (ಪಿಟಿಐ/ರಾಯಿಟರ್ಸ್): ಭಾರತಕ್ಕೆ ಕಡಿಮೆ ಬೆಲೆಯಲ್ಲಿ ಕಚ್ಚಾತೈಲವನ್ನು ಪೂರೈಕೆ ಮಾಡುವ ಪ್ರಸ್ತಾವವನ್ನು ರಷ್ಯಾ ಮತ್ತೊಮ್ಮೆ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಮುಂದೆ ಇರಿಸಿದೆ. ‘ಭಾರತವು ಏನು ಬಯಸುತ್ತದೆಯೋ ಅದನ್ನು ಪೂರೈಸಲು ನಾವು ಸಿದ್ಧರಿದ್ದೇವೆ’ ಎಂದು ರಷ್ಯಾ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಹೇಳಿದ್ದಾರೆ.

ರಷ್ಯಾ ಜತೆಗೆ ವ್ಯಾಪಾರ ವೃದ್ಧಿಸಿದರೆ ನಿರ್ಬಂಧ ಎದುರಿಸಬೇಕಾಗುತ್ತದೆ ಎಂದು ಅಮೆರಿಕ ಮತ್ತು ಬ್ರಿಟನ್ ನೀಡಿದ್ದ ಎಚ್ಚರಿಕೆಯ ಮಧ್ಯೆಯೂ ಭಾರತವು, ರಷ್ಯಾ ವಿದೇಶಾಂಗ ಸಚಿವ ಲಾವ್ರೊವ್ ಅವರನ್ನು ದೇಶಕ್ಕೆ ಬರಮಾಡಿಕೊಂಡಿದೆ. ಗುರುವಾರ ರಾತ್ರಿ ಭಾರತಕ್ಕೆ ಬಂದಿದ್ದ ಅವರು, ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ದೆಹಲಿಯಲ್ಲಿ ಜೈಶಂಕರ್

> **ಭಾರತದ ವಿದೇಶಾಂಗ ನೀತಿಯು, ಆ ದೇಶದ ಸ್ವಾತಂತ್ರ್ಯ ಮತ್ತು ದೇಶದ ಜನರ ಹಿತಾಸಕ್ತಿಯನ್ನು ಅವಲಂಬಿಸಿದೆ ಎಂದು ನಾವು ನಂಬಿದ್ದೇವೆ**
> **ಸರ್ಗೈ ಲಾವ್ರೊವ್**
> ರಷ್ಯಾ ವಿದೇಶಾಂಗ ಸಚಿವ

ಅವರ ಜತೆಗೆ ನಡೆದ ಮಾತುಕತೆಯ ವೇಳೆ ಅವರು ಕಚ್ಚಾತೈಲವನ್ನು ಕಡಿಮೆ ಬೆಲೆಗೆ ಪೂರೈಕೆ ಮಾಡುವ ಪ್ರಸ್ತಾವಕ್ಕೆ ಒತ್ತು ನೀಡಿದ್ದಾರೆ.

ಮಾತುಕತೆಯ ನಂತರ ಆಯ್ದ ಪತ್ರಕರ್ತರ ಜತೆಗೆ ಸಂವಾದ ನಡೆಸಿದ ಅವರು, ‘ಅಮೆರಿಕನ್ ಡಾಲರ್ ಮೂಲಕ ನಡೆಯುತ್ತಿರುವ ಸ್ವಿಫ್ಟ್ ವರ್ಗಾವಣೆ ವ್ಯವಸ್ಥೆಯನ್ನು ಬದಿಗಿರಿಸಿ, ಭಾರತದ ರೂಪಾಯಿ ಮತ್ತು ರಷ್ಯಾದ ರೂಬಲ್ ಮೂಲಕ ವಹಿವಾಟು ನಡೆಸುವ ತುರ್ತು ಇದೆ’ ಎಂದು ಹೇಳಿದ್ದಾರೆ.

ರಷ್ಯಾ, ಉಕ್ರೇನ್ ಅನ್ನು

> **ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಏರಿಕೆಯಾದಾಗ, ಎಲ್ಲಿ ಕಡಿಮೆ ಬೆಲೆಗೆ ಸಿಗುತ್ತದೆಯೋ ಅಲ್ಲಿ ಖರೀದಿಸುವುದು ಸಹಜ. ಈ ಆಯ್ಕೆ ನಮಗೆ ಇದೆ**
> **ಎಸ್.ಜೈಶಂಕರ್**
> ವಿದೇಶಾಂಗ ಸಚಿವ

ಅತಿಕ್ರಮಿಸಿದ ವಿಚಾರವಾಗಿ ಅಮೆರಿಕ ಮತ್ತು ನ್ಯಾಟೊ ಸದಸ್ಯ ದೇಶಗಳು ರಷ್ಯಾ ಮೇಲೆ ಆರ್ಥಿಕ ನಿರ್ಬಂಧ ಹೇರಿವೆ. ರಷ್ಯಾ ಜತೆಗೆ ವ್ಯಾಪಾರ ವಹಿವಾಟು ನಡೆಸುವ ದೇಶಗಳ ಮೇಲೆ ನಿರ್ಬಂಧ ಹೇರುವ ಎಚ್ಚರಿಕೆ ನೀಡಲಾಗಿದೆ. ಈ ಸಂಭಾವ್ಯ ನಿರ್ಬಂಧವನ್ನು ತಪ್ಪಿಸುವ ಸಲುವಾಗಿ ರೂಪಾಯಿ–ರೂಬಲ್ ಮೂಲಕ ವ್ಯಾಪಾರ ನಡೆಸುವ ಕ್ರಮಕ್ಕೆ ರಷ್ಯಾ ಒತ್ತಾಯಿಸುತ್ತಿದೆ ಎಂದು ವಿಶ್ಲೇಷಿಸಲಾಗಿದೆ.

8ನೇ ಪುಟ ನೋಡಿ

‘ಕಾಯ್ದೆಯಡಿ ಬಡ್ತಿ ಮೀಸಲಾತಿ’

ನವದೆಹಲಿ (ಪಿಟಿಐ): ಪರಿಶಿಷ್ಟ ಜಾತಿ, ಪಂಗಡದ ಉದ್ಯೋಗಿಗಳಿಗೆ ಬಡ್ತಿಯಲ್ಲಿ ಮೀಸಲಾತಿ ನೀತಿ ರದ್ದುಪಡಿಸುವುದು ಅನೇಕ ಸಮಸ್ಯೆಗಳಿಗೆ ಕಾರಣವಾಗಬಹುದು, ಇದರ ವಿರುದ್ಧ ಹಲವು ಮೇಲ್ಮನವಿಗಳೂ ದಾಖಲಾಗಬಹುದು ಎಂದು ಕೇಂದ್ರ ಸರ್ಕಾರ ಹೇಳಿದೆ. 9

ಶನಿವಾರದ ಉಷ್ಣಾಂಶ 34° ಗರಿಷ್ಠ 23° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ. ನಂತರ ಮಳೆ ಸಾಧ್ಯತೆ

ಮುನ್ನೋಟ: ಭಾನುವಾರ 35° 22° | ಸೋಮವಾರ 35° 22° | ಮಂಗಳವಾರ 35° 22°

ಸೂರ್ಯೋದಯ: 6:16 ಸೂರ್ಯಾಸ್ತ : 6:31 ಚಂದ್ರೋದಯ: ಬೆ. 6:19 ಚಂದ್ರಾಸ್ತ: ಸಂ. 6:43 ಶುಕ್ರವಾರದ ಹವಾಮಾನ : ಗರಿಷ್ಠ 34° ಕನಿಷ್ಠ 22°

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ
ನೋಂದಣಿ 37/ಸೌಕಾ/ನೋಂದಣಿ 2297/2010–11
"ಪುಣ್ಯಕೋಟಿ", ನಂ.1587, 3ನೇ ಮುಖ್ಯರಸ್ತೆ, ಚಂದ್ರ ಬಡಾವಣೆ,
ಬೆಂಗಳೂರು–560 040. ದೂರವಾಣಿ : 080–23185584

ಸ್ಥಿರಾಸ್ತಿ ಹರಾಜು ಪ್ರಕಟಣೆ

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಬೆಂಗಳೂರು ಈ ಸಹಕಾರಿಯ ಸುಸ್ತಿದಾರರಾದ ಶ್ರೀಮತಿ ಪ್ರಭಾವತಿ ಕೋಂ ಕೃಷ್ಣಪ್ಪ ಇವರಿಂದ ಬಾಕಿಯಾಗಿರುವ ಈ ಕೆಳಕಂಡ ಮೊತ್ತಗಳ ವಸೂಲಿ ಬಗ್ಗೆ ಸದರಿಯವರಿಗೆ ಸೇರಿದ ಈ ಕೆಳಗೆ ನಮೂದಿಸಿರುವ ಸ್ಥಿರ ಸ್ವತ್ತುಗಳನ್ನು ವಸೂಲಾತಿ ಅಧಿಕಾರಿಗಳು (ನಿ–441) ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇವರ ಆದೇಶ ಇಪಿ ಸಂಖ್ಯೆ:ಕರಾಸೌಸಂಸನಿ/ವಅ/492/2021–22 ಮತ್ತು ಕರಾಸೌಸಂಸನಿ/ವಅ/493/2021–22 ದಿನಾಂಕ 08/03/2022 ರ ಮೇರೆಗೆ ದಿನಾಂಕ 11/04/2022 ರ ಸೋಮವಾರದಂದು ಬೆಳಿಗ್ಗೆ 11 ಘಂಟೆಗೆ ಸ್ಥಿರಾಸ್ಥಿ ಇರುವ ವಿಳಾಸದಲ್ಲಿ ಮೇಲ್ಕಂಡ ಆದೇಶಗಳಲ್ಲಿ ವಿಧಿಸಿರುವ ಷರತ್ತುಗಳಿಗೊಳಪಟ್ಟು ಬಹಿರಂಗ ಹರಾಜು ಮಾಡಲಾಗುವುದೆಂದು ಈ ಮೂಲಕ ತಿಳಿಸಿದೆ.

ಹರಾಜಿನ ಷರತ್ತುಗಳನ್ನು ಸಹಕಾರಿಯ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಶ್ರೀಮತಿ ಪ್ರಭಾವತಿ ಕೋಂ ಲೇಟ್ ಕೃಷ್ಣಪ್ಪ

ಸುಸ್ತಿದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಯ ವಿವರಗಳು	ಮೊಬಲಗು (ರೂ.ಗಳಲ್ಲಿ)	ಷರಾ
ಶ್ರೀಮತಿ ಪ್ರಭಾವತಿ ಕೋಂ ಲೇಟ್ ಕೃಷ್ಣಪ್ಪ ನಂ.12, ಕೃಷ್ಣಪ್ರಭಾ ನಿಲಯ, ಸಂಜೀವನಗರ, ಓಂಶಕ್ತಿ ಟೆಂಪಲ್ ರಸ್ತೆ, ಹೆಗ್ಗನಹಳ್ಳಿ ಕ್ರಾಸ್, ಬೆಂಗಳೂರು – 91.	ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಆಂದ್ರಹಳ್ಳಿ ಗ್ರಾಮದ ಸರ್ವೆ ನಂ.64 ರಲ್ಲಿ ನಿರ್ಮಿಸಿರುವ ಬೆಂಗಳೂರು ಮಹಾನಗರ ಪಾಲಿಕೆ ಮನೆ ನಂ.67 ಹೊಂದಿರುವ ಹಾಗೂ ಪೂರ್ವ, ಪಶ್ಚಿಮ 35' ಅಡಿ, ಉತ್ತರ, ದಕ್ಷಿಣ 45' ಅಡಿ, ಒಟ್ಟು 1575 ಚದರಡಿ ವಿಸ್ತೀರ್ಣವುಳ್ಳ ಮತ್ತು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ನಿವೇಶನ ಹಾಗೂ ಕಟ್ಟಡ ಈ ನಿವೇಶನದ ಚಕ್ಕುಬಂದಿ ಈ ಕೆಳಕಂಡಂತೆ ಇರುತ್ತದೆ. **ಚಕ್ಕುಬಂದಿ :** ಪೂರ್ವ : ಶ್ರೀ ವೆಂಕಟರಂಗಯ್ಯನವರ ಸ್ವತ್ತು, ಪಶ್ಚಿಮ : ರಸ್ತೆ, ಉತ್ತರ : ಶ್ರೀ ಮುನಿರಾಜುರವರ ಸ್ವತ್ತು, ದಕ್ಷಿಣ : ಶ್ರೀಮತಿ ದೇವಿರಮ್ಮನವರ ಸ್ವತ್ತು	41,10,833 14,83,522 ಒಟ್ಟು 55,94,355	ಆದೇಶ ಸಂಖ್ಯೆ : ಕರಾಸೌಸಂಸನಿ/ವಅ/492/2021–22 ಆದೇಶ ಸಂಖ್ಯೆ : ಕರಾಸೌಸಂಸನಿ/ವಅ/493/2021–22

ಆಸಕ್ತಿಯುಳ್ಳವರು ಈ ಹರಾಜಿನಲ್ಲಿ ಬಾಗವಹಿಸಬಹುದಾಗಿರುತ್ತದೆ.

ಸ್ಥಳ : ಬೆಂಗಳೂರು
ದಿನಾಂಕ : 09–03–2022

ಸಹಿ/– ದೀಪು. ಎಸ್, ಮಾರಾಟಾಧಿಕಾರಿ
ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ

ಮಾರುಕಟ್ಟೆಗಳಲ್ಲಿ ಜನಜಂಗುಳಿ • ಬೇವು–ಬೆಲ್ಲ ಹಬ್ಬಕ್ಕೆ ಭರದ ಸಿದ್ಧತೆ • ಹೂಗಳ ಬೆಲೆ ದುಬಾರಿ

'ಯುಗಾದಿ'ಗೆ ರಂಗೇರಿದ ಖರೀದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇವು–ಬೆಲ್ಲದೊಂದಿಗೆ ಯುಗಾದಿಯನ್ನು ಸಂಭ್ರಮಿಸಲು ನಗರದ ಜನ ಸಜ್ಜಾಗಿದ್ದಾರೆ. ಎರಡು ದಿನಗಳ ಹಬ್ಬದ ಆಚರಣೆಗೆ ಶುಕ್ರವಾರವೇ ಖರೀದಿ ಭರಾಟೆ ನಡೆಯಿತು.

ನಗರದ ವಸ್ತ್ರ ಮಳಿಗೆಗಳು, ಆಭರಣದ ಮಳಿಗೆಗಳಲ್ಲೂ ಖರೀದಿ ಜೋರಾಗಿತ್ತು. ಹಬ್ಬ ಇರುವುದರಿಂದ ಕಳೆದ ಮೂರು ದಿನಗಳಿಂದ ಹೂವಿನ ವ್ಯಾಪಾರ ಗರಿಗೆದರಿದ್ದು, ದರಗಳೂ ಏರಿವೆ.

ನಗರದ ಪ್ರಮುಖ ಬಡಾವಣೆಗಳಲ್ಲಿ ಹಬ್ಬದ ಪ್ರಯುಕ್ತ ಕಿರು ಮಾರುಕಟ್ಟೆಯ ರೀತಿಯಲ್ಲಿ ಮಳಿಗೆಗಳನ್ನು ತೆರೆಯಲಾಗಿದ್ದು, ಗ್ರಾಹಕರು ಹಬ್ಬಕ್ಕೆ ಬೇಕಾದ ಹೂವು, ಹಣ್ಣು, ತರಕಾರಿ ಹಾಗೂ ಪೂಜಾ ಸಾಮಗ್ರಿಗಳನ್ನು ಖರೀದಿಸಿದರು.

ನಗರದ ಹೊರಭಾಗಗಳಿಂದ ಮಾವು ಮತ್ತು ಬೇವಿನ ಸೊಪ್ಪನ್ನು ತಂದು ರಸ್ತೆ ಬದಿಗಳಲ್ಲಿ ರಾಶಿ ಹಾಕಿ ಮಾರಾಟ ಮಾಡಲಾಗುತ್ತಿದ್ದು, ಗ್ರಾಹಕರು ಖರೀದಿಗೆ ಮುಗಿಬಿದ್ದರು.

ಕೆ.ಆರ್. ಮಾರುಕಟ್ಟೆ, ಯಶವಂತಪುರ, ಗಾಂಧಿ ಬಜಾರ್, ಮಲ್ಲೇಶ್ವರ, ಬಸವನಗುಡಿ, ಜಯನಗರ, ವಿಜಯನಗರ, ಮಡಿವಾಳ, ಕೆ.ಆರ್.ಪುರ, ಯಲಹಂಕ, ಕೆಂಗೇರಿ ಸೇರಿದಂತೆ ನಗರದ ಹಲವೆಡೆ ಹಬ್ಬದ ಖರೀದಿ ವೇಳೆ ಜನಜಂಗುಳಿ ಕಂಡು ಬಂತು.

ಯುಗಾದಿ ಹಬ್ಬಕ್ಕಾಗಿ ನಗರದ ಕೆ.ಆರ್‌.ಮಾರುಕಟ್ಟೆಯಲ್ಲಿ ಮಹಿಳೆಯರು ಮಾವು ಮತ್ತು ಬೇವಿನ ಸೊಪ್ಪು ಖರೀದಿಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ

ಹೂಗಳ ಬೆಲೆ ಗಗನಮುಖಿ: ಕಳೆದ ವರ್ಷದ ಕೋವಿಡ್ ನಿರ್ಬಂಧ ಇದ್ದಿದ್ದರಿಂದ ಜನರು ಸರಳವಾಗಿ ಯುಗಾದಿ ಆಚರಿಸಿದ್ದರು. ದರಗಳೂ ಕಡಿಮೆ ಇತ್ತು. ಈ ಸಲ ಕನಕಾಂಬರ, ಮಲ್ಲಿಗೆ, ಗುಲಾಬಿ, ಸುಗಂಧರಾಜ, ಸೇವಂತಿಗೆ, ಪತ್ರೆ, ಗನ್ನೇರಿ ಸೇರಿದಂತೆ ಹೂವಿನ ದರಗಳೆಲ್ಲ ಗಣನೀಯ ಏರಿಕೆ ಕಂಡಿದೆ.

ಯುಗಾದಿ ವಿಶೇಷ (ದರ ಪಟ್ಟಿ)	
ಬೇವು	₹20 (ಪ್ರತಿ ಕಟ್ಟಿಗೆ)
ಮಾವಿನ ಸೊಪ್ಪು	₹30
ಬಿಲ್ವಪತ್ರೆ	₹20
ತೆಂಗಿನ ಕಾಯಿ	₹30 (ಒಂದಕ್ಕೆ)

ಹೂವಿನ ದರ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)	
ಕನಕಾಂಬರ	500
ಮಲ್ಲಿಗೆ	500
ಗುಲಾಬಿ	200
ಸುಗಂಧರಾಜ	160
ಸೇವಂತಿಗೆ	150
ಪತ್ರೆ	150
ಗನ್ನೇರಿ	150
ಚೆಂಡು ಹೂ	40

'ಕೋವಿಡ್ ನಂತರ ಯುಗಾದಿಯನ್ನು ಮುಕ್ತವಾಗಿ ಆಚರಿಸಲು ಅವಕಾಶ ಸಿಕ್ಕಿದೆ. ಮಾರುಕಟ್ಟೆಯತ್ತ ಬರುತ್ತಿರುವ ಗ್ರಾಹಕರ ಸಂಖ್ಯೆಯೂ ಏರುತ್ತಿದೆ. ಆದರೆ, ಹಿಂದಿನ ವರ್ಷಗಳಿಗೆ ಹೋಲಿಸಿದರೆ ಹೂವಿನ ದರಗಳು ಅಷ್ಟೇನೂ ಹೆಚ್ಚಾಗಿಲ್ಲ. ಶನಿವಾರದ ವೇಳೆಗೆ ದರ ಮತ್ತಷ್ಟು ಏರುವ ಸಾಧ್ಯತೆ ಇದೆ' ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವರ್ತಕ ದಿವಾಕರ್ ಹೇಳಿದರು.

'ಯುಗಾದಿ ಎರಡು ದಿನಗಳ ಹಬ್ಬ. ಮೊದಲ ದಿನ ಸಿಹಿ ಖಾದ್ಯಗಳನ್ನು ಸವಿಯುತ್ತಾರೆ. ಎರಡನೇ ದಿನ ಹೊಸ ತೊಡಕು ಅಂಗವಾಗಿ ಮಾಂಸದ ತರಹೇವಾರಿ ಭೋಜನಗಳೊಂದಿಗೆ ಹಬ್ಬ ಸಂಪನ್ನಗೊಳಿಸುತ್ತಾರೆ. ಬೆಂಗಳೂರು, ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಯುಗಾದಿಯು ಹೊಸ ತೊಡಕು ವಿಜೃಂಭಣೆಯಿಂದ ಸಾಗುತ್ತದೆ. ಈ ವೇಳೆ ಮಾಂಸದ ಬೆಲೆ ಗಗನಕ್ಕೇರುತ್ತದೆ. ಹಲವು ತರಕಾರಿಗಳ ದರಗಳು ಸ್ಥಿರವಾಗಿವೆ' ಎಂದು ತರಕಾರಿ ವರ್ತಕ ಕುಮಾರ್ ತಿಳಿಸಿದರು.

ಕನ್ನಡ ಶಾಲೆ: ಭೈರಪ್ಪ ಅಧ್ಯಕ್ಷತೆಯಲ್ಲಿ ಸಭೆ 5ಕ್ಕೆ

ಬೆಂಗಳೂರು: ಕನ್ನಡ ಶಾಲೆ ಉಳಿಸಿ, ಬೆಳೆಸುವ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಸಾಹಿತಿ ಎಸ್‌.ಎಲ್‌. ಭೈರಪ್ಪ ಅವರ ಅಧ್ಯಕ್ಷತೆಯಲ್ಲಿ ಇದೇ 5ರ ಬೆಳಿಗ್ಗೆ 11 ಗಂಟೆಗೆ ದುಂಡು ಮೇಜಿನ ಸಭೆ ಹಮ್ಮಿಕೊಂಡಿದೆ.


ಎಸ್‌.ಎಲ್‌. ಭೈರಪ್ಪ

ಪರಿಷತ್ತಿನ ಕೇಂದ್ರ ಕಚೇರಿಯಲ್ಲಿ ಈ ಸಭೆ ನಡೆಯಲಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಸಭೆ ಉದ್ಘಾಟಿಸಲಿದ್ದಾರೆ. ವೀರಭದ್ರ ಚನ್ನಮಲ್ಲ ಸ್ವಾಮೀಜಿ ಹಾಗೂ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಹೈಕೋರ್ಟ್‌ ವಿಶ್ರಾಂತ ನ್ಯಾಯಮೂರ್ತಿಗಳಾದ ಎನ್. ಕುಮಾರ್ ಹಾಗೂ ನಾಗಮೋಹನ್ ದಾಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಆಶಯ ನುಡಿಗಳನ್ನಾಡಲಿದ್ದಾರೆ. ವಿದ್ವಾಂಸ ಪ್ರಧಾನ ಗುರುದತ್ತ ಅವರು ವಿಶೇಷ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಶಿಕ್ಷಣ ತಜ್ಞರು, ಸಾಹಿತಿಗಳು, ನ್ಯಾಯಮೂರ್ತಿಗಳು, ಚಿಂತಕರು, ಕನ್ನಡ ಪರ ಹೋರಾಟಗಾರರು ಒಳಗೊಂಡಂತೆ 27 ಮಂದಿ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಬರ್ಲಿನ್ ಜತೆ ರಾಜ್ಯದ ಒಪ್ಪಂದ

ಬೆಂಗಳೂರು: ನವೋದ್ಯಮ ಕ್ಷೇತ್ರದಲ್ಲಿ ಪರಸ್ಪರ ಮಾರುಕಟ್ಟೆ ವಿಸ್ತರಣೆ ಮತ್ತು ಬಲವರ್ಧನೆಯ ಗುರಿಯೊಂದಿಗೆ ಕರ್ನಾಟಕ ಮತ್ತು ಜರ್ಮನಿಯ ಬರ್ಲಿನ್ ಪ್ರಾಂತ್ಯಗಳು ಒಡಂಬಡಿಕೆಗೆ ಸಹಿ ಹಾಕಿವೆ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದ್ದಾರೆ.

ವರ್ಚುವಲ್ ಕಾರ್ಯಕ್ರಮದಲ್ಲಿ ಮಾತನಾಡಿ, ಬೆಂಗಳೂರು ಮತ್ತು ಬರ್ಲಿನ್ ನಗರಗಳೆರಡೂ ನವೋದ್ಯಮಗಳ ಪಾಲಿಗೆ ಅಚ್ಚುಮೆಚ್ಚಿನ ತಾಣಗಳಾಗಿವೆ. ಈ ಒಡಂಬಡಿಕೆಯು ಮುಖ್ಯವಾಗಿ ಕೃತಕ ಬುದ್ಧಿಮತ್ತೆ, ಸ್ಮಾರ್ಟ್ ಸಿಟಿ ಅಭಿವೃದ್ಧಿ, ಮಹಿಳಾ ಉದ್ಯಮಿಗಳಿಗೆ ನೆರವು ನೀಡಲಿದೆ ಎಂದಿದ್ದಾರೆ.

ರಾಜ್ಯ ಐಟಿ- ಬಿಟಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣ ರೆಡ್ಡಿ, ಜರ್ಮನಿಯಲ್ಲಿನ ಭಾರತೀಯ ರಾಯಭಾರಿ ಹರೀಶ್ ಪರ್ವತನೇನಿ, ಬರ್ಲಿನ್ ಪ್ರಾಂತ್ಯದ ಆರ್ಥಿಕ ಇಲಾಖೆಯ ಕಾರ್ಯದರ್ಶಿ ಮೈಕೇಲ್ ಬೀಲ್ ಮತ್ತು ಬೆಂಗಳೂರಿನಲ್ಲಿ ಇರುವ ಜರ್ಮನಿಯ ಉಪ ಕಾನ್ಸುಲ್ ಜನರಲ್ ಫ್ರೆಡರಿಕ್ ಬರ್ಗಿಲಿನ್ ಇದ್ದರು.

M/s. YELAHANKA - AP BORDER TOLLWAYS PRIVATE LIMITED BENGALURU

GOVERNMENT OF KARNATAKA · KRDCL

ಸಾರ್ವಜನಿಕ ಮಾಹಿತಿಗಾಗಿ

PUBLIC NOTICE ON REVISED USER FEE (TOLL) RATES for Yelahanka-AP Border SH-09 Road taken up under PPP-DBFOT-VGF (TOLL) basis for the stretch-1 at Kadatanamale TOLL PLAZA-1 and at Gunjuru TOLL PLAZA-2 Applicable as per Government Order dated : 01-04-2022

The public are hereby informed that pursuant to Concession Agreement dated 03/06/2015. Fee Notification published in the Government Order No.PWDE-119EAP2022, Bengaluru dated 01/04/2022 by Public Works, Ports and Inland Transport Department, Government of Karnataka, letter of IE dated 02/02/2022 for putting completed length of 74.867K.m(99%) on commercial operation and approval of user fee rates vide : letter dated 04/03/2022 of KRDCL, the user fee for the use of section-1and Section-2 SH-09 Road is going to be started w.e.f. Government order at Toll Plaza 1 & 2 i.e. Toll Plaza (Chainage: 28+090 and 55+650 km. near Kadatanamale and Gunjuru Village, Bengaluru Rural and Chikkaballapura district) in the State of Karnataka at the following rates:

Toll Plaza - 1

Category of Vehicle	Fee for Single Journey	Fee for Return Journey with in a Day	Fee for Monthly Pass valid for 50 Journeys
Car, Jeep, Van or Light Motor Vehicle	45	70	1520
Light Commercial Vehicle, Light Goods Vehicle or Mini Bus	75	110	2450
Bus or Truck (Two Axles)	155	230	5145
Heavy Construction Machinery (HCM) or Earth Moving Equipment (EME) or Multi Axle Vehicle (MAV) (three to six axles)	240	360	8045
Over-sized vehicles (seven or more axles)	295	440	9810

Toll Plaza - 2

Category of Vehicle	Fee for Single Journey	Fee for Return Journey with in a Day	Fee for Monthly Pass valid for 50 Journeys
Car, Jeep, Van or Light Motor Vehicle	50	75	1665
Light Commercial Vehicle, Light Goods Vehicle or Mini Bus	75	115	2550
Bus or Truck (Two Axles)	155	235	5190
Heavy Construction Machinery (HCM) or Earth Moving Equipment (EME) or Multi Axle Vehicle (MAV) (three to six axles)	235	355	7870
Over-sized vehicles (seven or more axles)	310	460	10265

Note : The rate for monthly pass applicable for local non-commercial vehicle residing within a distance of 20 Km from the toll plaza shall be Rs. 355/-

The above rates are applicable for a completed length of stretch-1 Four Lane & stretch-2 Two lane and Four Lane.

For viewing the fee notification dated 01/04/2022 published in the Government Order, letter of IE dated 02/02/2022 certifying the completed length/ commercial operation, letter of KRDCL dated 04/03/2022 containing approval of rates and provisions in the Concession Agreement, the website http://www.gazette.kar.nicin/ may be visited for more information.

Name and address are as under, for any enquiry and/ or giving complaints/ suggestions:

	Concessionaire	IE	KRDCL
Address :	Kadatanamale Toll Plaza, Near Rajanukunte, SH-9, Bangalore-561203	Apt. Consultants, Race Course Road, Bangalore	Karnataka Road Development Corporation Limited, Survey No 8, Samparka Soudha BEP Premises, Dr. Raj Kumar Road, Rajajinagar, 1st Block, Bengaluru-560010.

84 Spreading Music Since 1939 · 75 years of Indian Independence

ಶ್ರೀ ರಾಮಸೇವಾ ಮಂಡಲಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್
84ನೇಯ ಶ್ರೀ ರಾಮನವಮಿ ಸಂಗೀತೋತ್ಸವ 2022
2 ಏಪ್ರಿಲ್ 2022 ರಿಂದ 2 ಮೇ 2022 ರವರೆಗೆ,
ವಿಶೇಷ ಚಪ್ಪರ, ಕೋಟೆ ಹೈಸ್ಕೂಲ್ ಆವರಣ, ಚಾಮರಾಜಪೇಟೆ, ಬೆಂಗಳೂರು 18
ಸ್ವಾತಂತ್ರದ ಅಮೃತ ಮಹೋತ್ಸವದ ಅಂಗವಾಗಿ



02/04/2022 ರಂದು 84ನೇಯ ಕೋಟೆ ರಾಮೋತ್ಸವದ ಉದ್ಘಾಟನೆಗೆ ಆಗಮಿಸುತ್ತಿರುವ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿರವರಿಗೆ ಹಾರ್ದಿಕ ಸ್ವಾಗತ!

ಸಂಜೆ 6:45 ರಿಂದ 9:45 ರವರೆಗೆ ಶ್ರೀ ಪಿ.ಉನ್ನಿಕೃಷ್ಣನ್ ಮತ್ತು ತಂಡದವರಿಂದ ಸಂಗೀತ ಕಾರ್ಯಕ್ರಮ

ಮಾಧ್ಯಮ ಸಹಯೋಗ: DH DECCAN HERALD · ಪ್ರಜಾವಾಣಿ

ವಿಶ್ವ ವಿಖ್ಯಾತವಾದ ಈ ಸಂಗೀತದ ಮಹಾಕುಂಭದಲ್ಲಿ ಭಾಗವಹಿಸಿ
ನಿಮ್ಮ ಟಿಕೇಟ್‌ಗಳನ್ನು RAMANAVAMITICKETS.COM ರಲ್ಲಿ ಕರೀಧಿಸಿ
ಹೆಚ್ಚಿನ ಮಾಹಿತಿಗಳಿಗೆ 9448079079 / 9483518012 ಗೆ ಕರೆಮಾಡಿ

ಸ್ಥಾಪನೆ:1907
ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18. ಕಛೇರಿ : 26678572 : 26600512 : 26609066.
ಪ್ರಧಾನ ವ್ಯವಸ್ಥಾಪಕರು : 26617980 : ಟೆಲಿಫ್ಯಾಕ್ಸ್ : (080) 26617980. E-mail : gm@bccbl.co.in : Web : bccbl.co.in

ನಮ್ಮೆಲ್ಲಾ ಗ್ರಾಹಕರಿಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು

"ಕರ್ನಾಟಕ ರಾಜ್ಯದ ಪಟ್ಟಣ ಸಹಕಾರಿ ಬ್ಯಾಂಕುಗಳ ಪೈಕಿ ಅತ್ಯುನ್ನತ ಪಟ್ಟಣ ಸಹಕಾರಿ ಬ್ಯಾಂಕ್"

ಬ್ಯಾಂಕಿನ 116ನೇ ವರ್ಷದ ನಿರಂತರ ಸಹಕಾರಿ ಸೇವೆಯ ಸಾಧನೆಯೊಂದಿಗೆ ಮತ್ತು ನೂತನ ವರ್ಷವಾದ "ಶುಭಕೃತ್ ಸಂವತ್ಸರ" ಬ್ಯಾಂಕಿನ ಸದಸ್ಯರುಗಳಿಗೆ, ಠೇವಣಿದಾರರುಗಳಿಗೆ ಹಾಗೂ ಎಲ್ಲಾ ಹಿತೈಷಿಗಳಿಗೆ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು ಹಾಗೂ ಸಿಬ್ಬಂದಿ ವರ್ಗದವರು ಶುಭಾಶಯಗಳನ್ನು ಹಾರೈಸುತ್ತಾ ಸಕಲರಿಗೂ ಆಯುರಾರೋಗ್ಯ, ಐಶ್ವರ್ಯ, ಸಕಲ ಸಂಪದಭಿವೃದ್ಧಿಯನ್ನು ಮತ್ತು ಸಹಕಾರ ಭಾವನೆಯನ್ನು ದಯಪಾಲಿಸಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇವೆ.

ಯುಗಾದಿ ಹಬ್ಬದ ಶುಭಾಶಯಗಳು

ದಿನಾಂಕ : 31.03.2021 ರಲ್ಲಿದ್ದಂತೆ ಬ್ಯಾಂಕಿನ ಆರ್ಥಿಕ ಸ್ಥಿತಿ (ರೂ. ಕೋಟಿಗಳಲ್ಲಿ)		
1. ಷೇರು ಬಂಡವಾಳ	ರೂ.	90.37
2. ಆಪದ್ಧನ ಮತ್ತು ಇತರೆ ನಿಧಿಗಳು	ರೂ.	261.77
3. ಠೇವಣಾತಿಗಳು	ರೂ.	2301.36
4. ದುಡಿಯುವ ಬಂಡವಾಳ	ರೂ.	2653.50
5. ಸಾಲಗಳು ಮತ್ತು ಮುಂಗಡಗಳು	ರೂ.	1598.42
6. ಗುಂತಾಯಗಳು	ರೂ.	952.83
7. ನಿವ್ವಳ ಲಾಭ (2020–2021)	ರೂ.	25.86
8. ಶೇಕಡವಾರು ನಿವ್ವಳ ಅನುತ್ಪಾದಕ ಸಾಲಗಳು		3.45%
9. ಆಡಿಟ್ ವರ್ಗೀಕರಣ		"A"

ಮಂಜುನಾಥ.ಪಿ, ಪ್ರಧಾನ ವ್ಯವಸ್ಥಾಪಕರು (ಪ್ರಭಾರ) · ಡಾ॥ ದೇವರಾಜ್.ಟಿ.ಎಂ, ಉಪಾಧ್ಯಕ್ಷರು · ಆವಲಹಳ್ಳಿ ಚಂದ್ರಪ್ಪ. ಆರ್, ಅಧ್ಯಕ್ಷರು

: ನಿರ್ದೇಶಕರುಗಳು :			
ಆಂಜನಪ್ಪ	ಕೃಷ್ಣಪ್ಪ.ಕೆ	ಚಿಕ್ಕಣ್ಣಯ್ಯ ಕೆ ಸಿ	ರಘುನಾಥ್.ಸಿ
ನಾರಾಯಣಪ್ಪ.ಬಿ.ಆರ್	ಸುರೇಶ್.ಕೆ.ಪಿ	ರಾಧಾಕೃಷ್ಣ.ಎನ್	ಪಂಕಜ.ಎನ್
ಬಸವರಾಜು	ಮೀನಾಕುಮಾರಿ.ಕೆ.ಪಿ	ವಿಜಯ ಜಿ.ಎಸ್	ಹನುಮದಾಸಯ್ಯ
ಹನುಮಂತಪ್ಪ.ಟಿ.ವಿ	ಶಿವಣ್ಣ.ಕೆ	ಯತೀಶ್.ಬಿ	

: ಶಾಖೆಗಳು ಮತ್ತು ದೂರವಾಣಿ ಸಂಖ್ಯೆಗಳು :					
1	ಪ್ರಧಾನ ಕಛೇರಿ	26672751 / 9342781401	12	ಆರ್.ಟಿ.ನಗರ	23650122 / 9342781412
2	ವಿಜಯನಗರ	23302005 / 9342781402	13	ಜ್ಞಾನಜ್ಯೋತಿನಗರ	23240023 / 9342781413
3	ಜಯನಗರ 9ನೇ ಬ್ಲಾಕ್	22442389 / 9342781403	14	ಹೆಚ್.ಆರ್.ಬಿ.ಆರ್.ಲೇಔಟ್	25450087 / 9342781414
4	ಇಂದಿರಾನಗರ	25250194 / 9342781404	15	ಕೃಷ್ಣರಾಜಪುರಂ	25610409 / 9342781415
5	ಚಾಮರಾಜಪೇಟೆ ಪಶ್ಚಿಮ	26707349 / 9342781405	16	ರಾಮನಗರ ಟೌನ್	27271173 / 9342781416
6	ಶಾಂತಿನಗರ	22219211 / 9342781406	17	ಟಿ.ದಾಸರಹಳ್ಳಿ	28390222 / 9342781417
7	ಮಹಾಲಕ್ಷ್ಮೀಪುರ	23491120 / 9342781407	18	ಕುವೆಂಪುನಗರ(ಮೈಸೂರು)	0821-2490163 / 9342781418
8	ಸಂಜಯನಗರ	23414135 / 9342781408	19	ಹೊಸೂರು ರಸ್ತೆ ಎಲೆಕ್ಟ್ರಾನಿಕ್ ಸಿಟಿ	25744442 / 9342781419
9	ಪದ್ಮನಾಭನಗರ	26890199 / 9342781409	20	ಯಲಹಂಕ	28561898 / 9342781420
10	ಕೋರಮಂಗಲ	25522721 / 9342781410	21	ಅಂಜನಾನಗರ	23288889 / 9342781421
11	ಆವಲಹಳ್ಳಿ	26420357 / 9342781411	22	ಕೋಣನಕುಂಟೆ ಶಾಖೆ	26321022 / 9342781422

ಪ್ರಜಾವಾಣಿ

ಒಟ್ಟಾಗಿ ಆಚರಿಸಿದರೆ ಹೆಚ್ಚುವುದು ಹಬ್ಬದ ಮೆರುಗು

ಈ ಯುಗಾದಿ ಹಬ್ಬದ ಪ್ರಯುಕ್ತ ನಿಮ್ಮ ಕುಟುಂಬದೊಂದಿಗೆ ಯುಗಾದಿ ಹಬ್ಬದ ಆಚರಣೆಯ ಚಿತ್ರವನ್ನು ನಿಮ್ಮ ಹೆಸರು, ಜಿಲ್ಲೆ ಹಾಗೂ ಮೊಬೈಲ್ ಸಂಖ್ಯೆಯೊಂದಿಗೆ pv@prajavani.co.in ಗೆ ಏಪ್ರಿಲ್ 3ರ ಸಂಜೆ 6 ರೊಳಗೆ ಕಳುಹಿಸಿ.

10 ವಿಜೇತರಿಗೆ GIFT VOUCHER ₹1000/-

ಆಯ್ಕೆಯಾದ 10 ಚಿತ್ರಗಳಿಗೆ 1000 ರೂಪಾಯಿಯ ಗಿಫ್ಟ್ ವೌಚರ್ ನೀಡಲಾಗುವುದು.

ಹಿಂದೂ–ಮುಸ್ಲಿಂ ಸಾಮರಸ್ಯ ಉಳಿಯಲಿ

ಬೆಂಗಳೂರು: 'ಹಿಂದೂ–ಮುಸ್ಲಿಂ ಸಾಮರಸ್ಯ ಕದಡಲು ಕೆಲವರು ಉದ್ದೇಶಪೂರ್ವಕವಾಗಿ ದ್ವೇಷದ ವಾತಾವರಣ ಸೃಷ್ಟಿಸುತ್ತಿದ್ದಾರೆ. ಯಾರು ಎಷ್ಟೇ ದ್ವೇಷ ಹರಡುವ ಪ್ರಯತ್ನ ಮಾಡಿದರೂ ಎಲ್ಲ ಧರ್ಮದವರು ಶಾಂತಿ, ಸಾಮರಸ್ಯದಿಂದಲೇ ಇರಬೇಕು' ಎಂದು ಮುಸ್ಲಿಂ ಸಂಘಟನೆಗಳ ಮುಖ್ಯಸ್ಥರು ಮನವಿ ಮಾಡಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಾಸಿಹ್ ಫೌಂಡೇಷನ್ ಅಧ್ಯಕ್ಷ ಮೌಲಾನಾ ಸಯ್ಯದ್ ಶಬ್ಬೀರ್ ಅಹ್ಮದ್ ನದ್ವಿ, 'ಜನರು ಸಾಕಷ್ಟು ಸಮಸ್ಯೆಗಳಿಂದ ಪರದಾಡುತ್ತಿದ್ದಾರೆ. ಅವುಗಳನ್ನು ಪರಿಹರಿಸುವುದನ್ನು ಬಿಟ್ಟು ಕೆಲವರು ಉತ್ಸವಗಳಲ್ಲಿ ಮುಸ್ಲಿಂ ವ್ಯಾಪಾರಿಗಳ ಬಹಿಷ್ಕಾರ, ಹಲಾಲ್ ವಿಷಯಗಳ ಮೂಲಕ ಸಾಮರಸ್ಯ ಹಾಳು ಮಾಡಲು ಯತ್ನಿಸಿದ್ದಾರೆ' ಎಂದು ದೂರಿದರು.

ಜಮೀಯತ್ ಉಲಮಾ ಕರ್ನಾಟಕದ ಅಧ್ಯಕ್ಷ ಮುಫ್ತಿ ಇಫ್ತೆಯಾರ್ ಅಹ್ಮದ್ ಖಾಸ್ಮಿ,'ಮಸೀದಿಗಳ ಬಳಿ ಎಲ್ಲ ಧರ್ಮದವರು ಹಣ್ಣು ಹಾಗೂ ಇತರ ಅಂಗಡಿಗಳನ್ನು ಇಡುತ್ತಾರೆ. ಧರ್ಮಗಳ ನಡುವೆ ತಾರತಮ್ಯ ಒಳ್ಳೆಯದಲ್ಲ. ದ್ವೇಷ ಮತ್ತು ದ್ವೇಷದ ಸಂದೇಶಗಳನ್ನು ಯಾರೂ ಕೊಡಬಾರದು. ಎಲ್ಲ ಧರ್ಮದವರ ಅಂಗಡಿಗಳಲ್ಲೂ ಎಂದಿನಂತೆಯೇ ಖರೀದಿ ಮುಂದುವರಿಸಬೇಕು' ಎಂದರು.

ಬೆಂಗಳೂರು ಜಾಮಿಯಾ ಮಸ್ಜಿದ್‌ನ ಇಮಾಮ ಮೌಲಾನಾ ಮಕ್ಸೂದ್ ಇಮ್ರಾನ್ ರಷಾದಿ, 'ತಮ್ಮ ಧರ್ಮಗಳನ್ನು ಪಾಲಿಸುತ್ತಾ ಇತರ ಧರ್ಮಗಳನ್ನೂ ಗೌರವದಿಂದ ಕಂಡಾಗ ಮಾತ್ರ ಪ್ರಜಾಪ್ರಭುತ್ವ ಹಾಗೂ ಸಾಮರಸ್ಯ ಉಳಿಯಲು ಸಾಧ್ಯ. ದ್ವೇಷ ಹರಡುವವರ ಮಾತುಗಳಿಗೆ ಯಾರು ಮರುಳಾಗಬೇಡಿ' ಎಂದು ಮನವಿ ಮಾಡಿದರು.

ಜುಮ್ಮಾ ಮಸ್ಜಿದ್ ಟ್ರಸ್ಟ್, ಜಾಮಿಯಾ ತಲ್ಹಾ, ಜಮಾತ್ ಎ ಇಸ್ಲಾಮಿ ಹಿಂದ್ ಸೇರಿದಂತೆ ವಿವಿಧ ಮುಸ್ಲಿಂ ಸಂಘಟನೆಗಳ ಮುಖ್ಯಸ್ಥರು ಭಾಗವಹಿಸಿದ್ದರು.

'ಹೂವು ಫೌಂಡೇಶನ್ ಫಾರ್ ಆರ್ಟ್ಸ್ ಸಂಸ್ಥೆ' ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ 'ಶಕುಂತಲಾ ನಮನ' ಕಾರ್ಯಕ್ರಮದಲ್ಲಿ ಗಾಯಕ ವಿದ್ಯಾಭೂಷಣ ಅವರು 'ದಾಸವಾಣಿ' ಪ್ರಸ್ತುತಪಡಿಸಿದರು —ಪ್ರಜಾವಾಣಿ ಚಿತ್ರ

ಅಶಾಂತಿ ಸೃಷ್ಟಿಸಲು ಯತ್ನ ಕಮಿಷನರ್‌ಗೆ ದೂರು

ಬೆಂಗಳೂರು: 'ಹಲಾಲ್ ಹಾಗೂ ಜಟ್ಕಾ ಬಗ್ಗೆ ಜನರಲ್ಲಿ ಗೊಂದಲ ಸೃಷ್ಟಿಸುತ್ತಿರುವ ಕೆಲವರು, ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಯತ್ನಿಸುತ್ತಿದ್ದಾರೆ. ಇವರ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಬೇಕು' ಎಂದು ಒತ್ತಾಯಿಸಿ ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ. ರಂಗನಾಥ್ ನೇತೃತ್ವದ ನಿಯೋಗವು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಶುಕ್ರವಾರ ದೂರು ಸಲ್ಲಿಸಿದೆ.

ದೂರು ಪರಿಶೀಲಿಸಿ ಕ್ರಮ ಜರುಗಿಸುವುದಾಗಿ ಕಮಿಷನರ್ ಭರವಸೆ ನೀಡಿದರು.

'ದೇಶದ ಎಲ್ಲ ಕೋಮಿನ ಜನರಿಗೆ ವ್ಯಾಪಾರ, ವಹಿವಾಟು ನಡೆಸಲು ಸಂವಿಧಾನ ಸ್ವಾತಂತ್ರ್ಯ ನೀಡಿದೆ. ಆದರೆ, ನಗರದ ಹಲವೆಡೆ ಹಲಾಲ್ ಹೆಸರಿನಲ್ಲಿ ವ್ಯಾಪಾರಕ್ಕೆ ಅಡ್ಡಿಪಡಿಸಲಾಗುತ್ತಿದೆ. ಕೆಲ ಸಂಘಟನೆಗಳ ಹೆಸರಿನಲ್ಲಿ ಸುತ್ತಾಡುತ್ತಿರುವ ಪುನೀತ್ ಕೆರೆಹಳ್ಳಿ, ಪ್ರಶಾಂತ್ ಸಂಬರಗಿ ಹಾಗೂ ಇತರರು, ವ್ಯಾಪಾರಿಗಳಿಗೆ ಬೆದರಿಕೆಯೊಡ್ಡುತ್ತಿದ್ದಾರೆ. ಕರಪತ್ರಗಳನ್ನು ಹಂಚಿ ಜನರ ದಿಕ್ಕು ತಪ್ಪಿಸುತ್ತಿದ್ದಾರೆ' ಎಂದು ದೂರಿನಲ್ಲಿ ತಿಳಿಸಲಾಗಿದೆ.

'ಬೆಂಗಳೂರು ಸೇರಿದಂತೆ ರಾಜ್ಯದ ಹಲವು ನಗರಗಳಲ್ಲಿ ಕೋಳಿ, ಹಾಗೂ ಕುರಿಮಾಂಸ ಮಾರಾಟ ಮಳಿಗೆಗಳಿವೆ. ಹಲಾಲ್ ಮಾಂಸ ನಿಷೇದಿಸಬೇಕೆಂದು ಆಗ್ರಹಿಸುತ್ತಿರುವವರು, ಜನರನ್ನು ಪ್ರಚೋದಿಸುವ ಕಲಸ ಮಾಡುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳನ್ನು ದುರ್ಬಳಕೆ ಮಾಡಿ ಕೊಂಡು ಸಮಾಜದಲ್ಲಿ ಅಶಾಂತಿ ಸೃಷ್ಟಿಸುತ್ತಿದ್ದಾರೆ' ಎಂದೂ ತಿಳಿಸಿದೆ. 'ಆಲ್ ಇಂಡಿಯಾ ಲಾಯರ್ ಅಸೋಸಿಯೇಷನ್ ಫಾರ್ ಜಸ್ಟೀಸ್' ಪದಾಧಿಕಾರಿಗಳು, ವಕೀಲ ಎಸ್. ಬಾಲನ್ ಇದ್ದರು.

6,463 ಗುತ್ತಿಗೆ ನೌಕರರ ಕೈಬಿಟ್ಟ ಆರೋಗ್ಯ ಇಲಾಖೆ

ಬೆಂಗಳೂರು: ಕೋವಿಡ್ ನಿರ್ವಹಣೆಗೆ ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ನೇಮಕವಾಗಿದ್ದ 6,463 ನೌಕರರ ಸೇವಾ ಅವಧಿ ವಿಸ್ತರಿಸುವ ಪ್ರಸ್ತಾವ ತಿರಸ್ಕೃತಗೊಂಡಿದೆ.

ಕೋವಿಡ್ ನಾಲ್ಕನೇ ಅಲೆಯ ಮುನ್ನೆಚ್ಚರಿಕಾ ಕ್ರಮವಾಗಿ ಇವರ ಗುತ್ತಿಗೆ ಅವಧಿಯನ್ನು ಇದೇ ಜೂನ್ 30ರವರೆಗೆ ವಿಸ್ತರಿಸಲು ಇಲಾಖೆ ಆಯುಕ್ತರು ಪ್ರಸ್ತಾವನೆ ಸಲ್ಲಿಸಿದ್ದರು. ಸದ್ಯ ಕೋವಿಡ್ ನಿಯಂತ್ರಣಕ್ಕೆ ಬಂದಿರುವುದರಿಂದ ಇಲಾಖೆಯ ಪ್ರಧಾನ ಕಾರ್ಯದರ್ಶಿ ಈ ಪ್ರಸ್ತಾವ ತಿರಸ್ಕರಿಸಿದ್ದಾರೆ.

ಆರ್ಥಿಕ ಇಲಾಖೆಯ ಅಭಿಪ್ರಾಯದ ಅನ್ವಯ ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಅವಧಿ ವಿಸ್ತರಿಸಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ಏ.11ಕ್ಕೆ ಘಟಿಕೋತ್ಸವ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಪ್ರಥಮ ವಾರ್ಷಿಕ ಘಟಿಕೋತ್ಸವ ಏ. 11ರಂದು ಬೆಳಿಗ್ಗೆ 11.30ಕ್ಕೆ ಬದಲಾಗಿ 10.30ಕ್ಕೆ ನಡೆಯಲಿದೆ.

ನಗರದ ಅರಮನೆ ರಸ್ತೆಯ ಜ್ಞಾನಜ್ಯೋತಿ ಸಭಾಂಗಣದಲ್ಲಿ ಘಟಿಕೋತ್ಸವ ಜರುಗಲಿದೆ. ಎಲ್ಲ ಪ್ರಾಂಶುಪಾಲರು, ಅಧ್ಯಾಪಕರು, ವಿದ್ಯಾರ್ಥಿಗಳು ಘಟಿಕೋತ್ಸವದ ಆಮಂತ್ರಿತರು ಬದಲಾದ ಸಮಯವನ್ನು ಗಮನಿಸಿ ಘಟಿಕೋತ್ಸವದ ಸಭಾಂಗಣದಲ್ಲಿ ಬೆಳಿಗ್ಗೆ 9.30ಕ್ಕೆ ಉಪಸ್ಥಿತರಿರಬೇಕು ಎಂದು ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

बैंक ऑफ महाराष्ट्र Bank of Maharashtra भारत सरकार का उद्यम एक परिवार एक बैंक
Azadi Ka Amrit Mahotsav
ಹೊಸ ವರ್ಷ, ಹೊಸ ಆರಂಭ, ಹೊಸ ಕನಸುಗಳು ಮತ್ತು ಹೊಸ ಮಹಾ ಆಫರ್‌ಗಳು ಎಂಜಾಯ್ ಮಾಡಲು!
ಯುಗಾದಿ ಹಬ್ಬದ ಶುಭಾಶಯಗಳು
ಮಹಾಸೂಪರ್ ಗೃಹ ಸಾಲ: ಅತಿ ಕಡಿಮೆ ಬಡ್ಡಿದರ 6.40% ರ ಮೇಲ್ಪಟ್ಟು | 3 ಇಎಂಐ ಉಚಿತ | ಇಎಂಐ ಕೇವಲ ₹626/- (ಪ್ರತಿ ಲಕ್ಷಕ್ಕೆ)
ಮಹಾಸೂಪರ್ ಕಾರು ಸಾಲ: ಅತಿ ಕಡಿಮೆ ಬಡ್ಡಿದರ 6.80% ರ ಮೇಲ್ಪಟ್ಟು | ಇಎಂಐ ಕೇವಲ ₹1500/- (ಪ್ರತಿ ಲಕ್ಷಕ್ಕೆ)
*ಷರತ್ತು ಮತ್ತು ನಿಬಂಧನೆಗಳು ಅನ್ವಯ.
ಮಿಸ್ಡ್ ಕಾಲ್ ಕೊಡಿ: 8010614614 ಈಗಲೇ ಅರ್ಜಿ ಸಲ್ಲಿಸಿ: www.bomloans.com
Follow us @mahabank www.bankofmaharashtra.in

ಹೊಸ ವರ್ಷ ನಿಮ್ಮ ಜೀವನದಲ್ಲಿ ಸುಖ–ಸಮೃದ್ಧಿ ಮತ್ತು ಸ್ವಾಸ್ಥ್ಯವನ್ನು ತರಲಿ
ಯುಗಾದಿಯ ಹಾರ್ದಿಕ ಶುಭಾಶಯಗಳು
ऊँचे लोग, ऊँची पसंद RMD PAN MASALA NO TOBACCO, NO NICOTINE Formulation by Rasiklal Manikchand Dhariwal
MRP ₹8 2g | MRP ₹13 3.5g
ಉನ್ನತ ಜನರು, ಉನ್ನತ ಅಭಿರುಚಿ
ಸೂತ್ರೀಕರಣ ನಿರ್ಮಿತಿ : ರಸಿಕ್‌ಲಾಲ್ ಮಾಣಿಕ್‌ಚಂದ್ ಧಾರಿವಾಲ್
ಶಾಸನೀಯ ಎಚ್ಚರಿಕೆ : ಪಾನ್ ಮಸಾಲಾ ಸೇವನೆ ಆರೋಗ್ಯಕ್ಕೆ ಹಾನಿಕರ. ಅಪ್ರಾಪ್ತ ವಯಸ್ಕರಿಗೆ ಪ್ರತಿಬಂಧಿತ
NO TOBACCO, NO NICOTINE
Tiger/KAN

75 ಸ್ವಾತಂತ್ರ್ಯದ ಅಮೃತ ಮಹೋತ್ಸವ
ಪೊಲೀಸ್ ಧ್ವಜ ದಿನಾಚರಣೆ
2ನೇ ಏಪ್ರಿಲ್, 2022
ಶ್ರೀ ಬಸವರಾಜ ಎಸ್. ಬೊಮ್ಮಾಯಿ ಸನ್ಮಾನ್ಯ ಮುಖ್ಯಮಂತ್ರಿಗಳು
ನಮ್ಮ ಧೀರ ಪೊಲೀಸರ ನಿಸ್ವಾರ್ಥ ಸೇವೆ, ಧೈರ್ಯ, ಶೌರ್ಯ ಹಾಗೂ ಕರ್ತವ್ಯ ನಿಷ್ಠೆಯನ್ನು ಗೌರವಿಸುವ ಸುದಿನ – ಪೊಲೀಸ್ ಧ್ವಜ ದಿನಾಚರಣೆ
ಪೊಲೀಸ್‌ರ ಕರ್ತವ್ಯ ನಿಷ್ಠೆಗೆ ನಮ್ಮ ಅನಂತ ನಮನಗಳು
ಮುಖ್ಯ ಅತಿಥಿಗಳು: ಶ್ರೀ ಬಸವರಾಜ ಎಸ್. ಬೊಮ್ಮಾಯಿ ಸನ್ಮಾನ್ಯ ಮುಖ್ಯಮಂತ್ರಿಗಳು
ಅಧ್ಯಕ್ಷತೆ: ಶ್ರೀ ಆರಗ ಜ್ಞಾನೇಂದ್ರ ಸನ್ಮಾನ್ಯ ಗೃಹ ಸಚಿವರು
ದಿನಾಂಕ: 02.04.2022, ಶನಿವಾರ, ಸಮಯ: ಬೆಳಿಗ್ಗೆ 8.00 ಗಂಟೆಗೆ
ಸ್ಥಳ: ಕೆ.ಎಸ್.ಆರ್.ಪಿ. ಪೆರೇಡ್ ಮೈದಾನ, ಕೋರಮಂಗಲ, ಬೆಂಗಳೂರು
ಕರ್ನಾಟಕ ರಾಜ್ಯ ಪೊಲೀಸ್ ಪೊಲೀಸ್ ಧ್ವಜ ದಿನಾಚರಣೆ 02.04.2022
ಇಂದೇ ಪೊಲೀಸ್ ಧ್ವಜವನ್ನು ಖರೀದಿಸಿ ₹ 50, ₹ 100, ₹ 500, ₹ 1000, ₹ 2000 ನಿಮ್ಮ ಕೊಡುಗೆಯನ್ನು ಪೊಲೀಸ್ ಕಲ್ಯಾಣ ನಿಧಿಗೆ ದೇಣಿಗೆ ನೀಡಲಾಗುತ್ತದೆ
ಸಂವಿಧಾನವನ್ನು ಪಾಲಿಸುವುದು, ಅದರ ಆಶಯಗಳನ್ನು ಗೌರವಿಸುವುದು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು –ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ
ಕರ್ನಾಟಕ ವಾರ್ತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನೈರುತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ.: 33 ಯುಬಿಎಲ್ 2021–22 ದಿನಾಂಕ:28–03–2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗಿನ ಕಾಮಗಾರಿಗಾಗಿ ಇ–ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

ಕಾಮಗಾರಿ ವಿವರ	ಅಂದಾಜು ವೆಚ್ಚ
1 ಹುಬ್ಬಳ್ಳಿ ವಿಭಾಗ: ಹಿರಿಯ ವಿಭಾಗೀಯ ಇಂಜಿನಿಯರ್/ಪಶ್ಚಿಮ/ಹುಬ್ಬಳ್ಳಿ ಅಧಿಕಾರ ವ್ಯಾಪ್ತಿಯಲ್ಲಿ (ಅಳ್ನಾವರ–ಲೋಂಡಾ–ವಾಸ್ಕೋ–ಡ–ಗಾಮಾ) 40.12ಕಿಮೀ ಉದ್ದದ ವೆಲ್ಡ್ ನವೀಕರಣ	Rs. 5,92,85,392.11
2 ಹುಬ್ಬಳ್ಳಿ ವಿಭಾಗ: ಹಿರಿಯ ವಿಭಾಗೀಯ ಇಂಜಿನಿಯರ್/ಪಶ್ಚಿಮ ವ್ಯಾಪ್ತಿಯಲ್ಲಿ ಲೋಂಡಾ–ವಾಸ್ಕೋ–ಡ–ಗಾಮಾ ವಿಭಾಗದ ಕಿಮೀ 12 – ಕಿಮೀ 25 (13 ಕಿಮೀ ಎಸ್‌ಎಲ್), ಕಿಮೀ 50– ಕಿಮೀ 82.75 (32.75 ಕಿಮೀ ಎಸ್‌ಎಲ್), ಕಿಮೀ 92.5–ಕಿಮೀ 108.0 (15.5 ಕಿಮೀ ಎಸ್‌ಎಲ್)– ಒಟ್ಟು ಉದ್ದ 61.25 ಕಿಮೀ ಫಿಟ್ಟಿಂಗ್ ನವೀಕರಣ	Rs. 2,47,12,366.45
3 ಹುಬ್ಬಳ್ಳಿ ವಿಭಾಗ: ಅಳ್ನಾವರ–ಲೋಂಡಾ–ವಾಸ್ಕೋ–ಡ–ಗಾಮಾ ಟಿಎಫ್‌ಆರ್= 65ಕಿಮೀ (ಅಳ್ನಾವರ – ಲೋಂಡಾ, 544 – 559= 15ಕಿಮೀ ಮತ್ತು ಲೋಂಡಾ–ವಾಸ್ಕೋ–ಡ–ಗಾಮಾ 0–50ಕಿಮೀ=50ಕಿಮೀ)	Rs. 1,01,44,883.10

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.04.2022 ಸಮಯ: 11:00 ಗಂಟೆಯವರೆಗೆ.

ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ

ಹಿರಿಯ ವಿಭಾಗೀಯ ಇಂಜಿನಿಯರ್/ಕೋ–ಓಆರ್‌ಡಿ ಹುಬ್ಬಳ್ಳಿ

ಪಿಯುಬಿ/489/ಎಎಎಲ್/ ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22

S.W.Railways SWRRLY SWRRLY

Kurl-on®

ಕರ್ಲಾನ್ ಲಿಮಿಟೆಡ್

CIN : U17214KA1962PLC001443

ನೋಂದಾಯಿತ ಕಛೇರಿ: ಎನ್–301, 3ನೇ ಮಹಡಿ, ನಾರ್ತ್ ಬ್ಲಾಕ್, ಫ್ರಂಟ್ ವಿಂಗ್, ಮಣಿಪಾಲ ಸೆಂಟರ್, 47 ಡಿಕನ್ಸನ್ ರೋಡ್, ಬೆಂಗಳೂರು – 560 042. ಇ–ಮೇಲ್ : secretary@manipal.com ದೂರವಾಣಿ : +91 80 4031 3131.

ನೋಟಿಸು

ಅಂಚೆ ಮತಪತ್ರದ ಸೂಚನೆ ಮತ್ತು ಇ–ಮತದಾನದ ಮಾಹಿತಿ

ಈ ಸೂಚನೆಯನ್ನು ಕಂಪನಿಗಳ ಕಾಯ್ದೆ, 2013 ("ಕಾಯ್ದೆ") ಸೆಕ್ಷನ್ 108, 110 ಮತ್ತು ಅನ್ವಯವಾಗುವ ಇತರ ನಿಬಂಧನೆಗಳು, ಯಾವುವಾದರೂ ಇದ್ದರೆ, ಅವುಗಳ ಪ್ರಕಾರ ಹಾಗೂ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು") ಜತೆಗೆ ಓದಿಕೊಂಡಂತೆ, ಮಹಾಸಭೆಗಳ ಮೇಲಿನ ಸೆಕ್ರೆಟರಲ್ ಮಾನದಂಡಗಳು–2 ("SS-2"), ದಿನಾಂಕ 8 ಏಪ್ರಿಲ್, 2020ರ ಸಾಮಾನ್ಯ ಸುತ್ತೋಲೆ ನಂ. 14/2020ರೊಂದಿಗೆ ಓದಿಕೊಂಡಂತೆ ಅವುಗಳ ಅನುಸಾರವಾಗಿ ಮತ್ತು ಅನುಸರಣೆಯಲ್ಲಿ ನೀಡಲಾಗಿದೆ. ದಿನಾಂಕ 28 ಸೆಪ್ಟೆಂಬರ್ 2020ರ ಸುತ್ತೋಲೆ ನಂ. 33/2020, ದಿನಾಂಕ 31 ಡಿಸೆಂಬರ್ 2020ರ ಸುತ್ತೋಲೆ ಸಂ. 39/2020, ದಿನಾಂಕ 23 ಜೂನ್ 2021ರ ಸುತ್ತೋಲೆ ನಂ. 10/2021 ಹಾಗೂ ದಿನಾಂಕ 8 ಡಿಸೆಂಬರ್ 2021ರ ಸುತ್ತೋಲೆ ಸಂ. 20/2021 (ಇವುಗಳನ್ನು ಒಟ್ಟಾಗಿ MCA ಸುತ್ತೋಲೆಗಳು 2.2 ಎಂದು ಕರೆಯಲಾಗುತ್ತದೆ.) ಮತ್ತು ಅನ್ವಯವಾಗುವ ಇತರ ನಿಬಂಧನೆಗಳು, ಯಾವುದಾದರೂ ಇದ್ದರೆ, ಕಾಲಕಾಲಕ್ಕೆ ಮಾಡಿರುವ ತಿದ್ದುಪಡಿಗಳ (ಚಾಲ್ತಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡು (ಗಳು) ಅಥವಾ ಅದರ ಮರು–ಅನುಷ್ಠಾನವನ್ನು ಒಳಗೊಂಡಂತೆ) ಅನುಸಾರ, ಈ ಕೆಳಗಿನ ನಿರ್ಣಯದ ಮೇಲೆ ಮೆ॥ ಕರ್ಲಾನ್ ಲಿಮಿಟೆಡ್ (ಇನ್ನು ಮುಂದೆ "ಕಂಪನಿ" ಎಂದು ಕರೆಯಲಾಗುವುದು) ಸದಸ್ಯರ ಅನುಮೋದನೆಯನ್ನು ರಿಮೋಟ್ ಇ–ಮತದಾನದ ಪ್ರಕ್ರಿಯೆಯಲ್ಲಿ ಅಂಚೆ ಮತಪತ್ರದ (ರಿಮೋಟ್ ಇ–ವೋಟಿಂಗ್) ವಿಧಾನದಲ್ಲಿ ಕೇಳಲಾಗಿದೆ.

ಕ್ರ. ಸಂ.	ವಿಶೇಷ ನಿರ್ಣಯಗಳ ವಿವರಣೆ
1.	ಸಾಲಗಳು / ಖಾತರಿಗಳ ಮಿತಿ ಹೆಚ್ಚಳ, ಭದ್ರತೆಗಳನ್ನು ಒದಗಿಸುವುದು ಮತ್ತು ಕಂಪನಿ ಕಾಯ್ದೆ, 2013ರ ಸೆಕ್ಷನ್ 186ರ ಅಡಿಯಲ್ಲಿ ಭದ್ರತೆಗಳಲ್ಲಿ ಹೂಡಿಕೆಗಳನ್ನು ಮಾಡುವುದು.
2.	ಕಂಪನಿ ಕಾಯ್ದೆ, 2013ರ ಸೆಕ್ಷನ್ 180ರ ಅಡಿಯಲ್ಲಿ ಮಂಡಳಿಯ ಖರೀದಿ ಸಾಮರ್ಥ್ಯವನ್ನು ವೃದ್ಧಿಸುವುದು ಮತ್ತು ಕಂಪನಿಯ ಆಸ್ತಿಗಳ ಭದ್ರತೆಯನ್ನು ರಚಿಸುವ ಅಧಿಕಾರವನ್ನು ನೀಡುವುದು.

ಅನ್ವಯವಾಗುವ ಸುತ್ತೋಲೆಗಳ ಅನುಸಾರ, **ಶುಕ್ರವಾರ, 1 ಏಪ್ರಿಲ್, 2022 ರಂತೆ ('ಅಂತಿಮ ದಿನಾಂಕ')** 'ಸದಸ್ಯರ ನೋಂದಣಿ'ಯಲ್ಲಿ ಹೆಸರುಗಳನ್ನು ಸೇರಿಸಿರುವ ಸದಸ್ಯರಿಗೆ ಮತ್ತು ಮತ್ತು ಇಮೇಲ್ ವಿಳಾಸಗಳನ್ನು ನೋಂದಾಯಿಸಿದ ಕಂಪನಿ / ಡಿಪಾಸಿಟರಿ ಭಾಗೀದಾರರಿಗೆ ವಿವರಣಾತ್ಮಕ ಹೇಳಿಕೆಯೊಂದಿಗೆ ಅಂಚೆ ಮತ ಪತ್ರದ ಸೂಚನೆಯನ್ನು ಕಂಪನಿಯ ವಿದ್ಯುನ್ಮಾನ ವಿಧಾನದಲ್ಲಿ **ಶುಕ್ರವಾರ, 1 ಏಪ್ರಿಲ್, 2022** ರಂದು ಕಳುಹಿಸಲಾಗಿದೆ. ಮೇಲಿನ ಸುತ್ತೋಲೆಗಳಿಗೆ ಅನುಸಾರವಾಗಿ, ಸದಸ್ಯರು ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯ ಮೂಲಕ ಮಾತ್ರ ಮತ ಚಲಾಯಿಸಬಹುದು. ಮೇಲ್ಕಂಡ ಸುತ್ತೋಲೆಗಳಿಗೆ ಅನುಸಾರವಾಗಿ ನೋಟಿಸ್‌ನ ಭೌತಿಕ ಪ್ರತಿಗಳು, ಅಂಚೆ ಮತಪತ್ರ ನಮೂನೆಗಳು ಮತ್ತು ಪೂರ್ವ–ಪಾವತಿ ವ್ಯವಹಾರದ ಉತ್ತರ ಲಕೋಟೆಗಳನ್ನು ಕಳುಹಿಸುವ ಅಗತ್ಯವಿದ್ದವರಿಗೆ ಅವುಗಳನ್ನು ವಿತರಿಸಲಾಗಿದೆ.

ರಿಮೋಟ್ ಇ–ವೋಟಿಂಗ್‌ಗೆ ಸೂಚನೆಗಳು :

ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 108 ಮತ್ತು 110ರ ನಿಬಂಧನೆಗಳ ಪ್ರಕಾರ, ಕಂಪನಿಗಳು (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 (ತಿದ್ದುಪಡಿ ಮಾಡಿರುವಂತೆ), ಸಾಮಾನ್ಯ ಸಭೆಗಳ ಮೇಲಿನ ಸೆಕ್ರೆಟರಿ ಮಾನದಂಡ ನಂ. 2 ಮತ್ತು ಅನ್ವಯವಾಗುವ ಸುತ್ತೋಲೆಗಳ ಜತೆಗೆ ಓದಿಕೊಂಡಂತೆ, ಅಂಚೆ ಮತಪತ್ರದ ಮೂಲಕ ವ್ಯವಹರಿಸಬೇಕಾದ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯುನ್ಮಾನವಾಗಿ ಮತ ಚಲಾಯಿಸಲು ಅನುಕೂಲವಾಗುವಂತೆ ಕಂಪನಿಯು ತನ್ನ ಸದಸ್ಯರಿಗೆ ಸೂಚನೆಯಲ್ಲಿ ತಿಳಿಸಿರುವಂತೆ ರಿಮೋಟ್ ವೋಟಿಂಗ್ / ಇ–ವೋಟಿಂಗ್ ಅವಕಾಶವನ್ನು ಅಧಿಕೃತ ಸಂಸ್ಥೆಯಾಗಿರುವ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (NSDL) ಮೂಲಕ ಒದಗಿಸಿದೆ. ಸದಸ್ಯರ ನೋಂದಣಿ / ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ ಕೊನೆಯ ದಿನಾಂಕವಾದ **ಶುಕ್ರವಾರ, 1 ಏಪ್ರಿಲ್, 2022 ರಂದು** ಇರುವಂತೆ ಹೆಸರು ನೋಂದಾಯಿಸಿರುವ ಸದಸ್ಯರು ರಿಮೋಟ್ ಇ–ವೋಟಿಂಗ್ / ಇ–ವೋಟಿಂಗ್ ಮೂಲಕ ವಿದ್ಯುನ್ಮಾನವಾಗಿ ತಮ್ಮ ಮತವನ್ನು ಚಲಾಯಿಸಲು ಅರ್ಹರಾಗಿರುತ್ತಾರೆ. ಆ ದಿನಾಂಕದಂದು ಸದಸ್ಯರ ಹೆಸರಿನಲ್ಲಿ ನೋಂದಾಯಿಸಲಾದ ಪಾವತಿಸಿದ ಇಕ್ವಿಟಿ ಷೇರುಗಳ ಮೇಲೆ ಮತದಾನದ ಹಕ್ಕುಗಳನ್ನು ಪರಿಗಣಿಸಲಾಗುತ್ತದೆ. ರಿಮೋಟ್ ಇ–ವೋಟಿಂಗ್ ಅವಧಿ ಆರಂಭವಾಗುವ ಸಮಯ: **ಸೋಮವಾರ, 4 ಏಪ್ರಿಲ್ 2022 (ಬೆಳಿಗ್ಗೆ 9.00 ಗಂಟೆ IST)** ಮತ್ತು ಮುಕ್ತಾಯವಾಗುವ ಸಮಯ : **ಮಂಗಳವಾರ, 3 ಮೇ 2022 (ಸಂಜೆ 5.00 ಗಂಟೆ IST)**. ರಿಮೋಟ್ ಇ–ವೋಟಿಂಗ್ ಮಾಡ್ಯೂಲ್ ಅನ್ನು **ಮಂಗಳವಾರ, 3 ಮೇ 2022 ರಂದು ಸಂಜೆ 5.00 ಗಂಟೆಯ** ಬಳಿಕ ಅನುಮತಿಸಲಾಗುವುದಿಲ್ಲ. ಆ ಬಳಿಕ ಮತ ಚಲಾಯಿಸಲು ಸಾಧ್ಯವಾಗದಂತೆ ರಿಮೋಟ್ ಇ–ವೋಟಿಂಗ್ ಮಾಡ್ಯೂಲ್ ಅನ್ನು NSDL ನಿಷ್ಕ್ರಿಯಗೊಳಿಸುತ್ತದೆ. ನಿರ್ಣಯದ ಮೇಲೆ ಸದಸ್ಯರು ಒಂದು ಸಲ ಮತ ಚಲಾಯಿಸಿದರೆ, ತರುವಾಯ ಅದನ್ನು ಬದಲಾಯಿಸಲು ಅಥವಾ ಮತ್ತೊಮ್ಮೆ ಮತ ಚಲಾಯಿಸಲು ಸದಸ್ಯರಿಗೆ ಅನುಮತಿ ಇಲ್ಲ. ಭೌತಿಕವಲ್ಲದ ವಿಧಾನದಲ್ಲಿ ಅಥವಾ ಭೌತಿಕ ವಿಧಾನದಲ್ಲಿ ಷೇರುಗಳನ್ನು, ಯಾವುದಾದರೂ ಇದ್ದರೆ, ಹೊಂದಿರುವ ಷೇರುದಾರರಿಗೆ ಇ–ವೋಟಿಂಗ್ ಮಾಡುವ ವಿಧಾನವನ್ನು ಅಂಚೆ ಮತಪತ್ರದ ಸೂಚನೆಯಲ್ಲಿ ಒದಗಿಸಲಾಗಿದೆ. ರಿಮೋಟ್ ಇ–ವೋಟಿಂಗ್‌ಗಾಗಿ ಲಾಗಿನ್ ವಿವರಗಳನ್ನು ಸದಸ್ಯರಿಗೆ ಅವರ ನೋಂದಾಯಿತ ಇಮೇಲ್ ವಿಳಾಸಗಳಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ. ಯಾವುದೇ ಪ್ರಶ್ನೆಗಳಿದ್ದಲ್ಲಿ, ಷೇರುದಾರರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳನ್ನು (FAQs) ನೋಡಬಹುದು ಮತ್ತು ಷೇರುದಾರರಿಗಾಗಿ ಇ–ಮತದಾನದ ಬಳಕೆದಾರರ ಕೈಪಿಡಿಯು **www.evoting.nsdl.com** ನ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿದೆ ಅಥವಾ ಟೋಲ್ ಫ್ರೀ ಸಂಖ್ಯೆ 1800–222–990 ಗೆ ಕರೆ ಮಾಡಬಹುದು ಅಥವಾ **ಕು. ಪಲ್ಲವಿ** ಅವರಿಗೆ **evoting@nsdl.co.in** ಈ ಇಮೇಲ್ ವಿಳಾಸದಲ್ಲಿ ವಿನಂತಿಯನ್ನು ಕಳುಹಿಸಬಹುದು.

ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರ ಹೆಸರುಗಳು ಕಂಪನಿಯಲ್ಲಿ ನೋಂದಾಯಿಸಿಲ್ಲವಾದರೆ, ಸದಸ್ಯರು ತಮ್ಮ ಹೆಸರು, ಫೋಲಿಯೋ ಸಂಖ್ಯೆ, ಪೂರ್ಣ ವಿಳಾಸ, ಷೇರು ಪ್ರಮಾಣಪತ್ರದ (ಮುಂದೆ ಮತ್ತು ಹಿಂದೆ ಎರಡೂ ಬದಿಗಳ) ಸ್ಕ್ಯಾನ್ ಮಾಡಲಾದ ಪ್ರತಿಯನ್ನು, ಸಹಿ ಮಾಡಿರುವ ವಿನಂತಿ ಪತ್ರದ ಸ್ಕ್ಯಾನ್ ಮಾಡಿರುವ ಪ್ರತಿಯನ್ನು ಲಗತ್ತಿಸಿ, ಸ್ವಯಂ ದೃಢೀಕರಿಸಿದ ಪಾನ್ ಮತ್ತು ಆಧಾರ ಕಾರ್ಡ್ ಮತ್ತು ಇಮೇಲ್ ವಿಳಾಸದ ಜತೆಗೆ **secretary@manipal.com** ಗೆ ಕಳುಹಿಸುವ ಮೂಲಕ ಮತ್ತು / ಅಥವಾ ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಪ್ರತಿನಿಧಿ, ಪೂರ್ವ ಶೇರಿಜಿಸ್ಟ್ರಿ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ("RTA") ಇವರಿಗೆ ಪತ್ರವನ್ನು ಕಳುಹಿಸಿ ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸಿಕೊಳ್ಳಬಹುದು. ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇಮೇಲ್ ವಿಳಾಸವನ್ನು ತಮಗೆ ಸಂಬಂಧಿಸಿದ ಡೆಪಾಸಿಟರಿ ಪಾರ್ಟಿಸಿಪೆಂಟ್‌ನಲ್ಲಿ ನವೀಕರಿಸಬಹುದು ಅಥವಾ **DPID-CLID (16 ಅಂಕೆಗಳ DPID + CLID ಅಥವಾ 16 ಅಂಕಿಯ ಫಲಾನುಭವಿ ID), ಹೆಸರು, ಕ್ಲಯಂಟ್ ಮಾಸ್ಟರ್ ಅಥವಾ ಏಕೀಕೃತ ಖಾತೆ ಹೇಳಿಕೆಯ ಪ್ರತಿ, ಪಾನ್ ಕಾರ್ಡ್ (ಸ್ವಯಂ ದೃಢೀಕರಿಸಿದ ಸ್ಕ್ಯಾನ್ ಮಾಡಿದ ಪಾನ್ ಕಾರ್ಡ್ ಪ್ರತಿ), ಆಧಾರ ಕಾರ್ಡ್ (ಸ್ವಯಂ ದೃಢೀಕೃತ ಸ್ಕ್ಯಾನ್ ಮಾಡಿದ ಆಧಾರ್ ಕಾರ್ಡ್ ಪ್ರತಿ) ಯನ್ನು ecretary@manipal.com** ಗೆ ಒದಗಿಸಬಹುದು.

ಕಂಪನಿಯ ಆಡಳಿತ ಮಂಡಳಿಯ ನಿರ್ದೇಶಕರು ಕಂಪನಿಯ ವೃತ್ತಿನಿರತ ಕಾರ್ಯದರ್ಶಿಗಳಾದ **ಶ್ರೀ ದೀಪಕ್ ಸಾಧು (M. No. A39541)** ಅವರನ್ನು ರಿಮೋಟ್ ಇ–ವೋಟಿಂಗ್ ವಿಧಾನದಲ್ಲಿ ಅಂಚೆ ಮತಪತ್ರದ ವಿಧಿ–ವಿಧಾನಗಳನ್ನು ಪಾರದರ್ಶಕ ಹಾಗೂ ನ್ಯಾಯ ಸಮ್ಮತವಾಗಿ ನಿರ್ವಹಿಸಲು ಪರಿವೀಕ್ಷಕರನ್ನಾಗಿ ನೇಮಿಸಿದ್ದಾರೆ.

ಫಲಿತಾಂಶಗಳನ್ನು **ಬುಧವಾರ 4 ಮೇ, 2022 ರಂದು ಸಂಜೆ 5.00 (IST) ಗಂಟೆಗೆ ಅಥವಾ ಮೊದಲು ಪ್ರಕಟಿಸಲಾಗುವುದು.** ಪರಿವೀಕ್ಷಕರ ವರದಿಯೊಂದಿಗೆ ಮತದಾನದ ಫಲಿತಾಂಶಗಳನ್ನು ಕಂಪನಿಯ ನೋಂದಾಯಿತ ಕಚೇರಿಯಲ್ಲಿರುವ ಸೂಚನಾ ಫಲಕದಲ್ಲಿ ಪ್ರದರ್ಶಿಸಲಾಗುತ್ತದೆ.

ಆಡಳಿತ ಮಂಡಳಿಯ ಸಲುವಾಗಿ ಹಾಗೂ ಪರವಾಗಿ, (ಕರ್ಲಾನ್ ಲಿಮಿಟೆಡ್) ಗಾಗಿ

ದಿನಾಂಕ : 02–04–2022
ಸ್ಥಳ : ಬೆಂಗಳೂರು

ಸಹಿ/– ನೇಹಾ ಲಖೇರಾ
ಕಂಪೆನಿ ಸೆಕ್ರೆಟರಿ

ಆಕ್ವಾ ಗ್ರೂಪ್ ವತಿಯಿಂದ ಸಮಸ್ತ ಕರ್ನಾಟಕದ ಜನತೆಗೆ ಯುಗಾದಿ ಹಬ್ಬದ ಶುಭಾಶಯಗಳು
TEXMO® AQUA GROUP AQUATEX®
ನಿಮ್ಮ ವಿಶ್ವಸನೀಯ ಪಂಪ್‌ಗಳು
* AQUATEX ಕೇಬಲ್ * AQUATEX ಸ್ಟಾರ್ಟರ್ * AQUATEX uPVC ಕಾಲಂ ಪೈಪ್ಸ್
* ದೀರ್ಘ ಬಾಳಿಕೆ * 24x7 ಸೇವೆ * ಶ್ರೇಷ್ಠ ಗುಣಮಟ್ಟ * ಉತ್ತಮ ಕಾರ್ಯಕ್ಷಮತೆ
ಈ ಕೆಳಕಂಡ ಅಧಿಕೃತ ಡೀಲರ್‌ಗಳಲ್ಲಿ ಮಾತ್ರ ಲಭ್ಯ.
ಆಕ್ವಾಸಬ್ ಇಂಜಿನಿಯರಿಂಗ್ ಮತ್ತು ಅಕ್ವಾಪಂಪ್ ಇಂಡಸ್ಟ್ರೀಸ್ ಕೊಯಮತ್ತೂರು – 641034
ಬೆಂಗಳೂರು ಶಾಖೆ : ಎ 92, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ರಾಜಾಜಿನಗರ, ಬೆಂಗಳೂರು – 10. ✆ : 080 – 23381891
ಹುಬ್ಬಳ್ಳಿ ಶಾಖೆ : ಆನಂದ ಜಿನ್ನಿಂಗ್ ಫ್ಯಾಕ್ಟರಿ ಕಂಪೌಂಡ್, ಬಂಕಾಪುರ ಚೌಕ್, ಪಿ.ಬಿ. ರೋಡ್, ಹುಬ್ಬಳ್ಳಿ–24. ✆ :0836–2957632
ಅಧಿಕೃತ ಡೀಲರ್ಸ್: ಬೆಂಗಳೂರು: ಶಾಂತಲಕ್ಷ್ಮಿ ಎಲೆಕ್ಟ್ರಿಕಲ್ಸ್ ✆9845505597 | ಶ್ರೀ ಮಾರುತಿ ಎಂಟರ್‌ಪ್ರೈಸಸ್ ✆9731358294 | ಗುರು ಅಸೋಸಿಯೇಟ್ಸ್ 9480826460 | ಜಿ.ವಿ.ಬಿ. ಫ್ಲೋಟೆಕ್ 9845446176 | ಎ.ಎನ್. ಎಂಟರ್‌ಪ್ರೈಸಸ್ ✆9901163007 | ಸಿಂಟ್ರಾನ್‌ಸೇಲ್ಸ್ ಕಾರ್ಪೋರೇಷನ್ ✆9844425588 | ತಿರುಮಲ ಎಂಟರ್‌ಪ್ರೈಸಸ್ ✆9886091121 | ಶ್ರೀ ಮಂಜುನಾಥ ಏಜೆನ್ಸೀಸ್ ✆7892648452 | ಇ.ಎಸ್.ಪಿ.ಆರ್. ಎಲೆಕ್ಟ್ರಿಕಲ್ ಸರ್ವೀಸ್ಸ್ ✆9845469172 | ವಿನಾಯಕ ಮಾರ್ಕೆಟಿಂಗ್ ✆9448379398 | ವಿಎಸ್‌ಪಿ ಪಂಪ್ಸ್ ✆9880165527 | ಎಎಸ್ ಆಗ್ರೋಟೆಕ್ ✆9740166606 | ಮಂಜುನಾಥ್ ಎಂಟರ್ ಪ್ರೈಸಸ್ ✆9880871679 | ರಾಮನಗರ : ಮಂಜುಶ್ರೀ ಎಲೆಕ್ಟ್ರಿಕಲ್ಸ್ ✆9242220554 | ರಾಜಾನಕುಂಟೆ : ಮಂಜುನಾಥ ಟ್ರೇಡರ್ಸ್ ✆9343736456 | ದೇವನಹಳ್ಳಿ : ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ವರ್ಕ್ಸ್ ✆9448551213 | ವಿಜಯಪುರ : ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ವರ್ಕ್ಸ್ ✆9448551213 | ಹೊಸಕೋಟೆ : ಪ್ರಭು ಎಲೆಕ್ಟ್ರಿಕಲ್ಸ್ ✆9448081876 | ಕನಕಪುರ : ಶ್ರೀ ಮಂಜುನಾಥೇಶ್ವರ ಎಂಟರ್‌ಪ್ರೈಸಸ್ ✆9972049822 | ಕೆಂಗೇರಿ: ಎಸ್.ಎಲ್.ವಿ. ಪಂಪ್ಸ್ ✆9448513248 | ಪೀಣ್ಯ: ವಿನಾಯಕ ಎಂಟರ್‌ಪ್ರೈಸಸ್ ✆9741414592 | ನೆಲಮಂಗಲ : ಗುರು ಅಸೋಸಿಯೇಟ್ಸ್ ✆9448373404 | ಕೋಲಾರ : ಉಮಾ ಎಲೆಕ್ಟ್ರಿಕಲ್ಸ್ ✆9902808605 | ಓಂಕಾರ ಏಜೆನ್ಸೀಸ್ ✆9880190749 | ಶ್ರೀನಿವಾಸಪುರ : ವಿಜಯಲಕ್ಷ್ಮಿ ಏಜೆನ್ಸೀಸ್ ✆9845141512 | ಬಂಗಾರಪೇಟೆ : ವರದರಾಜ ಏಜೆನ್ಸೀಸ್ ✆8971981066 | ಬಾಗೇಪಲ್ಲಿ : ಮಾರುತಿ ಎಂಟರ್‌ಪ್ರೈಸಸ್ ✆9844406508 | ಚಿಕ್ಕಬಳ್ಳಾಪುರ : ಮಂಜುನಾಥ ಎಲೆಕ್ಟ್ರಿಕಲ್ಸ್ ✆9448886619 | ಚಿಂತಾಮಣಿ : ರಾಜೇಶ್ವರಿ ಟ್ರೇಡರ್ಸ್ ✆9880156246 | ಶಿಡ್ಲಘಟ್ಟ : ರಾಜೇಶ್ವರಿ ಎಂಟರ್‌ಪ್ರೈಸಸ್ ✆9880856246 | ಗುಡಿಬಂಡೆ : ನಾಗರಾಜ ಎಂಟರ್‌ಪ್ರೈಸಸ್ ✆9880104195 | ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ಸ್ಟೋರ್ಸ್ ✆9448664483 | ಹೆಚ್.ಕ್ರಾಸ್ : ಉಮಾ ಇನಿಯರಿಂಗ್ ವರ್ಕ್ಸ್ ✆9448165195 | ಗೌರಿಬಿದನೂರು : ಶ್ರೀನಿವಾಸ ಎಲೆಕ್ಟ್ರಿಕ್ ಸ್ಟೋರ್ಸ್ ✆9448314982 | ಮಾಲೂರು : ಶ್ರೀದೇವಿ ಎಲೆಕ್ಟ್ರಿಕಲ್ಸ್ ✆9961320501 | ಚೇಳೂರು : ಮಾರುತಿ ಎಲೆಕ್ಟ್ರಿಕಲ್ಸ್ ✆9448950429 | ತುಮಕೂರು : ಗುರು ಏಜೆನ್ಸೀಸ್ ✆8095242587 | ಸಿರಾ : ಗುರು ಎಂಟರ್ ಪ್ರೈಸಸ್ ✆9448093767 | ಮಧುಗಿರಿ : ಪ್ರಸಾದ ಎಂಟರ್‌ಪ್ರೈಸಸ್ ✆9448250601 | ತಿಪಟೂರು : ಶ್ರೀನಿವಾಸ ಎಂಟರ್‌ಪ್ರೈಸಸ್ ✆9448106005 | ಚಿಕ್ಕನಾಯಕನಹಳ್ಳಿ : ಸಿದ್ಧಶ್ರೀ ಟ್ರೇಡರ್ ✆7624844129 | ಪೇರಸಂದ್ರಾ : ಶ್ರೀ ನಂಜುಂಡೇಶ್ವರ ಎಂಟರ್‌ಪ್ರೈಸಸ್ ✆9886534395 | ದೊಡ್ಡಬಳ್ಳಾಪುರ : ಕಾರ್ಪತಿ ಏಜೆನ್ಸೀಸ್ ✆9880165527 | ವಿ.ಎಸ್.ಪಿ ಪಂಪ್ಸ್ ✆9448379398 | ಮುಳಬಾಗಿಲು : ರೆಡ್ಡಿ ಎಲೆಕ್ಟ್ರಿಕಲ್ಸ್ ✆9986995862 |

ವಿ.ವಿ.ಗಳಿಗೆ ಸ್ವಾಯತ್ತತೆ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವವಿದ್ಯಾಲಯಗಳಿಗೆ ಸ್ವಾಯತ್ತತೆಯ ಸ್ಥಾನಮಾನ ನೀಡಬೇಕು ಎಂದು ಕರ್ನಾಟಕದ ವಿಶ್ರಾಂತ ಕುಲಪತಿಗಳ ವೇದಿಕೆ (ಎಫ್‌ವಿಸಿಕೆ) ಅಭಿಪ್ರಾಯಪಟ್ಟಿದೆ.

ಸ್ವಾಯತ್ತತೆ ನೀಡದಿದ್ದರೆ ಕನಿಷ್ಠ ಒಂದೇ ಒಂದು ವಿಶ್ವವಿದ್ಯಾಲಯವನ್ನು ಜಾಗತಿಕ ಗುಣಮಟ್ಟಕ್ಕೆ ಅಭಿವೃದ್ಧಿಪಡಿಸುವ ಸರ್ಕಾರದ ಮಹತ್ವಾಕಾಂಕ್ಷೆ ಕನಸಾಗಿಯೇ ಉಳಿಯುತ್ತದೆ. ಈಗ ನಡೆಯುತ್ತಿರುವ ಎಲ್ಲ ಅಕ್ರಮಗಳಿಗೆ ಕಡಿವಾಣ ಹಾಕಲು ಇಂತಹ ಕ್ರಮ ಅಗತ್ಯವಾಗಿದೆ ಎಂದು ವೇದಿಕೆ ಪ್ರತಿಪಾದಿಸಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆಯ ನಿಬಂಧನೆಗಳಿಗೆ ವಿರುದ್ಧವಾಗಿ ವಿಶ್ವವಿದ್ಯಾಲಯಗಳ ಸಿಂಡಿಕೇಟ್ ಮತ್ತು ಸೆನೆಟ್‌ಗಳಿಗೆ ಶಿಕ್ಷಣ ತಜ್ಞರಲ್ಲದ ವ್ಯಕ್ತಿಗಳನ್ನು ಸರ್ಕಾರ ನಾಮ ನಿರ್ದೇಶನ ಮಾಡುತ್ತಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆಯ ಅನ್ವಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಅಧ್ಯಾಪಕರು ಮತ್ತು ಉದ್ಯೋಗಿಗಳ ನೇಮಕಾತಿ ಮಂಡಳಿಯು ವಿಶ್ವವಿದ್ಯಾಲಯದ ಅಧಿಕಾರದ ವ್ಯಾಪ್ತಿಯಲ್ಲಿರುತ್ತದೆ. ಕುಲಪತಿಗಳು ಪದ ನಿಮಿತ್ತ ಅಧ್ಯಕ್ಷರು, ಕುಲಸಚಿವರು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಾರೆ. ಈ ಕಾಯ್ದೆಯನ್ನು ಉಲ್ಲಂಘಿಸಿ ಸರ್ಕಾರವು ತನ್ನದೇ ಆದ ಮಂಡಳಿಗಳನ್ನು ರಚಿಸುವ ಮೂಲಕ ವಿಶ್ವವಿದ್ಯಾಲಯದಗಳ ವಿವಿಧ ಸಿಬ್ಬಂದಿ ನೇಮಕಾತಿಯ ಅಧಿಕಾರವನ್ನು ವಹಿಸಿಕೊಳ್ಳುತ್ತಿದೆ ಎಂದು ವೇದಿಕೆಯ ಅಧ್ಯಕ್ಷ ಡಾ.ಕೆ.ಎಸ್. ರಂಗಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ನೇಮಕಾತಿಯನ್ನು ಹೈಕೋರ್ಟ್ ಇತ್ತೀಚೆಗೆ ಅನೂರ್ಜಿತಗೊಳಿಸಿದೆ. ನೇಮಕಾತಿಗೆ ಮೊದಲು ರಾಜ್ಯ ಸರ್ಕಾರದ ಒಪ್ಪಿಗೆ ಪಡೆಯದಿರುವುದು ಇದಕ್ಕೆ ಕಾರಣ ಎಂದು ಅವರು ಹೇಳಿದ್ದಾರೆ. ಕುಲಪತಿಗಳ ನೇಮಕಾತಿಗೆ ಹೆಸರುಗಳನ್ನು ಶಿಫಾರಸು ಮಾಡಲು ಶೋಧನಾ ಸಮಿತಿಗೆ ನಿವೃತ್ತ ಪ್ರಾಧ್ಯಾಪಕರು, ಹಾಲಿ ಪ್ರಾಧ್ಯಾಪಕರು, ಪ್ರಾಂಶುಪಾಲರು ಅಥವಾ ಡೀನ್ ಅವರನ್ನು ನಾಮ ನಿರ್ದೇಶನ ಮಾಡುವ ಮೂಲಕ ಹಲವು ಸಂದರ್ಭಗಳಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆಯನ್ನು ದುರ್ಬಲಗೊಳಿಸಲಾಗುತ್ತಿದೆ ಎಂದಿದ್ದಾರೆ.

‘ಪ್ರತಿಭಟನೆಯ ಹಕ್ಕು ಕಸಿಯುತ್ತಿರುವ ವಿಶ್ವವಿದ್ಯಾಲಯ’

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರತಿಭಟನೆ ನಡೆಸುವುದಕ್ಕೆ ನಿರ್ಬಂಧ ವಿಧಿಸಿ ಕುಲಸಚಿವರು ಹೊರಡಿಸಿರುವ ಸುತ್ತೋಲೆಗೆ ಎಐಡಿಎಸ್‌ಒ ಆಕ್ಷೇಪ ವ್ಯಕ್ತಪಡಿಸಿದೆ.

ವಿಶ್ವವಿದ್ಯಾಲಯಕ್ಕೆ ಹೊಸ ಕುಲಪತಿ ನೇಮಿಸುವಂತೆ ಆಗ್ರಹಿಸಿ ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದಾರೆ. ಹೀಗಾಗಿ, ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಎಂ. ಕೊಟ್ರೇಶ್ ಅವರು ಪ್ರತಿಭಟನೆಗೆ ನಿರ್ಬಂಧ ವಿಧಿಸಿ ಸುತ್ತೋಲೆ ಹೊರಡಿಸಿದ್ದಾರೆ. ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿಭಾಗ ಮುಖ್ಯಸ್ಥರು ಸೇರಿದಂತೆ ಯಾರೂ ಜ್ಞಾನಭಾರತಿ ಆವರಣದಲ್ಲಿ ಯಾವುದೇ ಪ್ರತಿಭಟನೆ ನಡೆಸಬಾರದೆಂದು ಕುಲಸಚಿವರು ಸೂಚಿಸಿದ್ದಾರೆ. ಆದರೆ, ವಿವಿ ಆವರಣಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕಾದ್ದು ಆಡಳಿತ ಮಂಡಳಿಯೇ ಹೊರತು ಹೈಕೋರ್ಟ್ ಅಲ್ಲ ಎಂದು ಎಐಡಿಎಸ್‌ಒ ತಿಳಿಸಿದೆ.

ಪ್ರತಿಭಟನೆಯ ಹಕ್ಕು ಪ್ರತಿಯೊಬ್ಬ ನಾಗರಿಕನ ಮೂಲಭೂತ ಮತ್ತು ಪ್ರಜಾತಾಂತ್ರಿಕ ಹಕ್ಕು. ಆಡಳಿತಗಾರರನ್ನು ಪ್ರಶ್ನಿಸಲು ಅಥವಾ ಯಾವುದೇ ಅನ್ಯಾಯದ ವಿರುದ್ಧ ಹೋರಾಟ ನಡೆಸಲು ಜನಸಾಮಾನ್ಯರ ಬಳಿ ಇರುವ ಬಲಶಾಲಿ ಆಯುಧ. ಆದರೆ, ಕುಲಸಚಿವರ ಈ ಕರಾಳ ಮತ್ತು ಜನತಂತ್ರ-ವಿರೋಧಿ ಸುತ್ತೋಲೆಯನ್ನು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಿಬ್ಬಂದಿ ಒಕ್ಕೊರಲಿನಿಂದ ಖಂಡಿಸಬೇಕು ಹಾಗೂ ಪ್ರಬಲ ಚಳವಳಿ ಕಟ್ಟಬೇಕು. ಪ್ರತಿಭಟನೆಯ ಹಕ್ಕನ್ನು ಕಸಿಯುವ ಈ ಸುತ್ತೋಲೆಯನ್ನು ಕೂಡಲೇ ಹಿಂಪಡೆಯಬೇಕೆಂದು ಕುಲಸಚಿವರನ್ನು ಎಐಡಿಎಸ್‌ಒ ಆಗ್ರಹಿಸುತ್ತದೆ ಎಂದು ಜಿಲ್ಲಾ ಕಾರ್ಯದರ್ಶಿ ವಿ. ಕಲ್ಯಾಣ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೇಣುಗೋಪಾಲ್ ವಜಾಗೆ ಆಗ್ರಹಿಸಿ ಧರಣಿ

ಬೆಂಗಳೂರು: ‘ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಕೆ. ಆರ್.ವೇಣುಗೋಪಾಲ್ ಅವರ ನೇಮಕಾತಿಯನ್ನು ಹೈಕೋರ್ಟ್ ರದ್ದು ಮಾಡಿರುವುದರಿಂದ ರಾಜ್ಯಪಾಲರು ಕೂಡಲೇ ಅವರನ್ನು ಕುಲಪತಿ ಸ್ಥಾನದಿಂದ ವಜಾ ಮಾಡಬೇಕು’ ಎಂದು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರು ಆಗ್ರಹಿಸಿದ್ದಾರೆ.

ಶುಕ್ರವಾರ ಇಲ್ಲಿ ಮಾತನಾಡಿದ ಸಿಂಡಿಕೇಟ್ ಸದಸ್ಯ ಎಚ್.ಸುಧಾಕರ್, ‘ಕೆ.ಆರ್.ವೇಣುಗೋಪಾಲ್ ಅವರು ಕುಲಪತಿ ಹುದ್ದೆಗೆ ನೇಮಕಗೊಂಡಿರುವುದನ್ನು ಹೈಕೋರ್ಟ್ ವಿಭಾಗೀಯ ಪೀಠ ರದ್ದುಪಡಿಸಿದೆ. ಆದರೆ ಈಗಲೂ ಅವರೇ ಕುಲಪತಿಯ ಅಧಿಕಾರ ನಡೆಸುತ್ತಿದ್ದಾರೆ. ತಾನು ವಿಶ್ವವಿದ್ಯಾಲಯದ ಆಡಳಿತ ಚುಕ್ಕಾಣಿ ಹಿಡಿದಿದ್ದೇನೆ ಎಂದು ಕುಲಸಚಿವರಿಗೆ ಇ-ಮೇಲ್ ಮೂಲಕ ಪತ್ರ ಬರೆದು, ಆಡಳಿತ ನಡೆಸುವಂತೆ ಆದೇಶಿಸಿದ್ದಾರೆ. ಈ ಮೂಲಕ ಅವರು ನ್ಯಾಯಾಲಯದ ಆದೇಶ ಉಲ್ಲಂಘಿಸಿದ್ದಾರೆ’ ಎಂದು ದೂರಿದರು.

‘ವೇಣುಗೋಪಾಲ್ ಅವರನ್ನು ರಾಜ್ಯಪಾಲರು ಹಾಗೂ ರಾಜ್ಯ ಸರ್ಕಾರ ಕೂಡಲೇ ವಜಾಗೊಳಿಸಬೇಕು. ಈ ಮೂಲಕ ನ್ಯಾಯಾಲಯದ ಆದೇಶ ಪಾಲಿಸಿ, ಸಾಮಾಜಿಕ ನ್ಯಾಯವನ್ನು ಕಾಪಾಡಬೇಕು’ ಎಂದು ಒತ್ತಾಯಿಸಿದರು. ‘ಕುಲಪತಿ ಸ್ಥಾನಕ್ಕೆ ಬೇರೆಯವರನ್ನು ನೇಮಕಾತಿ ಮಾಡಬೇಕು ಅಥವಾ ಪ್ರಭಾರಿ ಕುಲಪತಿಯನ್ನು ನೇಮಿಸಲು ರಾಜ್ಯಪಾಲರು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ಸೋಮವಾರದಿಂದ ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿ ಎದುರು ಸಿಂಡಿಕೇಟ್ ಸದಸ್ಯರೆಲ್ಲ ಧರಣಿ ನಡೆಸಲಿದ್ದೇವೆ’ ಎಂದೂ ಎಚ್ಚರಿಸಿದರು. ಸಿಂಡಿಕೇಟ್ ಸದಸ್ಯರಾದ ಗೋಪಿನಾಥ್, ವಿಧೇಯ ಬೆಳಗೋಡೆ ಶ್ರೀಕಂಠ, ಉದಯ್ ಕುಮಾರ್, ಪ್ರೇಮ್ ಸೋಹಾನ್ ಲಾಲ್ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ್ದರು.

ನಗರದಲ್ಲಿ ಇಂದು

ಪೊಲೀಸ್ ಧ್ವಜ ದಿನಾಚರಣೆ: ಅತಿಥಿ-ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ-ಗೃಹ ಸಚಿವ ಆರಗ ಜ್ಞಾನೇಂದ್ರ, ಸ್ಥಳ-ಕೆಎಸ್‌ಆರ್‌ಪಿ ಪರೇಡ್ ಮೈದಾನ, ಕೋರಮಂಗಲ, ಬೆಳಿಗ್ಗೆ 8

ಶ್ರೀರಾಮನವಮಿ ಉತ್ಸವ: ಆಯೋಜನೆ-ವೈಯಾಲಿಕಾವಲ್ ಎಕ್ಸ್‌ಟೆಂಷನ್ ಸಂಘ, ಸ್ಥಳ-ರಾಮ ದೇವಸ್ಥಾನ, ವೈಯಾಲಿಕಾವಲ್, ಬೆಳಿಗ್ಗೆ 10.30ರಿಂದ

ವಚನ ಸಂಗೀತ ಯುಗಾದಿ: ಆಯೋಜನೆ-ವಚನ ಜ್ಯೋತಿ ಬಳಗ, ಸ್ಥಳ-ವಿದ್ಯಾಶ್ರೀ ಅನಿಲ ಹಾರಕೂಡೆ ನಿವಾಸ, ಮಲ್ಲತ್ತಹಳ್ಳಿ, ಸಂಜೆ 5

‘ಮೈಸೂರ್ ಪಾಕ್ ಹುಡುಗ’, ‘ಪ್ರಭಾರಿ’ **ಪುಸ್ತಕಗಳ ಬಿಡುಗಡೆ:** ವಸುಂಧರಾ ಭೂಪತಿ, ಜೋಗಿ, ಅತಿಥಿಗಳು-ಹರೀಶ್ ಕುಮಾರ್, ಗೋಪಾಲಕೃಷ್ಣ ಕುಂಟಿನಿ, ಆಯೋಜನೆ-ಸ್ನೇಹ ಬುಕ್ ಹೌಸ್, ಸ್ಥಳ-ಪುನರ್ವಸು ಸಭಾ ಮಂದಿರ, ರಾಮಾಶ್ರಮ, ಗಿರಿನಗರ, ಸಂಜೆ 5

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ **ಸಂಗೀತೋತ್ಸವ:** ಉದ್ಘಾಟನೆ-ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿಗಳು-ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಲೇಖಕಿ ಸುಧಾಮೂರ್ತಿ, ಮಂಡಳಿಯ ಮಹಾ ಪೋಷಕ ಸಿ.ಎಸ್. ಕೇದಾರ, ಸಂಗೀತ ಕಾರ್ಯಕ್ರಮ-ಪಿ.ಉನ್ನಿಕೃಷ್ಣನ್, ಸಾಯಿ ರಕ್ಷಿತ್, ಬೆಂಗಳೂರು ವಿ.ಪ್ರವೀಣ್, ಜಿ.ಗುರುಪ್ರಸನ್ನ, ಆಯೋಜನೆ-ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ-ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 6ರಿಂದ



ರಂಗ ಯುಗಾದಿ-2022: ಅಂತರ್ಯ ಯುದ್ಧ ನಾಟಕ ಪ್ರದರ್ಶನ, ಆಯೋಜನೆ-ನಗ್ನ ಥಿಯೇಟರ್, ಸ್ಥಳ-ಕೆ.ಎಚ್.ಕಲಾಸೌಧ, ಹನುಮಂತನಗರ, ಸಂಜೆ 7.30

ಭಾನುವಾರದ ಕಾರ್ಯಕ್ರಮಗಳು

ಕ್ಯಾನ್ಸರ್ ತಪಾಸಣೆ ಶಿಬಿರ: ಆಯೋಜನೆ-ರೋಟರಿ ಬೆಂಗಳೂರು ಬ್ರಿಗೇಡ್ಸ್, ಸ್ಥಳ-ಶಿರಡಿ ಸಾಯಿ ಮಂದಿರ, ವಿಜಯನಗರ, ಬೆಳಿಗ್ಗೆ 9.30ರಿಂದ

ವಿವಿಧ ಪುಸ್ತಕಗಳ ಬಿಡುಗಡೆ ಹಾಗೂ ವೆಬ್‌ಸೈಟ್ ಉದ್ಘಾಟನೆ: ಶಾಸಕ ಎಸ್. ಸುರೇಶ್ ಕುಮಾರ್, ಅಧ್ಯಕ್ಷತೆ-ಟಿ.ಎಸ್. ನಾಗಾಭರಣ, ಅತಿಥಿಗಳು-ಶ್ರೀಶಾನಂದ, ಸಂತೋಷ್ ಕುಮಾರ್ ಮೆಹೆಂದಳೆ, ಆಯೋಜನೆ-ವಿಕ್ರಂ ಪ್ರಕಾಶನ, ಸ್ಥಳ-ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10

ಸಿದ್ಧಲಿಂಗೇಶ್ವರ ಸ್ವಾಮಿ ನೂತನ ದೇವಾಲಯದ ಲೋಕಾರ್ಪಣೆ: ಬಿ.ಎಸ್. ಯಡಿಯೂರಪ್ಪ, ಸಾನ್ನಿಧ್ಯ-ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಚನ್ನವೀರ ಶಿವಾಚಾರ್ಯ ಸ್ವಾಮೀಜಿ, ಶಿವಬಸವ ಸ್ವಾಮೀಜಿ, ಅತಿಥಿಗಳು-ಬಿ.ಎಸ್.ಪರಮಶಿವಯ್ಯ, ಪಿ.ಸಿ.ಮೋಹನ್, ಅಧ್ಯಕ್ಷತೆ-ದಿನೇಶ್ ಗುಂಡೂರಾವ್, ಸ್ಥಳ-ಶ್ರೀದೊಡ್ಡ ಮಠ, ಅಕ್ಕಮಹಾದೇವಿ ರಸ್ತೆ, ಅಕ್ಕಿಪೇಟೆ, ಬೆಳಿಗ್ಗೆ 10

ಬಂಗಾಲಿ ವ್ಯಂಗ್ಯಚಿತ್ರ ಪ್ರದರ್ಶನ: ಉದ್ಘಾಟನೆ-ಚಿರಂಜೀವ ಸಿಂಗ್, ಅತಿಥಿ-ನೂಪುರ ಬಸು, ಆಯೋಜನೆ ಮತ್ತು ಸ್ಥಳ-ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಎಂ.ಜಿ. ರಸ್ತೆ, ಬೆಳಿಗ್ಗೆ 11

‘ಶ್ರೀನಿವಾಸ ಕಲ್ಯಾಣ ವೆಂಕಟಾದ್ರಿ ಮಹಿಮೆ’ ನೃತ್ಯನಾಟಕ: ಜಯಲಕ್ಷ್ಮೀ ಜಿತೇಂದ್ರ ಭಾಗವತ, ಉದ್ಘಾಟನೆ-ಬಿ.ಎಸ್. ಯಡಿಯೂರಪ್ಪ, ಅತಿಥಿಗಳು-ತೇಜಸ್ವಿ ಸೂರ್ಯ, ಸೌಮ್ಯಾರೆಡ್ಡಿ, ಆರ್.ಗೋವಿಂದ ನಾಯ್ಡು, ಟಿ.ಎಸ್.ನಾಗಾಭರಣ, ಸ್ಥಳ-ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 6

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಕರ್ನಾಟಕ ಸಂಗೀತ ಕಾರ್ಯಕ್ರಮ-ರಂಜನಿ ಗಾಯತ್ರಿ, ಎಚ್.ಎಂ.ಸ್ಮಿತಾ, ಸಾಯಿ ಗಿರಿಧರ್, ಓಂಕಾರ್, ಆಯೋಜನೆ-ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ-ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5.30ರಿಂದ

ಕರ್ನಾಟಕ ಸಂಗೀತ ಕಾರ್ಯಕ್ರಮ: ವಿದುಷಿ ಪಾವನಿ ಭಾರದ್ವಾಜ್, ಆಯೋಜನೆ ಮತ್ತು ಸ್ಥಳ-ಶ್ರೀರಾಮ ಲಲಿತಕಲಾ ಮಂದಿರ, ಬನಶಂಕರಿ 2ನೇ ಹಂತ, ಸಂಜೆ 5.30

ಸಾವಿರದನಾಮ ರಾಮನಾಮ ಉಪನ್ಯಾಸ: ಗಣೇಶ ಭಟ್ ಹೋಬಳಿ, ಆಯೋಜನೆ-ಜಯರಾಮ ಸೇವಾಮಂಡಲಿ, ಸ್ಥಳ-ಜಿ.ವಿ.ಸಭಾಂಗಣ, ಮಂಡಳಿ ಆವರಣ, ಸಂಜೆ 6

‘ಮಂಟೇಸ್ವಾಮಿ ಕಥಾಪ್ರಸಂಗ’ ನಾಟಕ ಪ್ರದರ್ಶನ: ಆಯೋಜನೆ-ಜಿಪಿಐಇಆರ್ ರಂಗ ತಂಡ, ಸ್ಥಳ-ರವೀಂದ್ರ ಕಲಾಕ್ಷೇತ್ರ, ಸಂಜೆ 6.30

ಹಬ್ಬದ ಮುನ್ನಾದಿನ ತಂಪೆರೆದ ಮಳೆರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಶುಕ್ರವಾರ ಸಂಜೆ ಮಳೆ ಸುರಿಯಿತು.

ಬಂಗಾಳ ಕೊಲ್ಲಿಯಲ್ಲಿ ಚಂಡಮಾರುತ ಬೀಸಿದ್ದರಿಂದ ನಗರದಲ್ಲಿ ಎರಡ್ಮೂರು ದಿನ ಉತ್ತಮ ಮಳೆಯಾಗಿತ್ತು. ನಂತರ, ಕೆಲದಿನ ಮಳೆ ಬಿಡುವು ನೀಡಿತ್ತು. ಶುಕ್ರವಾರ ಪುನಃ ನಗರದಲ್ಲಿ ಮೋಡ ಮುಸುಕಿದ ವಾತಾವರಣ ಕಾಣಿಸಿತು.

ಸಂಜೆ ವೇಳೆ ಬಹುತೇಕ ಪ್ರದೇಶಗಳಲ್ಲಿ ಜಿಟಿ ಜಿಟಿಯಾಗಿ ಮಳೆ ಆರಂಭವಾಗಿ, ಕ್ರಮೇಣ ಜೋರಾಗಿ ಸುರಿಯಿತು.

ಮೆಜೆಸ್ಟಿಕ್, ಗಾಂಧಿನಗರ, ಶೇಷಾದ್ರಿಪುರ, ಎಂ.ಜಿ. ರಸ್ತೆ, ಶಿವಾಜಿನಗರ, ಅಶೋಕನಗರ, ವಿವೇಕನಗರ, ಕೋರಮಂಗಲ, ಮಡಿವಾಳ, ಜಯನಗರ, ಬನಶಂಕರಿ, ಬಸವನಗುಡಿ, ಹನುಮಂತನಗರ, ಚಾಮರಾಜಪೇಟೆ, ಚಿಕ್ಕಪೇಟೆ, ವಿಜಯನಗರ, ರಾಜಾಜಿನಗರ, ಯಶವಂತಪುರ, ಪೀಣ್ಯ, ಮಲ್ಲೇಶ್ವರ, ಆರ್.ಟಿ. ನಗರ, ಹೆಬ್ಬಾಳ, ಹೆಣ್ಣೂರು ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಉತ್ತಮ ಮಳೆಯಾಯಿತು. ಯುಗಾದಿ ಹಬ್ಬದ ಮುನ್ನಾದಿನವಾದ ಶುಕ್ರವಾರ ಹಲವರು ಮಾರುಕಟ್ಟೆಗೆ ಬಂದಿದ್ದರು. ಹಬ್ಬಕ್ಕೆ ಬೇಕಾದ ವಸ್ತುಗಳ ಖರೀದಿಯಲ್ಲಿ ತೊಡಗಿದ್ದರು. ಸಂಜೆ ಸುರಿದ ಮಳೆಯಿಂದಾಗಿ ಬಹುತೇಕರು ತೊಂದರೆ ಅನುಭವಿಸಿದರು.

ಕೆ.ಆರ್.ಮಾರುಕಟ್ಟೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಮಳೆ ಆಯಿತು. ಕೆಲವರು ಸುರಿವ ಮಳೆಯಲ್ಲೇ ದ್ವಿಚಕ್ರ ವಾಹನದಲ್ಲಿ ಸಂಚರಿಸಿದರು. ಬಹುತೇಕರು, ರಸ್ತೆಯ ಅಕ್ಕ-ಪಕ್ಕದ ಅಂಗಡಿಗಳನ್ನು ಆಶ್ರಯ ಪಡೆದುಕೊಂಡಿದ್ದರು.

‘ಮಧ್ಯಾಹ್ನದಿಂದಲೇ ತಂಪು ಗಾಳಿ ಬೀಸುತ್ತಿತ್ತು. ಸಂಜೆ ಹಾಗೂ ರಾತ್ರಿ ಹಲವೆಡೆ ಉತ್ತಮ ಮಳೆ ಆಗಿದೆ. ಮರದ ಟೊಂಗೆಗಳು ಬಿದ್ದ ಮಾಹಿತಿ ಬಂದಿತ್ತು. ಉಳಿದಂತೆ, ಹೆಚ್ಚಿನ ಹಾನಿ ಬಗ್ಗೆ ದೂರುಗಳು ಬಂದಿಲ್ಲ’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ರಾಜರಾಜೇಶ್ವರಿನಗರದ ಆರ್ಚ್ ಬಳಿ ಶುಕ್ರವಾರ ಸುರಿದ ಧಾರಾಕಾರ ಮಳೆಯಲ್ಲೇ ನಡೆದು ಸಾಗಿದ ಮಹಿಳೆ – ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಮಾರುಕಟ್ಟೆ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ಮಳೆ
- ಹಬ್ಬಕ್ಕೆ ಖರೀದಿಗೆಂದು ಮಾರುಕಟ್ಟೆಗಳಿಗೆ ಬಂದವರು ಹೈರಾಣು

ಮಹಿಳಾ ಕಥಾ ಸ್ಪರ್ಧೆಗೆ ಕಥೆಗಳ ಆಹ್ವಾನ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿಯು ಕಥೆಗಾರ್ತಿ ಡಾ. ಅನುಪಮಾ ನಿರಂಜನ ಅವರ ಹುಟ್ಟುಹಬ್ಬದ ಪ್ರಯುಕ್ತ ರಾಜ್ಯಮಟ್ಟದ ಮಹಿಳಾ ಕಥಾ ಸ್ಪರ್ಧೆ ಹಮ್ಮಿಕೊಂಡಿದೆ. ಇದುವರೆಗೆ ಒಂದೂ ಕಥಾ ಸಂಕಲನ ಪ್ರಕಟಿಸದೆ ಇರುವವರು ಮಾತ್ರ ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ.

ಮಹಿಳಾ ಕೇಂದ್ರಿತ ಕಥಾವಸ್ತು ಹೊಂದಿರಬೇಕು. ಸ್ಪರ್ಧೆಗೆ ಕಳುಹಿಸುವ ಕಥೆಯು ಈ ಮೊದಲು ಎಲ್ಲೂ ಪ್ರಕಟವಾಗಿರಬಾರದು. 1,200 ಪದಗಳು ಅಥವಾ 5 ಪುಟಗಳು ಮೀರಿರದಂತೆ ಕಳುಹಿಸಬೇಕು. ಪ್ರಥಮ ಬಹುಮಾನ ₹ 2,500, ದ್ವಿತೀಯ ಬಹುಮಾನ ₹ 2,000 ಹಾಗೂ ತೃತೀಯ ಬಹುಮಾನ ₹ 1,500 ಇರಲಿದೆ.

₹ 200 ಪ್ರವೇಶ ಶುಲ್ಕದೊಡನೆ ಕಥೆಯನ್ನು ಇದೇ 25ರೊಳಗೆ ಎ.ಎಸ್. ನಾಗರಾಜಸ್ವಾಮಿ, ಅಧ್ಯಕ್ಷರು, ಕನ್ನಡ ಸಂಘರ್ಷ ಸಮಿತ, ನಂ.3, 1ನೇ ತಿರುವು, ಅನ್ನಪೂರ್ಣೇಶ್ವರಿ ಬಡಾವಣೆ, ಬೆಂಗಳೂರು-560 056 ಈ ವಿಳಾಸಕ್ಕೆ ಕಳುಹಿಸಿಕೊಡಬೇಕು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ: 9739001410

ಕಲುಷಿತ ನೀರು: ಸಾಂಕ್ರಾಮಿಕ ರೋಗದ ಎಚ್ಚರಿಕೆ

ಬೆಂಗಳೂರು: ಕುಡಿಯುವ ನೀರಿನಿಂದ ಕಾಲರಾ, ಕರುಳುಬೇನೆ ಸೇರಿದಂತೆ ವಿವಿಧ ಸಾಂಕ್ರಾಮಿಕ ರೋಗಗಳು ಈ ಅವಧಿಯಲ್ಲಿ ಹೆಚ್ಚಾಗಿ ಹರಡುತ್ತವೆ. ಸಾಲು ಸಾಲು ಹಬ್ಬಗಳು ಹಾಗೂ ಜಾತ್ರೆಗಳು ನಡೆಯುವುದರಿಂದ ಸಾಂಕ್ರಾಮಿಕ ರೋಗಗಳ ತಡೆಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆಯು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸುತ್ತೋಲೆ ಹೊರಡಿಸಿದೆ. ಕಳೆದ ವರ್ಷ 1,35,935 ಕರುಳುಬೇನೆ ಪ್ರಕರಣಗಳು, 47,137 ವಿಷಮಶೀತ ಜ್ವರ ಪ್ರಕರಣಗಳು ಹಾಗೂ 3,917 ಯಕೃತ್ತಿನ ಉರಿಯೂತ (ಹೆಪಟೈಟಿಸ್) ಪ್ರಕರಣಗಳು ರಾಜ್ಯದಲ್ಲಿ ವರದಿಯಾಗಿದ್ದವು. ಬೇಸಿಗೆಯಲ್ಲಿ ವಾಂತಿ ಭೇದಿ, ಕಾಮಾಲೆ, ಕರುಳುಬೇನೆ, ಇಲಿಜ್ವರ ಒಳಗೊಂಡಂತೆ ವಿವಿಧ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಇದೆ. ಹೀಗಾಗಿ, ರೋಗಗಳ ಹರಡುವಿಕೆ ತಡೆಗೆ ಕುಡಿಯುವ ನೀರು ಪರಿಶೀಲನೆ ಸೇರಿದಂತೆ ವಿವಿಧ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಲಾಗಿದೆ.

‘ಜಿಲ್ಲೆಗಳಲ್ಲಿ ನಡೆಯುವ ಎಲ್ಲ ಜಾತ್ರಾ ಮಹೋತ್ಸವಗಳ ವಿವರವನ್ನು ಸಂಗ್ರಹಿಸಿ, ಅಗತ್ಯ ಸಿಬ್ಬಂದಿ ನಿಯೋಜಿಸಬೇಕು. ಕುಡಿಯುವ ನೀರಿನ ಮೂಲಗಳ ಮಾಹಿತಿ ಕಲೆಹಾಕಿ, ಎಲ್ಲ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಬೇಕು. ನೀರು ಕುಡಿಯಲು ಯೋಗ್ಯವಿರದಿದ್ದರೆ ನೀರಿನ ಮೂಲಗಳಿಗೆ ಕ್ಲೋರಿನೇಷನ್ ಮಾಡಬೇಕು. ಹಬ್ಬ-ಜಾತ್ರೆಗಳು ನಡೆಯುವ ಪ್ರದೇಶದಲ್ಲಿನ ಎಲ್ಲ ಆಹಾರ ಅಂಗಡಿಗಳನ್ನು ಸಂಬಂಧಪಟ್ಟ ಆಹಾರ ಪರಿವೀಕ್ಷಕರು ಪರಿಶೀಲನೆ ನಡೆಸಿ, ತೆರೆದ ಆಹಾರ ಮಾರಾಟ ಮಾಡದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಹೇಳಲಾಗಿದೆ.

‘ಹೋಟೆಲ್ ಮತ್ತು ಅಂಗಡಿಗಳ ತಪಾಸಣೆ ನಡೆಸಿ, ಆಹಾರ ಮತ್ತು ನೀರಿನ ಗುಣಮಟ್ಟ ಸುರಕ್ಷತೆ ಬಗ್ಗೆ ಗಮನಹರಿಸಬೇಕು. ತುರ್ತು ಸಂದರ್ಭದಲ್ಲಿ ಬಿಸಿ ನೀರು ಸರಬರಾಜು ಮಾಡಲು ಹೋಟೆಲ್ ಮಾಲೀಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು. ಸೂಕ್ತ ಚಿಕಿತ್ಸೆಗಾಗಿ ಅಗತ್ಯವಾದ ಜೀವ ರಕ್ಷಕ ಔಷಧಗಳು ಹಾಗೂ ಕ್ರಿಮಿ-ಕೀಟನಾಶಕಗಳನ್ನು ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಲಭ್ಯವಿರುವಂತೆ ಕ್ರಮ ಕೈಗೊಳ್ಳಬೇಕು’ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

BgSE Financials Limited
STOCK AND SHARE BROKERS
SEBI Regn. No. INZ000095638 ARN - 2119
RTA Regn. No. INR000004041
(MEMBER OF NSE, BSE, MCX, DP OF NSDL & CDSL and category 1-RTA)
CIN: U67120KA1999PLC025860

- Open Free Demat and Trading Account - Offline / Online by clicking - www.bfsl.co.in
- Invest in Mutual Fund for long term goal / growth
- Trade in MCX-Gold / Silver / Other commodities

Contact: M: 7353760040 Tel: 080-66673310 / 66673333
Email: manager_mktg@bfsl.co.in | Visit: www.bfsl.co.in
Contact nearest investors service centre:

Mysore 8660290459	Mangalore 8660321467	Hubli 8660314806
Davanagere 8660473295	Chitradurga 8660316458	Shimoga 8660312675
Arsikere 8660523308	Hosur 8660315064	Chennai 8660286278
Tumkur 8660511075	Harihara 8660507809	Madikeri 8660315194
Dharwad 8660511854	Hassan 8660325894	Udupi 8660312689

No. 51, Stock Exchange Towers, 1st Cross, JC Road, Bangalore -560 027
Investment in securities market are subject to market risk, read all the related documents carefully before investing.



ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

MATRIMONIAL

Brides Wanted

Hindu

NAYAKA graduate bride wanted for a 28 yr graduate from allied health field, reputed family that owns a chain of clinics in Bangalore Tel: 9845058544

Telugu

NAIDU: 10/1992 Born, 5'11' Masters Software Professional Working in USA, Looking For Suitable Match India/ USA, E-Mail: epct18@gmail.com

MORE Classifieds IN SUPPLEMENT

PERSONAL

Lost

LOST

Notice is hereby given that the certificates for the undermentioned Equity Shares of the Company have been lost and the holder of the said Equity Shares have applied to the company to issue duplicate Share Certificates.

Any person who has a claim in respect of the said shares should lodge the same with the Company at its registered office within 15 days from this date, else the company will proceed to issue duplicate Share certificates to the aforesaid applicant without any further intimation.

Name of Shareholder	Share Certificate No.(s) lost	No. of Equity Shares	Distinctive Nos. From	Distinctive Nos. TO
M/s. Malema Engineering Corporation	03	11,21,689	50,001	11,71,689
M/s. Malema Engineering Corporation	04	2,68,230	11,71,690	14,39,919

For MALEMA SENSORS INDIA PRIVATE LIMITED
Devendra Parimal Ashar Director
DIN: 06986615
Registered office: 4th Floor, no. 1433, Pipeline Road, Mahalakshmi Puram, Bangalore – 560086.

Change of Name

I, VIHAR BHARATBHAI DESAI R/a. Flat No. 203 Niranjan Nector Apartment, K.C. Road, near Someshwara Temple, Bilekahalli, Bangalore- 560076, have changed my name to VIHAR BHARATKUMAR DESAI vide affidavit dated 01/04/2022 before notary D.K. Rameshappa Bangalore.

I, AHAMADI Begum W/o Mir Izzath Ali, aged about 72 years, residing at Alipura Village, Thondebhavi hobli, Gowribidanur Taluk, Chikkaballapur District, declare that my husband's name is mentioned in the passport as Mir Izzaih Ali the correct name is Mir Izzath Ali vide affidavit dated 31.03.2022 before Notary N.S Ashok Kumar Gowribidanur.

I, NETRAVATHI.J aged 33 years, W/o. Manjunath residing No. 279, 4th Cross, Vivekananda Block, Dattatreya Temple Road, Pipeline, Malleswaram, Bangalore– 560003 have changed my name to NETHRA PALLAVI vide affidavit dated 06/12/2021 before notary S.R.Paramashivaiah

ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ,
ಕೋಲಾರ-563101.ದೂ: 08152-222022
ಫ್ಯಾಕ್ಸ್: 08152-227443 ಇ-ಮೇಲ್: eeklr@kpwd.gov.in ವೆಬ್‌ಸೈಟ್: www.kpwd.gov.in e-portal: http://eproc.karnataka.gov.in

ಇ-ಟೆಂಡರ್ ಪ್ರಕಟಣೆ- ಕೆಡಬ್ಲ್ಯು -4
ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ: 33/2021-22 ದಿನಾಂಕ : 29.03.2022

ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 5054-ರಸ್ತೆ ಮತ್ತು ಸೇತುವೆ ಅಪೆಂಡಿಕ್ಸ್-ಇ ಅಡಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಟೆಂಡರ್‌ಗಿಟ್ಟ ಮೊತ್ತ: **ರೂ. 200.00 ಲಕ್ಷಗಳು.** ಇ.ಎಂ.ಡಿ ಮೊತ್ತ: **ರೂ. 3.00/-ಲಕ್ಷಗಳು.** ಕಾಲಾವಧಿ: 11 ತಿಂಗಳು ನಿರ್ವಹಿಸಲು ನೊಂದಾಯಿತ ಗುತ್ತಿಗೆದಾರರಿಂದ ಇ- ಪ್ರಕ್ಯೂರ್‌ಮೆಂಟ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯು-4ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ **(Viz., http://eproc. karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **21.04.2022**ರಂದು ಸಂಜೆ **16.00** ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು **ದಿನಾಂಕ: 22.04.2022 ರಂದು** ಸಂಜೆ **16.30 ಗಂಟೆಯ** ನಂತರ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ **(Viz., http://eproc. karnataka.gov.in)** ನಲ್ಲಿ ಸಂಪರ್ಕಿಸ ಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್, ಲೋ.ಇ,
ಕೋಲಾರ ವಿಭಾಗ, ಕೋಲಾರ.
ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 476/ಎಂಸಿಎ/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ
ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ಭಾರತ ಸರ್ಕಾರ

ಪ್ರೊಗ್ರಾಮ್ ಮ್ಯಾನೇಜ್‌ಮೆಂಟ್ ಯೂನಿಟ್ (ಪಿಎಂಯು), ಸ್ಟೇಟ್ ಕೊ-ಆರ್ಡಿನೇಟರ್ಸ್ ನೇಮಕಾತಿ ಪ್ರಕಟಣೆ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ (ಎಂಎಸ್‌ಜೆ&ಇ) ಇವರು ತಮ್ಮ ಯೋಜನೆಗಳನ್ನು ತಳಮಟ್ಟದಿಂದ ಮೇಲ್ವಿಚಾರಣೆ ಮಾಡಲು ಮತ್ತು ತಮ್ಮ ಸಮರ್ಥ ಅನುಷ್ಠಾನಗಳ ಕುರಿತಾದ ಪ್ರತಿಸ್ಪಂದನೆಗಳನ್ನು ಮತ್ತು ಮಿಡ್-ಕೋರ್ಸ್ ತಿದ್ದುಪಡಿಗಳನ್ನು ಮೌಲ್ಯಮಾಪನ ಮಾಡಲು ಒಂದು ಯುವ ವೃತ್ತಿಪರಿಣಿತರ ಪಿಎಂಯು ರೂಪಿಸಿರುತ್ತಾರೆ.

ನವದೆಹಲಿಯಲ್ಲಿ ಸ್ಥಿತಗೊಂಡಿರುವ, ಪಿಎಂಯು'ರವರ 2 ವರ್ಷಗಳ ಕಾಲ ನವೀಕರಿಸಲಾಗದ ಗುತ್ತಿಗೆ ಆಧಾರದ ಮೇರೆಗೆ, ಸುಮಾರು (24) ಸ್ಟೇಟ್ ಕೊ-ಆರ್ಡಿನೇಟರ್ ಹುದ್ದೆಗಳ ಆಯ್ಕೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಹುದ್ದೆಯು ಮಾಸಿಕ ರೂ. 75,000/- ಕ್ರೋಢಿಕೃತ ವೇತನ ಮತ್ತು ಪ್ರತಿ ತಿಂಗಳ ಸುಮಾರು 20 ದಿನಗಳ ಪ್ರಯಾಣ ಭತ್ಯೆ ಒಳಗೊಂಡಿರುತ್ತದೆ. ಸಾಮಾಜಿಕ ಕಾರ್ಯ ವಿಷಯದಲ್ಲಿನ ಪದವೀಧರರು/ಸ್ನಾತಕೋತ್ತರ ಪದವೀಧರರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ವಿದ್ಯಾರ್ಹತೆ, ಅನುಭವ, ಜವಾಬ್ದಾರಿ ವಿಷಯಗಳಿಗೆ ಸಂಬಂಧಿತ ಮತ್ತು ನಿರ್ದಿಷ್ಟ ಅರ್ಜಿ ನಮೂನೆಗಾಗಿ ದಯವಿಟ್ಟು ಎಂಎಸ್‌ಜೆ&ಇ'ರವರ **http://socialjustice.nic.in** ವೆಬ್‌ಸೈಟ್ ಪರಿಶೀಲಿಸಿರಿ ಮತ್ತು ಎನ್‌ಐಎಸ್‌ಡಿ ರವರ **www.nisd.gov.in** ವೆಬ್‌ಸೈಟ್‌ನ ಲೇಟೆಸ್ಟ್ ನ್ಯೂಸ್ ಸೆಕ್ಷನ್ ಪರಿಶೀಲಿಸಿರಿ.

2ನೇ ಏಪ್ರಿಲ್ 2022 ರಿಂದ 30ನೇ ಏಪ್ರಿಲ್ 2022 ರವರೆಗೆ ನೋಂದಣಿ ಚಾಲ್ತಿಯಲ್ಲಿರುತ್ತದೆ.

davp38101/11/0001/2223

ಶೋಷಣೆ ದಿನ ಆಚರಣೆ

ಬೆಂಗಳೂರು: ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಆರೋಗ್ಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಒಂದು ದಿನದ ವಿರಾಮ ವಿರೋಧಿಸಿ ಶುಕ್ರವಾರ ಶೋಷಣೆಯ ದಿನ ಆಚರಿಸಿದರು.

ಗುತ್ತಿಗೆ ನೌಕರರಿಗೆ ಪ್ರತಿ ವರ್ಷ ಏಪ್ರಿಲ್ 1ರಂದು ‘ಒಂದು ದಿನ ವಿರಾಮ’ ನೀಡುವ ಪದ್ಧತಿ ಜಾರಿಯಲ್ಲಿದೆ. ಇದನ್ನು ರದ್ದುಪಡಿಸುವಂತೆ ನೌಕರರು ಆಗ್ರಹಿಸಿದ್ದರು. ಆದರೆ, ಇಲಾಖೆ ಈ ಬಗ್ಗೆ ಕ್ರಮಕೈಗೊಳ್ಳದಿದ್ದರಿಂದ ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘದ ನೇತೃತ್ವದಲ್ಲಿ ನೌಕರರು ಪ್ರತಿಭಟನೆ ನಡೆಸಿದರು.

‘ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್. ಶ್ರೀನಿವಾಸಾಚಾರಿ ಅಧ್ಯಕ್ಷತೆಯ ಮಾನವ ಸಂಪನ್ಮೂಲ ಸಮಿತಿ ಸಲ್ಲಿಸಿದ್ದ ವರದಿಯನ್ನು ಆದಷ್ಟು ಶೀಘ್ರ ಸರ್ಕಾರ ಅನುಷ್ಠಾನಗೊಳಿಸಬೇಕು. ರಾಜ್ಯದಲ್ಲಿ 30 ಸಾವಿರಕ್ಕೂ ಅಧಿಕ ಮಂದಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಸೇವೆ ಸಲ್ಲಿಸುತ್ತಿದ್ದಾರೆ. ಸರ್ಕಾರ ಭರವಸೆ ನೀಡಿದಂತೆ ಶೇ 15 ರಷ್ಟು ಹೆಚ್ಚುವರಿ ವೇತನವನ್ನು ಪ್ರಸಕ್ತ ವರ್ಷದಿಂದಲೇ ಜಾರಿಗೆ ತರಬೇಕು. ನೌಕರರಿಗೆ ಯಾವುದೇ ಸೇವಾ ಭದ್ರತೆ ಇಲ್ಲ’ ಎಂದು ಸಂಘದ ಅಧ್ಯಕ್ಷ ವಿಶ್ವರಾಧ್ಯ ಎಚ್. ಯಾಮೋಜಿ ತಿಳಿಸಿದರು.

ಗೃಹೋಪಕರಣಗಳನ್ನು ಮಾರಾಟ ಮಾಡುವ ಹರ್ಷ ಕಂಪನಿಯ ಬೆಂಗಳೂರು ಷೋರೂಂನಲ್ಲಿ ‘ಹರ್ಷೋತ್ಸವ’ವನ್ನು ಚಂದು ಲಾಲ್, ಪ್ರವೀಣ್ ಪಟೇಲ್, ಶ್ರೀಕಾಂತ್ ಪೂಜಾರಿ, ಸತೀಶ್, ಶಶಿಕಾಂತ್ (ಸ್ಟೋರ್ ಮ್ಯಾನೇಜರ್) ಉದ್ಘಾಟಿಸಿದರು. ಸಿಬ್ಬಂದಿವರ್ಗದವರು ಈ ವೇಳೆ ಉಪಸ್ಥಿತರಿದ್ದರು

ಕಾಳಿ ನದಿ ತೂಬು ನಿರ್ಮಾಣ ತಡೆ ಇಲ್ಲ: ಹೈಕೋರ್ಟ್

ಬೆಂಗಳೂರು: ಉತ್ತರ ಕನ್ನಡ ಜಿಲ್ಲೆಯ ಕಾಳಿ ನದಿ ಜಲಾಯನ ಪ್ರದೇಶದಲ್ಲಿ ಕೈಗೊಂಡಿರುವ ತೂಬು (ಜಾಕ್‌ವೆಲ್) ನಿರ್ಮಾಣ ಕಾಮಗಾರಿಗೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ‘ಕಾಳಿ ಬ್ರಿಗೇಡ್ ಸಂಘಟನೆ’ ಸಲ್ಲಿಸಿದ್ದ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯ ಪೀಠ ಶುಕ್ರವಾರ ವಿಚಾರಣೆ ನಡೆಸಿ, ‘ನದಿ ಹರಿಯುವ ಸಮೀಪದ ಗ್ರಾಮಗಳಿಗೆ ಕುಡಿಯುವ ನೀರು ಸಬರಾಜು ಮಾಡಲು ತೂಬು ನಿರ್ಮಾಣ ಯೋಜನೆ ಕೈಗೊಳ್ಳಲಾಗಿದೆ. ಹೀಗಾಗಿ ಕಾಮಗಾರಿ ತಡೆಗೆ ಹಿಡಿಯಲು ಸಾಧ್ಯವಿಲ್ಲ’ ಎಂದು ಸ್ಪಷ್ಟಪಡಿಸಿದೆ.

‘ಅರ್ಜಿದಾರರು ತಮ್ಮ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮನವಿಪತ್ರ ಸಲ್ಲಿಸಬಹುದು ಎಂದ ಪೀಠವು ಅರ್ಜಿಯನ್ನು ವಿಲೇವಾರಿ ಮಾಡಿದೆ.

- ₹285 ಕೋಟಿ ಆರೋಗ್ಯ ಇಲಾಖೆ
- ₹25 ಕೋಟಿ ಕೆರೆಗಳ ನಿರ್ವಹಣೆ
- ₹32 ಕೋಟಿ ನಗರ ಅರಣ್ಯ
- ₹113 ಕೋಟಿ ಶಿಕ್ಷಣ ಇಲಾಖೆ
- ₹174 ಕೋಟಿ ತೋಟಗಾರಿಕೆ ಇಲಾಖೆ
- ₹85 ಕೋಟಿ ಉದ್ಯಾನಗಳ ನಿರ್ವಹಣೆಗೆ

ಕಸ ಸಾಗಣೆಗೆ ಎಲೆಕ್ಟ್ರಿಕ್ ವಾಹನ, ಇಂದಿರಾ ಕ್ಯಾಂಟಿನ್‌ಗೆ ಇಸ್ಕಾನ್ ಆಹಾರ

- ಮಹಿಳೆಯರಿಗೆ ಸ್ವಯಂ ಉದ್ಯೋಗಕ್ಕಾಗಿ 12,000 ಹೊಲಿಗೆ ಯಂತ್ರ ವಿತರಿಸಲು ಉದ್ದೇಶಿಸಲಾಗಿದೆ
- 54 ಸಾವಿರ ಹೊಸ ಬೀದಿದೀಪಗಳ ಅಳವಡಿಕೆ
- ನಿರಾಶ್ರಿತರಿಗಾಗಿ ಹೊಸದಾಗಿ 44 ರಾತ್ರಿ ತಂಗುದಾಣಗಳ ಸ್ಥಾಪನೆ
- ಪ್ರತಿ ಆಸ್ತಿಗೆ 43 ಅಂಶಗಳನ್ನು ಒಳಗೊಂಡ ಇ–ಆಸ್ತಿ ತಂತ್ರಾಂಶ ಜಾರಿ
- ಬೆಸ್ಕಾಂ, ಜಲಮಂಡಳಿ ಮತ್ತು ವ್ಯಾಪಾರ ಪರವಾನಗಿಗಳ ದತ್ತಾಂಶಗಳನ್ನು ಸಂಯೋಜಿಸುವ ಮೂಲಕ ಇ–ಆಸ್ತಿ ಡಾಟಾ ಬೇಸ್ ರಚನೆ
- 37 ಪ್ರಾಥಮಿಕ ಅಭಿವೃದ್ಧಿ ಕೇಂದ್ರಗಳ ಅಭಿವೃದ್ಧಿ
- ಮೊಹಲ್ಲಾ ಕ್ಲಿನಿಕ್‌ಗಳ ಮಾದರಿಯಲ್ಲಿ ಬಿಬಿಎಂಪಿ ಅನುದಾನದಲ್ಲಿ 242 'ನಮ್ಮ ಕ್ಲಿನಿಕ್'ಗಳ ಸ್ಥಾಪನೆ
- 34 ಉದ್ಯಾನಗಳ ಅಭಿವೃದ್ಧಿ
- ಎಂಟು ವಿದ್ಯುತ್ ಚಿತಾಗಾರಗಳ ನಿರ್ಮಾಣ
- ಕಸ ಸಂಗ್ರಹಗೊಳಿಸಲು ಹಾಗೂ ಸಾಗಿಸಲು ಸಮಗ್ರ ಟೆಂಡರ್. ನಾಲ್ಕು ಚಕ್ರದ 3,600 ಸಿಎನ್‌ಜಿ ಹಾಗೂ ಎಲೆಕ್ಟ್ರಿಕ್ ವಾಹನಗಳ ಸೇರ್ಪಡೆ
- ಎಂಟು ಹೊಸ ಭೂಭರ್ತಿ ಘಟಕಗಳ ಸ್ಥಾಪನೆ
- ಬಿಡದಿಯಲ್ಲಿ ಕಸದಿಂದ ವಿದ್ಯುತ್ ಉತ್ಪಾದಿಸುವ ಘಟಕವು ಆರು ತಿಂಗಳಲ್ಲಿ ಕಾರ್ಯಾರಂಭ
- ಪೌರಕಾರ್ಮಿಕರಿಗಾಗಿ 225 ಸುವಿಧಾ ಕ್ಯಾಬಿನ್‌ಗಳ ಸ್ಥಾಪನೆ
- ಇಂದಿರಾ ಕ್ಯಾಂಟೀನ್‌ಗೆ ಆಹಾರ ಪೂರೈಕೆ ಮಾಡುವ ಹೊಣೆಯನ್ನು ಇಸ್ಕಾನ್‌ಗೆ ಹಸ್ತಾಂತರ

ವಿಶೇಷ ಮೂಲ ಸೌಕರ್ಯ ಯೋಜನೆ: ಒಟ್ಟು ₹2,673 ಕೋಟಿ ಅನುದಾನ ನಿಗದಿ

ಬಜೆಟ್: ಬಾಕಿ ಬಿಲ್‌ಗಳ ಹೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ರಾತ್ರೋರಾತ್ರಿ ಮಂಡಿಸಿದ ಬಜೆಟ್‌ನಲ್ಲಿ ಹೊಸ ಯೋಜನೆಗಳಿಗಿಂತ ಬಾಕಿ ಬಿಲ್‌ಗಳ ಹೊರೆಯೇ ದೊಡ್ಡದಾಗಿದೆ.

ವಿಶೇಷ ಮೂಲ ಸೌಕರ್ಯ ಯೋಜನೆಯಲ್ಲಿ ಒಟ್ಟು ₹2,673 ಕೋಟಿ ಅನುದಾನ ನಿಗದಿ ಮಾಡಲಾಗಿದೆ. ಇದರಲ್ಲಿ ₹1,557 ಕೋಟಿಯನ್ನು ಬಾಕಿ ಬಿಲ್‌ಗಳ ಪಾವತಿಗೆ ನಿಗದಿ ಮಾಡಿದ್ದರೆ, ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ₹1,116 ಕೋಟಿ ನಿಗದಿ ಮಾಡಲಾಗಿದೆ. ಹೊಸ ಕಾಮಗಾರಿಗಳ ಪಟ್ಟಿಯಲ್ಲಿ ಮೂರು ಸೊನ್ನೆಗಳನ್ನು ಸುತ್ತಲಾಗಿದೆ.

ಮುಖ್ಯ ರಸ್ತೆಗಳ ನಿರ್ಮಾಣ, ನಗರೋತ್ಥಾನ ಕಾಮಗಾರಿ, 110 ಹಳ್ಳಿ ಯೋಜನೆ, ಹಳೇ ವಿಮಾನ ನಿಲ್ದಾಣ ರಸ್ತೆ ಸಿಗ್ನಲ್ ರಹಿತ ಕಾರಿಡಾರ್, ಮೇಖ್ರಿ ವೃತ್ತದಿಂದ ಹಳೆ ಮದ್ರಾಸ್ ರಸ್ತೆ ಮಾರ್ಗವಾಗಿ ವೈಟ್‌ಫೀಲ್ಡ್ ಹೋಪ್ ಫಾರಂ ಜಂಕ್ಷನ್ ತನಕ ಸಿಗ್ನಲ್ ರಹಿತ ಕಾರಿಡಾರ್ ನಿರ್ಮಾಣ, ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆ ಮತ್ತು ನವ ನಗರೋತ್ಥಾನ ಯೋಜನೆಯ ವಿವಿಧ ಕಾಮಗಾರಿಗಳು ಸೇರಿ ಒಟ್ಟು 41 ಕಾಮಗಾರಿಗಳು ವಿಶೇಷ ಮೂಲ ಸೌಕರ್ಯ ಯೋಜನೆಯ ಪಟ್ಟಿಯಲ್ಲಿವೆ.

41 ಕಾಮಗಾರಿಯಲ್ಲಿ ಒಂದೇ ಒಂದು ಹೊಸ ಕಾಮಗಾರಿ ಇಲ್ಲ. ಬಾಕಿ ಬಿಲ್ ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳ ನಿರ್ವಹಣೆಗೇ ಅಷ್ಟೂ ಅನುದಾನ ಮೀಸಲಿರಿಸಲಾಗಿದೆ.

ಘನತ್ಯಾಜ್ಯ ನಿರ್ವಹಣೆಯಲ್ಲೂ ಬಾಕಿ ಬಿಲ್‌ಗಳ ಪಾವತಿಗೆ ₹92 ಕೋಟಿ ನಿಗದಿ ಮಾಡಿದ್ದರೆ, ಪ್ರಗತಿಯಲ್ಲಿರುವ ಕಾಮಗಾರಿಗೆ ₹1 ಕೋಟಿ ನಿಗದಿ ಮಾಡಲಾಗಿದೆ. ಹೊಸ ಕಾಮಗಾರಿಗಳಿಗೆ ಬಿಡಿಗಾಸನ್ನೂ ನಿಗದಿ ಮಾಡಿಲ್ಲ.

ಕಣ್ಣೂರಿನ ಸರ್ವೆ ನಂಬರ್ 50ರಲ್ಲಿ ವೈಜ್ಞಾನಿಕ ಭೂಭರ್ತಿ ಘಟಕ ಸ್ಥಾಪನೆ ಮತ್ತು ಸುತ್ತಮುತ್ತಲ ಪ್ರದೇಶಗಳ ಅಭಿವೃದ್ಧಿಗೆ ₹50 ಕೋಟಿ ನಿಗದಿ ಮಾಡಲಾಗಿದೆ. ಅದನ್ನು ಬಿಟ್ಟರೆ ಕಸ ನಿರ್ವಹಣೆಗೂ ಸಂಬಂಧಿಸಿದಂತೆ ಹೊಸ ಯೋಜನೆ ಯಾವುದೂ ಇಲ್ಲ. ದೊಡ್ಡಬಿದರ ಕಲ್ಲು ಘನತಾಜ್ಯ ಘಟಕದ ಸುತ್ತಮುತ್ತಲ ಪ್ರದೇಶಗಳ ಅಭಿವೃದ್ಧಿಯ ಬಾಕಿ ಬಿಲ್‌ಗಳ ಪಾವತಿಗೆ ₹3.87 ಕೋಟಿ, ಸುಬ್ಬರಾಯನಪಾಳ್ಯ, ಲಿಂಗದೀರನಹಳ್ಳಿ, ಕನ್ನಹಳ್ಳಿ, ಸೀಗೆಹಳ್ಳಿ ಪ್ರದೇಶಗಳ ಅಭಿವೃದ್ಧಿಯ ಬಾಕಿ ಬಿಲ್‌ಗಳಿಗೆ ₹7.27 ಕೋಟಿ, ಮಂಡೂರು ಮತ್ತು ಮಾವಳ್ಳಿಪುರ ಸುತ್ತಮುತ್ತಲ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಿಸಿದ ಬಾಕಿ ಬಿಲ್‌ಗಳಿಗೆ ₹14.88 ಕೋಟಿ ನಿಗದಿ ಮಾಡಲಾಗಿದೆ.

ಉಳಿದಂತೆಯೂ ಬಜೆಟ್ ಪುಸ್ತಕದಲ್ಲಿ ಯಾವುದೇ ವಿಭಾಗ ತೆರೆದರೂ ಬಾಕಿ ಬಿಲ್ ಪಟ್ಟಿಯೇ ದೊಡ್ಡದಾಗಿ ಕಾಣಿಸುತ್ತಿದೆ.

ವಿವೇಚನಾ ಕೋಟಾಕ್ಕೆ ₹400 ಕೋಟಿ

ವಿವೇಚನಾ ಕೋಟಾದ ಅಡಿಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ₹400 ಮೀಟಿ ನಿಗದಿ ಮಾಡಿಕೊಳ್ಳಲಾಗಿದೆ.

ಮುಖ್ಯಮಂತ್ರಿಯೇ ಇಟ್ಟುಕೊಂಡಿರುವ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನೆಗೆ ₹250 ಕೋಟಿ ನಿಗದಿ ಮಾಡಿಕೊಳ್ಳಲಾಗಿದೆ. ಮೇಯರ್ ಮತ್ತು ಮುಖ್ಯ ಆಯುಕ್ತರ ವಿವೇಚನೆಗೆ ತಲಾ ₹50 ಕೋಟಿ, ಉಪ ಮೇಯರ್, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ತಲಾ ₹25 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ.

ಸಾರ್ವಜನಿಕ ಕಾಮಗಾರಿ ವಿಭಾಗಕ್ಕೆ ₹6,911.49 ಕೋಟಿ

- ವಾರ್ಡ್ ಕಾಮಗಾರಿಗಳಿಗೆ ಒಟ್ಟು ₹924 ಕೋಟಿ– ಹಳೆ ವಲಯದಲ್ಲಿನ ಪ್ರತಿ ವಾರ್ಡ್‌ಗೆ ₹4 ಕೋಟಿ, ಹೊಸ ವಲಯದಲ್ಲಿನ ಪ್ರತಿ ವಾರ್ಡ್‌ಗೆ ₹6 ಕೋಟಿ.
- ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳ ನಿರ್ವಹಣೆಗೆ ₹60 ಕೋಟಿ
- ಬೃಹತ್ ಮಳೆನೀರು ಕಾಲುವೆಗಳ ವಾರ್ಷಿಕ ನಿರ್ವಹಣೆಗೆ ₹40 ಕೋಟಿ

ಘನತ್ಯಾಜ್ಯ ನಿರ್ವಹಣೆ ವಿಭಾಗಕ್ಕೆ ₹1,460 ಕೋಟಿ

- ಘನತ್ಯಾಜ್ಯ ಗುತ್ತಿಗೆ ಹಣ ಪಾವತಿಗೆ ₹600 ಕೋಟಿ
- ಎನ್‌ಜಿಟಿ ಆದೇಶದಂತೆ ವೈಜ್ಞಾನಿಕ ಭೂಭರ್ತಿ ಘಟಕಗಳ ವಿನ್ಯಾಸ (ಕಣ್ಣೂರಿನಲ್ಲಿ ಹೊಸ ಘಟಕಕ್ಕೆ ₹50 ಕೋಟಿ), ಸ್ಥಾವರ ಹಾಗೂ ಕಾರ್ಯಾಚರಣೆಗೆ ₹100 ಕೋಟಿ
- ಮಿಟ್ಟಗಾನಹಳ್ಳಿಯಲ್ಲಿ ಕಸ ಭೂಭರ್ತಿ ಪ್ರದೇಶದ ಅಭಿವೃದ್ಧಿಗೆ ₹75 ಕೋಟಿ
- ಕಸ ಭೂಭರ್ತಿ ಘಟಕದ ಸುತ್ತಮುತ್ತಲ ಹಳ್ಳಿಗಳ ಅಭಿವೃದ್ಧಿಗೆ ₹125 ಕೋಟಿ

ಸಮಾಜ ಕಲ್ಯಾಣ ಇಲಾಖೆಗೆ ₹374 ಕೋಟಿ

- ಫಲಾನುಭವಿಗಳಿಗೆ ಲ್ಯಾಪ್‌ಟಾಪ್ ವಿತರಣೆಗೆ ₹40 ಕೋಟಿ
- ಒಂಟಿ ಮನೆಗಳಿಗೆ ₹138 ಕೋಟಿ (ಇದರಲ್ಲಿ ಪೌರಕಾರ್ಮಿಕರ ಒಂಟಿಮನೆಗಳಿಗೆ ₹28 ಕೋಟಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ₹55 ಕೋಟಿ ಮೀಸಲಿಡಲಾಗಿದೆ)
- ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳಿಗೆ ₹31.90 ಕೋಟಿ
- ತೃತೀಯಲಿಂಗಿಗಳ ಕಲ್ಯಾಣ ಕಾರ್ಯಕ್ರಮಗಳಿಗೆ ₹6 ಕೋಟಿ

ಕಾಟಾಚಾರದ ಅವಾಸ್ತವಿಕ ಬಜೆಟ್

ಜನಪ್ರತಿನಿಧಿಗಳ ಅನುಪಸ್ಥಿತಿಯಲ್ಲಿ ಯಾವುದೇ ದಿಕ್ಕು ದೆಸೆಯಿಲ್ಲದ ಬಜೆಟ್ ಇದಾಗಿದೆ. ಜನರ ಆಶೋತ್ತರಗಳಿಗೆ ಮತ್ತು ಸಮಸ್ಯೆಗಳಿಗೆ ಸ್ಪಂದಿಸದ ಕೇವಲ ಸಂಖ್ಯೆಗಳಿಂದ ಕೂಡಿದ ಬಜೆಟ್. ಕೇವಲ ನಿರ್ವಹಣಾ ಬಜೆಟ್ ಆಗಿದ್ದು, ವಾಸ್ತವಿಕ ನೆಲೆಗಟ್ಟೇ ಇಲ್ಲದಿರುವುದು ಪಾಲಿಕೆ ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ಜ್ಞಾನದ ದಿವಾಳಿತನಕ್ಕೆ ಸಾಕ್ಷಿಯಾಗಿದೆ. ಬಜೆಟ್ ಕೆಲವೇ ಕೆಲವು ಪ್ರಭಾವಿ ಶಾಸಕರ ಕ್ಷೇತ್ರಗಳಿಗೆ ಸೀಮಿತವಾದಂತೆ ಕಾಣಿಸುತ್ತದೆ. ಆರ್ಥಿಕ ಹೊಣೆಗಾರಿಕೆ ಕಾಯ್ದೆ ಜಾರಿಗೆ ತಂದಿದ್ದರೂ, ಅವಾಸ್ತವಿಕವಾಗಿ ಬಜೆಟ್ ಮಂಡಿಸಲಾಗಿದೆ. ಬಿಜೆಪಿ ಸರ್ಕಾರದಲ್ಲಿ ಕಾನೂನಿಗೆ ಯಾವ ರೀತಿಯ ಬೆಲೆ ಇದೆ ಎಂಬುದಕ್ಕೆ ಬಜೆಟ್ ಉದಾಹರಣೆಯಾಗಿದೆ. ನಾಗರಿಕರ ಭಾಗವಹಿಸುವಿಕೆ ಎನ್ನುವುದು ಪಾಲಿಕೆಗೆ ಮತ್ತು ರಾಜ್ಯ ಸರ್ಕಾರಕ್ಕೆ ಕೇವಲ ತೋರಿಕೆಗೆ ಮಾತ್ರ ಇರುವುದನ್ನು ಬಜೆಟ್ ಮತ್ತೊಮ್ಮೆ ಸಾಬೀತುಪಡಿಸಿದೆ.

ಎಸ್.ಮಂಜುನಾಥ್, ಕೆಆರ್‌ಎಸ್ ಪಕ್ಷದ ಬೆಂಗಳೂರು ನಗರ ಜಿಲ್ಲಾ ಘಟಕ

ರಾತ್ರೋರಾತ್ರಿ ಬಜೆಟ್ ಮಂಡನೆ: ಪ್ರಜಾಪ್ರಭುತ್ವದ ಕೊಗ್ಗಲೆ

ರಾತ್ರೋರಾತ್ರಿ ಬಜೆಟ್ ಮಂಡಿಸುವ ಮೂಲಕ ಪ್ರಜಾಪ್ರಭುತ್ವದ ಕೊಗ್ಗಲೆಯನ್ನು ಬಿಬಿಎಂಪಿ ಮಾಡಿದೆ. ಪಾಲಿಕೆ ಇತಿಹಾಸದಲ್ಲೇ ಹಿಂದೆಂದೂ ಈ ರೀತಿ ಆಗಿರಲಿಲ್ಲ. ಮಧ್ಯರಾತ್ರಿಯಲ್ಲಿ ಮಂಡಿಸುವ ಅಗತ್ಯ ಮತ್ತು ತುರ್ತು ಏನಿತ್ತು? ಎಲ್ಲವನ್ನು ಮುಚ್ಚಿಟ್ಟು ಬಜೆಟ್ ಪ್ರಕಟಿಸುವ ಹೊಸ ಪರಿಪಾಟವನ್ನು ಬಿಜೆಪಿ ಹಾಕಿದೆ. ಇದು ಪ್ರಜಾಪ್ರಭುತ್ವ ವಿರೋಧಿ ನಡವಳಿಕೆ. ಇನ್ನೊಂದೆಡೆ ಪಾಲಿಕೆ ಜಾರಿಗೆ ತಂದಿರುವ ವಿತ್ತೀಯ ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣೆ ನಿಯಮಗಳು 2021ರ ಆಧಾರದಲ್ಲಿಯೇ ಬಜೆಟ್ ರೂಪಿಸಬೇಕಿತ್ತು. ಹಿಂದಿನ ವರ್ಷ ವಾಸ್ತವದಲ್ಲಿ ಎಷ್ಟು ವರಮಾನ ಬಂದಿದೆ ಎಂಬುದನ್ನು ನೋಡಿಕೊಂಡು ಬಜೆಟ್ ಗಾತ್ರ ನಿರ್ಧರಿಸಬೇಕು. ಆದರೆ, ಬಜೆಟ್ ಗಾತ್ರ ನೋಡಿದರೆ ತಮ್ಮದೇ ಸರ್ಕಾರ ರೂಪಿಸಿರುವ ಕಾಯ್ದೆಯನ್ನು ತಾವೇ ಪಾಲಿಸಿಲ್ಲ. ₹10,480 ಕೋಟಿ ಮೊತ್ತದ ಬಜೆಟ್ ಮಂಡಿಸಲು ಬಿಬಿಎಂಪಿಗೆ ಅಧಿಕಾರವೇ ಇಲ್ಲ. ಸರ್ಕಾರದ ತಾಳಕ್ಕೆ ತಕ್ಕಂತೆ ಅಧಿಕಾರಿಗಳು ಕುಣಿದಿದ್ದಾರೆ. ಪ್ರಜಾಪ್ರಭುತ್ವಕ್ಕೆ ಆಗಿರುವ ಮೋಸದ ವಿರುದ್ಧ ಕಾಂಗ್ರೆಸ್‌ನಿಂದ ದೊಡ್ಡ ಮಟ್ಟದ ಹೋರಾಟ ನಡೆಸುತ್ತೇವೆ.

ಗಂಗಾಂಬಿಕೆ, ಮಾಜಿ ಮೇಯರ್

ಕದ್ದುಮುಚ್ಚಿ ಬಜೆಟ್ ಮಂಡನೆ: ಜನರಿಗೆ ಮೋಸ

ಬಿಬಿಎಂಪಿ ಇತಿಹಾಸದಲ್ಲೇ ಮೊದಲ ಬಾರಿಗೆ ಕದ್ದುಮುಚ್ಚಿ ಬಜೆಟ್ ಮಂಡನೆ ಮಾಡಲಾಗಿದೆ. ವಿಕಾಸಸೌಧದಲ್ಲಿ ಪಿಡಿಎಫ್ ಮಾದರಿಯ ಆಯವ್ಯಯ ಮಂಡನೆ ಮಾಡಲಾಗಿದೆ. ಬಿಜೆಪಿ ಶಾಸಕರ ಒತ್ತಡ ಮತ್ತು ಒಳ ಜಗಳದಿಂದ ಈ ರೀತಿ ಬಜೆಟ್ ರೂಪುಗೊಂಡಿದೆ. ಪಾಲಿಕೆಗೆ ತೆರಿಗೆ ಪಾವತಿಸುವ ನಗರದ ನಾಗರಿಕರಿಗೆ ಮಾಡಿರುವ ಮೋಸ ಇದಾಗಿದೆ. ಪಾಲಿಕೆಯ ಇತಿಹಾಸ ಮತ್ತು ಕಾನೂನನ್ನು ಗಾಳಿಗೆ ತೂರಲಾಗಿದೆ. ಮುಖ್ಯಮಂತ್ರಿ ಪದೇ ಪದೇ ಹೇಳುವ ಬೆಂಗಳೂರಿನ ಸಮಗ್ರ ಅಭಿವೃದ್ಧಿ ಎಂದರೆ ಇದೇನಾ? ವಿತ್ತೀಯ ಹೊಣೆಗಾರಿಕೆ ಮತ್ತು ನಿರ್ವಹಣೆ ಕಾಯ್ದೆಯನ್ನು ಜಾರಿಗೆ ತಂದವರೇ ಅದನ್ನು ಉಲ್ಲಂಘನೆ ಮಾಡಿದ್ದಾರೆ. ಈ ರೀತಿ ಉಲ್ಲಂಘನೆ ಮಾಡಲು ಕಾನೂನು ರೂಪಿಸುವ ಅಗತ್ಯವೇನಿತ್ತು. ಇದಕ್ಕೆ ಮುಖ್ಯ ಆಯುಕ್ತರು ಮತ್ತು ಮುಖ್ಯಮಂತ್ರಿ ಉತ್ತರ ಕೊಡಬೇಕಾಗುತ್ತದೆ.

ಅಬ್ದುಲ್ ವಾಜಿದ್, ಕಾಂಗ್ರೆಸ್ ಮುಖಂಡ

ಜನರ ಸಮಸ್ಯೆ ಒಳಗೊಳ್ಳದ ಬಜೆಟ್

ಅರ್ಥವಾಗದ ಮತ್ತು ಅಪೂರ್ಣವಾದ ಮತ್ತೊಂದು ಬಜೆಟ್ ಅನ್ನು ಬಿಬಿಎಂಪಿ ಮಂಡಿಸಿದೆ. ಸಮಸ್ಯೆಗಳ ಮೂಲವನ್ನೇ ಪಾಲಿಕೆ ಅರ್ಥ ಮಾಡಿಕೊಂಡಿಲ್ಲ. ಹಿಂದಿನ ವರ್ಷಕ್ಕೆ ಹೋಲಿಸಿದರೆ ನಗರವನ್ನು ಮುಂದಕ್ಕೆ ಕೊಂಡೊಯ್ಯುವ ಬದಲು ಹಿಂದಕ್ಕೆ ಕರೆದೊಯ್ಯುವ ಹೆಜ್ಜೆಯನ್ನು ಮುಖ್ಯ ಆಯುಕ್ತರು ಇಟ್ಟಿದ್ದಾರೆ. ಪ್ರತಿ ವಾರ್ಡ್‌ಗೆ ₹35 ಕೋಟಿಯಂತೆ ₹6,911.5 ಕೋಟಿಯನ್ನು ಸಾರ್ವಜನಿಕ ಕೆಲಸಗಳಿಗೆ ಮೀಸಲಿಡಲಾಗಿದೆ. ಸಾರ್ವಜನಿಕರನ್ನು ಒಳಗೊಳ್ಳದ ಸಾರ್ವಜನಿಕ ಕಾಮಗಾರಿಗಳಿಗೆ ಅನುದಾನ ನಿಗದಿ ಮಾಡುವುದರಲ್ಲಿ ಅರ್ಥವೇ ಇಲ್ಲ. ತಮ್ಮ ವಾರ್ಡ್‌ನಲ್ಲಿ ಏನೆಲ್ಲ ಕಾಮಗಾರಿ ಬೇಕು ಎಂಬುದನ್ನು ಸಾರ್ವಜನಿಕರಿಂದಲೇ ಮಾಹಿತಿ ಪಡೆದುಕೊಳ್ಳಬೇಕು. ಜನ ಪ್ರತಿನಿಧಿಗಳು ಜನರಿಗೆ ಉಪಯೋಗಕ್ಕೆ ಬಾರದ ಕೆಲಸಗಳನ್ನು ಅನುಷ್ಠಾನ ಮಾಡಿಸುತ್ತಾರೆ. ಇದರಿಂದ ನಗರಕ್ಕೆ ಉಪಯೋಗ ಆಗುವುದಿಲ್ಲ.

ಶ್ರೀಕಾಂತ್ ನರಸಿಂಹನ್, ಬೆಂಗಳೂರು ನವ ನಿರ್ಮಾಣ ಪಕ್ಷದ (ಬಿಎನ್‌ಪಿ) ಪ್ರಧಾನ ಕಾರ್ಯದರ್ಶಿ

ಜನಜಂಗುಳಿ ಯುಗಾದಿ ಮುನ್ನಾ ದಿನವಾದ ಶುಕ್ರವಾರ ಊರುಗಳಿಗೆ ತೆರಳಲು ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಜಮಾಯಿಸಿರುವ ಪ್ರಯಾಣಿಕರು –ಪ್ರಜಾವಾಣಿ ಚಿತ್ರ/ಎಸ್.ಕೆ.ದಿನೇಶ್

ಸುಧಾ ಸಹಕಾರಿ ಬ್ಯಾಂಕ್‌ಗೆ ₹ 3.9 ಕೋಟಿ ನಿವ್ವಳ ಲಾಭ

ಬೆಂಗಳೂರು: ನಗರದ ಸುಧಾ ಕೋ–ಆಪರೇಟಿವ್ ಬ್ಯಾಂಕ್ 2021–22ನೇ ಹಣಕಾಸು ವರ್ಷದಲ್ಲಿ ₹ 3.9 ಕೋಟಿ ನಿವ್ವಳ ಲಾಭ ಗಳಿಸಿದೆ.

ಬ್ಯಾಂಕ್ ₹ 22.23 ಕೋಟಿ ಷೇರು ಬಂಡವಾಳ, ₹ 40.39 ಕೋಟಿ ಸ್ವಂತ ನಿಧಿಯನ್ನು 2021–22ನೇ ಸಾಲಿನಲ್ಲಿ ಹೊಂದಿದೆ. ₹ 326.19 ಕೋಟಿ ಠೇವಣಿಯನ್ನು ಹೊಂದಿದ್ದು, ₹ 191 ಕೋಟಿ ಸಾಲ ನೀಡಿದೆ.

ವಸೂಲಾಗದ ಸಾಲದ ಪ್ರಮಾಣವು (ಎನ್‌ಪಿಎ) ಶೇ 2.93 ರಷ್ಟಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ಡಾ.ಎಂ. ತಿಮ್ಮೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವ ಮೋರ್ಚಾ 'ಭಾರತ ದರ್ಶನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಷ್ಟ್ರೀಯ ಯುವ ಮೋರ್ಚಾದ ಪದಾಧಿಕಾರಿಗಳಿಗೆ 'ಭಾರತ ದರ್ಶನ– ಸುಶಾಸನ ಯಾತ್ರೆ' ಆರಂಭಿಸಿದ್ದು, ಏ.4 ರವರೆಗೆ ಕರ್ನಾಟಕದಲ್ಲಿ ಕಾರ್ಯಕರ್ತರು ಪ್ರವಾಸ ನಡೆಸಲಿದ್ದಾರೆ. ಆ ಬಳಿಕ ಇತರ ರಾಜ್ಯಗಳಿಗೂ ಪ್ರವಾಸ ನಡೆಸಲಿದ್ದಾರೆ.

ಈ ಪ್ರವಾಸದಲ್ಲಿರುವ 16 ರಾಜ್ಯಗಳ 40ಕ್ಕೂ ಹೆಚ್ಚು ಪದಾಧಿಕಾರಿಗಳು ರಾಜ್ಯಕ್ಕೆ ಬಂದಿದ್ದಾರೆ. ರಾಜ್ಯ ಪ್ರವಾಸದಲ್ಲಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಈ ತಂಡದ ಜತೆ ಸಮಾಲೋಚನೆ ನಡೆಸಿದರು.

ಸುಶಾಸನ ಯಾತ್ರೆಯು ಪ್ರಧಾನಿ ನರೇಂದ್ರ ಮೋದಿ ಅವರ ಪರಿಕಲ್ಪನೆಯಾಗಿದ್ದು, ದೇಶದ ಉದ್ದಗಲಕ್ಕೂ ಪ್ರವಾಸ ಮಾಡಿ ಅಲ್ಲಿನ ಜನಜೀವನ, ಪರಂಪರೆ, ವಿಚಾರಗಳನ್ನು ತಿಳಿದುಕೊಳ್ಳುವುದಕ್ಕೆ ಆದ್ಯತೆ ನೀಡಲಾಗಿದೆ ಎಂದು ಮೋರ್ಚಾ ತಿಳಿಸಿದೆ.

ಬೆಂಗಳೂರಿನಲ್ಲಿ ಎಚ್‌ಎಎಲ್, ಬಿಇಎಲ್, ಕಬ್ಬನ್ ಪಾರ್ಕ್, ನವೋದ್ಯಮ ಕಂಪನಿಗಳು, ಪಾವಗಡದ ಸೌರಶಕ್ತಿ ಪ್ಲಾಂಟ್ ಭೇಟಿ ನೀಡಲಿದ್ದಾರೆ.

ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಗಳ ಜತೆ ಸಚಿವ ಸಿ.ಸಿ.ಪಾಟೀಲ, ಸಂಸದ ತೇಜಸ್ವಿ ಸೂರ್ಯ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ,ಅಮಿತ್ ಶಾ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವ ಮುರುಗೇಶ ನಿರಾಣಿ ಮತ್ತು ಇತರರು ಇದ್ದಾರೆ.

'ಪಠ್ಯದಿಂದ ಅಳಿಸಿದರೆ ಟಿಪ್ಪು ಚರಿತ್ರೆ ಬದಲಾಗದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟಿಪ್ಪು ಸುಲ್ತಾನ್ ಕುರಿತ ಕೆಲ ಅಂಶಗಳನ್ನು ಶಾಲಾ ಪಠ್ಯಕ್ರಮದಿಂದ ತೆಗೆಯಬೇಕು ಎನ್ನುವ ಪಠ್ಯ ಪುಸ್ತಕ ಪರಿಷ್ಕರಣ ಸಮಿತಿಯ ನಿಲುವು ಖಂಡನೀಯ. ಟಿಪ್ಪು ಅವರನ್ನು ಪಠ್ಯ ಪುಸ್ತಕದಿಂದ ಅಳಿಸಿದ ಮಾತ್ರಕ್ಕೆ ಚರಿತ್ರೆ ಬದಲಾಗುವುದಿಲ್ಲ' ಎಂದು ಟಿಪ್ಪು ಸುಲ್ತಾನ್ ವಂಶಸ್ಥ ಹಾಗೂ 'ತೆಹರಿಕ್ ಇ ಖುದಾದಾದ್' ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಸಾಹಿಬ್ ಜಾದ ಸೈಯದ್ ಮನ್ಸೂರ್ ಅಲಿ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಟಿಪ್ಪು ಸುಲ್ತಾನ್ ಅವರ ಹೆಸರಿಗೆ ಕೆಸರೆರಚುವ ಕೆಲಸವನ್ನು ಒಂದು ವರ್ಗ ನಿರಂತರವಾಗಿ ಮಾಡುತ್ತಾ ಬಂದಿದೆ. ಅದರ ಭಾಗವಾಗಿ ಇತಿಹಾಸಕಾರರಲ್ಲದ ಹಾಗೂ ನೈಜ ಚರಿತ್ರೆಯನ್ನು ತಿರುಚುವ ಕೆಲ ವ್ಯಕ್ತಿಗಳು ಟಿಪ್ಪು ಅವರಿಗೆ 'ಮೈಸೂರು ಹುಲಿ' ಬಿರುದು ಕೊಟ್ಟಿದ್ದು ಯಾರೆಂದು ಪ್ರಶ್ನಿಸುತ್ತಿದ್ದಾರೆ' ಎಂದು ದೂರಿದರು.

'ಟಿಪ್ಪು ಅವರ ಆಡಳಿತ ವೈಖರಿ, ಪರಾಕ್ರಮಗಳನ್ನು ಕಂಡಿದ್ದ ಅಂದಿನ ಮೈಸೂರು ಸಾಮ್ರಾಜ್ಯದ ಜನರೇ ಟಿಪ್ಪು ಅವರನ್ನು 'ಮೈಸೂರು ಹುಲಿ' ಎಂದು ಕರೆದರು. ಈ ಬಗ್ಗೆ ಹಲವು ಪುಸ್ತಕಗಳಲ್ಲಿಯೂ ಉಲ್ಲೇಖಿಸಲಾಗಿದೆ. ಆದರೆ, ಪ್ರಶ್ನಿಸುವ ಅರ್ಹತೆಯಿಲ್ಲದ ಕೆಲ ವ್ಯಕ್ತಿಗಳು ಪಠ್ಯಕ್ರಮದಿಂದ ಟಿಪ್ಪು ಅವರನ್ನು ಮರೆಮಾಚುವ ಕೆಲಸದಲ್ಲಿ ನಿರತರಾಗಿದ್ದಾರೆ' ಎಂದು ಅವರು ದೂರಿದರು.

'ಸಮಾಜ ಸುಧಾರಣೆಗೂ ಹೆಣಗಾಡುತ್ತಿರುವ ಪತ್ರಿಕೋದ್ಯಮ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಬೃಹದಾಕಾರದಲ್ಲಿ ಬೆಳೆದಿರುವ ಮಾಧ್ಯಮ ಸಣ್ಣಪ್ರಮಾಣದಲ್ಲಿ ಸಮಾಜ ಸುಧಾರಣೆ ತರಲು ಒದ್ದಾಡುತ್ತಿದೆ. ಬಹುತೇಕ ಮಾಧ್ಯಮಗಳು ಸರ್ಕಾರಗಳ ತುತ್ತೂರಿಯಾಗಿವೆ ಎಂದು ಪತ್ರಕರ್ತ ಪಿ. ಸಾಯಿನಾಥ್ ಅಭಿಪ್ರಾಯಪಟ್ಟರು.

ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಆಯೋಜಿಸಿದ್ದ ಡಾ.ಶಾಂತಿನಾಥ ದೇಸಾಯಿ ದತ್ತಿನಿಧಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು '200 ವರ್ಷಗಳ ಭಾರತೀಯ ಪತ್ರಿಕೋದ್ಯಮದ ಪ್ರಸಕ್ತ ಸ್ಥಿತಿಗತಿ' ವಿಷಯ ಕುರಿತು ಮಾತನಾಡಿದರು.

ಮಾಧ್ಯಮಗಳ ಕಾರ್ಪೊರೇಟ್ ಒಡೆತನ ಮತ್ತು ಸಂಪಾದಕ ಸ್ಥಾನಗಳಲ್ಲಿ ಒಂದು ಜಾತಿಯ ಜನರ ಏಕಸ್ವಾಮ್ಯತೆಯಿಂದಾಗಿ ಸಮಾಜದ ಜ್ವಲಂತ ಸಮಸ್ಯೆಗಳು ವರದಿಯಾಗುತ್ತಿಲ್ಲ. ಕೇವಲ ಶ್ರೀಮಂತರ, ಉಳ್ಳವರ ಸಂಬಂಧಿ ವಿಷಯಗಳು, ಅವರ ಅಗತ್ಯಗಳನ್ನು ಪೂರೈಸುವ ವರದಿಗಳನ್ನು ನೀಡುತ್ತಿರುವ ಮಾಧ್ಯಮಗಳು 'ಮ್ಯಾಕ್‌ಡೊನಾಲ್ಡೈಸೇಶನ್' ಪ್ರಕ್ರಿಯೆಗೆ ಒಳಗಾಗಿವೆ ಎಂದು ಕಳವಳ ವ್ಯಕ್ತಪಡಿಸಿದರು. ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಪಿ. ವೀರಭದ್ರಪ್ಪ, ಕುಲಸಚಿವೆ ಜಿ.ಅನುರಾಧಾ, ಪರೀಕ್ಷಾಂಗ ಕುಲಸಚಿವ ಡಾ.ನವೀನ್ ಕುಮಾರ್, ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಡಾ. ನಾಗ್ಯಾನಾಯ್ಕ್ ಹಿರಿಯ ಪತ್ರಕರ್ತ ಜಿ.ಎನ್. ಮೋಹನ್‌ಉಪಸ್ಥಿತರಿದ್ದರು.

ಭಾರತೀಯ ಶ್ರೀಮಂತರ ಸಂಪತ್ತಿನ ಏರಿಕೆ

ಕೋವಿಡ್‌ನ ಮೊದಲ 12 ತಿಂಗಳು ಭಾರತದ ಜಿಡಿಪಿ ಶೇ 7ರಷ್ಟು ಇಳಿಕೆಯಾಗಿದೆ ಎಂದು ಸರ್ಕಾರ ಹೇಳಿತು. ಆದರೆ, ಅದೇ ಸಮಯದಲ್ಲಿ ಭಾರತೀಯ ಶ್ರೀಮಂತರ ಸಂಪತ್ತಿನಲ್ಲಿ ಶೇ 22ರಷ್ಟು ಏರಿಕೆಯಾಯಿತು. ಇವುಗಳ ತುಲನಾತ್ಮಕ ವರದಿಗಳು, ವಿಶ್ಲೇಷಣೆಗಳನ್ನು ಮುಖ್ಯವಾಹಿನಿ ಮಾಧ್ಯಮಗಳು ನೀಡುವುದೇ ಇಲ್ಲ. ಜಾಗತಿಕ ಪತ್ರಿಕಾ ಸ್ವಾತಂತ್ರ್ಯ ಸೂಚಿಯಲ್ಲಿ 188 ದೇಶಗಳಲ್ಲಿ ಭಾರತ 142ನೇ ಸ್ಥಾನದಲ್ಲಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಅಪಾಯದಲ್ಲಿದೆ. ಮಾನವ ಅಭಿವೃದ್ಧಿ ಸೂಚ್ಯಂಕ 132 ಸೇರಿ ವಿವಿಧ ಮಾನದಂಡಗಳಲ್ಲಿ ಕಳಪೆ ಪ್ರದರ್ಶನ ನೀಡುತ್ತಿದೆ. ಆದರೆ, ಶ್ರೀಮಂತರ ಸಂಖ್ಯೆಯಲ್ಲಿ ವಿಶ್ವದಲ್ಲಿಯೇ 3ನೇ ಸ್ಥಾನದಲ್ಲಿದೆ ಎಂದು ಪಿ. ಸಾಯಿನಾಥ್ ವಿವರ ನೀಡಿದರು.

ಅಮಿತ್ ಶಾ ಸಂಚಾರ ಮಾರ್ಗದಲ್ಲಿ ಬೆಂಕಿ ಅವಘಡ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರಯಾಣಿಸಬೇಕಿದ್ದ ಮಾರ್ಗದಲ್ಲಿ ಬೆಂಕಿ ಅವಘಡ ಸಂಭವಿಸಿದ್ದರಿಂದ, ಬದಲಿ ಮಾರ್ಗದಲ್ಲಿ ಅವರ ಸಂಚಾರಕ್ಕೆ ಪೊಲೀಸರು ಅನುಕೂಲ ಮಾಡಿಕೊಟ್ಟರು.

'ವಸಂತನಗರದ ಮೌಂಟ್ ಕಾರ್ಮೆಲ್ ಕಾಲೇಜು ಎದುರಿನ ರಸ್ತೆ ಮೂಲಕ ಅಮಿತ್ ಶಾ ಅವರು ಶುಕ್ರವಾರ ಅರಮನೆ ಮೈದಾನಕ್ಕೆ ತೆರಳಬೇಕಿತ್ತು. ಕಾಲೇಜು ಬಳಿ ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಬೀದಿ ದೀಪದ ತಂತಿಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೆಂಕಿ ಕೆನ್ನಾಲಗೆ ಹೆಚ್ಚಾಗಿತ್ತು. ಹೊಗೆಯೂ ಜಾಸ್ತಿ ಇತ್ತು. ಸ್ಥಳೀಯರು ಆತಂಕಗೊಂಡಿದ್ದರು. ರಸ್ತೆಯಲ್ಲಿ ಗಸ್ತಿನಲ್ಲಿದ್ದ ಪೊಲೀಸರು, ಬೆಂಕಿ ನಂದಿಸಿದರು. ಅವರು ನೀಡಿದ ಮಾಹಿತಿಯಂತೆ, ಮುಂಜಾಗ್ರತಾ ಕ್ರಮವಾಗಿ ಅಮಿತ್ ಶಾ ಅವರನ್ನು ಬದಲಿ ಮಾರ್ಗದಲ್ಲಿ ಕರೆದೊಯ್ಯಲಾಯಿತು' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಕಮಿಷನರ್ ಭೇಟಿ: ಬೆಂಕಿ ಕಾಣಿಸಿಕೊಂಡ ಸ್ಥಳಕ್ಕೆ ಕಮಿಷನರ್ ಕಮಲ್ ಪಂತ್ ಭೇಟಿ ನೀಡಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬೆಸ್ಕಾಂ ಅಧಿಕಾರಿಗಳು ಬೀದಿ ದೀಪಗಳ ಪರಿಶೀಲನೆ ನಡೆಸುತ್ತಿದ್ದಾರೆ. ಇದೇ ಸಂದರ್ಭದಲ್ಲೇ ಬೀದಿದೀಪ ಸಮಸ್ಯೆಯಿಂದಾಗಿ ಬೆಂಕಿ ಹೊತ್ತಿಕೊಂಡಿರುವುದು ಗೊತ್ತಾಗಿದೆ' ಎಂದು ಹೇಳಿದರು.

'ಕಾಲೇಜು ಬಳಿ ಜೋರು ಶಬ್ದ ಕೇಳಿಸಿದ್ದ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ್ದರು. ಆ ಬಗ್ಗೆಯೂ ಪರಿಶೀಲಿಸಲಾಗಿದ್ದು, ಜನರು ಆತಂಕಪಡುವ ಅವಶ್ಯಕತೆ ಇಲ್ಲ' ಎಂದು ಅವರು ಹೇಳಿದರು.

'ಐ.ಟಿ. ನಿಯಮ ವಾಪಸ್ ಪಡೆಯುವ ಪ್ರಸ್ತಾವವಿಲ್ಲ'

ನವದೆಹಲಿ: ಮಾಹಿತಿ ತಂತ್ರಜ್ಞಾನ (ಐ.ಟಿ) ನಿಯಮ–2021ಅನ್ನುವಾಪಸ್ ಪಡೆಯುವ ಅಥವಾ ಈ ಸಂಬಂಧ ಸಾರ್ವಜನಿಕರೊಂದಿಗೆ ಹೊಸದಾಗಿ ಸಮಾಲೋಚನೆ ನಡೆಸುವ ಪ್ರಸ್ತಾವವಿಲ್ಲ ಎಂದು ಕೇಂದ್ರ ಸರ್ಕಾರ ರಾಜ್ಯಸಭೆಗೆ ತಿಳಿಸಿದೆ.

ಐ.ಟಿ. ನಿಯಮಗಳು, ಬಳಕೆದಾರರ ಸುರಕ್ಷತೆಗಾಗಿ ಸಾಮಾಜಿಕ ಮಾಧ್ಯಮ ವೇದಿಕೆಗಳನ್ನೇ ಹೊಣೆಗಾರರನ್ನಾಗಿ ಮಾಡಲಿದ್ದು, ನಿಯಮಿತವಾಗಿ ಕುಂದುಕೊರತೆ ಪರಿಹಾರ ಸೌಲಭ್ಯವನ್ನು ಒದಗಿಸಲು ನೆರವಾಗಲಿವೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು ಶುಕ್ರವಾರ ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಬದಲಾಗುತ್ತಿರುವ ಅಗತ್ಯಗಳಿಗೆ ಅನುಗುಣವಾಗಿ ಮುಕ್ತ, ಸುರಕ್ಷಿತ ಮತ್ತು ವಿಶ್ವಾಸಾರ್ಹ ಅಂತರ್ಜಾಲ ಸೌಲಭ್ಯವನ್ನು ಒದಗಿಸಲೆಂದೇ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು 2021ರ ಫೆಬ್ರವರಿ 25ರಂದು ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮೀಡಿಯಾ ಎಥಿಕ್ಸ್ ಕೋಡ್) ನಿಯಮ–2021 ರೂಪಿಸಿದೆ.

ಯಾವುದೇ ವ್ಯಕ್ತಿಯ ದೇಹದ ಖಾಸಗಿ ಭಾಗವನ್ನು ಅಥವಾ ಕೃತಕವಾಗಿ ಮಾರ್ಫ್ ಮಾಡಿದ ಚಿತ್ರಗಳನ್ನು ಬಹಿರಂಗಪಡಿಸಿದಲ್ಲಿ ಹಾಗೂ ವ್ಯಕ್ತಿಯ ಖಾಸಗಿ ಕ್ಷಣಗಳನ್ನು ಚಿತ್ರಿಸಿ ಸಾಮಾಜಿಕ ಮಾಧ್ಯಮದಲ್ಲಿ ಅಪ್‌ಲೋಡ್ ಮಾಡಿದಲ್ಲಿ ತ್ವರಿತವಾಗಿ ತೆಗೆದುಹಾಕಿ, ಕ್ರಮ ಕೈಗೊಳ್ಳುವಲ್ಲಿ ಈ ನಿಯಮ ನೆರವಾಗುತ್ತಿದೆ.

ವಿ.ಸೋಮಣ್ಣ ಪ್ರತಿಷ್ಠಾನವು ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಶಿವಕುಮಾರ ಸ್ವಾಮೀಜಿ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ 'ಶಿವಯೋಗಿ' ಪುಸ್ತಕ ಬಿಡುಗಡೆ ಮಾಡಲಾಯಿತು. ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಸಚಿವ ವಿ.ಸೋಮಣ್ಣ, ಟಿ.ಎಸ್‌.ನಾಗಾಭರಣ, ತೇಜಸ್ವಿನಿ ಅನಂತಕುಮಾರ್, ಅ.ದೇವೇಗೌಡ ಹಾಗೂ ಇತರರು ಇದ್ದಾರೆ.

ಪ್ರಥಮ ಪಿ.ಯು ಕನ್ನಡ ಪರೀಕ್ಷೆ ಮುಂದಕ್ಕೆ

ಬಳ್ಳಾರಿ: ಶುಕ್ರವಾರ ಮಧ್ಯಾಹ್ನ ಪರೀಕ್ಷೆ ನಡೆಯುತ್ತಿದ್ದ ವೇಳೆ ಪ್ರಶ್ನೆ ಪತ್ರಿಕೆಯಲ್ಲಿರುವ ದೋಷ ಪತ್ತೆಯಾಗಿದ್ದರಿಂದ ಪ್ರಥಮ ಪಿ.ಯು ಕನ್ನಡ ಐಚ್ಛಿಕ (ಕೋಡ್ ಸಂಖ್ಯೆ 16) ಪರೀಕ್ಷೆಯನ್ನು ಮುಂದೂಡಲಾಗಿದ್ದು, ಈ ತಿಂಗಳ 16ಕ್ಕೆ ಮರುನಿಗದಿ ಮಾಡಲಾಗಿದೆ.

'ಪ್ರಶ್ನೆ ಪತ್ರಿಕೆಯಲ್ಲಿ ದ್ವಿತೀಯ ಪಿ.ಯು ಎಂದು ಮುದ್ರಣವಾಗಿತ್ತು. ಅಲ್ಲದೆ, ಕೆಲವು ಲೋಪದೋಷಗಳು ಕಂಡುಬಂದಿದ್ದರಿಂದ ವಿದ್ಯಾರ್ಥಿಗಳಿಗೆ ಗೊಂದಲ ಸೃಷ್ಟಿಯಾಗಬಾರದು ಎಂಬ ಕಾರಣಕ್ಕೆ ಕೊನೇ ಕ್ಷಣದಲ್ಲಿ ಪರೀಕ್ಷೆ ಮುಂದೂಡಲಾಯಿತು' ಎಂದು ಪಿ.ಯು ಇಲಾಖೆ ಮೂಲಗಳು ತಿಳಿಸಿವೆ.

ದ್ವಿತೀಯ ಪಿ.ಯು ಪೂರ್ವಸಿದ್ಧತಾ ಪರೀಕ್ಷೆಗೆ ಹೊಂದಿಸಲಾಗಿದ್ದ ಪ್ರಶ್ನೆ ಪತ್ರಿಕೆಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಗಿತ್ತು. ಇದು ಗಮನಕ್ಕೆ ಬಂದ ತಕ್ಷಣ ಪರೀಕ್ಷೆ ಮುಂದೂಡಲಾಯಿತು.

'ಪರೀಕ್ಷಾ ಪೇ ಚರ್ಚಾ'ದಲ್ಲಿ ಲಿಂಗ ಸಮಾನತೆಯ ಮಹತ್ವ ತಿಳಿಸಿದ ಪ್ರಧಾನಿ

'ಹೆಣ್ಣಿನ ಸಾಮರ್ಥ್ಯ ಅರಿಯದ ಸಮಾಜದ ಅಭಿವೃದ್ಧಿ ಅಸಾಧ್ಯ'

ನವದೆಹಲಿ(ಪಿಟಿಐ): 'ಹೆಣ್ಣುಮಕ್ಕಳ ಸಾಮರ್ಥ್ಯವನ್ನು ಗುರುತಿಸುವಲ್ಲಿ ಸಮಾಜ ಸೋತರೆ ಅಂಥ ಸಮಾಜವು ಎಂದಿಗೂ ಪ್ರಗತಿ ಹೊಂದಲು ಸಾಧ್ಯವಿಲ್ಲ. ಗಂಡು ಮತ್ತು ಹೆಣ್ಣುಮಕ್ಕಳನ್ನು ಯಾವುದೇ ಭೇದಭಾವವಿಲ್ಲದೆ ಕಾಣಬೇಕು ಮತ್ತು ಅವರಿಗೆ ಸಮಾನ ಅವಕಾಶ ನೀಡಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.

ಇಲ್ಲಿನ ತಾಲ್‌ಕಟೋರಾ ಕ್ರೀಡಾಂಗಣದಲ್ಲಿ ಶುಕ್ರವಾರ 'ಪರೀಕ್ಷಾ ಪೇ ಚರ್ಚಾ 2022'ದ ಐದನೇ ಆವೃತ್ತಿಯಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರನ್ನು ಉದ್ದೇಶಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದದಲ್ಲೂ ಪಾಲ್ಗೊಂಡರು.

ಸಂವಾದದಲ್ಲಿ ವಿದ್ಯಾರ್ಥಿಯೊಬ್ಬರ ಪ್ರಶ್ನೆಗೆ ಉತ್ತರಿಸಿದ ಮೋದಿ ಅವರು, 'ಹುಡುಗ ಮತ್ತು ಹುಡುಗಿಯರ ನಡುವಿನ ತಾರತಮ್ಯದ ವಿಚಾರ ಈಗ ಹಿಂದಿನಂತಿಲ್ಲ. ಕಾಲ ಬದಲಾದಂತೆ ಈ ವಿಚಾರದಲ್ಲೂ ಬದಲಾವಣೆಯಾಗಿದೆ. ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯಲ್ಲಿ ಹೆಣ್ಣುಮಕ್ಕಳ ಸಂಖ್ಯೆಯು ಗಂಡುಮಕ್ಕಳ ಸಂಖ್ಯೆಯನ್ನೂ ಮೀರಿಸುತ್ತದೆ. ಹೆಣ್ಣುಮಕ್ಕಳ ಉತ್ಸಾಹ ಮತ್ತು ಆಕಾಂಕ್ಷೆಗಳ ಬಗ್ಗೆ ಪ್ರತಿ ಭಾರತೀಯನೂ ಹೆಮ್ಮೆ ಪಡಬಹುದಾದ ಕಾಲಘಟ್ಟವಿದು. ಈಗ ಪ್ರತಿ ಕುಟುಂಬಕ್ಕೂ ಹೆಣ್ಣುಮಕ್ಕಳು ದೊಡ್ಡ ಆಸ್ತಿ ಮತ್ತು ಶಕ್ತಿಯಾಗಿದ್ದಾರೆ' ಎಂದರು.

ನವದೆಹಲಿಯ ತಾಲ್‌ಕಟೋರಾ ಕ್ರೀಡಾಂಗಣದಲ್ಲಿ ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಅವರು 'ಪರೀಕ್ಷಾ ಪೇ ಚರ್ಚಾ 2022'ರ ಐದನೇ ಆವೃತ್ತಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಚರ್ಚೆ ನಡೆಸಿದರು –ಪಿಟಿಐ ಚಿತ್ರ

'ಪರೇಶಾನಿ ಪೇ ಚರ್ಚಾ' ಯಾವಾಗ?'

ಮುಂಬೈ (ಪಿಟಿಐ): ಮೋದಿ ಅವರ 'ಪರೀಕ್ಷಾ ಪೇ ಚರ್ಚಾ' ಕಾರ್ಯಕ್ರಮವನ್ನು ಸ್ವಾಗತಿಸಿರುವ ಎನ್‌ಸಿಪಿ, ಜನಸಾಮಾನ್ಯರ ಸಮಸ್ಯೆಗಳನ್ನು ಪರಿಹರಿಸಲು 'ಪರೇಶಾನಿ ಪೇ ಚರ್ಚಾ' ಯಾವಾಗ ಆಯೋಜಿಸುತ್ತೀರಿ ಎಂದು ಪ್ರಧಾನಿಯವರನ್ನು ಪ್ರಶ್ನಿಸಿದೆ.

'ವಿದ್ಯಾರ್ಥಿಗಳು ಪರೀಕ್ಷೆಯ ಸಮಯದಲ್ಲಿ ಒತ್ತಡದಲ್ಲಿದ್ದಾರೆ. ಅವರನ್ನು ಒತ್ತಡದಿಂದ ಮುಕ್ತಗೊಳಿಸಲು ಅವರೊಂದಿಗೆ ಸಂವಹನ ನಡೆಸಿದ್ದಕ್ಕಾಗಿ ನಾವು ಪ್ರಧಾನ ಮಂತ್ರಿಗೆ ಧನ್ಯವಾದ ಹೇಳುತ್ತೇವೆ. ಆದರೆ, ಅವರು ವಿದ್ಯಾರ್ಥಿಗಳ ಪೋಷಕರ ಕಳವಳಗಳನ್ನು ಪರಿಹರಿಸಲು 'ಪರೇಶಾನಿ ಪೇ ಚರ್ಚಾ' (ಕಷ್ಟಗಳ ಮೇಲೆ ಸಂವಾದ) ಯಾವಾಗ ನಡೆಸಲಿದ್ದಾರೆ' ಎಂದು ಎನ್‌ಸಿಪಿಯ ವಕ್ತಾರ ಕ್ಲೈಡ್ ಕ್ರಾಸ್ಟೊ ಕೇಳಿದ್ದಾರೆ.

'ಮೆಹಂಗಾಯಿ ಪೇ ಚರ್ಚಾ ಯಾವಾಗ ನಡೆಸ್ತೀರಿ': 'ಚಾಯ್ ಪೇ ಚರ್ಚಾ', 'ಪರೀಕ್ಷಾ ಪೇ ಚರ್ಚಾ' ಮಾಡುವುದರಲ್ಲಿ ನಿರತರಾಗಿರುವ ಪ್ರಧಾನಿ ಮೋದಿ ಅವರು 'ಮೆಹಂಗಾಯಿ ಪೇ ಚರ್ಚಾ' ಯಾವಾಗ ನಡೆಸುತ್ತಾರೆ ಎಂದು ಮಹಾರಾಷ್ಟ್ರ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಪ್ರಶ್ನಿಸಿದ್ದಾರೆ.

'ಪರೀಕ್ಷಾ ಪೇ ಚರ್ಚಾ'ದಂಥ ಸಂವಾದ ಕಾರ್ಯಕ್ರಮಗಳನ್ನು ಆಯೋಜಿಸುವುದರಲ್ಲಿ ಪ್ರಧಾನಿ ಮಗ್ನರಾಗಿದ್ದಾರೆ. ಆದರೆ, ಹಣದುಬ್ಬರದಂತಹ ಸಮಸ್ಯೆ ಬಗೆಹರಿಸಲು ಅವರ ಬಳಿ ಸಮಯವಿಲ್ಲ ಎಂದು ತೋರುತ್ತದೆ ಎಂದು ವ್ಯಂಗ್ಯವಾಡಿದರು.

ಪ್ರಿಯಾಂಕಾ ವಾಗ್ದಾಳಿ: ಬಿಜೆಪಿ ಆಡಳಿತವಿರುವ ಉತ್ತರಪ್ರದೇಶದಲ್ಲಿ 12ನೇ ತರಗತಿಯ ಇಂಗ್ಲಿಷ್ ಪ್ರಶ್ನೆಪತ್ರಿಕೆ ಸೋರಿಕೆಯ ಕುರಿತು ಪ್ರಧಾನಿ 'ಪೇಪರ್ ಲೀಕ್ ಚರ್ಚೆ' ನಡೆಸಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾಗ್ದಾಳಿ ನಡೆಸಿದ್ದಾರೆ.

ಶ್ರೀಲಂಕಾದಲ್ಲಿ ತುರ್ತು ಪರಿಸ್ಥಿತಿ ಘೋಷಣೆ

ಕೊಲಂಬೊ (ಎಎಫ್‌ಪಿ): ತೀವ್ರ ಸ್ವರೂಪದ ಆರ್ಥಿಕ ಮುಗ್ಗಟ್ಟಿನಿಂದ ಪ್ರಕ್ಷುಬ್ಧಗೊಂಡಿರುವ ಶ್ರೀಲಂಕಾದಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ. ಈ ಕುರಿತು ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ಶುಕ್ರವಾರ ಘೋಷಿಸಿದರು.

ನೂರಾರು ಜನರು ರಾಜಪಕ್ಸ ಅವರ ನಿವಾಸವನ್ನು ಮುತ್ತಿಗೆ ಹಾಕಲು ಪ್ರಯತ್ನಿಸಿದ ಮರುದಿನವೇ ಈ ನಿರ್ಧಾರ ಕೈಗೊಳ್ಳಲಾಗಿದೆ. 'ಶ್ರೀಲಂಕಾದಲ್ಲಿ ಸಾರ್ವಜನಿಕ ತುರ್ತುಪರಿಸ್ಥಿತಿ ಇದೆ ಎಂಬುದು ನನ್ನ ನಂಬಿಕೆ. ಅದರಿಂದಾಗಿ ಕಠಿಣ ಕಾನೂನುಗಳನ್ನು ಜಾರಿ ಮಾಡಬೇಕಾಯಿತು. ಶಂಕಿತರನ್ನು ಬಂಧಿಸಲು, ವಶಕ್ಕೆ ತೆಗೆದುಕೊಳ್ಳಲು ಭದ್ರತಾ ಪಡೆಗಳಿಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ' ಎಂದು ರಾಜಪಕ್ಸ ಹೇಳಿದ್ದಾರೆ.

ಜರಗನಹಳ್ಳಿ– ಯಲಚೇನಹಳ್ಳಿ ಕೆರೆ ಪ್ರದೇಶ: ಸ್ಥಳೀಯರ ದೂರು ● ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶ

ಒತ್ತುವರಿ ಜಾಗದಲ್ಲಿ ಕಟ್ಟಡ ನಿರ್ಮಾಣಕ್ಕೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜರಗನಹಳ್ಳಿ–ಯಲಚೇನಹಳ್ಳಿ ಕೆರೆ ಪ್ರದೇಶವನ್ನು ಒತ್ತುವರಿ ಮಾಡಿಕೊಂಡ ಜಾಗದಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಾಣಕ್ಕೆ ಸಿದ್ಧತೆ ನಡೆದಿದೆ ಎಂದು ಸ್ಥಳೀಯರು ದೂರಿದ್ದಾರೆ.

ಈ ಕೆರೆಯ ಸರ್ವೆ ನಂಬರ್ (29/2ಸಿ) ಜರಗನಹಳ್ಳಿ–ಯಲಚೇನಹಳ್ಳಿ ಎರಡೂ ಗ್ರಾಮಗಳಿಗೆ ಹೊಂದಿಕೊಂಡಿದೆ. ಜರಗನಹಳ್ಳಿ ಭಾಗದಲ್ಲಿ 4 ಎಕರೆಯಷ್ಟು ಈ ಕೆರೆ ಪ್ರದೇಶ ಇತ್ತು. ಯಲಚೇನಹಳ್ಳಿ ಭಾಗದ ಸುಮಾರು 2–36 ಎಕರೆ ಪ್ರದೇಶ ಶಾಲಾ ಮೈದಾನವಾಗಿಬಿಟ್ಟಿದೆ. ಪ್ರಭಾವಿ ವ್ಯಕ್ತಿಯೊಬ್ಬರು ಜರಗನಹಳ್ಳಿ ಕೆರೆಯನ್ನು ಮುಚ್ಚಿ ಶೆಡ್‌ಗಳನ್ನು ನಿರ್ಮಿಸಿ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ದೂರುತ್ತಾರೆ ಸ್ಥಳೀಯರು. ಈ ಕುರಿತ ವ್ಯಾಜ್ಯ ಹೈಕೋರ್ಟ್‌ನಲ್ಲಿದೆ.

'ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಹೈಕೋರ್ಟ್ ಆದೇಶ ಮಾಡಿದೆ. ಹಾಗಿದ್ದರೂ ಇಲ್ಲಿ ಕಟ್ಟಡ ನಿರ್ಮಿಸಲು ಮೂರು ದಿನಗಳಿಂದ ಸಿದ್ಧತೆ ನಡೆದಿದೆ. ಇಲ್ಲಿ ಸುರಿದಿದ್ದ ಕಸವನ್ನು ತೆರವುಗೊಳಿಸಲಾಗಿದೆ. ಜೆಸಿಬಿ ತಂದು ಜಾಗವನ್ನು ಸಮತಟ್ಟು ಮಾಡಲಾಗುತ್ತಿದೆ. ಇಲ್ಲಿದ್ದ ಕೆಲವು ಶೆಡ್‌ಗಳನ್ನು ತೆರವು ಮಾಡಿದ್ದು, ಇನ್ನು ಕೆಲವು ಶೆಡ್‌ಗಳು ಹಾಗೆಯೇ ಇವೆ' ಎಂದು ಈ ಕೆರೆ ಉಳಿಸಲು ಹೋರಾಟ ನಡೆಸುತ್ತಿರುವ ಸ್ಥಳೀಯರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಸರ್ವೆ ನಂಬರ್ 29/2ಸಿ ಕೆರೆಯ ಜಾಗ ಎಂದು ಕಂದಾಯ ಇಲಾಖೆಯ ದಾಖಲೆಗಳಲ್ಲಿ ಉಲ್ಲೇಖಿಸಲಾಗಿದೆ. 2014ರಲ್ಲಿ ಇದರ ಸರ್ವೆ ಕಾರ್ಯವೂ ನಡೆದಿದ್ದು, ಅದರಲ್ಲೂ ಜರಗನಹಳ್ಳಿಯ 4 ಎಕರೆ ಜಾಗ ಕೆರೆ ಪ್ರದೇಶ ಎಂದು ಸ್ಪಷ್ಟಪಡಿಸಲಾಗಿದೆ. ಆದರೂ ಕಂದಾಯ ಇಲಾಖೆ ಅಧಿಕಾರಿಗಳು ಒತ್ತುವರಿ ತೆರವು ಮಾಡಲು ಕ್ರಮಕೈಗೊಳ್ಳುತ್ತಿಲ್ಲ. ನಿರ್ಮಾಣ ಚಟುವಟಿಕೆ ನಡೆಯುತ್ತಿದ್ದರೂ ಕಣ್ಮುಚ್ಚಿ ಕುಳಿತಿದ್ದಾರೆ' ಎಂದು 'ಚೇಂಜ್ ಮೇಕರ್ಸ್ ಆಫ್ ಕನಕಪುರ ರಸ್ತೆ' ಸಂಘಟನೆಯ ಅಧ್ಯಕ್ಷ ಅಬ್ದುಲ್ ಅಲೀಂ 'ಪ್ರಜಾವಾಣಿಗೆ ತಿಳಿಸಿದರು.

'2008ರವರೆಗೂ ಜರಗನಹಳ್ಳಿಯಲ್ಲಿ ಕೆರೆ ಇತ್ತು. ಕೆರೆಗೆ ನೀರು ಹರಿಯುತ್ತಿದ್ದ ಕಾಲುವೆಗಳಿಗೆಲ್ಲಾ ಕಟ್ಟಡ ತ್ಯಾಜ್ಯ ಸುರಿದು ಮುಚ್ಚಿ ನೀರು ಸೇರದಂತೆ ಮಾಡಿದರು. ಈಗ ಕೆರೆ ಸಂಪೂರ್ಣ ಮಾಯವಾಗಿದೆ. ಶೆಡ್ ನಿರ್ಮಿಸಿಕೊಂಡವರು ಈ ಜಾಗ ನಮ್ಮದು ಎಂದು ಹೇಳುತ್ತಿದ್ದಾರೆ. ಕೆರೆ ಉಳಿಸಲು ಕಂದಾಯ ಇಲಾಖೆ ಪರಿಣಾಮಕಾರಿ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಜರಗನಹಳ್ಳಿ ನಿವಾಸಿ ಅಣ್ಣಯ್ಯ ತಿಳಿಸಿದರು.

ವಿಜಯನಗರ ಅರಸರ ಕಾಲದ ಕೆರೆ: 'ಯಲಚೇನಹಳ್ಳಿ ಕೆರೆ ಮೂಲತಃ ವಿಜಯನಗರ ಅರಸರ ಕಾಲದ್ದು. ಅದಕ್ಕೆ ಸಾಕ್ಷಿಯಾಗಿ ಕ್ರಿ.ಶ 1402ರ ಶಾಸನವೊಂದು ಇಲ್ಲಿ ಪತ್ತೆಯಾಗಿದೆ. ವಿಜಯನಗರದ ಅರಸ ಇಮ್ಮಡಿ ಹರಿಹರನ ಕಾಲದಲ್ಲಿ ಯಲಚೇನಹಳ್ಳಿ ಕೆರೆ, ನೀರು ಹೊರ ಹರಿಸುವ ತೂಬುಗಳನ್ನು ನಿರ್ಮಿಸಲಾಗಿತ್ತು' ಎನ್ನುತ್ತಾರೆ ಸ್ಥಳೀಯರು.

'ಕಟ್ಟಡ ನಿರ್ಮಾಣ ತಡೆಯಲು ಕ್ರಮ'

ಒತ್ತುವರಿ ಜಾಗದಲ್ಲಿ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳುತ್ತಿರುವುದು ಗಮನಕ್ಕೆ ಬಂದಿಲ್ಲ. ಈ ಬಗ್ಗೆ ಕಂದಾಯ ನಿರೀಕ್ಷಕರನ್ನು ಸ್ಥಳಕ್ಕೆ ಕಳುಹಿಸಿ ಮಾಹಿತಿ ಪಡೆದುಕೊಳ್ಳುತ್ತೇನೆ. ಕಟ್ಟಡ ನಿರ್ಮಿಸಲು ಸಿದ್ಧತೆ ನಡೆದಿದ್ದರೆ, ಅದನ್ನು ತಡೆಯಲು ಕ್ರಮ ಕೈಗೊಳ್ಳುತ್ತೇವೆ' ಎಂದು ಬೆಂಗಳೂರು ದಕ್ಷಿಣ ತಹಶೀಲ್ದಾರ್ ರಾಮಲಕ್ಷಣ 'ಪ್ರಜಾವಾಣಿ'ಗೆ ತಿಳಿಸಿದರು.

'ಜರಗನಹಳ್ಳಿ ಕೆರೆ ಒತ್ತುವರಿ ಕುರಿತ ವ್ಯಾಜ್ಯ ಹೈಕೋರ್ಟ್‌ನಲ್ಲಿದ್ದು, ಇತ್ತೀಚೆಗೆ ವಿಚಾರಣೆ ನಡೆದಿತ್ತು. ಜಾಗದ ಪೋಡಿ ಮಾಡಿಕೊಡುವಂತೆ 2012–13ರಲ್ಲೇ ಅರ್ಜಿ ಸಲ್ಲಿಸಿದರೂ ಅಧಿಕಾರಿಗಳು ಪೋಡಿ ಮಾಡುತ್ತಿಲ್ಲ ಎಂಬುದು ಒತ್ತುವರಿದಾರರ ದೂರು. ಇಲ್ಲಿನ ಸುಮಾರು 4 ಎಕರೆ ಜಾಗವು ಕೆರೆಯಂಗಳದ್ದು ಎಂಬುದಕ್ಕೆ ಸರ್ವೆ ದಾಖಲೆಗಳಿವೆ. ಹಾಗಾಗಿ ಇದನ್ನು ಪೋಡಿ ಮಾಡಲು ಬರುವುದಿಲ್ಲ. ಇದು ಸರ್ಕಾರಿ ಸ್ವತ್ತು ಎಂಬುದನ್ನು ಹೈಕೋರ್ಟ್‌ಗೂ ತಿಳಿಸಿದ್ದೇವೆ' ಎಂದರು.



ಜರಗನಹಳ್ಳಿ– ಯಲಚೇನಹಳ್ಳಿ ಕೆರೆಯ ನಕ್ಷೆ

ಸುದ್ದಿ 2 ನಿಮಿಷ

'ಮರಾಠಿ ನೃತ್ಯ: ಕಸಾಪ ಇತಿಹಾಸದಲ್ಲಿ ಕಪ್ಪು ಚುಕ್ಕೆ'

ಬೆಂಗಳೂರು: 'ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮರಾಠಿ ನೃತ್ಯ ಆಯೋಜಿಸಿರುವುದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಇತಿಹಾಸದಲ್ಲಿ ಕಪ್ಪು ಚುಕ್ಕೆ. ಇಂತಹ ಕಾರ್ಯ ಯಾವುದೇ ಕಾರಣಕ್ಕೂ ಸಮರ್ಥನೀಯವಲ್ಲ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಈ ಬಗ್ಗೆ ಅವರು ಕಸಾಪ ವಿಜಯಪುರ ಜಿಲ್ಲಾ ಘಟಕದ ಅಧ್ಯಕ್ಷ ಹಾಸೀಂಪೀರ ವಾಲೀಕಾರ ಅವರಿಗೆ ಪತ್ರ ಬರೆದಿದ್ದಾರೆ. 'ಮರಾಠಿ ನೃತ್ಯ ಆಯೋಜನೆ ಪರಿಷತ್ತಿಗೆ ಮುಜುಗರ ಉಂಟು ಮಾಡಿದೆ. ಹೀಗಾಗಿ, ತಕ್ಷಣವೇ ಕನ್ನಡಿಗರಲ್ಲಿ ಕ್ಷಮೆ ಯಾಚಿಸಬೇಕು. ಮರಾಠಿ ಭಾಷಿಕರು ಬೆಳಗಾವಿಯ ಗಡಿಯಲ್ಲಿ ಇನ್ನಿಲ್ಲದ ದಾಂಧಲೆ ಸೃಷ್ಟಿಸುತ್ತಿದ್ದಾರೆ. ಸದಾ ಕನ್ನಡಿಗರನ್ನು ಕೆಣಕುತ್ತ ಶಾಂತಿ ಮತ್ತು ಶಿಸ್ತನ್ನು ಉಲ್ಲಂಘಿಸುತ್ತಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ವೇದಿಕೆ ಪವಿತ್ರದ್ದು. ಅದನ್ನು ಯಾವುದೇ ಕಾರಣಕ್ಕೂ ಮಲಿನಗೊಳಿಸಬಾರದು. ಇಂತಹ ಕೃತ್ಯಗಳು ಮರುಕಳಿಸಬಾರದು' ಎಂದು ಎಚ್ಚರಿಸಿದ್ದಾರೆ.

'ಪರಿಷತ್ತಿನ ಘನತೆ ಮತ್ತು ಗೌರವಕ್ಕೆ ಧಕ್ಕೆ ತರಬಾರದು. ಈ ರೀತಿ ಘಟನೆ ಮರುಕಳಿಸಿದರೆ ಪರಿಷತ್ತಿನ ನಿಬಂಧನೆಗಳ ಪ್ರಕಾರ ಕ್ರಮಕೈಗೊಳ್ಳಲಾಗುತ್ತದೆ' ಎಂದು ತಿಳಿಸಿದ್ದಾರೆ.

ಈ ಪತ್ರಕ್ಕೆ ಉತ್ತರಿಸಿರುವ ಹಾಸೀಂಪೀರ ವಾಲೀಕಾರ, 'ಇಂತಹ ತಪ್ಪುಗಳು ಇನ್ನೊಮ್ಮೆ ಮರುಕಳಿಸದಂತೆ ಎಚ್ಚರಿಕೆ ವಹಿಸುತ್ತೇನೆ. ಈ ಘಟನೆಯಿಂದ ಕನ್ನಡ ಮನಸ್ಸುಗಳಿಗೆ ನೋವಾಗಿದೆ. ಇದಕ್ಕಾಗಿ ವಿಷಾದ ವ್ಯಕ್ತಪಡಿಸುತ್ತೇನೆ' ಎಂದು ಹೇಳಿದ್ದಾರೆ.

ಎಂಎಸ್‌ಪಿ ಸಹಾಯಧನ: ₹ 902 ಕೋಟಿ ಬಿಡುಗಡೆ

ನವದೆಹಲಿ: 2021–22ನೇ ಸಾಲಿನಲ್ಲಿ ರೈತರು ಬೆಳೆದ ಧಾನ್ಯವನ್ನು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಅಡಿ ಖರೀದಿಸಿ, ವಿತರಿಸಿರುವ ಕರ್ನಾಟಕದ ಪಾಲಿನ ಬಾಕಿ ಇದ್ದ ₹ 902.86 ಕೋಟಿ ಸಹಾಯಧನವನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ.

ರಾಗಿ ಮತ್ತು ಜೋಳ ಖರೀದಿಗಾಗಿ ಕೇಂದ್ರದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ಈ ಸಹಾಯಧನ ಬಿಡುಗಡೆ ಮಾಡಿ ಕಳೆದ ಬುಧವಾರ ಆದೇಶ ಹೊರಡಿಸಿದೆ.

ಕರ್ನಾಟಕದಲ್ಲಿ 2021ರ ಏಪ್ರಿಲ್ 1ರಿಂದ ಡಿಸೆಂಬರ್ 31ರವರೆಗೆ ಒಟ್ಟು 4.26 ಲಕ್ಷ ಮೆಟ್ರಿಕ್ ಟನ್ ರಾಗಿ ಹಾಗೂ 75,302 ಮೆಟ್ರಿಕ್ ಟನ್ ಜೋಳ ಖರೀದಿಸಿ, ಪಡಿತರ ವಿತರಣೆ ವ್ಯವಸ್ಥೆ ಅಡಿ ಫಲಾನುಭವಿಗಳಿಗೆ ಹಂಚಲು ಕೇಂದ್ರದ ಅನುಮತಿ ಪಡೆಯಲಾಗಿತ್ತು.

2021–22 ಸಾಲಿನಲ್ಲಿ ಒಟ್ಟು ₹1,682.12 ಕೋಟಿ ಸಹಾಯಧನದ ಪೈಕಿ, ₹902.86 ಕೋಟಿ ಬಾಕಿ ಉಳಿದಿತ್ತು. ಈ ಬಾಕಿ ಹಣದ ಬಿಡುಗಡೆಗೆ ಕೋರಿ, ಕೇಂದ್ರದ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ರಾಜ್ಯ ಸರ್ಕಾರದ ಪರ ಕೇಂದ್ರದ ಸಚಿವ ಪೀಯೂಷ್ ಗೋಯಲ್ ಅವರಿಗೆ ಕಳೆದ ಮಾರ್ಚ್ 28ರಂದು ಪತ್ರ ಬರೆದಿದ್ದರು.

ಸರಣಿ ಅಪಘಾತ: ಸೈಕಲ್ ಸವಾರ ಸಾವು

ಬೆಂಗಳೂರು: ಹೊಸೂರು ರಸ್ತೆಯಲ್ಲಿ ಗುರುವಾರ ರಾತ್ರಿ ಅಪಘಾತ ಸಂಭವಿಸಿದ್ದು, ಸೈಕಲ್ ಸವಾರ ತಪನ್‌ಕಾಂತಿ ದೇಬನಾಥ್ (46) ಮೃತಪಟ್ಟಿದ್ದಾರೆ.

'ಪಶ್ಚಿಮ ಬಂಗಾಳದ ತಪನ್‌ಕಾಂತಿ, ಬೊಮ್ಮನಹಳ್ಳಿ ಬಳಿಯ ಹೋಟೆಲೊಂದರಲ್ಲಿ ಅಡುಗೆ ಕೆಲಸ ಮಾಡುತ್ತಿದ್ದರು. ಗುರುವಾರ ರಾತ್ರಿ ಸೈಕಲ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಸಂಚಾರ ವಿಭಾಗದ (ಪೂರ್ವ) ಡಿಸಿಪಿ ಕೆ.ಎಂ. ಶಾಂತರಾಜು ಹೇಳಿದರು.

'ಆಡುಗೋಡಿ ಠಾಣೆ ಸಮೀಪ ಮುಖ್ಯರಸ್ತೆಯಲ್ಲಿ ಹೊರಟಿದ್ದ ಕಾರೊಂದು, ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ನಂತರ, ಸೈಕಲ್‌ಗೆ ಗುದ್ದಿತ್ತು. ತಲೆ ಹಾಗೂ ದೇಹದ ಹಲವು ಭಾಗಗಳಿಗೆ ಪೆಟ್ಟು ಬಿದ್ದಿದ್ದರಿಂದ ಸೈಕಲ್ ಸವಾರ ಮೃತಪಟ್ಟಿದ್ದಾರೆ. ಬೈಕ್‌ನಲ್ಲಿ ಮೂವರು ಹೊರಟಿದ್ದರು. ಅವರಿಗೂ ಗಾಯಗಾಗಿದ್ದು, ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದೂ ತಿಳಿಸಿದರು.

'ಜಯಂತ್ (21) ಎಂಬುವರು ಕಾರು ಚಲಾಯಿಸುತ್ತಿದ್ದರು. ಅವರ ನಿರ್ಲಕ್ಷ್ಯ ಹಾಗೂ ಅತಿವೇಗದ ಚಾಲನೆಯಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದೂ ಹೇಳಿದರು.

ಕಾರು-ಲಾರಿ ಡಿಕ್ಕಿ: ಇಬ್ಬರ ಸಾವು

ಚಿತ್ರದುರ್ಗ: ತಾಲ್ಲೂಕಿನ ಸೀಬಾರ ಸಮೀಪದ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಕಾರು ಹಾಗೂ ಲಾರಿ ನಡುವೆ ಶುಕ್ರವಾರ ನಸುಕಿನಲ್ಲಿ ಸಂಭವಿಸಿದ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಮೃತರನ್ನು ಬೆಂಗಳೂರಿನ ವೈಟ್ ಫೀಲ್ಡ್ ನಿವಾಸಿಗಳಾದ ಶಿವರಾಮ್ (45) ಹಾಗೂ ಚೇತನ್ ಕುಮಾರ್ (30) ಎಂದು ಗುರುತಿಸಲಾಗಿದೆ. ಸ್ವಾಮಿ (55) ಎಂಬುವರು ಗಂಭೀರವಾಗಿ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಗೋವಾದಿಂದ ಬೆಂಗಳೂರಿಗೆ ಮರಳುವಾಗ ಈ ಅಪಘಾತ ಸಂಭವಿಸಿದೆ ಎಂದು ಗ್ರಾಮಾಂತರ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಕಾರು ಹಾಗೂ ಲಾರಿ ದಾವಣಗೆರೆ ಕಡೆಯಿಂದ ಚಿತ್ರದುರ್ಗದ ಕಡೆಗೆ ಬರುತ್ತಿದ್ದವು. ಮುಂಭಾಗದಲ್ಲಿ ಸಾಗುತ್ತಿದ್ದ ಲಾರಿ ಪಂಚರ್ ಆಗಿ ವೇಗ ಕಡಿಮೆಯಾಗಿದೆ. ಹಿಂಬದಿಯಿಂದ ಬರುತ್ತಿದ್ದ ಇನ್ನೋವಾ ಕಾರು ಚಾಲಕರಿಗೆ ಇದು ಅರಿವಿಗೆ ಬಂದಿಲ್ಲ. ವೇಗವಾಗಿ ಬರುತ್ತಿದ್ದ ಕಾರು ಲಾರಿಗೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಅಪಘಾತದ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ ಭೇಟಿ ನೀಡಿ ಪರಿಶೀಲಿಸಿದರು.

ಅತ್ಯಾಚಾರ: ಪೊಲೀಸರ ತಳ್ಳಿ ರೌಡಿ ಪರಾರಿ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೇಪಾಳ ಮಹಿಳೆ ಮೇಲೆ ಅತ್ಯಾಚಾರ ಎಸಗಿದ್ದ ಆರೋಪದಡಿ ಬಂಧಿಸಲಾಗಿದ್ದ ರೌಡಿ ಮಹಮ್ಮದ್ ಅವೇಜ್ ಅಲಿಯಾಸ್ ಬಚ್ಚನ್ (25), ಬೌರಿಂಗ್ ಆಸ್ಪತ್ರೆ ಬಳಿ ಗುರುವಾರ ರಾತ್ರಿ ಪೊಲೀಸರನ್ನು ತಳ್ಳಿ ಪರಾರಿಯಾಗಿದ್ದಾನೆ.

'ಶ್ಯಾಂಪುರದ ನಿವಾಸಿ ಅವೇಜ್, ಕೊಲೆ ಯತ್ನ, ಸುಲಿಗೆ, ಜೀವ ಬೆದರಿಕೆ ಸೇರಿದಂತೆ 27 ಪ್ರಕರಣಗಳಲ್ಲಿ ಆರೋಪಿಯಾಗಿದ್ದಾನೆ. ಕಮರ್ಷಿಯಲ್ ಸ್ಟ್ರೀಟ್ ಠಾಣೆಯ ರೌಡಿ ಪಟ್ಟಿಯಲ್ಲಿ ಆತನ ಹೆಸರಿದೆ' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ ಗುಳೇದ್ ತಿಳಿಸಿದರು.

'ಅತ್ಯಾಚಾರ ಎಸಗಿದ್ದ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆಂದು ಸಿಬ್ಬಂದಿ ಆಸ್ಪತ್ರೆಗೆ ಕರೆದೊಯ್ದಿದ್ದರು. ಪರೀಕ್ಷೆ ಮುಗಿಸಿ ಠಾಣೆಗೆ ವಾಪಸು ಕರೆತರಲು ಜೀಪು ಹತ್ತಿಸಲಾಗುತ್ತಿತ್ತು. ಅದೇ ವೇಳೆ ರೌಡಿ ಅವೇಜ್, ಪೊಲೀಸರನ್ನು ತಳ್ಳಿ ಓಡಿ ಹೋಗಿದ್ದಾನೆ. ಬೆನ್ನಟ್ಟಿದರೂ ಆತ ಕೈಗೆ ಸಿಗಲಿಲ್ಲ' ಎಂದೂ ಹೇಳಿದರು.

'ರೌಡಿ ಪರಾರಿಯಾಗಲು ಕಾರಣವಾಗಿರುವ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಜೊತೆಗೆ, ರೌಡಿ ಪತ್ತೆಗೆ ವಿಶೇಷ ತಂಡವನ್ನೂ ರಚಿಸಲಾಗಿದೆ' ಎಂದೂ ತಿಳಿಸಿದರು.

ಹಿಡಿದು ಥಳಿಸಿದ್ದ ಜನ: 'ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ಮಾರ್ಚ್ 31ರ ಬೆಳಿಗ್ಗೆ ನೇಪಾಳದ ಮಹಿಳೆ ಮೇಲೆ ರೌಡಿ ಅವೇಜ್ ಅತ್ಯಾಚಾರ ಎಸಗಿದ್ದ. ಮಹಿಳೆ ಕೂಗಾಟ ಕೇಳಿ ರಕ್ಷಣೆಗೆ ಹೋಗಿದ್ದ ಸ್ಥಳೀಯರು, ಅವೇಜ್‌ನನ್ನು ಹಿಡಿದು ಥಳಿಸಿದ್ದರು. ನಂತರ, ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಕೈಗೆ ಒಪ್ಪಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಹಿಳೆ ಹಾಗೂ ಸ್ಥಳೀಯರ ಹೇಳಿಕೆ ಆಧರಿಸಿ ರೌಡಿ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ನಂತರ ವೈದ್ಯಕೀಯ ಪರೀಕ್ಷೆಗೆಂದು ಆತನನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅವಾಗಲೇ ಆತ ಸಿಬ್ಬಂದಿಯನ್ನು ತಳ್ಳಿ ಪರಾರಿಯಾಗಿದ್ದಾನೆ' ಎಂದೂ ತಿಳಿಸಿವೆ.

'ಗಡಿಪಾರು ಮಾಡಲಾಗಿದ್ದ ರೌಡಿ'

'ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ ರೌಡಿ ಮಹಮ್ಮದ್ ಅವೇಜ್ ಅಲಿಯಾಸ್ ಬಚ್ಚನ್‌ನನ್ನು ಒಂದು ವರ್ಷದವರೆಗೆ ಬೆಂಗಳೂರು ಜಿಲ್ಲೆಯಿಂದ ಗಡಿಪಾರು ಮಾಡಲಾಗಿತ್ತು. ಈ ಅವಧಿಯಲ್ಲೂ ರೌಡಿ ಅಪರಾಧ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ. ಈ ಬಗ್ಗೆ ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಭೀಮಾಶಂಕರ ಗುಳೇದ ಹೇಳಿದರು.

ನಿರ್ಮಾಣ ಹಂತದ ಕಟ್ಟಡದಲ್ಲಿ ಪತ್ನಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧ ಠಾಣೆ ವ್ಯಾಪ್ತಿಯ ನಿರ್ಮಾಣ ಹಂತದ ಕಟ್ಟಡವೊಂದರಲ್ಲಿ ಸಂಚಿ ಉರವ್ (36) ಎಂಬ ಮಹಿಳೆಯನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಪತಿ ಫೂಲಚಂದ್ ಉರವ್ (40) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಮೃತ ಸಂಚಿ, ಪಶ್ಚಿಮ ಬಂಗಾಳದವರು. ಕೆಲಸ ಹುಡುಕಿಕೊಂಡು ಪತಿ ಫೂಲಚಂದ್ ಜೊತೆನಗರಕ್ಕೆಬಂದಿದ್ದರು.ವಿಧಾನಸೌಧ ಸಮೀಪದ ಹೋಟೆಲೊಂದರ ಬಳಿ ಬಹುಮಹಡಿ ಕಟ್ಟಡ ನಿರ್ಮಿಸಲಾಗುತ್ತಿದ್ದು, ಅಲ್ಲಿಯೇ ದಂಪತಿ ಕಾರ್ಮಿಕರಾಗಿ ಕೆಲಸಕ್ಕೆ ಸೇರಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಟ್ಟಡದ ನೆಲಮಹಡಿಯಲ್ಲಿ ಕೊಠಡಿಗಳಿದ್ದು, ಅಲ್ಲಿಯೇ ದಂಪತಿ ಹಾಗೂ ಇತರೆ ಕಾರ್ಮಿಕರು ಉಳಿದುಕೊಂಡಿದ್ದರು. ಅಡುಗೆ ಹಾಗೂ ಇತರೆ ವಿಚಾರಗಳಿಗಾಗಿ ದಂಪತಿ ನಿತ್ಯವೂ ಜಗಳ ಮಾಡುತ್ತಿದ್ದರು. ಇದರಿಂದ ಕಿರಿಕಿರಿ ಅನುಭವಿಸಿದ್ದ ಅಕ್ಕ–ಪಕ್ಕದ ಕೊಠಡಿಗಳ ಕಾರ್ಮಿಕರು, ಮೇಲ್ವಿಚಾರಕರಿಗೆ ಮಾಹಿತಿ ನೀಡಿದ್ದರು.'

'ದಂಪತಿಗೆ ಬುದ್ಧಿವಾದ ಹೇಳಿದ್ದ ಮೇಲ್ವಿಚಾರಕ, 'ಜಗಳ ಮಾಡುವುದಾದರೆ, ಕೆಲಸ ಬಿಟ್ಟು ಹೋಗಿ' ಎಂದಿದ್ದರು. ಜಗಳ ಮಾಡುವುದಿಲ್ಲವೆಂದು ದಂಪತಿ ಭರವಸೆ ನೀಡಿದ್ದರು' ಎಂದೂ ಮೂಲಗಳು ತಿಳಿಸಿವೆ.

ಎರಡು ದಿನ ಕೊಠಡಿಯಲ್ಲಿದ್ದ ಮೃತದೇಹ: 'ಮಾರ್ಚ್ 26ರಂದು ಸಂಚಿ ಜೊತೆ ಜಗಳ ತೆಗೆದಿದ್ದ ಫೂಲಚಂದ್, ಮುಖ ಹಾಗೂ ತಲೆಗೆ ಹೊಡೆದು ಕೊಲೆ ಮಾಡಿದ್ದರು. ಮೃತದೇಹವನ್ನು ಕೊಠಡಿಯಲ್ಲಿ ಇರಿಸಿ ಪರಾರಿಯಾಗಿದ್ದರು. ಎರಡು ದಿನ ಕೊಠಡಿಯಲ್ಲೇ ಮೃತದೇಹವಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದಂಪತಿ ಕೆಲಸಕ್ಕೆ ಬಾರದಿದ್ದರಿಂದ ಅನುಮಾನಗೊಂಡಿದ್ದ ಮೇಲ್ವಿಚಾರಕ, ಮಾರ್ಚ್ 28ರಂದು ಕೊಠಡಿಗೆ ಹೋಗಿ ಪರಿಶೀಲಿಸಿದಾಗಲೇ ಮೃತದೇಹ ಕಂಡಿತ್ತು. ಫೂಲಚಂದ್ ಮೇಲೆ ಅನುಮಾನ ವ್ಯಕ್ತಪಡಿಸಿ ಠಾಣೆಗೆ ದೂರು ನೀಡಿದ್ದರು. ತಮ್ಮೂರಿಗೆ ಹೊರಡಲು ಸಜ್ಜಾಗಿದ್ದ ಆರೋಪಿಯನ್ನು ಬಂಧಿಸಲಾಯಿತು' ಎಂದೂ ತಿಳಿಸಿವೆ.

ಇಬ್ಬರು ಶಾಸಕರಿಂದ ಪಟ್ಟಂದೂರು ಕೆರೆ ಅತಿಕ್ರಮಣ

ಬೆಂಗಳೂರು: 'ಶಾಸಕರಾದ ಕೆ.ಜೆ. ಜಾರ್ಜ್ ಮತ್ತು ಅರವಿಂದ ಲಿಂಬಾವಳಿ ಅವರು ಒಳಒಪ್ಪಂದ ಮಾಡಿಕೊಂಡು, ಮಹದೇವಪುರ ವ್ಯಾಪ್ತಿಯ ಪಟ್ಟಂದೂರು ಅಗ್ರಹಾರ ಕೆರೆಯ ಬಫರ್ ವಲಯವನ್ನು ಅತಿಕ್ರಮಣ ಮಾಡುತ್ತಿದ್ದಾರೆ' ಎಂದು ಆಮ್ ಆದ್ಮಿ ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಆರೋಪಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಶಾಸಕ ಕೆ.ಜೆ.ಜಾರ್ಜ್ ಅವರ ಜಮೀನಿಗೆ ರಸ್ತೆ ನಿರ್ಮಿಸಲು ಪಟ್ಟಂದೂರು ಅಗ್ರಹಾರ ಕೆರೆಯ ಬಫರ್ ವಲಯ ಹಾಗೂ ಸಮೀಪದ ರಾಜಕಾಲುವೆಯನ್ನು ಒತ್ತುವರಿ ಮಾಡಲಾಗುತ್ತಿದೆ. ರಸ್ತೆ ನಿರ್ಮಾಣವನ್ನು ವಿರೋಧಿಸಿದ್ದ ಸ್ಥಳೀಯ ಶಾಸಕ ಅರವಿಂದ ಲಿಂಬಾವಳಿ ಅವರೇ ಈಗ ಅಕ್ರಮಕ್ಕೆ ಸಹಕಾರ ನೀಡುತ್ತಿದ್ದಾರೆ. ಇವರಿಬ್ಬರ ಸ್ವಾರ್ಥಕ್ಕೆ ಕೆರೆ ಬತ್ತಿ ಹೋಗುವ ಸಾಧ್ಯತೆಯಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ಪಟ್ಟಂದೂರು ಕೆರೆಯ ಬಫರ್ ಪ್ರದೇಶದಲ್ಲಿ ರಸ್ತೆ ನಿರ್ಮಾಣ ಯೋಜನೆ ಅಪಾಯಕಾರಿ ಎಂದು ತಜ್ಞರ ಸಮಿತಿ ಎಚ್ಚರಿಸಿದೆ. ಬಫರ್ ವಲಯ ಕೆರೆಯ ಅವಿಭಾಜ್ಯ ಅಂಗ. ಅದನ್ನು ಅತಿಕ್ರಮಿಸಿಕೊಂಡು ರಸ್ತೆ ನಿರ್ಮಿಸಿದರೆ, ಕೆರೆಗೆ ನೀರು ಬರುವುದು ಕಡಿಮೆಯಾಗಲಿದೆ' ಎಂದರು.

ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿ ಎನ್‌.ವಿ.ರಮಣ ಕಿವಿಮಾತು

'ಸಿಬಿಐ ಸ್ವತಂತ್ರ ಸಂಸ್ಥೆಯಾಗಬೇಕು'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಉಪನ್ಯಾಸ ಕಾರ್ಯಕ್ರಮ ದಲ್ಲಿ ತನಿಖಾ ಸಂಸ್ಥೆ ಅಧಿಕಾರಿಗಳಿಗೆ ಸಲಹೆ
- ಸಿಬಿಐ ಆಯೋಜಿಸಿದ್ದ ಡಿ.ಪಿ.ಕೊಹ್ಲಿ ಸ್ಮರಣಾರ್ಥ ಉಪನ್ಯಾಸ ಕಾರ್ಯಕ್ರಮ

ನವದೆಹಲಿ: 'ದೇಶದಲ್ಲಿ ಪ್ರಭುತ್ವ ಬದಲಾಗುತ್ತದೆ. ಆದರೆ ತನಿಖಾ ಸಂಸ್ಥೆಗಳು ಶಾಶ್ವತ. ಹೀಗಾಗಿ ಸಿಬಿಐ ಸ್ವತಂತ್ರ ಸಂಸ್ಥೆಯಾಗಬೇಕು' ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಸಿಬಿಐಗೆ ಕಿವಿಮಾತು ಹೇಳಿದ್ದಾರೆ.

ಸಿಬಿಐ ಇಲ್ಲಿ ಶುಕ್ರವಾರ ಆಯೋಜಿಸಿದ್ದ ಡಿ.ಪಿ.ಕೊಹ್ಲಿ ಸ್ಮರಣಾರ್ಥ ಉಪನ್ಯಾಸ ಕಾರ್ಯಕ್ರಮದಲ್ಲಿ ರಮಣ ಅವರು, 'ಪ್ರಜಾಪ್ರಭುತ್ವ: ತನಿಖಾ ಸಂಸ್ಥೆಗಳ ಪಾತ್ರ ಮತ್ತು ಹೊಣೆಗಾರಿಕೆಗಳು' ಎಂಬ ವಿಷಯದ ಬಗ್ಗೆ ಮಾತನಾಡಿದರು. ಈ ವೇಳೆ ಸ್ವತಂತ್ರ ತನಿಖಾ ಸಂಸ್ಥೆಯ ಅಗತ್ಯವನ್ನು ಒತ್ತಿ ಹೇಳಿದರು.

'ನೀವು ಯಾವುದೋ ಒಬ್ಬ ವ್ಯಕ್ತಿಗೆ ನಿಷ್ಠರಾಗಿರಬೇಕಿಲ್ಲ. ಬದಲಿಗೆ, ಸಂವಿಧಾನ ಮತ್ತು ಕಾನೂನಿಗೆ ನಿಷ್ಠರಾಗಿ ಇರಬೇಕು ಎಂಬುದನ್ನು ಮರೆಯಬಾರದು. ನೀವು ಇವೆಲ್ಲವುಗಳ ವಿರುದ್ಧ ಎದ್ದುನಿಂತರೆ, ನಿಮ್ಮನ್ನು ನಿಮ್ಮ ಶೌರ್ಯ, ಸಿದ್ಧಾಂತಗಳು ಮತ್ತು ಧೈರ್ಯದ ಹೆಸರಿನಲ್ಲಿ ನೆನಪಿನಲ್ಲಿ ಇರಿಸಿಕೊಳ್ಳಲಾಗುತ್ತದೆ' ಎಂದು ಅವರು ಹೇಳಿದ್ದಾರೆ.

> ಪೊಲೀಸರನ್ನು, ತನಿಖಾ ಸಂಸ್ಥೆಗಳನ್ನು ಪ್ರಭುತ್ವವು ದುರ್ಬಳಕೆ ಮಾಡಿಕೊಳ್ಳುವುದು ಹೊಸದೇನಲ್ಲ. ಆದರೆ ಇದರಿಂದ ಮುಕ್ತರಾಗುವ ಅಗತ್ಯವಿದೆ
>
> **ಎನ್.ವಿ.ರಮಣ**
> ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ

'ಎಲ್ಲ ತನಿಖಾ ಸಂಸ್ಥೆಗಳು ಒಂದೇ ಪ್ರಾಧಿಕಾರದಲ್ಲಿರಬೇಕು': 'ಈಗ ಒಂದೇ ಪ್ರಕರಣವನ್ನು ಹಲವು ತನಿಖಾ ಸಂಸ್ಥೆಗಳು ತನಿಖೆಗೆ ಒಳಪಡಿಸುತ್ತವೆ. ಹೀಗಾಗಿ ಸಿಬಿಐ, ಜಾರಿ ನಿರ್ದೇಶನಾಲಯ, ಗಂಭೀರ ವಂಚನೆ ತನಿಖಾ ಕಚೇರಿಯಂತಹ ಸಂಸ್ಥೆಗಳನ್ನು ಒಂದೇ ಪ್ರಾಧಿಕಾರದ ಅಡಿ ತರಬೇಕಾದ ತುರ್ತು ಅಗತ್ಯವಿದೆ. ಆಯಾ ಸಂಸ್ಥೆಗಳ ಅಧಿಕಾರ, ಕಾರ್ಯ ವ್ಯಾಪ್ತಿಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಬೇಕು' ಎಂದು ರಮಣ ಅವರು ಪ್ರತಿಪಾದಿಸಿದ್ದಾರೆ.

'ಈ ಎಲ್ಲಾ ಸಂಸ್ಥೆಗಳನ್ನು ಸ್ವತಂತ್ರ ಮತ್ತು ನಿಷ್ಪಕ್ಷಪಾತವಾದ ಪ್ರಾಧಿಕಾರವು ಮುನ್ನಡೆಸಬೇಕು. ಸಿಬಿಐ ನಿರ್ದೇಶಕರನ್ನು ನೇಮಕ ಮಾಡುವಂತಹ ಸಮಿತಿಯೇ ಇದರ ಮುಂದಾಳುವನ್ನು ನೇಮಕ ಮಾಡಬೇಕು. ತನಿಖಾ ಸಂಸ್ಥೆಗಳು ಕಿರುಕುಳದ ಸಾಧನಗಳಾಗಿವೆ ಎಂಬ ಆರೋಪನ್ನು ಈ ವ್ಯವಸ್ಥೆ ಹೋಗಲಾಡಿಸುತ್ತದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಕೆರೆಗೆ ಕೊಳಚೆ ನೀರು: ಮೀನುಗಳ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಪಿ.ನಗರ ಬಡಾವಣೆಯ ಕೊತ್ತನೂರು ಕೆರೆಗೆ ಒಳಚರಂಡಿಯ ಕೊಳಚೆ ನೀರು ಸೇರಿಕೊಂಡಿದೆ. ಎರಡು ದಿನಗಳಿಂದ ಈ ಕೆರೆ ಮೀನುಗಳು ಏಕಾಏಕಿ ಸಾಯುತ್ತಿವೆ. ಶುಕ್ರವಾರ ಭಾರಿ ಪ್ರಮಾಣದಲ್ಲಿ ಮೀನುಗಳು ಸತ್ತಿರುವುದು ಸ್ಥಳೀಯರ ಆತಂಕಕ್ಕೆ ಕಾರಣವಾಗಿದೆ.

'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ 2010ರಲ್ಲೇ ಈ ಕೆರೆಯನ್ನು ಅಭಿವೃದ್ಧಿಪಡಿಸಿದೆ. ಈ ಕೆರೆಗೆ ಒಳಚರಂಡಿ ಕೊಳಚೆ ನೀರು ನೇರವಾಗಿ ಸೇರುತ್ತಿರಲಿಲ್ಲ. ಈ ಬಡಾವಣೆಯ ಕೆಲವು ಕಡೆ ಇತ್ತೀಚೆಗೆ ಒಳಚರಂಡಿ ಕೊಳವೆ ಕಟ್ಟಿಕೊಂಡಿ ಸಮಸ್ಯೆ ಎದುರಾಗಿತ್ತು. ಆಗ ರಾಜಕಾಲುವೆ ಮೂಲಕ ಕೊಳಚೆ ನೀರನ್ನು ಕೊತ್ತನೂರು ಕೆರೆಗೆ ಹರಿಸಿರುವ ಸಂದೇಹವೂ ಇದೆ. 45 ದಿನಗಳಲ್ಲಿ ಮೂರನೇ ಸಲ ಇಂಥಹ ಪ್ರಕರಣ ನಡೆದಿದೆ' ಎಂದು ಕೊತ್ತನೂರು ಕೆರೆ ಅಭಿವೃದ್ಧಿ ಸಂಘದ ಶಿವಶಂಕರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಉತ್ತಮ ಪರಿಸರ ವ್ಯವಸ್ಥೆಯನ್ನು ಹೊಂದಿದ್ದ ಕೆರೆ ಇದು. ಸಾಕಷ್ಟು ಮೀನುಗಳಿವೆ. ಹಕ್ಕಿಗಳ ಕಲರವ ಇಲ್ಲಿ ಸಾಮಾನ್ಯ. ಆದರೆ, ಕೊಳಚೆ ನೀರು ಸೇರಿದ ಬಳಿಕ ಕೆರೆಯಲ್ಲಿದ್ದ 12ಕ್ಕೂ ಅಧಿಕ ಪ್ರಭೇದಗಳ ನೂರಾರು ಮೀನುಗಳು ಸತ್ತಿವೆ. ಕೊಳಚೆ ನೀರು ಈ ಜಲಕಾಯವನ್ನು ಸೇರದಂತೆ ತಡೆಯಲು ಬಿಬಿಎಂಪಿ ಹಾಗೂ ಜಲಮಂಡಳಿ ಅಧಿಕಾರಿಗಳು ಕಟ್ಟೆಚ್ಚರ ವಹಿಸಬೇಕು' ಎಂದು ಅವರು ಒತ್ತಾಯಿಸಿದರು.

ಆ್ಯಕ್ಷನ್ ಏಯ್ಡ್ ಸಂಸ್ಥೆಯ ಕಾರ್ಯಕ್ರಮ ವ್ಯವಸ್ಥಾಪಕ ಹಾಗೂ ಕೆರೆ ಸಂರಕ್ಷಣಾ ಹೋರಾಟಗಾರ ರಾಘವೇಂದ್ರ ಬಿ.ಪಚ್ಚಾಪುರ, 'ಉತ್ತಮ ಸ್ಥಿತಿಯಲ್ಲಿದ್ದ ಈ ಕೆರೆಯ ನೀರಿನಲ್ಲಿ ಆಮ್ಲಜನಕ ಮಟ್ಟ ಇತ್ತೀಚೆಗೆ ತೀರಾ ಕಡಿಮೆ ಆಗಿದ್ದು, ಮೀನುಗಳು ಉಸಿರಾಡಲು ಸಮಸ್ಯೆ ಎದುರಿಸುತ್ತಿವೆ. ಮೀನುಗಳ ಸಾವಿನಿಂದ ಆಹಾರದ ಸರಪಣಿಯೂ ಅಸ್ತವ್ಯಸ್ತಗೊಳ್ಳಲಿದೆ. ಕೆರೆಯ ಪರಿಸರ ವ್ಯವಸ್ಥೆ ನಾಶವಾಗಲಿದೆ' ಎಂದು ಎಚ್ಚರಿಸಿದರು.

'ಮಾ.8ರಂದು ಮೊದಲ ಸಲ ಕೊಳಚೆ ನೀರು ಕೆರೆಯ ಒಡಲು ಸೇರಿತು. ಅದನ್ನು ತಕ್ಷಣ ನಿಲ್ಲಿಸುವುದಕ್ಕೆ ಜಲಮಂಡಳಿ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಆ ನಂತರ ಪದೇ ಪದೇ ಭಾರಿ ಪ್ರಮಾಣದಲ್ಲಿ ಕೊಳಚೆ ನೀರು ಸೇರಿದ್ದರಿಂದ ಕೆರೆಯಂಗಳ ಸಂಪೂರ್ಣ ಕಲುಷಿತಗೊಂಡಿದೆ. ಒಳಚರಂಡಿ ಕೊಳವೆ ಕಟ್ಟಿಕೊಳ್ಳುವಂತಹ ಪರಿಸ್ಥಿತಿಯನ್ನು ಜಲಮಂಡಳಿ ಅಧಿಕಾರಿಗಳು ಸೂಕ್ಷ್ಮವಾಗಿ ನಿರ್ವಹಿಸಬೇಕು. ಕೆರೆಗೆ ಇನ್ನು ಮುಂದೆಯೂ ಕೊಳಚೆ ನೀರು ಸೇರುವ ಅಪಾಯ ಇದೆ. ಅದನ್ನು ತಡೆಯಲು ಪ್ರತ್ಯೇಕ ಕಾಲುವೆ ವ್ಯವಸ್ಥೆ ಕಲ್ಪಿಸಬೇಕು' ಎಂದು ಅವರು ಸಲಹೆ ನೀಡಿದರು.

'ಈ ಪರಿಸರದಲ್ಲಿ ಕೊಳಚೆ ನೀರು ಕೆರೆ ಒಡಲು ಸೇರಿದ್ದು ನಿಜ. ಕೊಳಚೆ ನೀರನ್ನು ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ.' ಎಂದು ಜಲಮಂಡಳಿಯ ಎಂಜಿನಿಯರ್ ಒಬ್ಬರು ಪ್ರತಿಕ್ರಿಯಿಸಿದರು.

ಕೊತ್ತನೂರು ಕೆರೆಯಲ್ಲಿ ಮೀನುಗಳು ಸತ್ತಿರುವುದು

18 ಎಕರೆ ವಿಸ್ತೀರ್ಣದ ಕೆರೆ

ಜೆ.ಪಿ.ನಗರ ಬಡಾವಣೆಯ ಏಳನೇ ಹಂತ ಹಾಗೂ ಎಂಟನೇ ಹಂತದಲ್ಲಿ ಇರುವ ಏಕೈಕ ಕೆರೆ ಇದು. ಇದರ ಸುತ್ತಳತೆ ಸುಮಾರು 1.3 ಕಿ.ಮೀಗಳಷ್ಟಿದೆ. ಕಂದಾಯ ಇಲಾಖೆಯ ದಾಖಲಾತಿಗಳ ಪ್ರಕಾರ ಈ ಕೆರೆ 32 ಎಕರೆಗೂ ಹೆಚ್ಚು ವಿಸ್ತೀರ್ಣ ಹೊಂದಿದೆ. ಬಹಳಷ್ಟು ಪ್ರದೇಶ ಒತ್ತುವರಿ ಆಗಿದೆ. ಈಗ 18 ಎಕರೆ 36 ಗುಂಟೆಗಳಷ್ಟು ಪ್ರದೇಶದಲ್ಲಿ ಮಾತ್ರ ಕೆರೆ ವ್ಯಾಪಿಸಿದೆ ಎನ್ನುತ್ತಾರೆ ಸ್ಥಳೀಯರು.

ತೆರಿಗೆ ದರ ಪರಿಷ್ಕರಣೆ, ವಂಚನೆ ತಡೆಯಲು ಹಲವು ಕ್ರಮ

₹ 1.42 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಮಾರ್ಚ್ ತಿಂಗಳಿನಲ್ಲಿ ₹ 1.42 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಜಿಎಸ್‌ಟಿ ವ್ಯವಸ್ಥೆಯಡಿ ಈವರೆಗೆ ಸಂಗ್ರಹ ಆಗಿರುವುದರಲ್ಲೇ ಅತ್ಯಂತ ಗರಿಷ್ಠ ಮೊತ್ತ ಇದಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಶುಕ್ರವಾರ ತಿಳಿಸಿದೆ.

ಈ ಮೊದಲು 2022ರ ಜನವರಿಯಲ್ಲಿ ₹ 1.40 ಲಕ್ಷ ಕೋಟಿಗಳಷ್ಟು ಗರಿಷ್ಠ ವರಮಾನ ಸಂಗ್ರಹ ಆಗಿತ್ತು. ಫೆಬ್ರುವರಿಯಲ್ಲಿ ₹ 1.33 ಲಕ್ಷ ಕೋಟಿ ಸಂಗ್ರಹ ಆಗಿತ್ತು. ಇದಕ್ಕೆ ಹೋಲಿಸಿದರೆ ಮಾರ್ಚ್‌ನಲ್ಲಿ ಶೇ 15ರಷ್ಟು ಹೆಚ್ಚು ಸಂಗ್ರಹ ಆದಂತಾಗಿದೆ.

ತೆರಿಗೆ ದರದಲ್ಲಿ ಪರಿಷ್ಕರಣೆ ಮತ್ತು ತೆರಿಗೆ ವಂಚನೆ ತಡೆಯುವ ನಿಟ್ಟಿನಲ್ಲಿ ತೆಗೆದುಕೊಂಡಿರುವ ಕ್ರಮಗಳಿಂದಾಗಿ ಸಾರ್ವಕಾಲಿಕ ಗರಿಷ್ಠ ಮಟ್ಟದ ವರಮಾನ ಸಂಗ್ರಹ ಆಗಿದೆ ಎಂದು ಸಚಿವಾಲಯವು ಹೇಳಿದೆ.

ಮಾರ್ಚ್‌ನಲ್ಲಿ ಸಂಗ್ರಹ ಆಗಿರುವ ಒಟ್ಟಾರೆ ತೆರಿಗೆಯಲ್ಲಿ ಸಿಜಿಎಸ್‌ಟಿ ₹ 25,830 ಕೋಟಿ, ಎಸ್‌ಜಿಎಸ್‌ಟಿ ₹ 32,378 ಕೋಟಿ, ಐಜಿಎಸ್‌ಟಿ ₹ 74,470 ಕೋಟಿ ಹಾಗೂ ಸೆಸ್ ₹ 9,417 ಕೋಟಿ ಒಳಗೊಂಡಿದೆ.

ವಾರ್ಷಿಕವಾಗಿ ₹ 20 ಕೋಟಿಗೂ ಹೆಚ್ಚಿನ ವಹಿವಾಟು ನಡೆಸುವವರು ಸಹ ಇ–ಇನ್‌ವಾಯ್ಸ್ ಪಡೆಯುವುದನ್ನು ಕಡ್ಡಾಯ ಮಾಡಲಾಗಿದೆ. ಹೀಗಾಗಿ ಮುಂಬರುವ ತಿಂಗಳುಗಳಲ್ಲಿ ತೆರಿಗೆ ಸಂಗ್ರಹವು ಇನ್ನಷ್ಟು ಹೆಚ್ಚಾಗಲಿದೆ ಎಂದು ಎನ್‌ಎ ಶಾ ಅಸೋಸಿಯೇಟ್ಸ್‌ನ ಪಾಲುದಾರ ಪರಾಗ್ ಮೆಹ್ತಾ ಹೇಳಿದ್ದಾರೆ.

ಎಲ್‌ಪಿಜಿ, ಸಿಎನ್‌ಜಿ, ಎಟಿಎಫ್ ದರ ಹೆಚ್ಚಳ

ವಾಣಿಜ್ಯ ಬಳಕೆಯ ಅಡುಗೆ ಅನಿಲದ ದರವನ್ನು ಪ್ರತಿ ಸಿಲಿಂಡರ್‌ಗೆ ಶುಕ್ರವಾರ ₹ 250ರಷ್ಟು ಹೆಚ್ಚಳ ಮಾಡಲಾಗಿದೆ. ಇದರಿಂದಾಗಿ ವಾಣಿಜ್ಯ ಬಳಕೆಯ 19 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆಯು ಬೆಂಗಳೂರಿನಲ್ಲಿ ₹ 2,325ಕ್ಕೆ ಏರಿಕೆ ಆಗಿದೆ ಎಂದು ಮೂಲಗಳು ತಿಳಿಸಿವೆ.

ಮನೆಗಳಲ್ಲಿ ಬಳಸುವ ಎಲ್‌ಪಿಜಿ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಸದ್ಯ 14.2 ಕೆ.ಜಿ. ತೂಕದ ಸಿಲಿಂಡರ್ ದರವು ಬೆಂಗಳೂರಿನಲ್ಲಿ ₹ 952 ಇದೆ. ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಶುಕ್ರವಾರ ಪೆಟ್ರೋಲ್, ಡೀಸೆಲ್ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ಎಟಿಎಫ್ ದರ ಏರಿಕೆ: ವಿಮಾನ ಇಂಧನ (ಜೆಟ್ ಇಂಧನ) ದರವನ್ನು ಶುಕ್ರವಾರ ಪ್ರತಿ ಕಿಲೋ ಲೀಟರಿಗೆ ₹ 2,258.54ರಷ್ಟು (ಶೇ 2 ಹೆಚ್ಚಳ ಮಾಡಲಾಗಿದೆ. ದೆಹಲಿಯಲ್ಲಿ ಪ್ರತಿ ಕಿಲೋ ಲೀಟರಿಗೆ ₹ 1.12 ಲಕ್ಷಕ್ಕೆ ಏರಿಕೆ ಆಗಿದೆ. (ಒಂದು ಕಿಲೋ ಲೀಟರ್ ಎಂದರೆ ಒಂದು ಸಾವಿರ ಲೀಟರ್).

ಜನವರಿ 1 ರಿಂದ ಈವರೆಗೆ ಏಳನೇ ಬಾರಿಗೆ ದರ ಹೆಚ್ಚಳ ಮಾಡಿದ್ದು, ಪ್ರತಿ ಕಿಲೋ ಲೀಟರಿಗೆ ₹ 38,902.92ರಷ್ಟು ಹೆಚ್ಚಾಗಿದೆ.

ಸಿಎನ್‌ಜಿ ದರ ಪ್ರತಿ ಕೆ.ಜಿಗೆ 80 ಪೈಸೆ ಹೆಚ್ಚಿಸಲಾಗಿದೆ. ಒಂದು ತಿಂಗಳಿನಲ್ಲಿ ಸಿಎನ್‌ಜಿ ದರ ₹ 4ರಷ್ಟು ಹೆಚ್ಚಾಗಿದೆ.

ಪಿಎನ್‌ಜಿ ದರ ಪ್ರತಿ ಕ್ಯೂಬಿಕ್ ಕ್ಯುಬಿಕ್ ಮೀಟರ್‌ಗೆ ₹ 5ರಷ್ಟು ಹೆಚ್ಚಿಸಲಾಗಿದೆ.

'ವಿದ್ಯುತ್ ಪರಿವರ್ತಕ ಅವಘಡ: ಖಾಸಗಿ ಏಜೆನ್ಸಿ ಹೊಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮಂಗನಹಳ್ಳಿಯಲ್ಲಿ ಇತ್ತೀಚೆಗೆ ನಡೆದ ವಿದ್ಯುತ್ ಪರಿವರ್ತಕ ಸ್ಫೋಟ ಪ್ರಕರಣದಲ್ಲಿ ಬೆಸ್ಕಾಂ ಅಧಿಕಾರಿಗಳು, ಸಿಬ್ಬಂದಿ ತಪ್ಪು ಮಾಡಿಲ್ಲ. ಸಹಾಯವಾಣಿ ಸಿಬ್ಬಂದಿ ಸಕಾಲಕ್ಕೆ ಮಾಹಿತಿ ನೀಡದಿರುವುದರಿಂದ ಈ ದುರಂತ ಸಂಭವಿಸಿದೆ ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ ತಿಳಿಸಿದೆ.

ಕೆಂಗೇರಿ–4ನೇ ಉಪವಿಭಾಗದಲ್ಲಿ ವಿದ್ಯುತ್ ಪರಿವರ್ತಕ ಸ್ಫೋಟಗೊಳ್ಳುವ ಮುನ್ನವೇ ಸಾರ್ವಜನಿಕರು '1912' ಸಂಖ್ಯೆಯ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ಆದರೆ, ಸಹಾಯವಾಣಿಯಲ್ಲಿನ ಸಿಬ್ಬಂದಿ ಕೆಂಗೇರಿ 4ನೇ ಉಪವಿಭಾಗದ ಯಾವುದೇ ಅಧಿಕಾರಿ ಅಥವಾ ಸಿಬ್ಬಂದಿಗೆ ಸಕಾಲದಲ್ಲಿ ಮಾಹಿತಿ ನೀಡಿಲ್ಲ. ಈ ಅವಘಡ ಸಂಭವಿಸಿದ ನಂತರ, ಸಹಾಯವಾಣಿ ಸಿಬ್ಬಂದಿಗಳಿಗೆ ದೂರವಾಣಿ ಮೂಲಕ ಸಂದೇಶ ರವಾನೆಯಾಗಿರುವುದು ತಿಳಿದು ಬಂದಿದೆ ಎಂದು ಸಂಘದ ಕಾರ್ಯದರ್ಶಿ ಎಸ್. ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಸ್ಕಾಂ 1912 ಸಂಖ್ಯೆಯ ಸಹಾಯವಾಣಿಯನ್ನು ಶೇ 95ರಷ್ಟು ಖಾಸಗಿ ಏಜೆನ್ಸಿಯ ಸಿಬ್ಬಂದಿಯೇ ನಿರ್ವಹಿಸುತ್ತಿದ್ದಾರೆ. ಈಗ ಒಂದು ತಿಂಗಳ ಹಿಂದೆಯಷ್ಟೇ ಹೊಸ ಏಜೆನ್ಸಿಯನ್ನು ಟೆಂಡರ್ ಪಡೆದಿದೆ. ಆದರೆ, ಸಿಬ್ಬಂದಿಗೆ ಸರಿಯಾದ ತರಬೇತಿ ಇಲ್ಲದಿರುವುದು ಸಹ ಕಂಡು ಬಂದಿದೆ. ಹೀಗಾಗಿ, ಅವಘಡಕ್ಕೆ ಇವರ ವೈಫಲ್ಯವೇ ಮುಖ್ಯ ಕಾರಣವಾಗಿದೆ. ಈ ಬಗ್ಗೆ ಸಮರ್ಪಕ ತನಿಖೆ ಮಾಡಿ ಬೆಸ್ಕಾಂ ವತಿಯಿಂದ ನೀಡಿರುವ ₹20 ಲಕ್ಷ ಪರಿಹಾರದ ಮೊತ್ತವನ್ನು ಖಾಸಗಿ ಏಜೆನ್ಸಿಯಿಂದ ವಸೂಲಿ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಬೆಸ್ಕಾಂ ಎಂ.ಡಿ ಹಾಜರಿಗೆ ಆದೇಶ

ಬೆಂಗಳೂರು: ಇತ್ತೀಚೆಗಷ್ಟೇ ನಗರದ ಮಲ್ಲತ್ತಹಳ್ಳಿಯಲ್ಲಿ ಟ್ರಾನ್ಸ್‌ಫಾರ್ಮರ್ ಸ್ಫೋಟಗೊಂಡು ಇಬ್ಬರು ಮೃತಪಟ್ಟ ವಿಚಾರ ಗುರುವಾರ ಹೈಕೋರ್ಟ್‌ನಲ್ಲಿ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠದಲ್ಲಿ ವಿಚಾರಣೆ ವೇಳೆ ಪ್ರತಿಧ್ವನಿಸಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪಾದಚಾರಿ ಮಾರ್ಗಗಳ ಮೇಲೆ ಅಳವಡಿಸಲಾಗಿರುವ ಟ್ರಾನ್ಸ್‌ಫಾರ್ಮರ್ ಸ್ಥಳಾಂತರ ಕಾಮಗಾರಿ ವಿಳಂಬವಾಗುತ್ತಿರುವುದಕ್ಕೆ ಕಿಡಿ ಕಾರಿದ ನ್ಯಾಯಪೀಠ, 'ಈ ಬಗ್ಗೆ ವಿವರಣೆ ನೀಡಲು ಬೆಸ್ಕಾಂ (ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ) ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ನ್ಯಾಯಾಲಯಕ್ಕೆ ಖುದ್ದು ಹಾಜರಾಗಬೇಕು' ಎಂಬ ಖಡಕ್ ಆದೇಶ ನೀಡಿದೆ.

ಭಕ್ತರು, ಸ್ಥಳೀಯರ ಘರ್ಷಣೆಯಿಂದ ಪ್ರಕ್ಷುಬ್ಧಗೊಂಡಿದ್ದ ಶ್ರೀಕ್ಷೇತ್ರ

ಸಹಜ ಸ್ಥಿತಿಯತ್ತ ಶ್ರೀಶೈಲ

ಪ್ರಜಾವಾಣಿ ವಾರ್ತೆ

ಶ್ರೀಶೈಲದಲ್ಲಿ ಶುಕ್ರವಾರ ವಹಿವಾಟು ನಿರಾತಂಕವಾಗಿ ಸಾಗಿತು

ರಾಯಚೂರು/ ಕಲಬುರಗಿ: ಕರ್ನಾಟಕದ ಭಕ್ತರು ಹಾಗೂ ಸ್ಥಳೀಯ ವರ್ತಕರ ನಡುವಿನ ಘರ್ಷಣೆಯಿಂದಾಗಿ ಪ್ರಕ್ಷುಬ್ಧಗೊಂಡಿದ್ದ ಆಂಧ್ರಪ್ರದೇಶದ ಸುಕ್ಷೇತ್ರ ಶ್ರೀಶೈಲದಲ್ಲಿ ಶುಕ್ರವಾರ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಿದೆ. ನಿಷೇಧಾಜ್ಞೆ ತೆರವುಗೊಳಿಸಲಾಗಿದೆ.

'ರಥಬೀದಿ ಸೇರಿದಂತೆ ದೇವಸ್ಥಾನದ ಸುತ್ತಮುತ್ತಲೂ ವ್ಯಾಪಾರಿಗಳು ಮಳಿಗೆಗಳನ್ನು ತೆರೆದಿದ್ದಾರೆ. ಪೂಜಾ ಸಾಮಗ್ರಿಗಳ ಮಾರಾಟ, ದೇವರ ದರ್ಶನ, ಅನ್ನದಾಸೋಹ ಸೇವೆ ಸುಗಮವಾಗಿ ನಡೆಯುತ್ತಿವೆ. ವಿವಿಧ ರಾಜ್ಯಗಳಿಂದ ಭಕ್ತರು ಬರುತ್ತಿದ್ದು, ಪ್ರತಿವರ್ಷ ಯುಗಾದಿ ದಿನ ಕಾಣುತ್ತಿದ್ದ ಜನದಟ್ಟಣೆ ಈ ವರ್ಷವೂ ಇದೆ' ಎಂದು ಪಂಚಾಚಾರ್ಯ ಮಠದ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದರು.

ಗಾಯಾಳು ಚೇತರಿಕೆ: 'ಬುಧವಾರ ನಡೆದಿದ್ದ ಘರ್ಷಣೆಯಲ್ಲಿ ಗಾಯಗೊಂಡಿದ್ದ ಬಾಗಲಕೋಟೆ ಜಿಲ್ಲೆಯ ಯುವಕನಿಗೆ ಕರ್ನೂಲ್ ಆಸ್ಪತ್ರೆಯ ಐಸಿಯು ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಬಹುತೇಕ ಚೇತರಿಸಿಕೊಂಡಿದ್ದಾನೆ' ಎಂದು ಅಧಿಕಾರಿಗಳು ಹೇಳಿದ್ದಾರೆ. ಕ್ಷೇತ್ರದಲ್ಲಿ ಈಗ ಪರಿಸ್ಥಿತಿ ಶಾಂತವಾಗಿದೆ. ಜಾತ್ರೆಯಲ್ಲಿ ವಹಿವಾಟು ನಿರಾತಂಕವಾಗಿ ಸಾಗಿದೆ.' ಎಂದು ಕಲಬುರಗಿ ಮತ್ತು ಶ್ರೀಶೈಲ ಸುಲಫಲ ಮಠದ ಡಾ.ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಮಹಾ ರಥೋತ್ಸವ ಇಂದು: ಯುಗಾದಿ ಪಾಡ್ಯದ ದಿನವಾದ ಏ. 2ರ ಸಂಜೆ 6ಕ್ಕೆ ಶ್ರೀಶೈಲ ಮಲ್ಲಿಕಾರ್ಜುನಸ್ವಾಮಿ ಮಹಾರಥೋತ್ಸವ ನಡೆಯಲಿದೆ.

ಹಲಾಲ್ ವಿವಾದ: ಬಜರಂಗ ದಳದ 7 ಸದಸ್ಯರ ಬಂಧನ

ಭದ್ರಾವತಿ: ಹಲಾಲ್ ಮಾಂಸ ಖರೀದಿಸದಂತೆ ಮುಸ್ಲಿಮರ ಅಂಗಡಿಗಳ ಮುಂದೆ ಅಪಪ್ರಚಾರ ನಡೆಸಿದ್ದಲ್ಲದೇ, ಹಲ್ಲೆ ನಡೆಸಿದ ಆರೋಪದಡಿ ಭದ್ರಾವತಿ ಹಳೇ ನಗರ ಪೊಲೀಸರು ಬಜರಂಗದಳದ 7 ಕಾರ್ಯಕರ್ತರನ್ನು ಬಂಧಿಸಿ, ಎಲ್ಲರನ್ನೂ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಬಿ.ಎಚ್ ರಸ್ತೆಯ ಖಾಸಗಿ ಹೋಟೆಲ್ ಬಳಿ, 'ಹಲಾಲ್ ಹೆಸರಿನಲ್ಲಿ ನಡೆಯುವ ಆಹಾರ ಸೇವಿಸಬೇಡಿ' ಎಂದು ಬುಧವಾರ ಪ್ರಚಾರ ನಡೆಸಿದ್ದರು. 'ಬಜರಂಗದಳದ ಕಾರ್ಯಕರ್ತರಾದ ವಡಿವೇಲು, ಸವಾಯ್, ವೆಂಕಟೇಶ, ಗುಂಡಪ್ಪ, ಶ್ರೀಕಾಂತ್, ಸಂಜು, ಮಂಜು, ಲೋಕೇಶ್ ಅವರ ವಿರುದ್ಧ ಮುಸಲ್ಮಾನರ ಅಂಗಡಿ ಮುಂದೆ ಗಲಾಟೆ ಮಾಡಿದ್ದರು. ಹಲ್ಲೆ ನಡೆದಿಲ್ಲ. ಎಲ್ಲರನ್ನೂ ಬಂಧಿಸಿ, ಬಿಡುಗಡೆ ಮಾಡಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಂ. ಲಕ್ಷ್ಮೀಪ್ರಸಾದ್ ಹೇಳಿದರು.

ಸೋಮಣ್ಣ ವಿರುದ್ಧ ಪ್ರಕರಣ: ತಡೆಗೆ ನಕಾರ

ಪ್ರಜಾವಾಣಿ ವಾರ್ತೆ

ವಿ. ಸೋಮಣ್ಣ

ಬೆಂಗಳೂರು: 'ಆದಾಯ ಮೀರಿದ ಆಸ್ತಿ ಗಳಿಕೆ ಮತ್ತು ಭ್ರಷ್ಟಾಚಾರ ನಡೆಸಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿ ಕ್ರಿಮಿನಲ್ ಪ್ರಕರಣದ ಆರೋಪ ಎದುರಿಸುತ್ತಿರುವ ವಸತಿ ಸಚಿವ ವಿ. ಸೋಮಣ್ಣ ಅವರ ವಿರುದ್ಧ ಜನಪ್ರತಿನಿಧಿಗಳ ಕೋರ್ಟ್ ವಿಚಾರಣೆಗೆ ಮಧ್ಯಂತರ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

ಈ ಕುರಿತಂತೆ ಸೋಮಣ್ಣ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ವಿಚಾರಣಾ ಕೋರ್ಟ್‌ಗೆ ಹಾಜರಾತಿಯಿಂದ ವಿನಾಯಿತಿ ಕೋರಿದ್ದ ಅರ್ಜಿದಾರರ ಮನವಿಗೆ ನ್ಯಾಯಪೀಠ, 'ಅರ್ಜಿದಾರರ ಮನವಿಯನ್ನು ಸಕಾರಣಗಳ ಆಧಾರದಲ್ಲಿ ಪರಿಗಣಿಸಿ' ಎಂದು ಜನಪ್ರತಿನಿಧಿಗಳ ಕೋರ್ಟ್‌ಗೆ ಸೂಚಿಸಿದೆ. ಬೇಸಿಗೆ ರಜೆ ನಂತರಕ್ಕೆ ವಿಚಾರಣೆ ಮುಂದೂಡಲಾಗಿದೆ.

ಅರ್ಜಿ ವಜಾ: 'ಜನಪ್ರತಿನಿಧಿಗಳ ವಿಶೇಷ ಕೋರ್ಟ್ ನನಗೆ ಸಮನ್ಸ್ ಜಾರಿ ಮಾಡಿರುವ ಕಾರಣ ಪೊಲೀಸರಿಂದ ಬಂಧನದ ಭೀತಿ ಇದೆ' ಎಂದು ಸೋಮಣ್ಣ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ'ದ ನ್ಯಾಯಾಧೀಶ ಬಿ. ಜಯಂತ್ ಕುಮಾರ್ (ಸಿಸಿಎಚ್-91) ಶುಕ್ರವಾರ ನಿರಾಕರಿಸಿದ್ದಾರೆ.

'ಬಂಧನದ ಭೀತಿ ಇದ್ದರೆ ಮಾತ್ರವೇ ನಿರೀಕ್ಷಣಾ ಜಾಮೀನು ಕೋರಬಹುದು. ಈ ಪ್ರಕರಣದಲ್ಲಿ ಬಂಧನದ ಭೀತಿ ಪ್ರಮೇಯ ಉದ್ಭವಿಸದು. ಆದ್ದರಿಂದ, ಅರ್ಜಿ ಮಾನ್ಯ ಮಾಡಲಾಗದು' ಎಂದು ನ್ಯಾಯಾಧೀಶ ಜಯಂತ್ ಅರ್ಜಿ ವಜಾ ಮಾಡಿದ್ದಾರೆ.

ಮೊದಲಪಾಳ್ಯದ ರಾಮಕೃಷ್ಣ ಸಲ್ಲಿಸಿರುವ ಖಾಸಗಿ ದೂರಿನ ಆಧಾರದಲ್ಲಿ ನ್ಯಾಯಾಧೀಶ ಜಯಂತ್ ಅವರು ಸೋಮಣ್ಣ ಅವರಿಗೆ ಖುದ್ದು ಕೋರ್ಟ್‌ಗೆ ಹಾಜರಾಗುವಂತೆ ಸಮನ್ಸ್ ಜಾರಿಗೊಳಿಸಿದ್ದಾರೆ. ಇದೇ 16ರಂದು ಸೋಮಣ್ಣ ಕೋರ್ಟ್‌ಗೆ ಖುದ್ದು ಹಾಜರಾಗಬೇಕಿದೆ.

ದೂರು: 'ಸೋಮಣ್ಣ ಸಾರ್ವಜನಿಕ ಸೇವಕರಾಗಿ ಅಕ್ರಮ ಸಂಪಾದನೆ ಮಾಡುವ ಮೂಲಕ ಕ್ರಿಮಿನಲ್ ದುರ್ನಡತೆ ತೋರಿದ್ದಾರೆ. ಇವರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ- 1988ರ ಕಲಂ 13(1)(ಬಿ) (ಡಿ) ಮತ್ತು (ಇ) ಕಲಂ 13(2)ರ ಅಡಿ ಪ್ರಕರಣ ದಾಖಲಿಸಲು ಆದೇಶಿಸಬೇಕು' ಎಂಬುದು ದೂರುದಾರರ ಕೋರಿಕೆ. ದೂರುದಾರರ ಪರ ಹೈಕೋರ್ಟ್ ವಕೀಲ ಬ್ಯಾತ ಎನ್. ಜಗದೀಶ್ ವಾದ ಮಂಡಿಸಿದರು.

ಎಡಿಜಿಪಿ ಭಾಸ್ಕರ್ ರಾವ್ ರಾಜೀನಾಮೆ ಅಂಗೀಕಾರ

ಭಾಸ್ಕರ್ ರಾವ್

ಬೆಂಗಳೂರು: ರೈಲ್ವೆ ಪೊಲೀಸ್ ಎಡಿಜಿಪಿ ಬಿ. ಭಾಸ್ಕರ್ ರಾವ್ ಅವರ ರಾಜೀನಾಮೆಯನ್ನು ಸರ್ಕಾರ ಅಂಗೀಕರಿಸಿದೆ.

'ವೈಯಕ್ತಿಕ ಕಾರಣದಿಂದ ರಾಜೀನಾಮೆ ನೀಡುತ್ತಿದ್ದೇನೆ. ನನ್ನ ಮನವಿ ಅಂಗೀಕರಿಸಿ' ಎಂದು ಭಾಸ್ಕರ್ ರಾವ್ ಅವರು ಸರ್ಕಾರಕ್ಕೆ 2021ರ ಸೆಪ್ಟೆಂಬರ್‌ನಲ್ಲಿ ಪತ್ರ ನೀಡಿದ್ದರು. ಪತ್ರ ಪರಿಶೀಲಿಸಿರುವ ಮುಖ್ಯ ಕಾರ್ಯದರ್ಶಿ ರಾಜೀನಾಮೆ ಅಂಗೀಕರಿಸಿದ್ದಾರೆ. ಶನಿವಾರ ಕರ್ತವ್ಯಕ್ಕೆ ಹಾಜರಾಗಲಿರುವ ಭಾಸ್ಕರ್ ರಾವ್, ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿ ಸೇವೆಯಿಂದ ನಿರ್ಗಮಿಸಲಿದ್ದಾರೆ.

'ಪ್ರಜಾವಾಣಿ' ಜೊತೆ ಮಾತನಾಡಿದ ಭಾಸ್ಕರ್ ರಾವ್, 'ರಾಜೀನಾಮೆ ಅಂಗೀಕಾರ ಆಗಿದೆ. ಮುಂದೆ ಏನು ಮಾಡಬೇಕು ಎಂಬುದರ ಬಗ್ಗೆ ಕೆಲದಿನ ಬಿಟ್ಟು ತಿಳಿಸುತ್ತೇನೆ' ಎಂದರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net Facebook LIVE

ಫೇಸ್‌ಬುಕ್‌ನಲ್ಲಿ ನೇರಪ್ರಸಾರ

ಇಂದು

ಸಂಗೀತ-ಸಂವಾದ

ಸೆಲೆಬ್ರಿಟಿ LIVE

ಗಾಯಕಿ ಸಂಗೀತಾ ಕಟ್ಟಿ

ಬೆಳಿಗ್ಗೆ 11 ರಿಂದ 12

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: **ಪ್ರಚಲಿತ:** ಬೆಳಿಗ್ಗೆ 9

ಸಂಪಾದಕೀಯ: ಬೆಳಿಗ್ಗೆ 9.30

ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಹೋಟೆಲ್ ಆಹಾರ ದರ ಹೆಚ್ಚಳ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರ ಏರಿಕೆ ಕಂಡಿರುವ ಪರಿಣಾಮ ಶೀಘ್ರದಲ್ಲೇ ರಾಜ್ಯದಾದ್ಯಂತ ಹೋಟೆಲ್‌ಗಳಲ್ಲಿ ಆಹಾರಗಳ ದರವೂ ತುಸು ಹೆಚ್ಚಾಗುವ ಸಾಧ್ಯತೆ ಇದೆ.

'ಸಿಲಿಂಡರ್ ದರ ಏರಿರುವುದರಿಂದ ತಿನಿಸುಗಳ ದರ ಹೆಚ್ಚಿಸಲೇಬೇಕು. ರಾಜ್ಯದ ಎಲ್ಲ ಹೋಟೆಲ್‌ಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ದರ ಏರುವ ಸಾಧ್ಯತೆ ಇದೆ' ಎಂದು ರಾಜ್ಯ ಹೋಟೆಲುಗಳ ಸಂಘದ ಅಧ್ಯಕ್ಷ ಚಂದ್ರಶೇಖರ ಹೆಬ್ಬಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕಳೆದ ಡಿಸೆಂಬರ್‌ನಲ್ಲೂ ಎಲ್‌ಪಿಜಿ ದರ ಏರಿಸಿದ್ದರು. ಆದರೆ, ಹೋಟೆಲ್ ಮಾಲೀಕರು ದರ ಹೆಚ್ಚಳ ಮಾಡಲಿಲ್ಲ. ಮತ್ತೆ ದರ ಕಡಿಮೆಯಾಗುವ ನಿರೀಕ್ಷೆಯೂ ಸುಳ್ಳಾಗಿದೆ. ಅದರ ಹೊರೆಯನ್ನು ಗ್ರಾಹಕರ ಮೇಲೆ ಹಾಕುವುದು ಅನಿವಾರ್ಯ' ಎಂದರು.

'ಉತ್ತರ ಭಾರತ ಶೈಲಿ ಹಾಗೂ ಚೈನೀಸ್ ಆಹಾರಗಳ ದರಗಳು ಹೆಚ್ಚಾಗಲಿವೆ. ದೋಸೆ, ಇಡ್ಲಿಯಂತಹ ಸ್ಥಳೀಯ ಶೈಲಿಯ ಆಹಾರಗಳ ದರ ಗರಿಷ್ಠ ₹ 5ರವರೆಗೆ ಹೆಚ್ಚಾಗಬಹುದು. ದರ ಪರಿಷ್ಕರಣೆ ಮಾಡುವಂತೆ ಸಂಘದಿಂದ ಯಾವುದೇ ಸೂಚನೆ ಇಲ್ಲ. ಹೋಟೆಲ್ ಮಾಲೀಕರು ತಮ್ಮ ಖರ್ಚು ವೆಚ್ಚಗಳನ್ನು ಅವಲೋಕಿಸಿ, ದರ ಹೆಚ್ಚಳ ಮಾಡಲಿದ್ದಾರೆ' ಎಂದೂ ಹೇಳಿದರು.

ಏ.4ಕ್ಕೆ ಹೋಟೆಲ್ ಮಾಲೀಕರ ಸಭೆ

'ಬೆಂಗಳೂರು ಹೋಟೆಲ್‌ಗಳ ಮಾಲೀಕರ ಸಮ್ಮುಖದಲ್ಲಿ ಏ.4ರಂದು ಸಭೆ ನಡೆಯಲಿದೆ. ಅಲ್ಲಿ ಎಷ್ಟು ಪ್ರಮಾಣದಲ್ಲಿ ದರ ಏರಿಸಬೇಕು ಎಂಬುದರ ಬಗ್ಗೆ ನಿರ್ಣಯ ತೆಗೆದುಕೊಳ್ಳಲಿದ್ದೇವೆ. ದರ ಏರಿಕೆ ಅನಿವಾರ್ಯ' ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ 'ಪ್ರಜಾವಾಣಿ'ಗೆ ತಿಳಿಸಿದರು.

'ಯುಗಾದಿ ನಂತರ ಸರ್ಕಾರ ಹಾಲು, ವಿದ್ಯುತ್ ದರಗಳನ್ನು ಹೆಚ್ಚಳ ಮಾಡುವ ಸಾಧ್ಯತೆ ಇದೆ. ಇದರಿಂದ ಹೋಟೆಲ್‌ಗಳಲ್ಲಿ ಶೇ 10ರವರೆಗೆ ದರ ಏರುವ ಸಾಧ್ಯತೆ ಇದೆ' ಎಂದೂ ಹೇಳಿದರು.

ಪ್ರಾಧ್ಯಾಪಕರ ಹಿಂಬಾಕಿ ವೇತನ ಬಿಡುಗಡೆಗೆ ಆದೇಶ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಅಂಕೋಲಾ: ಅನುದಾನಿತ ಪದವಿ ಕಾಲೇಜುಗಳ ಪ್ರಾಧ್ಯಾಪಕರ ಸ್ಥಾನಿಕರಣ (ಪದೋನ್ನತಿ) ಹಿಂಬಾಕಿ ವೇತನ ಬಿಡುಗಡೆ ಮಾಡಲು ಉನ್ನತ ಶಿಕ್ಷಣ ಇಲಾಖೆಯ ಉಪ ಕಾರ್ಯದರ್ಶಿ ಎಂ.ಜಿ. ವೆಂಕಟೇಶಯ್ಯ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಿಗೆ ಆದೇಶಿಸಿದ್ದಾರೆ.

ಅನುದಾನಿತ ಪದವಿ ಕಾಲೇಜುಗಳ ಪ್ರಾಧ್ಯಾಪಕರ ಹಲವು ವರ್ಷಗಳ ಬೇಡಿಕೆ ಪರಿಣಾಮ ಹಣಕಾಸು ಇಲಾಖೆಯಿಂದ ಸ್ಥಾನಿಕರಣ ಹಿಂಬಾಕಿ ವೇತನ ಬಿಡುಗಡೆಯಾಗಿತ್ತು. ಇದಕ್ಕೆ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರು ತಡೆ ಆದೇಶ ನೀಡಿದ್ದರು. ಸ್ಥಾನಿಕರಣ ಹಿಂಬಾಕಿ ವೇತನ ತಡೆಹಿಡಿದ ಕುರಿತು 'ಪ್ರಜಾವಾಣಿ' ಮಾರ್ಚ್ 29 ರಂದು ವಿಶೇಷ ವರದಿ ಪ್ರಕಟಿಸಿತ್ತು.

ಹಿಂಬಾಕಿ ವೇತನ ಬಿಡುಗಡೆಗೆ ಎಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ಸಮಸ್ಯೆ ಇರುವುದರಿಂದ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪಿ.ಡಿ ಖಾತೆಯಲ್ಲಿ ಜಮೆ ಮಾಡಿ ಏಪ್ರಿಲ್ ಅಂತ್ಯದೊಳಗೆ ಪ್ರಾಧ್ಯಾಪಕರಿಗೆ ಪಾವತಿಸಬೇಕು ಎಂದು ಆದೇಶಿಸಲಾಗಿದೆ.

ಯುಜಿಸಿ ವೇತನ ಹಿಂಬಾಕಿ ಬಿಡುಗಡೆ:

ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಗೆ ಒಳಪಡುವ ಪ್ರಾಧ್ಯಾಪಕರು ಮತ್ತು ತತ್ಸಮಾನ ಸಿಬ್ಬಂದಿಗೆ 2006 ಮತ್ತು 2016 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯ ವ್ಯತ್ಯಾಸ ಬಾಕಿ ಮೊತ್ತ ₹ 454.96 ಕೋಟಿ ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ. ಈ ಹಿಂದೆ ಪಾವತಿಸಿದ್ದ ಹೆಚ್ಚುವರಿ ಮೊತ್ತವನ್ನು ಸೆಳೆದು ಪಾವತಿ ಮಾಡುವಂತೆ ಕಾಲೇಜು ಶಿಕ್ಷಣ ಇಲಾಖೆಗೆ ಉಪಕಾರ್ಯದರ್ಶಿ ಸೂಚಿಸಿದ್ದಾರೆ.

ಈ ಆದೇಶದಿಂದ ಸಾವಿರಾರು ಪ್ರಾಧ್ಯಾಪಕರಿಗೆ ಅನುಕೂಲವಾಗಲಿದೆ ಎಂದು ಕರ್ನಾಟಕ ವಿಶ್ವವಿದ್ಯಾಲಯ ಖಾಸಗಿ ಶಿಕ್ಷಕರ (ಕವಿಖಾಶಿ) ಸಂಘದ ಪದಾಧಿಕಾರಿ ಡಾ.ಎಸ್.ವಿ. ವಸ್ತ್ರದ ಹರ್ಷ ವ್ಯಕ್ತಪಡಿಸಿದ್ದಾರೆ.

ಫಲಿತಾಂಶ ಹಿಂಪಡೆದ ಕುವೆಂಪು ವಿ.ವಿ

ಶಿವಮೊಗ್ಗ: ಪರೀಕ್ಷೆ ಇಲ್ಲದೇ ಪ್ರಕಟಿಸಿದ್ದ ದೂರಶಿಕ್ಷಣ ವಿಭಾಗದ ಫಲಿತಾಂಶವನ್ನು ಕುವೆಂಪು ವಿಶ್ವವಿದ್ಯಾಲಯದ ಹಿಂಪಡೆದಿದೆ. ಏಪ್ರಿಲ್ ಮೂರನೇ ವಾರದಿಂದ ಪರೀಕ್ಷೆ ನಡೆಸಲು ಪರೀಕ್ಷಾಂಗ ಕುಲಸಚಿವ ಪ್ರೊ. ನವೀನ್ ಕುಮಾರ್ ಆದೇಶ ಹೊರಡಿಸಿದ್ದಾರೆ.

2019-20ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಮತ್ತು ದ್ವಿತೀಯ ಆವೃತ್ತಿಗೆ ಪ್ರವೇಶ ಪಡೆದ ದೂರಶಿಕ್ಷಣದ ಸ್ನಾತಕ ಪದವಿಗಳ ಪ್ರಥಮ, ದ್ವಿತೀಯ ವರ್ಷ, ಸ್ನಾತಕೋತ್ತರ ಪದವಿಗಳ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸದೇ ಮುಂದಿನ ಸೆಮಿಸ್ಟರ್‌ಗಳಿಗೆ ಮುಂಬಡ್ತಿ ನೀಡಲು ನಿರ್ಧರಿಸಿ ಫೆ.9ರಂದು ಆದೇಶ ಹೊರಡಿಸಲಾಗಿತ್ತು.

ಆದರೆ ಮಾರ್ಚ್ ತಿಂಗಳಿನಲ್ಲಿ ನಡೆದ ಸಿಂಡಿಕೇಟ್ ಸಾಮಾನ್ಯ ಸಭೆ, ವಿದ್ಯಾವಿಷಯಕ ಪರಿಷತ್ ಸಭೆಗಳ ನಿರ್ಣಯದಂತೆ ಈ ಕ್ರಮವನ್ನು ರದ್ದುಗೊಳಿಸಲಾಗಿತ್ತು.

ಪರೀಕ್ಷೆ ಇಲ್ಲದೇ ಫಲಿತಾಂಶ ಪ್ರಕಟಿಸಿದ್ದಲ್ಲದೇ, ಆಯ್ದ ಅಧ್ಯಯನ ಕೇಂದ್ರಗಳಿಗೆ ಮಾತ್ರ ಫಲಿತಾಂಶ ರವಾನಿಸಲಾಗಿತ್ತು. ಈ ಕುರಿತು 'ಪ್ರಜಾವಾಣಿ'ಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜೀಯರರು, ಲೋಕೋಪಯೋಗಿ , ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ-4/.ಟೆಂಡರ್.ಅಧಿಸೂಚನೆ/2021-22/9438 ದಿನಾಂಕ: 25-03-2022

:: ಟೆಂಡರ್ ಅಧಿಸೂಚನೆ ::

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಾರ್ಯಲಯದಿಂದ ಕೆ.ಕೆ.ಆರ್.ಡಿ.ಬಿ ಲೆಕ್ಕಶೀರ್ಷಿಕೆ ಅಡಿಯಲ್ಲಿ 10 ಸಂಖ್ಯೆ ಕಾಮಗಾರಿಗೆ 147701, 147958, 137459 (ST), 136442, 138721, 136711, 142494 (SC), 148247 (ST), 137450, ಮತ್ತು 137464 ಕಾಮಗಾರಿಯನ್ನು e-procurement ಮುಖಾಂತರ ಟೆಂಡರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : ಕನಿಷ್ಠ ರೂ. **8.75 ಲಕ್ಷಗಳು, ಗರಿಷ್ಠ ರೂ. 180.39 ಲಕ್ಷಗಳು,** 3) ಗುತ್ತಿಗೆದಾರರ ಅರ್ಹತೆ ವಿವರ: 1ನೇ ,2ನೇ ಮತ್ತು 3ನೇ ದರ್ಜೆ, 4) ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ಕನಿಷ್ಠ ರೂ. 11000.00 ಗರಿಷ್ಠ ರೂ. 217000.00, 5) Pre-Bid meeting ದಿನಾಂಕ : **08/04/2022 (11.00 ಗಂಟೆ)**, 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : **11/04/2022 (17.30 ಗಂಟೆ)**, 7)ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **12/04/2022 (16.00 ಗಂಟೆ)**, 8) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **13/04/2022 (16.30 ಗಂಟೆ)**, 9) ಟೆಂಡರನ ಆರ್ಥೀಕ ಬಿಡ್ ತೆರೆಯುವ ದಿನಾಂಕ **16/04/2022 (16.30 ಗಂಟೆ)** 10) ಹೆಚ್ಚಿನ ವಿವರಗಳಿಗೆ ವಿಳಾಸ : ಕಾರ್ಯನಿರ್ವಾಹಕ ಇಂಜೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ ಕಚೇರಿ, 11) ಅಂತರ್ಜಾಲ ತಾಣದ ವಿಳಾಸ: www.e-proc.karnataka.gov.in

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/01/ಎಂ.ಸಿ.&ಎ/2021-22

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ-ಇಪಿ-47/17824/2021-22 ದಿನಾಂಕ: 31.03.2022

ಟೆಂಡರ್ ಆಹ್ವಾನ ಪ್ರಕಟಣೆ

(ಜಿ.ಓ.ಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ತಾಂತ್ರಿಕ ಕೌಶಲ್ಯತೆಗಳು, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವ ಸಂಪನ್ಮೂಲ ಹೊಂದಿರುವ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆ.ಪಿ.ಡಬ್ಲ್ಯೂ.ಡಿ ದರ್ಜೆ-1 (ಸಿವಿಲ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ದ್ವಿ-ಲಕೋಟೆ ಪದ್ಧತಿಯಡಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು: ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕು, ಕಣಗಲಾ ಕೈಗಾರಿಕಾ ಪ್ರದೇಶಕ್ಕೆ ಹಿಡ್ಕಲ್ ಜಲಾಶಯದಿಂದ 5 ಎಂ.ಎಲ್.ಡಿ ನೀರು ಸರಬರಾಜು ಯೋಜನೆ ಅನುಷ್ಠಾನದ ಕಾಮಗಾರಿ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:28.04.2022 ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಮುಖ್ಯ ಅಭಿಯಂತರರು-1, ಕೆಐಎಡಿಬಿ, ಬೆಂಗಳೂರು

DIPR/CP/4000/Zenkar/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್-4/7176/2021-22 ದಿನಾಂಕ : 30-03-2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತೇದಾರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಕ್ರಮ ಸಂಖ್ಯೆ (1) ರಲ್ಲಿನ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಂತೆ ಹಾಗೂ ಕ್ರಮ ಸಂಖ್ಯೆ(1)ರಲ್ಲಿನ ಕಾಮಗಾರಿಗೆ ಏಕ ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತೇದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಗುತ್ತೇದಾರರು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ http://eproc. karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತೇದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಗುತ್ತೇದಾರರು -ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಕ್ರ ಸಂ	ಕಾಮಗಾರಿಗಳ ವಿವರ	ವರ್ಗ	ಟೆಂಡರ್‌ಗೆ ಸೂಚಿಸಿದ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
	2059-(ಯೋಜನೇತರ)-ವಸತಿಯೇತರ ಕಟ್ಟಡಗಳ ನಿರ್ವಹಣೆ		
1)	KPWD/2021-22/BD/WORK_INDENT150840/CALL-2	ಅನ್ವಯಿಸುವುದಿಲ್ಲ	62.33
	8443-ಠೇವಣಿ ಕಾಮಗಾರಿಗಳು		
2)	KPWD/2021-22/BD/WORK_INDENT145991/CALL-2	ಸಾಮಾನ್ಯ	17.64

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **06-04-2022 ರಂದು 12.00 ಗಂಟೆಯ ವರೆಗೆ.** ಆ) ಇ-ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **11-04-2022 ರಂದು 16.00 ಗಂಟೆಯ ವರೆಗೆ.** ಇ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **12-04-2022ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/07/ಎಂಸಿಎ/2022-23

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ

ಮುಖ್ಯ ಅಭಿಯಂತರ ಕಛೇರಿ : ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ,
ಮಿನಿ ವಿಧಾನಸೌಧ ಎದುರುಗಡೆ, ಐವಾನ-ಇ-ಶಾಹಿ ರಸ್ತೆ, ಕಲಬುರಗಿ-585102, ದೂ: 08472-220817,
ಫಾ: 08472-260818, E-mail ID : kwbceklb14@gmail.com

ಕ್ರ.ಸಂ.ಕಜಮ/ಮುಅ.ಕ/ತಾಂತ್ರಿಕ/ಸಅ-3/ಗಂಗಾವತಿ ಡಬ್ಲ್ಯೂಟಿಪಿ/1626/2021-22 ದಿನಾಂಕ: 31-03-2022

:: ಟೆಂಡರ್ ಪ್ರಕಟಣೆ ::

1) ಕಾಮಗಾರಿ ವಿವರ : ಗಂಗಾವತಿ ನಗರದ ಸುಧಾರಿತ ನೀರು ಸರಬರಾಜು ಯೋಜನೆಯ ಉಳಿತಾಯ ಮೊತ್ತದಡಿ ಸಿದ್ದಿಕೇರಿ ಪ್ರದೇಶಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಪಂಪಿಂಗ್ ಮಶಿನರಿಗಳನ್ನು ಅಳವಡಿಸುವುದು, ಡಿ.ಐ ಏರು ಕೊಳವೆ ಅಳವಡಿಸುವುದು, 2.50 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಾಣ ಮತ್ತು ವಿತರಣಾ ಕೊಳವೆ ಜಾಲ ಅಳವಡಿಸುವುದು ಮತ್ತು ನಗರದ ವಿವಿಧ ಭಾಗಗಳಲ್ಲಿ ಬಿಟ್ಟು ಹೋದ ಪ್ರದೇಶಗಳಲ್ಲಿ ಹೆಚ್.ಡಿ.ಪಿ.ಇ ಕೊಳವೆ ಮಾರ್ಗ ಅಳವಡಿಸುವುದು, ಸಿದ್ದಿಕೇರಿ ಜಲಸಂಗ್ರಹಗಾರ ಕೆರೆಗೆ ಚೈನ್ ಲಿಂಕ್ಡ್ ಬೇಲಿ ಅಳವಡಿಸುವುದು, ತೆರೆದ ಚರಂಡಿ ನಿರ್ಮಾಣ ಮತ್ತು ಜಲಶುದ್ದೀಕರಣ ಘಟಕಕ್ಕೆ ಕಂಪೌಂಡ ಗೋಡೆ ನಿರ್ಮಿಸುವ ಕಾಮಗಾರಿ. (ವರ್ಕ ಇಂಡೆಂಟ್ ಸಂಖ್ಯೆ : ಕೆಯುಡಬ್ಲ್ಯೂಎಸ್‌ಡಿಬಿ / 2021-22 / ಡಬ್ಲ್ಯೂಎಸ್/ವರ್ಕ ಇಂಡೆಂಟ್- 3128), 2) ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ : ರೂ. **337.50 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ)**, 3) ಗುತ್ತಿಗೆದಾರರ ಅರ್ಹತೆ ವಿವರ : ಗುತ್ತಿಗೆದಾರರ ಅರ್ಹತೆಯಂತೆ, 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ : ರೂ.5,06,000/- 5) ಕಾಮಗಾರಿಯ ಅವಧಿ : 12 ತಿಂಗಳು (ಮಳೆಗಾಲ ಸೇರಿ), 6) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಷನ್ ಕೊನೆಯ ದಿನಾಂಕ : **12-04-2022 ಸಮಯ : 11:00 ಗಂಟೆಯವರೆಗೆ,** 7) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **20-04-2022 ಸಮಯ : 17:00 ಗಂಟೆಯವರೆಗೆ,** 8) ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ : **22-04-2022 ಸಮಯ : 17:15 ಗಂಟೆಯವರೆಗೆ,** 9) ಹೆಚ್ಚಿನ ವಿವರಗಳಿಗೆ : ಮುಖ್ಯ ಅಭಿಯಂತರವರ ಕಛೇರಿ ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, ಮಿನಿ ವಿಧಾನಸೌಧ ಎದುರುಗಡೆ, ಐವಾನ-ಇ-ಶಾಹಿ ರಸ್ತೆ, ಕಲಬುರಗಿ-585102, ದೂ: 08472-220817, E-mail ID : kwbceklb14@gmail.com, 10) ಅಂತರಜಾಲ ತಾಣದ ವಿಳಾಸ: www.eproc.karnataka.gov.in

ಸಹಿ/- ಮುಖ್ಯ ಅಭಿಯಂತರು
ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/1299/ಎಂ.ಸಿ.&ಎ/2021-22

रजिस्ट्री सं. डी.एल. 33004/99 REGD. NO. D. L.-33004/99

भारत का राजपत्र
The Gazette of India

सत्यमेव जयते

सी.जी.-डी.एल.-अ.-02032022-233784
CG-DL-E-02032022-233784

असाधारण
EXTRAORDINARY

भाग II-खण्ड 3-उप-खण्ड (ii)
PART II—Section 3—Sub-section (ii)

प्राधिकार से प्रकाशित
PUBLISHED BY AUTHORITY

सं. 837] नई दिल्ली, सोमवार, फरवरी 28, 2022/फाल्गुन 9, 1943
No. 837] NEW DELHI, MONDAY, FEBRUARY 28, 2022/PHALGUNA 9, 1943

ನಂ.ಎನ್‌ಎಚ್‌ಎಐ/ಎಕ್ಯೂ/ಸಿ ಆರ್-01/2021-22 ದಿನಾಂಕ: 31.03.2022

ಸಾರ್ವಜನಿಕ ಪ್ರಕಟಣೆ

ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 ರ ಕಲಂ 3(ಡಿ) (1) ಮತ್ತು (2) ರ ಅಡಿಯಲ್ಲಿ (1956ರ 48) ಮತ್ತು 1997 ರಲ್ಲಿ ಆದ ತಿದ್ದುಪಡಿ ಕಾಯ್ದೆಯಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೇಂದ್ರ ಸರ್ಕಾರವು ಈ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿರುವ ಭೂಮಿಗಳನ್ನು ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯಲ್ಲಿ ಭಾರತ ಮಾಲಾ ಪರಿಯೋಜನೆಯ ಅಡಿಯಲ್ಲಿ ಹೊಸಪೇಟೆಯಿಂದ ಬಳ್ಳಾರಿ ಕರ್ನಾಟಕ/ಎಪಿಗಡಿ ವಿಭಾಗದವರೆಗಿನ ರಾ.ಹೆ-63 (ಕಿ.ಮೀ.280.080 ರಿಂದ ಕಿ.ಮೀ.375.450. ವರೆಗೆ) ಷಟ್ಪಥ ರಸ್ತೆಯ ನಿರ್ಮಾಣ, ನಿರ್ವಹಣೆ, ವ್ಯವಸ್ಥಾಪನೆ, ಕಾರ್ಯನಿರ್ವಾಹಣೆ ಮತ್ತು ಪ್ರಕ್ರಿಯ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಂಡಿದೆ. ಅಧಿಸೂಚನೆಯನ್ನು ಭಾರತ ಸರ್ಕಾರದ ಗೆಜೆಟ್ ಅಸಾಧಾರಣ ಭಾಗ-II, ವಿಭಾಗ-3 ಹಾಗೂ ಉಪ ವಿಭಾಗ (1) ರ ಅಡಿಯಲ್ಲಿ ಎಸ್.ಓ.867(ಇ) ದಿನಾಂಕ: 28.02.2022 ಮೂಲಕ ಪ್ರಕಟಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 ವಿಭಾಗ 3(ಜಿ) ಯ ಉಪಕಲಂ (1), (2), (3) ಮತ್ತು (4) ರ ಅಡಿಯಲ್ಲಿಯ ವಿಧಿಗಳ ಪ್ರಕಾರ ಈ ಕೆಳಗಿನ ದಾಖಲಾತಿಗಳನ್ನು ಖುದ್ದಾಗಿ ಅಥವಾ ಪ್ರತಿನಿಧಿ ಮೂಲಕ ಅಥವಾ ಕಾನೂನು ಸಲಹೆಗಾರರ ಮೂಲಕ ಈ ಪ್ರಕಟಣೆ ಹೊರಡಿಸಿದ 10 ದಿನಗಳ ಒಳಗೆ ಈ ಕೆಳಗೆ ನಮೂದಿಸಿದ ಕಛೇರಿಗೆ ದಾಖಲಾತಿಗಳನ್ನು ಹಾಜರುಪಡಿಸುವಂತೆ ಭೂಮಿಯ ಮಾಲೀಕರಿಗೆ ಅಥವಾ ಹಿತಾಸಕ್ತಿ ಇರುವವರಿಗೆ ಈ ಸಾರ್ವಜನಿಕ ಪ್ರಕಟಣೆಯನ್ನುಹೊರಡಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು, ಎನ್‌ಎಚ್‌ಎಐ
4ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಗಂಗಾಪರಮೇಶ್ವರಿ ಕಲ್ಯಾಣ ಮಂಟಪದ ಎದುರು, ವಿದ್ಯಾನಗರ, ಬಳ್ಳಾರಿ-583104

1) ಮೂಲದಾಖಲೆಗಳು 2) ಮಾರಾಟ/ವಿಂಗಡಣೆ/ಇತರ ಹಕ್ಕು ತೋರಿಸುವ ಪತ್ರ 3) ಪ್ರಸಕ್ತ ವರ್ಷದ ಪಹಣಿ 4) ಕಂದಾಯ ಪಾವತಿಸಿದ ರಸೀದಿ ಮತ್ತು ಖಾತ ನಕಲು 5) ಮುಟೇಶನ್ ನೊಂದಣಿಯ ಪ್ರತಿ ಮತ್ತು ಸೂಕ್ತ ಪ್ರಾಧಿಕಾರದಿಂದ ಅನುಮೋದಿತ ಬಡಾವಣೆ ನಕ್ಷೆ ಮತ್ತು ಸಂಬಂಧ ಪಟ್ಟ ಇತರ ಯಾವುದೇ ದಸ್ತಾವೇಜುಗಳು.

ಮೇಲಾಗಿ ಜಮೀನಿನ ಮಾಲೀಕರು ತಾವು ಅಪೇಕ್ಷಿಸುವ ಪರಿಹಾರ ಧನದ ಮೊತ್ತವನ್ನು ಸೂಕ್ತ ದಾಖಲೆಗಳ ಸಾಕ್ಷಾಧಾರಗಳೊಂದಿಗೆ ನೀಡತಕ್ಕದ್ದು. ನಿರ್ದಿಷ್ಟ ಪಡಿಸಿದ ಅವಧಿಯ ಒಳಗೆ ಈ ಕೆಳಗೆ ಸಹಿ ಮಾಡಿದವರಿಗೆ ಮೇಲೆ ಹೇಳಿರುವ ದಾಖಲೆಗಳನ್ನು ಹಾಜರು ಪಡಿಸಲು ಯಾರಾದರು ವಿಫಲರಾದಲ್ಲಿ ಅಂಥವರಿಗೆ ಈ ಕಛೇರಿಯಲ್ಲಿ ಲಭ್ಯವಿರುವ ದಾಖಲೆಗಳ ಪ್ರಕಾರ ಪರಿಹಾರ ಧನವನ್ನು ಮಂಜೂರು ಮಾಡಲಾಗುವುದು ಮತ್ತು ಆಸ್ತಿಗಳ ಧಾರಕ ಮಾಲೀಕರಿಗೆ ಗಮನಕ್ಕೆ ತರುವುದೇನಂದರೆ ಇನ್ನು ಮುಂದೆ ಅವರು ಇಲ್ಲಿ ಹೇಳಿರುವ ಅಧ್ಯಾದೇಶದ ಪ್ರಕಾರ ಕೇಂದ್ರ ಸರ್ಕಾರದ ವಶಕ್ಕೆ ಬಂದಿರುವ ಭೂಮಿಯಲ್ಲಿ ಯಾವುದೇ ಬೆಳೆಯನ್ನು ಬೆಳೆಯಬಾರದು ಅಥವಾ ನಿರ್ಮಾಣವನ್ನು ಮಾಡಬಾರದು. ಒಂದೊಮ್ಮೆ ಬೆಳೆದಲ್ಲಿ ಈ ಬೆಳೆಗೆ ಮತ್ತು ಯಾವುದೇ ರಚನೆಗಳ ನಿರ್ಮಾಣಕ್ಕೆ ಪರಿಹಾರ ಧನವನ್ನು ನೀಡಲಾಗುವುದಿಲ್ಲ.

ಸಹಿ/- ಡಾ. ಎಸ್. ಎಸ್. ಮಧುಕೇಶ್ವರ, ಕೆ.ಎ.ಎಸ್
ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿ
ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಬಳ್ಳಾರಿ

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, ದಿನಾಂಕ: 28ನೇ ಫೆಬ್ರವರಿ, 2022

ಎಸ್.ಓ. 847(ಇ) - ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಇವರು ಭಾರತ ಸರ್ಕಾರದ ಗೆಜೆಟ್ ಅಸಾಧಾರಣ ಭಾಗ-II, ವಿಭಾಗ-3 ಹಾಗೂ ಉಪವಿಭಾಗ (1) ರಲ್ಲಿ ಎಸ್.ಓ. 3893(ಇ) ದಿನಾಂಕ: 27.09.2021 ರಂದು ಈ ಅಧಿಸೂಚನೆಯಲ್ಲಿ ನಮೂದಿಸಿದ ಜಮೀನುಗಳನ್ನು ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯಲ್ಲಿರುವ (ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳ ಕಚೇರಿ, 4ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಗಂಗಾ ಪರಮೇಶ್ವರಿ ಕಲ್ಯಾಣ ಮಂಟಪದ ಎದುರು, ವಿದ್ಯಾನಗರ, ಬಳ್ಳಾರಿ) ಕಿ.ಮೀ.280.080 ರಿಂದ ಕಿ.ಮೀ.375.450 (ಅಗಲಗೊಳಿಸಲು/ಚತುಷ್ಪಥ ಇತರೆ) ನಿರ್ವಹಣೆ, ವ್ಯವಸ್ಥಾಪನೆ ಮತ್ತು ಪ್ರಕ್ರಿಯ ಮಾಡುವ ಸಲುವಾಗಿ ರಾಷ್ಟ್ರೀಯ ಹೆದ್ದಾರಿ ಅಧಿನಿಯಮ 1956 (1956 ರ 48) ಸೆಕ್ಷನ್ 3(ಎ) (1) ರಂತೆ ಪ್ರಕಟಣೆ ಹೊರಡಿಸಲಾಗಿದೆ.

ಮತ್ತು ಅಧಿನಿಯಮ ಸೆಕ್ಷನ್ 3(ಎ) (3) ರಂತೆ ಅಧಿಸೂಚನೆಯನ್ನು "ದಿ ಟೈಮ್ಸ್ ಆಫ್ ಇಂಡಿಯಾ" ಮತ್ತು "ಪ್ರಜಾವಾಣಿ" ಉಭಯ ಪತ್ರಿಕೆಗಳಲ್ಲಿ ದಿನಾಂಕ: 20.10.2021 ರಂದು ಪ್ರಕಟಿಸಲಾಗಿದೆ.

ಮತ್ತು ಈ ಕುರಿತು ಸಕ್ಷಮ ಪ್ರಾಧಿಕಾರವು ಆಕ್ಷೇಪಣೆಗಳನ್ನು ಸ್ವೀಕರಿಸಿತ್ತಲ್ಲದೆ ಪರಿಶೀಲನೆಯ ನಂತರ ಅವುಗಳನ್ನು ಅಮಾನ್ಯ ಮಾಡಲಾಗಿದೆ.

ಕೇಂದ್ರ ಸರ್ಕಾರವು ಈಗ ಸದರಿ ವರದಿಯನ್ನು ಸ್ವೀಕರಿಸಿ ರಾಷ್ಟ್ರೀಯ ಹೆದ್ದಾರಿ ಅಧಿನಿಯಮ 3ಡಿ (1) ರಂತೆ ಕೆಳಕಂಡ ಅಧಿಸೂಚನೆಯ ಅನುಸೂಚಿಯಲ್ಲಿ ನಮೂದಿಸಿದಂತೆ ಮೇಲಿನ ಉದ್ದೇಶಕ್ಕೆ ಭೂಸ್ವಾಧೀನಪಡಿಸಿಕೊಂಡಿರುತ್ತದೆ.

ಮುಂದುವರೆದು ರಾಷ್ಟ್ರೀಯ ಹೆದ್ದಾರಿ ಅಧಿನಿಯಮ 3ಡಿ (2) ಅನುಸರಿಸಿ ಈ ಅಧಿಸೂಚನೆಯಲ್ಲಿ ನಮೂದಿಸಿದ ಜಮೀನುಗಳು ಯಾವುದೇ ಋಣಭಾರವಿಲ್ಲದೇ ಕೇಂದ್ರ ಸರ್ಕಾರದ ಸಂಪೂರ್ಣ ಸ್ವಾಧೀನಕ್ಕೆ ಒಳಪಟ್ಟಿರುತ್ತದೆ ಎಂದು ಕೇಂದ್ರ ಸರ್ಕಾರವು ಘೋಷಿಸಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯಲ್ಲಿರುವ (ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳ ಕಚೇರಿ, 4ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಗಂಗಾ ಪರಮೇಶ್ವರಿ ಕಲ್ಯಾಣ ಮಂಟಪದ ಎದುರು, ವಿದ್ಯಾನಗರ, ಬಳ್ಳಾರಿ) ಕಿ.ಮೀ.280.080 ರಿಂದ ಕಿ.ಮೀ.375.450 ವಶಪಡಿಸಿಕೊಳ್ಳಲು ಉದ್ದೇಶಿಸಿರುವ ಕಟ್ಟಡವುಳ್ಳ ಅಥವಾ ಕಟ್ಟಡ ರಹಿತ ಜಮೀನುಗಳ ಸಂಕ್ಷಿಪ್ತ ವಿವರ.

ರಾಜ್ಯ: ಕರ್ನಾಟಕ **ಜಿಲ್ಲೆ: ಬಳ್ಳಾರಿ**

ಕ್ರಮ ಸಂಖ್ಯೆ	ಸರ್ವೇ ನಂ	ಭೂಮಿಯ ಸ್ವರೂಪ	ಭೂಮಿಯ ತರಹೆ	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)	ಆಸಕ್ತಿಯುಳ್ಳ ವ್ಯಕ್ತಿಯ ಹೆಸರು / ಜಮೀನಿನ ಖಾತೆದಾರರ ಹೆಸರು
1	2	3	4	5	6
ತಾಲ್ಲೂಕು: ಹೊಸಪೇಟೆ					
ಗ್ರಾಮ: ಅಮರಾವತಿ					
1	490	ಖಾಸಗಿ (ಕೃಷಿಯೇತರ)	ಖುಷ್ಕಿ	0.002	ಎಸ್.ನೀಲಕಂಠ ಶೆಟ್ಟಿ ಬಿನ್ ಶಂಕ್ರಪ್ಪ ಶೆಟ್ಟಿ (ಜೊತೆಗೆ ಪಾರ್ಕ್ ಪ್ರದೇಶ, ರಸ್ತೆ, ಸಾರ್ವಜನಿಕ ಉಪಯುಕ್ತತೆ ಉದ್ದೇಶ ಮತ್ತು ವಾಹನ ಪಾರ್ಕಿಂಗ್) 490/1
2	490	ಖಾಸಗಿ (ಕೃಷಿಯೇತರ)	ಖುಷ್ಕಿ	0.0162	1.ಎನ್.ಸತೀಶ್ ಕುಮಾರ್ ಗುಪ್ತಾ ಬಿನ್ ಲೇಟ್ ಎನ್.ತಿರುಕಪ್ಪ ಶೆಟ್ಟಿ 2. ಎನ್.ನೀಲಾ ಕೃಷ್ಣ ಬಿನ್ ಲೇಟ್ ಎನ್.ತಿರುಕಪ್ಪ ಶೆಟ್ಟಿ 3. ಎನ್.ಬಾಲಾಜಿ ಗುಪ್ತಾ ಬಿನ್ ಲೇಟ್ ಎನ್.ತಿರುಕಪ್ಪ ಶೆಟ್ಟಿ 4. ಗೌರವಾನ್ವಿತ ಕರ್ನಾಟಕ ರಾಜ್ಯಪಾಲರು, ಪರವಾಗಿ ಕರ್ನಾಟಕ ಸರ್ಕಾರ - ತಹಶೀಲ್ದಾರ್ ಪ್ರತಿನಿಧಿಸುತ್ತಾರೆ, ಜಿಲ್ಲಾಧಿಕಾರಿ ಪರವಾಗಿ ಹೊಸಪೇಟೆ, ಬಳ್ಳಾರಿ (ಉದ್ಯಾನ ಪ್ರದೇಶ, ರಸ್ತೆ, ಸಾರ್ವಜನಿಕ ಉಪಯುಕ್ತತೆ ಉದ್ದೇಶ ಮತ್ತು ವಾಹನ ಪಾರ್ಕಿಂಗ್) 490/2
3	490	ಖಾಸಗಿ (ಕೃಷಿಯೇತರ)	ಖುಷ್ಕಿ	0.0162	ಶ್ರೀ ಗುಡೇಕೋಟ ಶ್ರೀನಿವಾಸ್ ಬಿನ್ ಸಣ್ಣ ಹನುಮಂತಪ್ಪ (ಉದ್ಯಾನ ಪ್ರದೇಶ, ರಸ್ತೆ, ಸಾರ್ವಜನಿಕ ಉಪಯುಕ್ತತೆ ಉದ್ದೇಶ ಮತ್ತು ವಾಹನ ಪಾರ್ಕಿಂಗ್) 490/5
4	490	ಖಾಸಗಿ (ಕೃಷಿಯೇತರ)	ಖುಷ್ಕಿ	0.1052	ಶ್ರೀ ಗುಡೇಕೋಟ ಶ್ರೀನಿವಾಸ್ ಬಿನ್ ಸಣ್ಣ ಹನುಮಂತಪ್ಪ (ಉದ್ಯಾನ ಪ್ರದೇಶ, ರಸ್ತೆ, ಸಾರ್ವಜನಿಕ ಉಪಯುಕ್ತತೆ ಉದ್ದೇಶ ಮತ್ತು ವಾಹನ ಪಾರ್ಕಿಂಗ್) 490/6
5	490	ಖಾಸಗಿ (ಕೃಷಿಯೇತರ)	ಖುಷ್ಕಿ	0.089	ಶ್ರೀ ಗುಡೇಕೋಟ ಶ್ರೀನಿವಾಸ್ ಬಿನ್ ಸಣ್ಣ ಹನುಮಂತಪ್ಪ (ಉದ್ಯಾನ ಪ್ರದೇಶ, ರಸ್ತೆ, ಸಾರ್ವಜನಿಕ ಉಪಯುಕ್ತತೆ ಉದ್ದೇಶ ಮತ್ತು ವಾಹನ ಪಾರ್ಕಿಂಗ್) 490/7
6	501	ಸರ್ಕಾರಿ	ರಾಲ್ಲ ಗುಟ್ಟ	0.3036	ಸರ್ಕಾರಿ ರಾಲ್ಲ ಗುಟ್ಟ 501
ಒಟ್ಟು				**0.5322**	

[ಎಫ್ ನಂ.ಎನ್‌ಹೆಚ್‌ಎಐ/ಎಲ್‌ಎ/ಆರ್‌ಓ-ಬಿಎನ್‌ಜಿ/ಕೆಎನ್‌ಟಿ/ಹೊಸಪೇಟೆ/3ಡಿ]
ರಾಜೇಶ್ ಗುಪ್ತಾ, ನಿರ್ದೇಶಕರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ತೊಲಗಲಿ ದುಃಖ, ತೊಲಗಲಿ ಮತ್ಸರ, ಪ್ರೇಮಕೆ ಮೀಸಲು ನವ ಸಂವತ್ಸರ!

-ಕುವೆಂಪು

ಮತ್ಸರ ನೀಗಲಿ ಹೊಸ ಸಂವತ್ಸರ ಸೌಹಾರ್ದದ ಸೇತುವಾಗಲಿ ಯುಗಾದಿ

ಕಲೆ, ಬುದ್ಧಿಮತ್ತೆ, ಸಾಮಾಜಿಕ ಸೌಹಾರ್ದದಂಥ ಮೌಲ್ಯಗಳ ಮೂಲಕ ದೇಶ ಮತ್ತು ವಿಶ್ವದ ಗಮನ ಸೆಳೆಯುತ್ತಿದ್ದ ಕರ್ನಾಟಕ, ಇತ್ತೀಚೆಗೆ ಅನಪೇಕ್ಷಿತ ಘಟನೆಗಳ ಕಾರಣದಿಂದಾಗಿ ಹೆಚ್ಚು ಸುದ್ದಿಯಾಗುತ್ತಿದೆ. ಮನಸ್ಸುಗಳನ್ನು ಗಾಸಿಗೊಳಿಸುವ ಹಾಗೂ ಸಮಾಜವನ್ನು ವಿಭಜಿಸುವ ಕೋಮುಶಕ್ತಿಗಳಿಗೆ ಪ್ರಯೋಗ ಶಾಲೆಯಾಗುತ್ತಿದೆ. 'ಸರ್ವ ಜನಾಂಗದ ಶಾಂತಿಯ ತೋಟ' ಎನ್ನುವ ನಾಡಗೀತೆಯ ಆಶಯವನ್ನು ಸದ್ಯದ ವಿದ್ಯಮಾನಗಳು ಅಣಕಿಸುವಂತಿವೆ. ಹಿಜಾಬ್, ಮುಸ್ಲಿಂ ವ್ಯಾಪಾರಿಗಳಿಗೆ ಬಹಿಷ್ಕಾರ, ಹಲಾಲ್ ಕಟ್ ವಿವಾದಗಳು ಸಮಾಜವನ್ನು ಕೋಮು ಆಧಾರಿತವಾಗಿ ವಿಭಜಿಸುವ ಪ್ರಯತ್ನಗಳಾಗಿವೆ. ಮುಸ್ಲಿಂ ಸಮುದಾಯದ ವಿದ್ಯಾರ್ಥಿನಿಯರು, ಮಹಿಳೆಯರು ಹಾಗೂ ಬಡ ವ್ಯಾಪಾರಿಗಳ ವಿರುದ್ಧ ವ್ಯವಸ್ಥಿತ ಅಪಪ್ರಚಾರ ನಡೆಯುತ್ತಿದೆ. ಇಂಥ ಘಟನೆಗಳನ್ನು ತಡೆಗಟ್ಟಬೇಕಾದ ಸರ್ಕಾರವೇ ಕುಂಟು ನೆಪಗಳನ್ನು ಹೇಳುತ್ತಾ, ತನ್ನ ಸಾಂವಿಧಾನಿಕ ಕರ್ತವ್ಯಕ್ಕೆ ವಿಮುಖವಾಗಿರುವುದು ವಿಷಾದಕರ. ಸಮಾಜದ ನೈತಿಕ ಸ್ವಾಸ್ಥ್ಯ ಕಾಪಾಡಬೇಕಾದ ಮಠಾಧೀಶರು ಕೂಡ ಅಲ್ಪಸಂಖ್ಯಾತರ ನೆರವಿಗೆ ಧಾವಿಸುತ್ತಿಲ್ಲ. ಇಂಥ ಸಂಕೀರ್ಣ ಸನ್ನಿವೇಶದಲ್ಲಿ, ಕೂಗುಮಾರಿಗಳ ಮಾತಿಗೆ ಮರುಳಾಗದೆ ಸಂಯಮವನ್ನು ಉಳಿಸಿಕೊಳ್ಳುವ ಸವಾಲನ್ನು ನಾಡಿನ ಜನಸಮೂಹ ಎದುರಿಸಬೇಕಾಗಿದೆ ಹಾಗೂ ಧಾರ್ಮಿಕ ಸಾಮರಸ್ಯವನ್ನು ಎತ್ತಿಹಿಡಿಯುವ ವಿವೇಕವನ್ನು ಪ್ರದರ್ಶಿಸಬೇಕಾಗಿದೆ.

ಸ್ವಾಭಿಮಾನಿ, ಸಮೃದ್ಧ ಹಾಗೂ ಸಾಮರಸ್ಯದ ಕರ್ನಾಟಕವನ್ನು ಉಳಿಸಿಕೊಳ್ಳುವ ಪ್ರಯತ್ನಗಳಿಗೆ ಯುಗಾದಿ ಪ್ರೇರಣೆಯಾಗಲಿ

ಸರ್ವಧರ್ಮ ಸಮನ್ವಯ ಹಾಗೂ ಜಾತ್ಯತೀತ ತತ್ವಗಳ ಅನುಸಂಧಾನದ ಪ್ರಯತ್ನಗಳು ಕರ್ನಾಟಕದ ಇತಿಹಾಸದುದ್ದಕ್ಕೂ ನಡೆದಿವೆ. ಪರಧರ್ಮವನ್ನೂ ಪರ ವಿಚಾರವನ್ನೂ ಸೈರಣೆಯಿಂದ ಕಾಣುವ 'ಕನ್ನಡ ವಿವೇಕ'ವನ್ನು ಪ್ರತಿಪಾದಿಸಿದ ಕವಿರಾಜಮಾರ್ಗಕಾರನಿಂದ ಹಿಡಿದು ವಿಶ್ವಮಾನವ ಸಂದೇಶವನ್ನು ಸಾರಿದ ಕುವೆಂಪುವರೆಗಿನ ಕನ್ನಡ ಪರಂಪರೆ ಕರ್ನಾಟಕದಲ್ಲಿನ ಬಹುತ್ವವನ್ನು ಎತ್ತಿಹಿಡಿದಿದೆ. ಸಮಾಜದ ರಾಡಿಯನ್ನು ತಿಳಿಗೊಳಿಸಲು ಶ್ರಮಿಸಿದ ಶರಣರು ಹಾಗೂ ದಾಸರ ಪಥವಂತೂ ಕರ್ನಾಟಕಕ್ಕೆ ಮಾತ್ರವಲ್ಲ, ಭಾರತೀಯ ಚರಿತ್ರೆಯಲ್ಲೇ ವಿಶಿಷ್ಟವಾದುದು. ಈ ಸಮರಸ ಚರಿತ್ರೆಯನ್ನು ಮಸುಕಾಗಿಸುವ ವಿದ್ಯಮಾನಗಳು ಇತ್ತೀಚೆಗೆ ನಡೆಯುತ್ತಿವೆ. ಪರಧರ್ಮ ಮತ್ತು ಪರ ವಿಚಾರಗಳನ್ನು ಅಸಹನೆಯಿಂದ ಕಾಣುವುದೇ ಧರ್ಮ ಎನ್ನುವಂತಹ ಘಟನೆಗಳು ನಡೆಯುತ್ತಿವೆ. ಸಮಾಜವನ್ನು ವಿಭಜಿಸುವ ಕೊಳಕು ರಾಜಕಾರಣದ ಫಲಿತಗಳು ಕರ್ನಾಟಕದ ವರ್ಚಸ್ಸಿಗೆ ಮಸಿ ಬಳಿಯುವಂತಿವೆ ಹಾಗೂ ಜಾಗತಿಕ ಮಟ್ಟದಲ್ಲಿ ಕರ್ನಾಟಕದ ಜಾತ್ಯತೀತ ಸ್ವರೂಪವನ್ನು ಅವಿಶ್ವಾಸದಿಂದ ನೋಡಲು ಕಾರಣವಾಗುವಂತಿವೆ. 'ಕರ್ನಾಟಕ ಯಾವಾಗಲೂ ಎಲ್ಲರನ್ನೂ ಒಳಗೊಳ್ಳುವ ಆರ್ಥಿಕ ಅಭಿವೃದ್ಧಿ ಮಾದರಿಯನ್ನು ಪಾಲಿಸುತ್ತಿದೆ. ಕೋಮು ಆಧಾರದಲ್ಲಿ ಕೆಲವರನ್ನು ಹೊರಗಿರಿಸುವುದಕ್ಕೆ ಅವಕಾಶ ಕಲ್ಪಿಸಬಾರದು. ಐಟಿ-ಬಿಟಿ ಕ್ಷೇತ್ರಕ್ಕೆ ಕೋಮುವಾದ ಪ್ರವೇಶಿಸಿದರೆ, ಅದು ನಮ್ಮ ಜಾಗತಿಕ ನಾಯಕತ್ವವನ್ನೇ ನಾಶಪಡಿಸುತ್ತದೆ' ಎಂದು ಉದ್ಯಮಿ ಕಿರಣ್ ಮಜುಂದಾರ್ ಷಾ ಅವರು ವ್ಯಕ್ತಪಡಿಸಿರುವ ಆತಂಕ ಸರಿಯಾದುದು. ಅವರ ಕಾಳಜಿ ನಾಡಿನ ಪ್ರಜ್ಞಾವಂತರೆಲ್ಲರ ಕಳಕಳಿಯೂ ಹೌದು. 'ಧಾರ್ಮಿಕ ವಿಭಜನೆಯನ್ನು ತಡೆಯಿರಿ' ಎಂದು ಷಾ ಅವರು ಮಾಡಿಕೊಂಡಿರುವ ಮನವಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗಂಭೀರವಾಗಿ ಪರಿಗಣಿಸಬೇಕು. ಸರ್ಕಾರ ಮಾಡಬೇಕಾದ ಕಾನೂನು ಸಂರಕ್ಷಣೆಯ ಕೆಲಸವನ್ನು ವ್ಯಕ್ತಿಗಳು ಅಥವಾ ಸಂಘಟನೆಗಳು ಮಾಡುವುದನ್ನು ಕೈಕಟ್ಟಿಕೊಂಡು ನೋಡುವುದನ್ನು ಬಿಟ್ಟು, ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ಕ್ಷೋಭೆ ಉಂಟುಮಾಡುತ್ತಿರುವವರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು.

ಕೋಮುವಾದಕ್ಕೆ ಕುಮ್ಮಕ್ಕು ನೀಡುವ ಶಕ್ತಿಗಳನ್ನು ಮಟ್ಟ ಹಾಕಬೇಕಾದ ಸರ್ಕಾರ ಕೈಚೆಲ್ಲಿ ಕೂತಂತಿದೆ. ಅಲ್ಪಸಂಖ್ಯಾತರಲ್ಲಿ ಆತ್ಮವಿಶ್ವಾಸ ಮೂಡಿಸುವ ಮಾತುಗಳನ್ನಾಡಬೇಕಾದ ಪ್ರಜಾಪ್ರತಿನಿಧಿಗಳು ಜಾಣಮೌನಕ್ಕೆ ಶರಣಾಗಿದ್ದಾರೆ. ಕೆಲವು ಸಚಿವರು 'ಧರ್ಮ ರಾಜಕಾರಣ'ದೊಂದಿಗೆ ಎಗ್ಗಿಲ್ಲದೆ ಗುರುತಿಸಿಕೊಂಡು ತಮ್ಮ ಸಂವಿಧಾನಾತ್ಮಕ ಜವಾಬ್ದಾರಿಯನ್ನು ಮರೆತವರಂತೆ ವರ್ತಿಸುತ್ತಿದ್ದಾರೆ. ಇಂಥ ವಿಷಮ ಸನ್ನಿವೇಶದಲ್ಲಿ ನಾಡಿನ ವಿವೇಕವನ್ನು ರಕ್ಷಿಸುವುದಕ್ಕೆ ಜನಸಾಮಾನ್ಯರೇ ಮುಂದಾಗಬೇಕು. ರಾಜಕಾರಣಿಗಳಿಗೆ ಮುಖ್ಯವಾಗಿರುವುದು ಚುನಾವಣೆಯಲ್ಲಿನ ಯಶಸ್ಸೇ ಹೊರತು, ಜನರ ಹಿತಾಸಕ್ತಿಯಲ್ಲ. ಮತಗಳಿಗಾಗಿ ಕೋಮುಪ್ರಚೋದನೆಗೆ ಕುಮ್ಮಕ್ಕು ನೀಡುವ ರಾಜಕಾರಣಿಗಳಿಂದ ಏನನ್ನೂ ನಿರೀಕ್ಷಿಸುವಂತಿಲ್ಲ. ಕೋಮುವಿಷ ತುಂಬಿಕೊಂಡ ರಾಜಕಾರಣಿಗಳ ಮಾತುಗಳನ್ನು ಜನ ನಿರ್ಲಕ್ಷಿಸಬೇಕು. ಸ್ವಾಭಿಮಾನಿ, ಸಮೃದ್ಧ ಹಾಗೂ ಸಾಮರಸ್ಯದ ಕರ್ನಾಟಕವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಜನಸಾಮಾನ್ಯರೇ ಕಾರ್ಯೋನ್ಮುಖರಾಗಬೇಕು. ಅಂಥ ಪ್ರಯತ್ನಗಳಿಗೆ ಯುಗಾದಿ ಪ್ರೇರಣೆಯಾಗಲಿ. ಕೊರೊನಾ ಸೋಂಕಿನ ಆತಂಕದಿಂದಾಗಿ ಕಳೆದ ಎರಡು ವರ್ಷಗಳಲ್ಲಿ ಯುಗಾದಿ ಹಬ್ಬವನ್ನು ಆತಂಕ ಮತ್ತು ನಿರ್ಬಂಧದ ನಡುವೆ ಆಚರಿಸಲಾಯಿತು. ಈ ಬಾರಿ ಕೊರೊನಾ ಆತಂಕ ಸದ್ಯಕ್ಕೆ ತಿಳಿಗೊಂಡಿರುವುದರಿಂದಾಗಿ ಯುಗಾದಿ ಸಂಭ್ರಮ ಇಮ್ಮಡಿಗೊಂಡಿದೆ. ಪ್ರಕೃತಿಯಲ್ಲಿ ಹೊಸ ಚಿಗುರಿನ ಜೀವಚೈತನ್ಯ ಕಾಣಿಸಿಕೊಳ್ಳುವ ಸಂದರ್ಭದ ಯುಗಾದಿ ಹಿಂದೂಗಳ ಪಾಲಿಗೆ ಹೊಸ ಸಂವತ್ಸರವೂ ಹೌದು. ಯಾವುದೇ ರೂಪದಲ್ಲಿ ನಮ್ಮೊಳಗೆ ಸೇರಿಕೊಂಡಿರುವ ಮತ್ಸರವನ್ನು 'ಶುಭಕೃತು' ಹೆಸರಿನ ಸಂವತ್ಸರ ನೀಗಲಿ, ಮಾನವೀಯತೆ ಹಾಗೂ ಸಹಬಾಳ್ವೆಯ ಹಂಬಲವನ್ನು ಯುಗಾದಿ ಹೆಚ್ಚಿಸಲಿ.

ದಿನದ ಟ್ವೀಟ್

ಅವರಿಗಾಗಿ ಪ್ರಾರ್ಥಿಸೋಣ

ಶ್ರೀಲಂಕಾ ತನ್ನ ಇತಿಹಾಸದಲ್ಲೇ ಅತಿದೊಡ್ಡ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ಹಣದುಬ್ಬರ, ಆಹಾರ ಮತ್ತು ವಿದ್ಯುತ್ ಕೊರತೆಯ ವಿರುದ್ಧ ಜನ ಪ್ರತಿಭಟನೆ ನಡೆಸುತ್ತಿದ್ದಾರೆ. ಅವರ ಯೋಗಕ್ಷೇಮಕ್ಕಾಗಿ ಪ್ರಾರ್ಥಿಸಿ. ಅವರು ನಮ್ಮ ಪ್ರೀತಿಪಾತ್ರರಾದ ನೆರೆಹೊರೆಯವರು.

#SriLankaEconomicCrisis

ಆಶುತೋಷ್ ಶರ್ಮಾ, ನಾಗರಿಕ

ಕಿಡಿನುಡಿ



ರಾಹುಲ್ ಅವರನ್ನು ಕರೆದುತರುವ ಕಾಂಗ್ರೆಸ್ಸಿಗರ ನಡೆ, ಅಮಿತ್ ಶಾ ಅವರನ್ನು ಕರೆತರುವ ಬಿಜೆಪಿಯವರ ನಡೆ, ಅವರ ಪಕ್ಕದಲ್ಲಿ ನಿಂತುಕೊಳ್ಳಲು ಪಡುವ ಆತುರ ಇದನ್ನೆಲ್ಲಾ ನೋಡಿದರೆ, ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟನ್‌ನಿಂದ ರಾಜ ರಾಣಿ ಬಂದಾಗ ನಮ್ಮ ಜನ ಆಡ್ತಾ ಇದ್ದದ್ದು ನೆನಪಾಗುತ್ತದೆ. ಗುಲಾಮಗಿರಿ ನಮ್ಮ ಡಿಎನ್‌ಎಯಲ್ಲೇ ಇದೆ ಅಂತ ಅನಿಸುತ್ತೆ.

ಪ್ರವೀಣ್ ಶಂಕರ್, ನಾಗರಿಕ

25 ವರ್ಷಗಳ ಹಿಂದೆ

ಬುಧವಾರ, 2-4-1997

• ಬಿಕ್ಕಟ್ಟು ಶಮನಕ್ಕೆ ರಂಗ, ಕಾಂಗ್ರೆಸ್ ಸಮಾಲೋಚನೆ

ನವದೆಹಲಿ, ಏ. 1– ಪ್ರಧಾನಿ ಎಚ್.ಡಿ. ದೇವೇಗೌಡ ನೇತೃತ್ವದ ಸಂಯುಕ್ತರಂಗ ಸರ್ಕಾರದ ಹಣೆಬರಹದ ಬಗೆಗೆ ಕಾಂಗ್ರೆಸ್ ಮತ್ತು ರಂಗದ ನಾಯಕರ ನಡುವೆ ರಹಸ್ಯ ಮಾತುಕತೆಗಳು ನಡೆಯುತ್ತಿದ್ದು, ರಂಗ ಸರ್ಕಾರ ಉಳಿದರೂ ಗೌಡರ ನಾಯಕತ್ವ ಬದಲಾಗುವ ಸಾಧ್ಯತೆ ಕಂಡುಬರುತ್ತಿದೆ.

ದೇವೇಗೌಡ ಅವರು ಸರ್ಕಾರ ಉಳಿಸಿಕೊಳ್ಳಲು ಬಿಜೆಪಿಯೊಂದಿಗೆ ಕೈಜೋಡಿಸುವ ಯತ್ನ ನಡೆಸಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಆಪಾದಿಸಿದ್ದು, ಅವರ ನಾಯಕತ್ವ ಬದಲಾವಣೆಯಾಗಬೇಕೆಂದು ಪಟ್ಟು ಹಿಡಿದಿದ್ದಾರೆ.

• ತಲ್ಲಣ ತಂದಿದ್ದ ಲಕ್ಕೂಭಾಯಿ ಪಾಠಕ್ ನಿಧನ

ಲಂಡನ್, ಏ. 1 (ಪಿಟಿಐ)– ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಹಾಗೂ ಮತ್ತಿತರರು ತಮಗೆ ಒಂದು ಲಕ್ಷ ಡಾಲರ್ ವಂಚಿಸಿದ್ದರು ಎಂದು ಆರೋಪಿಸಿದ್ದ ಅನಿವಾಸಿ ಭಾರತೀಯ ಉದ್ಯಮಿ ಲಕ್ಕೂಭಾಯಿ ಪಾಠಕ್ (76) ನಿನ್ನೆ ಇಲ್ಲಿ ನಿಧನರಾದರು.

'ಉಪ್ಪಿನಕಾಯಿ ರಾಜ' ಎಂದೇ ಇಂಗ್ಲೆಂಡ್‌ನಲ್ಲಿ ಖ್ಯಾತರಾಗಿದ್ದ ಪಾಠಕ್ ಸುಮಾರು 25 ದಶಲಕ್ಷ ಪೌಂಡ್ ಸ್ಟರ್ಲಿಂಗ್ ಉದ್ಯಮದ ಅಧಿಪತಿಯಾಗಿದ್ದರು.

50 ವರ್ಷಗಳ ಹಿಂದೆ

ಭಾನುವಾರ, 2-4-1972

• ಚುನಾವಣಾ ಫಲಿತಾಂಶದ ಬಗ್ಗೆ ವಿರೋಧ ಪಕ್ಷಗಳ ಹತಾಶೆ

ನವದೆಹಲಿ, ಏ. 1– ಕಮ್ಯುನಿಸ್ಟ್ ಪಕ್ಷದ ವಿನಾ ಉಳಿದೆಲ್ಲ ವಿರೋಧ ಪಕ್ಷಗಳೂ ಚುನಾವಣೆಗಳ ಫಲಿತಾಂಶದ ಬಗ್ಗೆ ತೀವ್ರವಾಗಿ ಹತಾಶಗೊಂಡಿವೆ. ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಎಂದಿಗೂ ಸೋಲಿಸಲು ಸಾಧ್ಯ ಇಲ್ಲ ಎಂಬುದು ಅವುಗಳ ಅಭಿಪ್ರಾಯ. ಎಲ್ಲಕ್ಕಿಂತ ಹೆಚ್ಚಾಗಿ, ವಿಧಾನಸಭೆಗಳಲ್ಲಿ ಅಥವಾ ಸಂಸತ್ತಿನಲ್ಲಿ ತಮ್ಮ ಪಕ್ಷಗಳ ಪ್ರಾತಿನಿಧ್ಯ ಹೆಚ್ಚುವ ಸಾಧ್ಯತೆ ಇಲ್ಲ ಎಂದು ಭಾವಿಸಿವೆ.

ಈ ಹತಾಶ ಸ್ಥಿತಿಯಲ್ಲಿರುವ ವಿರೋಧ ಪಕ್ಷಗಳು– ಅದರಲ್ಲೂ ಜನಸಂಘದ ವಕ್ತಾರರು– 'ಈಚಿನ ಚುನಾವಣೆಗಳು ನ್ಯಾಯಸಮ್ಮತವಾಗಿ ನಡೆದಿವೆಯೇ?' ಎಂದು ಪ್ರಶ್ನಿಸಿವೆ.

• ಏಪ್ರಿಲ್ ಫೂಲ್

ನವದೆಹಲಿ, ಏ. 1– 'ಏರ್ ಇಂಡಿಯಾ ಮಹಾರಾಜ'ರಿಗೂ ಇಂದು 'ಏಪ್ರಿಲ್ ಫೂಲ್' ಬಿಸಿ ತಾಕಿತು.

ಪ್ರಯಾಣಕ್ಕೆ ಸಿದ್ಧವಾದ ವಿಮಾನದಲ್ಲಿ ಬಾಂಬ್ ಇರುವುದಾಗಿ ಇಂದು ದೆಹಲಿ ವಿಮಾನ ನಿಲ್ದಾಣದ ಏರ್ ಇಂಡಿಯಾ ಕಚೇರಿಗೆ ಯಾರೋ ಫೋನ್ ಮಾಡಿದರು.

ಮುಂಬೈ, ಢಾಕಾ, ನ್ಯೂಯಾರ್ಕ್ ಮತ್ತು ಲಂಡನ್‌ಗೆ ಹೊರಡಲಿದ್ದ 4 ವಿಮಾನಗಳಲ್ಲಿ ಕೂಡಲೇ ಶೋಧನೆ ಆರಂಭಿಸಲಾಯಿತು. ಆದರೆ ಯಾವುದೇ ಬಾಂಬ್ ಸಿಗಲಿಲ್ಲ.

ಸಂಘರ್ಷ ಕೊನೆಗಾಣಿಸುವ ಪ್ರಯತ್ನಗಳ ಹಿಂದೆ ಆಯಾ ರಾಷ್ಟ್ರಗಳ ಹಿತಾಸಕ್ತಿ ಅಡಗಿದೆ

ರಣಾಂಗಣ: ಹಿತಾಸಕ್ತಿಯ ರಿಂಗಣ

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಯುದ್ಧವನ್ನು ಆರಂಭಿಸುವುದು ಸುಲಭ, ಆದರೆ ಅಂತ್ಯಗೊಳಿಸುವುದು ಕಷ್ಟ ಎಂಬ ಮಾತಿದೆ. ಅಷ್ಟೇ ಅಲ್ಲ, ಯುದ್ಧದ ಪರಿಣಾಮಗಳನ್ನು ಎದುರಿಸುವುದು ಮತ್ತು ಮರೆಯುವುದು ಕೂಡ ಕಷ್ಟ.

ರಷ್ಯಾ ಮತ್ತು ಉಕ್ರೇನ್ ನಡುವೆ ಯುದ್ಧ ಆರಂಭವಾಗಿ ಒಂದು ತಿಂಗಳು ಕಳೆದಿದೆ. ಅಪಾರ ಸಂಖ್ಯೆಯ ಜನ ಉಕ್ರೇನ್‌ನಿಂದ ಇತರ ದೇಶಗಳಿಗೆ ವಲಸೆ ಹೋಗಿದ್ದಾರೆ. ಮತ್ತೊಂದು ದೇಶದ ಬಾಗಿಲಿನಲ್ಲಿ ನಿಂತು ಅಲ್ಲಿನ ಅಧಿಕಾರಿಗಳ ಪ್ರಶ್ನೆಗೆ ಉತ್ತರಿಸಿ, ನಾಲ್ಕಾರು ಅರ್ಜಿಗಳನ್ನು ತುಂಬಿ, ನಿರಾಶ್ರಿತರ ಶಿಬಿರದಲ್ಲಿ ಮುದುರಿ ಮಲಗುವ ಪರಿಸ್ಥಿತಿ ಯಾವ ದೇಶದ ನಾಗರಿಕರಿಗೂ ಬರಬಾರದು. ಆದರೆ ಉಕ್ರೇನಿನ ಜನ ಆ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅವರ ಈ ಪರಿಸ್ಥಿತಿಗೆ ಕಾರಣ ಏನು, ಆ ಜನರ ಮಹತ್ವಾಕಾಂಕ್ಷೆಯೇ, ಆಳುವವರ ಮುನ್ನೋಟದ ಕೊರತೆಯೇ, ನೆರೆಯ ರಾಷ್ಟ್ರದ ರಾಕ್ಷಸ ಪ್ರವೃತ್ತಿಯೇ, ಬಲಾಢ್ಯ ರಾಷ್ಟ್ರಗಳ ವಾಣಿಜ್ಯಿಕ ಹಿತಾಸಕ್ತಿಯೇ, ಹೀಗೆ ಯುದ್ಧಕ್ಕೆ ನಾಲ್ಕಾರು ಕಾರಣಗಳು ಇರಬಹುದು. ಆದರೆ ಇದೀಗ ಉಕ್ರೇನಿನ ಹಲವು ನಗರಗಳು ಧ್ವಂಸಗೊಂಡಿವೆ. ದೂರದಿಂದ ತೂರಿಬಂದ ಕ್ಷಿಪಣಿಗಳು ಯಾವ ಕಟ್ಟಡದಲ್ಲಿ ಯಾರಿದ್ದಾರೆ, ಅದರ ಐತಿಹಾಸಿಕ ಮಹತ್ವವೇನು ಎಂದು ನೋಡದೆಯೇ ಅವುಗಳನ್ನು ನಾಶ ಮಾಡಿವೆ.

ಒಂದು ತಿಂಗಳ ಈ ಅವಧಿಯಲ್ಲಿ ಉಕ್ರೇನ್ ಮತ್ತು ರಷ್ಯಾಕ್ಕೆ ಕೆಲವು ಸಂಗತಿಗಳು ಮನವರಿಕೆಯಾದಂತಿದೆ. ದೂರದಲ್ಲಿ ನಿಂತು ಸದಸ್ಯತ್ವದ ಆಹ್ವಾನ ನೀಡಿದ್ದ ನ್ಯಾಟೊ, ಸಂಕಷ್ಟ ಎದುರಾದಾಗ ಅಂತರ ಕಾಯ್ದುಕೊಂಡದ್ದನ್ನು ಉಕ್ರೇನ್ ಮರೆಯುವಂತಿಲ್ಲ. ಇದೀಗ ಉಕ್ರೇನ್ ತನಗೆ ನ್ಯಾಟೊ ಭಾಗವಾಗುವ ಆಕಾಂಕ್ಷೆಯಿಲ್ಲ ಎಂದು ಹೇಳುತ್ತಿದೆ. ಆರ್ಥಿಕ ಪ್ರಗತಿ ಸಾಧಿಸಲು ಐರೋಪ್ಯ ಒಕ್ಕೂಟದ ಭಾಗವಾಗಬೇಕು ಎಂಬ ಹಂಬಲ ಇನ್ನೂ ಉಕ್ರೇನಿಗಿದೆ. ಆದರೆ ಆ ಪ್ರಕ್ರಿಯೆ ದೀರ್ಘ ಅವಧಿಯದ್ದು, ಐರೋಪ್ಯ ಒಕ್ಕೂಟವೂ ಪೂರ್ಣ ಮನಸ್ಸಿನಿಂದ ತನ್ನನ್ನು ಸ್ವಾಗತಿಸದು ಎಂಬುದು ಉಕ್ರೇನಿಗೆ ಮನವರಿಕೆಯಾಗಿದೆ. ಹಾಗಾಗಿ ಮಾತುಕತೆಯಿಂದಷ್ಟೇ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು ಎಂಬ ನಿಲುವಿಗೆ ಉಕ್ರೇನ್ ಬಂದಿದೆ.

ಅತ್ತ ರಷ್ಯಾ ಕೂಡ ಬಳಲಿದಂತೆ ಕಾಣುತ್ತಿದೆ. ಉಕ್ರೇನಿನ ಮೇಲೆ ರಷ್ಯಾ ಮೊದಲ ಗುಂಡು ತೂರಿದಾಗ ಅದು ಬೇರೆಯದೇ ಲೆಕ್ಕಾಚಾರವನ್ನು ಹೊಂದಿತ್ತು. ಸಾಮರಿಕವಾಗಿ ತನಗೆ ಸಾಟಿಯಲ್ಲದ ರಾಷ್ಟ್ರವನ್ನು ಮಣಿಸುವುದು ಸುಲಭ ಎಂಬ ಅತಿವಿಶ್ವಾಸದಿಂದ ಅದು ಮುನ್ನುಗ್ಗಿತ್ತು. ಈಗ ರಷ್ಯಾ ಅಪಾರ ಸಂಖ್ಯೆಯ ಸೈನಿಕರನ್ನು, ಹಿರಿಯ ಅಧಿಕಾರಿಗಳನ್ನು ಕಳೆದುಕೊಂಡಿದೆ. ಪಶ್ಚಿಮ ರಾಷ್ಟ್ರಗಳ ಆರ್ಥಿಕ ದಿಗ್ಬಂಧನದ ಬಿಸಿ ಸಾಮಾನ್ಯ ರಷ್ಯನ್ನರಿಗೆ ತಟ್ಟುತ್ತಿದೆ. ರಷ್ಯಾದ ರಾಜಕಾರಣವನ್ನು ನಿಯಂತ್ರಿಸುವ ಸಿರಿವಂತರು ಆಡಳಿತದ ವಿರುದ್ಧ ಸಿಟ್ಟಾಗಿದ್ದಾರೆ. ಮುಖ ಉಳಿಸಿಕೊಳ್ಳುವ ಹಾದಿಗಾಗಿ ರಷ್ಯಾ ಕೂಡ ಎದುರುನೋಡುತ್ತಿದೆ.

ಯುದ್ಧ ಆರಂಭವಾದ ಬಳಿಕ, ಉಕ್ರೇನ್ ಮತ್ತು ರಷ್ಯಾವನ್ನು ಮಾತುಕತೆಯ ಮೇಜಿಗೆ ತರಲು ಹಲವು ಪ್ರಯತ್ನಗಳು ನಡೆದವು. ಇದೀಗ ಅಮೆರಿಕದ ಜೊತೆಗೆ ನಿಕಟ ಸಖ್ಯ ಹೊಂದಿರುವ ಇಸ್ರೇಲ್ ಹಾಗೂ ನ್ಯಾಟೊ ಸದಸ್ಯ ರಾಷ್ಟ್ರಗಳಾದ ಟರ್ಕಿ ಮತ್ತು ಫ್ರಾನ್ಸ್ ಸಂಘರ್ಷವನ್ನು ಕೊನೆಗಾಣಿಸಲು ಪ್ರಯತ್ನಿಸುತ್ತಿವೆ. ಆ ಪ್ರಯತ್ನದ ಹಿಂದೆ ಕೂಡ ಆಯಾ ರಾಷ್ಟ್ರಗಳ ಹಿತಾಸಕ್ತಿ ಅಡಗಿದೆ.

ರಷ್ಯಾ ಮತ್ತು ಉಕ್ರೇನ್ ಎರಡರ ಜೊತೆಗೂ ಟರ್ಕಿ ಉತ್ತಮ ಬಾಂಧವ್ಯ ಹೊಂದಿದೆ. ಅದು ತನ್ನ ದೇಶಿ ಡ್ರೋನ್‌ಗಳನ್ನು (ಯುಸಿಎವಿ) ಉಕ್ರೇನಿಗೆ ಪೂರೈಸುತ್ತದೆ. ಅಗತ್ಯವಿರುವ ಆಧುನಿಕ ಯುದ್ಧ ತಂತ್ರಜ್ಞಾನವನ್ನು ರಷ್ಯಾದಿಂದ ಆಮದು ಮಾಡಿಕೊಳ್ಳುತ್ತದೆ. ಮೇಲಾಗಿ ಸಿರಿಯಾದ ವಿಷಯದಲ್ಲಿ ರಷ್ಯಾದ ಬೆಂಬಲ ಟರ್ಕಿಗೆ ಅಗತ್ಯವಾಗಿದೆ. ತೈಲ, ಅನಿಲ ಮತ್ತು ಪ್ರವಾಸೋದ್ಯಮದ ದೃಷ್ಟಿಯಿಂದಲೂ ರಷ್ಯಾವನ್ನು ಟರ್ಕಿ ಅವಲಂಬಿಸಿದೆ. ಹಾಗಾಗಿ ಮಧ್ಯವರ್ತಿಯಾಗಲು ಉತ್ಸಾಹ ತೋರುತ್ತಿದೆ.

ಈ ಯುದ್ಧ ಶೀಘ್ರದಲ್ಲಿ ಅಂತ್ಯವಾಗಲಿ ಎಂದು ಬಯಸುತ್ತಿರುವ ಮತ್ತೊಂದು ದೇಶ ಇಸ್ರೇಲ್. ಮಧ್ಯ ಪ್ರಾಚ್ಯದ ರಾಜಕೀಯದಲ್ಲಿ ಪ್ರಧಾನ ಪಾತ್ರಧಾರಿಯಾಗಿ ರಷ್ಯಾ ಇದೆ. ಇದೀಗ ಬೈಡನ್ ಅವರ ಆಡಳಿತ ಇರಾನ್ ಜೊತೆಗೆ ಸಂಬಂಧ ಸುಧಾರಿಸಿಕೊಳ್ಳುವ, ಪರಮಾಣು ಒಪ್ಪಂದ ಮಾಡಿಕೊಳ್ಳುವ ಕುರಿತು ಮುಂದಡಿ ಇಟ್ಟಿದೆ. ಮಧ್ಯಪ್ರಾಚ್ಯದಲ್ಲಿ ಸಮತೋಲನ ಕಾಯ್ದುಕೊಳ್ಳಲು ರಷ್ಯಾದ ಬೆಂಬಲ ಇಸ್ರೇಲಿಗೆ ಅಗತ್ಯವಾಗಿದೆ. ಹಾಗಾಗಿ ಅಮೆರಿಕದ ಜೊತೆ ಹೆಚ್ಚು ಗುರುತಿಸಿಕೊಂಡರೂ ರಷ್ಯಾದ ವಿರೋಧ ಕಟ್ಟಿಕೊಳ್ಳಲು ಇಸ್ರೇಲ್ ಸಿದ್ಧವಿಲ್ಲ. ಯುದ್ಧದ ವ್ಯಾಪ್ತಿ ಹಿರಿದಾಗಿ ತಾನು ಖಚಿತ ನಿಲುವು ಪ್ರಕಟಿಸುವ ಸಂದರ್ಭ ಬರಬಾರದು ಎಂದು ಇಸ್ರೇಲ್ ಬಯಸುತ್ತಿದೆ.

ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರನ್ ಕೂಡ ರಷ್ಯಾ ಮತ್ತು ಉಕ್ರೇನ್ ಅಧ್ಯಕ್ಷರ ಜೊತೆಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿ ಪರಿಸ್ಥಿತಿಯನ್ನು ತಿಳಿಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಫ್ರಾನ್ಸ್ ಅಧ್ಯಕ್ಷೀಯ ಚುನಾವಣೆ ಎದುರಿಗಿದೆ. ಅಧ್ಯಕ್ಷ ಪದವಿಗೆ ಸ್ಪರ್ಧಿಸಿರುವ ಪ್ರಮುಖ ಐವರು ಅಭ್ಯರ್ಥಿಗಳಲ್ಲಿ ಮೂವರು ಅಭ್ಯರ್ಥಿಗಳು 'ನಾವು ನ್ಯಾಟೊ ಭಾಗವಾಗಿದ್ದು ಸಾಕು' ಎಂದು ನ್ಯಾಟೊ ವಿರುದ್ಧ ಅಪಸ್ವರ ತೆಗೆದಿದ್ದಾರೆ. ಯುದ್ಧದಿಂದಾಗಿ ಐರೋಪ್ಯ ರಾಷ್ಟ್ರಗಳು ವಲಸೆ, ಬೆಲೆ ಏರಿಕೆಯ ಸಮಸ್ಯೆ ಎದುರಿಸುತ್ತಿವೆ. ಚುನಾವಣೆಯ ಸನಿಹದಲ್ಲಿ ಇಂತಹ ಸಮಸ್ಯೆಗಳು ಆಡಳಿತ ವಿರೋಧಿ ಅಲೆಯನ್ನು ಎಬ್ಬಿಸುತ್ತವೆ. ಹಾಗಾಗಿ ಮ್ಯಾಕ್ರನ್ ಅವರಿಗೆ ಈ ಯುದ್ಧ ಶೀಘ್ರ ಮುಗಿಯುವುದು ಬೇಕಿದೆ. ಯುದ್ಧ ವಿರಾಮಕ್ಕೆ ಮಧ್ಯವರ್ತಿಯಾದರೆ ಜನಪ್ರಿಯತೆಯೂ ಸಹಾಯಕ್ಕೆ ಬರುತ್ತದೆ ಎಂಬುದು ಅವರ ಲೆಕ್ಕಾಚಾರ.



ಈ ಮೂರು ದೇಶಗಳ ಪ್ರಯತ್ನ ಎಲ್ಲಿಗೆ ತಲುಪುತ್ತದೆಯೋ ಗೊತ್ತಿಲ್ಲ. ಆದರೆ ಫ್ರಾನ್ಸ್, ಟರ್ಕಿ ಅಥವಾ ಇಸ್ರೇಲಿನ ಮಧ್ಯಸ್ಥಿಕೆಯಲ್ಲಿ ಮಾತುಕತೆ ನಡೆದರೆ ರಷ್ಯಾವನ್ನು ರಾಜಿ ಸೂತ್ರಕ್ಕೆ ಬದ್ಧವಾಗುವಂತೆ ನೋಡಿಕೊಳ್ಳುವುದು ಕಠಿಣ, ಅಮೆರಿಕ ಇಲ್ಲವೇ ಚೀನಾದಂತಹ ಪ್ರಬಲ ರಾಷ್ಟ್ರಗಳ ಮಧ್ಯಸ್ಥಿಕೆಯಲ್ಲಿ ಸಂಧಾನ ನಡೆದರೆ ಯುದ್ಧ ಅಂತ್ಯಗೊಳ್ಳಬಹುದು ಎಂಬ ಅನಿಸಿಕೆ ದಟ್ಟವಾಗುತ್ತಿದೆ. ಆದರೆ ಈ ಎರಡು ರಾಷ್ಟ್ರಗಳು ಮಾತುಕತೆಗೆ ಕೊಂಡಿಯಾಗಲು ಮನಸ್ಸು ಮಾಡುತ್ತಿಲ್ಲ.

ಯುದ್ಧದಿಂದ ಬಲಗುಂದಿರುವ ರಷ್ಯಾವನ್ನು ತನ್ಮೂಲಕ ಪುಟಿನ್ ಅವರನ್ನು ಸೋಲೊಪ್ಪಿಕೊಳ್ಳುವಂತೆ ಮಾಡಬೇಕು ಎಂಬುದು ಅಮೆರಿಕದ ಹಂಬಲ. ಅಮೆರಿಕದ ಅಧ್ಯಕ್ಷ ಬೈಡನ್ ಉಕ್ರೇನಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಒದಗಿಸುವ, ಬತ್ತಳಿಕೆ ಬರಿದಾಗದಂತೆ ನೋಡಿಕೊಳ್ಳುವ ಭರವಸೆ ನೀಡುತ್ತಿದ್ದಾರೆಯೇ ವಿನಾ, ಸಂಧಾನ ಯಶಸ್ವಿಯಾಗಲಿ ಎಂದು ಹಾರೈಸುತ್ತಿಲ್ಲ. ಈ ಯುದ್ಧವನ್ನು ಚೀನಾ ಎರಡು ದೃಷ್ಟಿಯಿಂದ ನೋಡುತ್ತಿದೆ. ಮೊದಲನೆಯದು, ರಷ್ಯಾ ಪರ ನಿಂತರೆ ಆಗುವ ಲಾಭಗಳು. ದಕ್ಷಿಣ ಚೀನಾ ಸಮುದ್ರ ಪ್ರದೇಶದಲ್ಲಿ ನ್ಯಾಟೊ ಹಿಡಿತ ಸಾಧಿಸಲು ಬಯಸುತ್ತಿರುವುದರಿಂದ ಚೀನಾ ಕಳವಳಗೊಂಡಿದೆ. ರಷ್ಯಾದ ಮೂಲಕ ನ್ಯಾಟೊದ ಪ್ರಭಾವ ವಲಯವನ್ನು ಮೊಟಕುಗೊಳಿಸುವುದು ಸಾಧ್ಯವಾದರೆ ಅದರಿಂದ ಚೀನಾಕ್ಕೆ ಕೂಡ ಲಾಭ. ಆದ್ದರಿಂದ ಅಮೆರಿಕಕ್ಕೆ ಮುಖಭಂಗ ಆಗಬೇಕು ಎಂದು ಚೀನಾ ಬಯಸುತ್ತಿದೆ. ಜೊತೆಗೆ, ರಷ್ಯಾವನ್ನು ಪಶ್ಚಿಮದ ರಾಷ್ಟ್ರಗಳು ಏಕಾಂಗಿಯಾಗಿಸಿದರೆ, ಚೀನಾವನ್ನು ನೆಚ್ಚಿಕೊಳ್ಳುವುದು ರಷ್ಯಾಕ್ಕೆ ಅನಿವಾರ್ಯವಾಗುತ್ತದೆ, ಅವಲಂಬನೆ ಬೆಳೆಯುತ್ತದೆ. ಇದರಿಂದ ವಾಣಿಜ್ಯಿಕವಾಗಿಯಷ್ಟೇ ಅಲ್ಲ ರಾಜತಾಂತ್ರಿಕವಾಗಿ ಕೂಡ ತನಗೆ ಲಾಭ ಎಂಬುದು ಚೀನಾದ ಲೆಕ್ಕಾಚಾರ.

ಆದರೆ ಚೀನಾ ನೇರವಾಗಿ ರಷ್ಯಾದ ಸಹಾಯಕ್ಕೆ ನಿಲ್ಲಲು ಹಿಂಜರಿಯುತ್ತಿದೆ. ತಾನು ಬಹಿರಂಗವಾಗಿ ರಷ್ಯಾವನ್ನು ಬೆಂಬಲಿಸಿದರೆ ಯುದ್ಧದ ವ್ಯಾಪ್ತಿ ಹಿರಿದಾಗುತ್ತದೆ, ತನ್ನದಲ್ಲದ ಯುದ್ಧಕ್ಕೆ ಬೆಲೆ ತೆರಬೇಕಾಗುತ್ತದೆ ಎಂಬುದು ಚೀನಾಕ್ಕೆ ತಿಳಿದಿದೆ. ಐರೋಪ್ಯ ರಾಷ್ಟ್ರಗಳು ತನ್ನೊಂದಿಗಿನ ವಾಣಿಜ್ಯಿಕ ಸಂಬಂಧವನ್ನು ಕಡಿದುಕೊಂಡರೆ ಆರ್ಥಿಕವಾಗಿ ನಷ್ಟ ಅನುಭವಿಸಬೇಕಾಗುತ್ತದೆ ಎಂಬುದನ್ನು ಚೀನಾ ಅರಿತಿದೆ. ಒಂದೊಮ್ಮೆ ಯುದ್ಧದಲ್ಲಿ ರಷ್ಯಾ ತೀರಾ ಕಳೆಗುಂದಿದರೆ ಅಥವಾ ಅಮೆರಿಕವೇ ಚೀನಾದ ಮಧ್ಯಸ್ಥಿಕೆಗೆ ಆಗ್ರಹಿಸಿದರೆ, ಆಗ ಅದು ಮಾತುಕತೆಗೆ ಕೊಂಡಿಯಾಗಿ, ಅಮೆರಿಕದೊಂದಿಗಿನ ತನ್ನ ಬಾಂಧವ್ಯ ಸುಧಾರಿಸಿಕೊಳ್ಳಲು, ವಾಣಿಜ್ಯ ಸಮರದಿಂದ ಆಚೆ ಬರಲು ಈ ಅವಕಾಶವನ್ನು ಬಳಸಿಕೊಳ್ಳುತ್ತದೆ.

ಒಟ್ಟಿನಲ್ಲಿ, ರಣಾಂಗಣದಲ್ಲಿ ಉಕ್ರೇನ್ ಮತ್ತು ರಷ್ಯಾದ ಸೈನಿಕರು ಪರಸ್ಪರ ಕಾದಾಡಿ ಪ್ರಾಣತೆರುತ್ತಿದ್ದರೆ, ಇತರ ದೇಶಗಳು ತಮ್ಮ ಹಿತಾಸಕ್ತಿಗಳಿಗೆ ಪೂರಕವಾಗಿ ದಾಳ ಉರುಳಿಸುತ್ತಿವೆ.

ಚುರುಮುರಿ

ವರ್ಷತೊಡಕಿನ ಪರಾಕ್!

• ತುರುವೇಕೆರೆ ಪ್ರಸಾದ್

ಅರಳೀಕಟ್ಟೆಯ ಮೇಲೆ ಇಸ್ಪೀಟ್ ಗ್ಯಾಂಗ್ ಎಲೆ ಕಲಸುತ್ತಾ ಕುಳಿತಿತ್ತು. 'ಲೇಯ್, ನಮ್ ಅಣ್ಣಪ್ಪನೋರು ಫೋನ್ ಮಾಡಿದ್ರು. ಅವರಿಗೆ ಒಂದಿಷ್ಟು ಯುಗಾದಿ ಶುಭಾಶಯ ಬೇಕಂತೆ, ಹೇಳ್ರಲೇ' ಎಂದ ಪರ್ಮೇಶಿ.

'ರಾಜಕೀಯದೋರಿಗೆ ಅಧಿಕಾರ, ದುಡ್ಡು ಸಿಕ್ಕಿದಾಗೆಲ್ಲಾ ಯುಗಾದಿನೇ. 'ಬರಲಿ ಬರಲಿ ಯುಗಾದಿ, ಪ್ರತೀ ಐದು ವರ್ಷಕ್ಕೊಮ್ಮೆ ನಮಗೇ ಸಿಗಲಿ ಗಾದಿ' ಅಂತ ಹೇಳ್ಕೊಂಡ್ರೆ ಆಯ್ತು' ಎಂದ ಕಲ್ಲೇಶಿ.

'ಅದು ಪಾರ್ಟಿ ವಿಶ್ ಆಯ್ತು. ಪರ್ಸನಲ್ ವಿಶ್ ಮಾಡ್ಬೇಕು ಅಂದ್ರೆ 'ಇದ್ದೇ ಇರುತ್ತೆ ಪಕ್ಷದಲ್ಲಿ ಬೇಗುದಿ, ಅದ್ರಲ್ಲಿ ನಂಗೂ ಸಿಗ್ತಾ ಇರ್ಲಿ ಒಂದು ಮಂತ್ರಿ ಗಾದಿ'.

'ಇನ್ನು ಪಂಚರಾಜ್ಯಗಳನ್ನೂ ಕಳ್ಕೊಂಡು ಪಂಚಾಂಗದ ಮುಂದೆ ಕವಡೆ ಹಾಕ್ತಾ ಕುಳಿತಿರೋ ಕೈ ಪಾರ್ಟಿಯೋರಿಗೆ ಹೇಳ್ಬೇಕಂದ್ರೆ 'ಮುಂದಿನ ಬಾರಿ ಗಾದಿ ಸಿಕ್ಕುದ್ರೆ ಯುಗಾದಿ, ಇಲ್ಲ ಅಂದ್ರೆ ಉತ್ತರದ ಥರ ಪಕ್ಷಕ್ಕೆ ದಕ್ಷಿಣದಲ್ಲೂ ನಿಲ್ಲದು ಬೇಗುದಿ' ಅಂತ ಕಾಲೆಳೀಬಹುದು' ಎಂದ ಕೊಟ್ರ.

'ಇನ್ನು ನಮ್ ದೊಡ್ ಗೌಡ್ರು ಒಂಥರಾ ಫೀನಿಕ್ಸ್ ಇದ್ದಂಗೆ... ಮೋದಿ ಇರ್ಲಿ, ಬೂದಿ ಇರ್ಲಿ, ಅವರು ಮತ್ತೆ ಮತ್ತೆ ಎದ್ ಬರ್ತಾನೇ ಇರ್ತಾರೆ. 'ಯುಗಾದಿ ಮಾಡಿದ್ರೇನು? ನಾವು ಮಾಡೇ ಮಾಡ್ತೀವಿ ಸಖತ್ತಾಗಿ ವರ್ಷ ತೊಡಕು, ಕೊಡ್ತಾನೇ ಇರ್ತೀವಿ, ನಿಮಗೆ ಕಾಲ್‌ತೊಡಕು!' ಅಂತ ಹೇಳ್ಬಹುದು'.

'ಅಲ್ಲ, ಇವೆಲ್ಲಾ ಶುಭಾಶಯನಾ? ಒಬ್ರಿಗೊಬ್ರು ಹೇಳ್ತಿರೋ ಚರಮಗೀತೆ ಇದ್ದಂಗಿವೆಯಲ್ಲೋ?'

'ಭೂತದ ಬಾಯಲ್ಲಿ ಭಗವದ್ಗೀತೆ ಬರುತ್ತಾ? ಇವರು ಅವಾಗವಾಗ ಹೂರಣ ಇಲ್ಲದ ಚಕ್ಕಳದ ಕಣಿಕದ ತರ ಕಾರ್ಣಿಕ ಹೇಳ್ತಾನೇ ಇರ್ತಾರೆ. ಕೇಳು, ನಾನೇ ಗಿಣಿ, ನಾನೇ ಕೋಗಿಲೆ, ನಾನೇ ಹದ್ದು... ಜೇಬಲ್ಲಿ ಲಕ್ಷ ಲಕ್ಷ... ಅದಕ್ಕೇ ದೇಶ ಸುಭಿಕ್ಷ... ಗುಂಡು ತುಂಡು ಠಾಕು ಠೀಕಿನ ಪೋಷಾಕು... ವರ್ಷಪೂರಾ ಭರಪೂರ ಶೋಕಿಯ ವರ್ಷ ತೊಡಕು ಕಣಲೇ ಪರಾಕ್...'

'ಹಂಗಂದ್ರೆ?'

'ಹಂಗಂದ್ರೆ ಮುಂದಿನ ಯುಗಾದಿಗೆ ಮುಂಚೆನೇ ಚುನಾವಣೆ ಬತ್ತದೆ ಅಂತ. ಅಷ್ಟೂ ಅರ್ಥ ಅಗಲ್ವಾ ಗುಲ್ದು' ಎಂದು ಬೈದು ಕಾರ್ಡ್ ಬಿಡಿಸಿಟ್ಟು 'ಶೋ' ಎಂದ ಪರ್ಮೇಶಿ.

ಸಂಗತ

ವಿನೋದದ ಆಸ್ವಾದಕ್ಕೆ ವ್ಯವಧಾನವಿರಲಿ

ಹಾಸ್ಯ ಮನೋವೃತ್ತಿಯು ಸಾಮಾಜಿಕ ಅಂತರವನ್ನು ತಗ್ಗಿಸುತ್ತದೆ

• ಬಿ.ಎಸ್.ಭಗವಾನ್

ಏಪ್ರಿಲ್ 1 ಬಂದು ಹೋಗಿದೆ. ಆಪ್ತೇಷ್ಟರು ಪೆಟ್ರೋಲ್ ಬೆಲೆ ಇಳಿಯಿತೆಂದೋ ಹತ್ತೇ ತಿಂಗಳು ಶುಲ್ಕ ವಿಧಿಸುವ ಶಾಲೆ ಅಥವಾ ಒಂದೂ ಗುಂಡಿಯಿರದ ರಸ್ತೆ ಇದೆಯೆಂದೋ ಹೇಳಿ ಮೂರ್ಖರನ್ನಾಗಿಸಿರಬಹುದು. ಮೂರ್ಖರನ್ನಾಗಿಸುವುದಕ್ಕಿಂತಲೂ ಮೂರ್ಖರಾದಿರಿ ಎಂದು ಮನವರಿಕೆ ಮಾಡಿಸುವುದು ತ್ರಾಸವಂತೆ!

ಗಂಭೀರ ವಿನೋದ, ರಚನಾತ್ಮಕ ವಿಡಂಬನೆಯು ನೋವು ಕುಗ್ಗಿಸಿ, ನಲಿವು ಹಿಗ್ಗಿಸುವ ಚೈತನ್ಯ. ನವರಸಗಳಲ್ಲಿ ಒಂದಾದ ಹಾಸ್ಯವು ಜಗತ್ತನ್ನು ಇನ್ನಷ್ಟು ಸುಂದರವಾಗಿಸುತ್ತದೆ. ಸಂಘಶಕ್ತಿ ವೃದ್ಧಿಸಿ, ಸೃಜನಶೀಲತೆಗೆ ಅನುವಾಗಿಸುವ ಧೀಃಶಕ್ತಿ ಅದು. ತಮಾಷೆಯು ನಗುವಿನಲ್ಲಿ ಸಮಾರೋಪಗೊಳ್ಳುವುದು. ಆದರೆ ಎಡೆಬಿಡದ ಮಾಹಿತಿ ದಾಹದಿಂದ ತುಂಬಿಹೋಗಿರುವ ನಮ್ಮ ಬದುಕಿನ ಶೈಲಿ, ವಿನೋದದ ಆಸ್ವಾದಕ್ಕೆ ನಮಗೆ ವ್ಯವಧಾನ ಇಲ್ಲದಂತೆ ಮಾಡುತ್ತಿದೆ. ಹಾಸ್ಯಕರ ಮನಸ್ಸುಗಳೊಂದಿಗೆ ನಾವು ಬೆರೆಯುತ್ತಿಲ್ಲ. ಮೊಬೈಲ್ ರಿಂಗಣಿಸುತ್ತಲೇ ಒಂಟಿತನಕ್ಕೆ ಮಣೆ ಹಾಕಿರುತ್ತೇವೆ.

ಮನುಷ್ಯನು ಸಮಾಜದ ಹೊರಗೆ ಬದುಕಲಾಗದು ಎನ್ನುವುದು ಸತ್ಯ. ನಾವೇ ಕಚಗುಳಿಯಿಟ್ಟುಕೊಂಡು ನಗಲು ಸಾಧ್ಯವೇ? ಯಾವುದೇ ತಮಾಷೆಯ ವಿಶ್ಲೇಷಣೆಗೆ ಇಳಿಯಬಾರದು. ಪ್ರಯೋಗಾರ್ಥವಾಗಿ ಕಪ್ಪೆಯ ಅಂಗ ವಿಚ್ಛೇದಿಸಿದರೆ ಅದು ಸಾಯುವುದು! ಪ್ರಸಂಗ ನಿಜಕ್ಕೂ ಸಂಭವಿಸಿರಲಿ, ಇಲ್ಲದಿರಲಿ ಗಹಗಹಿಸುವ ನಗುವಂತೂ ಘಟಿಸಿರುತ್ತದೆ. ನಗಿಸಿ ನಗುವವರೊಂದಿಗೆ ಒಂದಾದರೆ ಭಾವ ಅರಳುತ್ತದೆ. ಹಾಸ್ಯವನ್ನು ವಿವೇಚಿಸಲು, ಅನುಸರಿಸಲು, ಮೆಚ್ಚಲು ಸಮರ್ಥರಾಗುತ್ತೇವೆ. ಹಾಸ್ಯಪ್ರವೃತ್ತಿ ಮೈದಳೆಯುತ್ತದೆ.

ವಿನೋದ ಪ್ರವರ್ತಕರಿಗೆ ಸಿಟ್ಟೆಂಬುದಿರದು. ವ್ಯಾಜ್ಯದತ್ತ ವಾಲುವ ಸಂದರ್ಭಗಳಿಗೆ ಲಂಗರು ಬಿಗಿದು ಅವನ್ನು ಅವರು ಯಥಾಸ್ಥಿತಿಗೆ ತರಬಲ್ಲರು. ಸಮಯ, ಸನ್ನಿವೇಶಗಳೇ ಅವರಿಗೆ ಸ್ಫೂರ್ತಿ. ಚಟಾಕಿಗಳನ್ನು ಪರಿಸ್ಥಿತಿಗಳಿಗೆ ಹೊಂದಿಸುವ ಪ್ರಯತ್ನ ನಗೆಪಾಟಲು. ಒಂದರ್ಥದಲ್ಲಿ ಹಾಸ್ಯ ಮನೋವೃತ್ತಿಯು ಸಾಮಾಜಿಕ ಅಂತರವನ್ನು ಕಡಿಮೆಯಾಗಿಸುತ್ತದೆ. ನಗೆ ಬಲ್ಲದವರೂ ಒಗ್ಗಟ್ಟಾಗಿದ್ದಾರು, ಆದರೆ ಅವರಲ್ಲಿ ಪರಸ್ಪರ ಕಣ್ಣಲ್ಲಿ ಕಣ್ಣಿಟ್ಟು ನೋಡುವ ಹೊಂದಾಣಿಕೆ ಕೈಗೂಡೀತೆ?

ಗ್ರೀಕ್ ತತ್ವಜ್ಞಾನಿ ಸಾಕ್ರೆಟಿಸ್ ತನ್ನ ಬೋಧನೆಗೆ ವಿಡಂಬನೆಯನ್ನು ಪರಿಣಾಮಕಾರಿಯಾಗಿ ಬಳಸುತ್ತಿದ್ದ. ಒಮ್ಮೆ ಆತನ ಮಿತ್ರನೊಬ್ಬ 'ನಿನ್ನ ಆಪ್ತ ನಿನ್ನ ಬಗ್ಗೆ ಏನು ನಿಂದಿಸಿದ ಗೊತ್ತೇ?' ಎಂದ. ಸಾಕ್ರೆಟಿಸ್ 'ಅದು ಸತ್ಯವೇ? ಅದು ಒಳ್ಳೆಯದೇ? ನನಗದರಿಂದ ಪ್ರಯೋಜನವೇ?' ಅಂತ ಪ್ರಶ್ನಿಸಿದ. ಮೂರು ಪ್ರಶ್ನೆಗಳಿಗೂ ಮಿತ್ರ 'ಇಲ್ಲ' ಎಂದೇ ಉತ್ತರಿಸಿದ. 'ಹಾಗಿದ್ದಮೇಲೆ ನೀನು ನನಗೆ ಹೇಳುವುದೇನಿದೆ' ಅಂದ ಸಾಕ್ರೆಟಿಸ್! ಇತರರು ತಮ್ಮ ಕುರಿತು ಏನೇನೋ ಮಾತನಾಡಿಕೊಳ್ಳುತ್ತಾರೆಂದು ವೃಥಾ ಕೊರಗುವವರಿಗೆ ಈ ಪಾಠ ಇಂದಿಗೂ ಪ್ರಸ್ತುತ. ಹಾಗೆ ನೋಡಿದರೆ ಮೌನ, ಆಂಗಿಕ ಹಾವಭಾವಗಳೇ ವಿನೋದದ ಹೆಚ್ಚು ಸಮರ್ಥ ವಾಹಕಗಳು.

ಬಹುಮುಖ್ಯವೆಂದರೆ, ಮತ್ತೊಬ್ಬರನ್ನು ನೋಯಿಸಿಯಾದರೂ ನಾವು ನಗಬೇಕಾದ್ದಿಲ್ಲ. ವಿನೋದ ಅಷ್ಟು ದುಬಾರಿಯಾಗಬೇಕಿಲ್ಲ! ಒಮ್ಮೆ ಅಬ್ರಹಾಂ ಲಿಂಕನ್ ಚುನಾವಣಾ ಭಾಷಣ ಮಾಡುತ್ತಿದ್ದರು. ಮುಂದಿನ ಸಾಲಿನಲ್ಲಿದ್ದ ಯುವಕನೊಬ್ಬ 'ಬಿಡಿ ಸಾರ್, ನೀವು ಎರಡು ಮುಖದವರು' ಎಂದು ಅಬ್ಬರಿಸಿದ. ಸ್ವಲ್ಪ ಕೂಡ ಸಹನೆಗೆಡದ ಲಿಂಕನ್ ಹೀಗೆ ಪ್ರತಿಕ್ರಿಯಿಸಿದ್ದರು: 'ತಮ್ಮಾ, ಖಂಡಿತ ಇಲ್ಲ. ಹಾಗೊಂದು ವೇಳೆ ಇದ್ದಿದ್ದರೆ ನಾನು ಈ ಮುಖವನ್ನೇಕೆ ಧರಿಸಿರುತ್ತಿದ್ದೆ ಹೇಳು ಮಾರಾಯ!' ಭಾವೀ ಅಧ್ಯಕ್ಷರು ಸಭೆಗೆ ಎಂಥ ಕಳೆ ಮೂಡಿಸಿದ್ದರು ಎಂಬುದನ್ನು ಹೇಳುವ ಅಗತ್ಯವಿಲ್ಲ.

ಅಧಿಕಾರವು ಗೌರವಕ್ಕೂ ಮಿಗಿಲಾಗಿ ಹಾಸ್ಯ ಪ್ರವೃತ್ತಿಯಿಂದ ಅಧಿಕವಾಗಿ ಶೋಭಿಸುತ್ತದೆ. ಹಾಸ್ಯವು ಉಚಿತವಾಗಿ ಹಂಚಬಹುದಾದ ಅಮೂಲ್ಯ ಔಷಧ. ವಾಯಿದೆ ದಿನಾಂಕದ ಗೊಡವೆಯಿಲ್ಲ, ಅಡ್ಡಪರಿಣಾಮವಿಲ್ಲ, ವ್ಯಸನವಾಗಿಸಿಕೊಂಡರೆ ಮತ್ತೂ ಉತ್ತಮವೆ. ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ವಿನೋದ ಒಳಗೊಳ್ಳದ ವಿಷಯವೇ ಇಲ್ಲ. ಮೊಗೆದಂತೆ ಮೂರ್ಖರಾಗಬಹುದು, ಮೂರ್ಖರನ್ನಾಗಿಸಬಹುದು.

ಮುಕ್ಕಾಲು ಶತಮಾನದ ಹಿಂದೆ ಅನ್ನಿ. ಜ್ವರಪೀಡಿತ ರೋಗಿಗೆ ವೈದ್ಯರೊಬ್ಬರ 'ಸಂಜೆ ಒಂದು ಗುಳಿಗೆ, ನಾಳೆ ಬೆಳಗ್ಗೆ ಎದ್ದರೆ ಇನ್ನೊಂದು' ಎಂಬ ಸೂಚನೆ ಇಂದಿಗೂ ನವನವೀನವಾಗಿ ನಗಿಸಿಕೊಳ್ಳುವುದು. ಜನಪದರಂತೂ ಅಜೀರ್ಣವಾಗುವಷ್ಟು ನಗಿಸುತ್ತಾರೆ. ಗಾದೆ, ಒಗಟುಗಳಲ್ಲಿ ಅವರ ವ್ಯಂಗ್ಯ, ವಿಡಂಬನೆಯ ದಟ್ಟ ಹರವಿದೆ. ತೊಟ್ಟಿಲು ಮಾರುವಾಕೆಗೆ ಎದುರಿಗೆ ಬರುವ ಸ್ತ್ರೀಯರೆಲ್ಲ ಗರ್ಭಿಣಿಯರಂತೆ ತೋರುತ್ತಾರೆ.

ಆ ಗ್ರಾಮದಲ್ಲಿ ವೃತ್ತಿನಾಟಕ ಕಂಪನಿಯೊಂದು ಟೆಂಟ್ ಹಾಕಿತ್ತು. ಕಂಪನಿಗೆ ಹೆಚ್ಚು ಕಲೆಕ್ಷನ್ ಇರಲಿಲ್ಲ. ಕಲಾವಿದರು ಬಿಟ್ಟುಹೋಗತೊಡಗಿದ್ದರು. 'ಭಕ್ತ ಧ್ರುವ' ನಾಟಕ. ಕಾರಣಾಂತರದಿಂದ ಅಂದು ನಾರಾಯಣನ ಪಾತ್ರ ಕಂಪನಿ ಒಡೆಯನದೆ. ಧ್ರುವನ ತಪಸ್ಸಿಗೆ ಪ್ರತ್ಯಕ್ಷಗೊಂಡು 'ಏನು ವರ ಬೇಕು, ಕೇಳು ಬೇಗ' ಎನ್ನುವನು. 'ಯಾವ ವರವೂ ಬೇಡ, ಬಾಕಿಯಿರುವ ಮೂರು ತಿಂಗಳ ಪಗಾರ ದಯಪಾಲಿಸಿದರಾಯ್ತು ದೇವ' ಎಂದಿದ್ದ ಧ್ರುವ!

ಅಂತೆಯೇ ಅರಸ ಕೈತಟ್ಟುತ್ತಾನೆ. 'ಏನಪ್ಪಣೆ ಸ್ವಾಮಿ, ಹೇಳೋಣವಾಗಲಿ' ಎಂದು ಸೇವಕರು ಪೈಪೋಟಿಯಲ್ಲಿ ಮುಂದೆ ಬಂದಾರೆಂಬ ನಿರೀಕ್ಷೆ ಅವನಿಗೆ. ಆದರೆ 'ಇಲ್ಲಿ ಯಾರೂ ಇಲ್ಲ' ಎಂಬ ಉದ್ಗಾರ ಸೈಡ್‌ವಿಂಗಿನಿಂದ ಅನುರಣಿಸಿದರೆ? ನಿಜಜೀವನದ ಸಂಗತಿಗಳು ರಂಗಸ್ಥಳದಲ್ಲಿ ತೆರೆದುಕೊಂಡರೆ ಆಗುವ ಆಭಾಸಗಳು ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತವೆ.

ಜಾಣತನವೇನಿದ್ದರೂ ಅದು ಮೂರ್ಖತನದ ಮೂಲಕವೇ!

ವಾಚಕರ ವಾಣಿ

ಜೂಜಾಟಕ್ಕೆ ಕೊನೆ ಹಾಡೋಣ

ಯುಗಾದಿ ಹಬ್ಬ ಹಿಂದೂಗಳಿಗೆ ಹೊಸ ವರ್ಷದ ಆಗಮನ, ಖುಷಿ ತರುತ್ತದೆ. ಈ ಬಿರು ಬೇಸಿಗೆಯಲ್ಲಿಯೂ ಅತ್ಯಂತ ಆಪ್ಯಾಯಮಾನವಾಗಿ ಆಚರಿಸುವ ಹಬ್ಬ ಇದು. ಆದರೆ ಊರುಗಳಲ್ಲಿ ವರ್ಷಕ್ಕೊಂದು ಹಬ್ಬ ಎಂಬ ನೆಪದಲ್ಲಿ ಕೆಲವರು ಜೂಜಿನ ವ್ಯಾಮೋಹಕ್ಕೆ ಒಳಗಾಗಿ ಜೀವನ ನರಕ ಮಾಡಿಕೊಳ್ಳುತ್ತಿದ್ದಾರೆ. ಫಸಲು ಕೈಕೊಟ್ಟು, ಇತ್ತ ಸಾಲ ತೀರಿಸಲಾಗದೆ, ಅತ್ತ ಜೂಜಾಡಿ ಸೋತು ಮನೆಗೂ ಹೋಗಲಾರದವರಿಂದ ಕೆಲವು ಸಂಸಾರಗಳೇ ಒಡೆದುಹೋಗುತ್ತಿವೆ.

ಹಬ್ಬದ ಸಮಯದಲ್ಲಿ ಮೊದಲೆಲ್ಲ ನಮ್ಮ ಗ್ರಾಮೀಣರು ಆಡುತ್ತಿದ್ದ ಎತ್ತಿನ ಬಂಡಿ ಸ್ಪರ್ಧೆ, ಹುಲಿವೇಷ, ಮೋಡಿ ವೇಷ, ಗ್ರಾಮೀಣ ಸಂಗೀತಗಳಾದ ಬಯಲಾಟ, ಲಾವಣಿ, ನೀರುಗ್ಗುವ ಸ್ಪರ್ಧೆಯಂತಹ ಗ್ರಾಮೀಣ ಕ್ರೀಡೆ ಹಾಗೂ ಮೋಜಿನ ಆಟಗಳಿರುವಾಗ ಕೂತಲ್ಲೇ ಕೂತು ಹಣ, ಸಮಯ ಎಲ್ಲವನ್ನೂ ಕಳೆದುಕೊಳ್ಳುವ ಜೂಜಾಟದ ಅಗತ್ಯ ಇದೆಯೇ? ಈ ಅನಿಷ್ಟ ಪದ್ಧತಿಗೆ ಕೊನೆಹಾಡಲು ಊರಿನ ಯುವ ಸಮುದಾಯ ಹಾಗೂ ಸಂಘ ಸಂಸ್ಥೆಗಳು ಮುಂದಾಗಬೇಕಿದೆ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಪ್ರಕೃತಿ ಭಾಷೆ ನಮಗೆ ಅರ್ಥವಾಗದೇಕೆ?

ನಮ್ಮ ಮನೆ ಎದುರಿಗೆ ಚುರುಮುರಿ ಮೂಟೆ ಹೊತ್ತು, ಮಾರುತ್ತಾ ಒಬ್ಬ ಬರುತ್ತಾನೆ. ಮತ್ತೊಬ್ಬ ಸೈಕಲ್ ಮೇಲೆ ಸೊಪ್ಪು ಹೊತ್ತು ತರುತ್ತಾನೆ. ಇಬ್ಬರ ಹತ್ತಿರವೂ ಇತ್ತೀಚೆಗೆ ನಾನು ಖರೀದಿ ಮಾಡುವಾಗ ಅವರ ಹೆಸರುಗಳನ್ನು ಕೇಳಿದ್ದೆ. ಆಗ ಇಬ್ಬರ ಮುಖಭಾವ, ಪ್ರತಿಕ್ರಿಯೆಗಳು ಒಂದೇ ರೀತಿ ಇದ್ದವು. ಹೆಸರು ಅರ್ಧಂಬರ್ಧ ಕೇಳುವಂತೆ, ಅಸ್ಪಷ್ಟವಾಗಿ ಗೊಣಗಿದ್ದರು. ನಂತರ ಅವರ ಮುಖಗಳಲ್ಲಿ ಪೆಚ್ಚುನಗೆ ಕಂಡಿತ್ತು. ಆ ಹೆಸರುಗಳ ಹಿಂದೆ ಅವರಿಬ್ಬರ ಜಾತಿ, ಮತ, ಹುಟ್ಟು, ಬದುಕು ಎಲ್ಲವೂ ಅಡಗಿವೆ. ಇಬ್ಬರೂ ಮುಸಲ್ಮಾನರು. ಹೆಸರು ಹೇಳಿಕೊಂಡ ನಂತರ, ನನ್ನ ಮುಖವನ್ನು ಬಿಡದ ಹಾಗೆ ನೋಡಿದ್ದರು. ಆ ಕ್ಷಣದಲ್ಲಿ, ನನ್ನ ಮನದಲ್ಲಿ ಏನು ಭಾವನೆ ಬಂದಿರಬಹುದು ಎಂಬುದನ್ನು ಅವರು ತಿಳಿಯಬೇಕಿತ್ತು.

ಎ.ನಾರಾಯಣ ಅವರ 'ಹಳೆಯ ಕರ್ನಾಟಕವನ್ನೇ ಉಳಿಯಗೊಡಿ, ಸಾಕು' (ಪ್ರ.ವಾ., ಏ. 1) ಎಂಬ ಲೇಖನವು ನನ್ನ ಕಣ್ಣಲ್ಲಿ ನೀರು ತಂದಿತು. ನಾವು ಎತ್ತ ಹೊರಟಿದ್ದೇವೆ? ಅಕಸ್ಮಾತ್, ಕೆಲವರ ಬಯಕೆಯಂತೆ ರಾಜ್ಯ ಹಾಗೂ ದೇಶವನ್ನು ಸಾರಿಸಿ, ಗುಡಿಸಿ 'ಸ್ವಚ್ಛ ಭಾರತ' ನಿರ್ಮಾಣವಾಯಿತು ಅಂತಲೇ ಭಾವಿಸೋಣ. ಆಗ ಈ ದ್ವೇಷದ ಕಿಡಿ ಆರುತ್ತದೆಯೇ? ನಾವೆಲ್ಲರೂ ನಿಜಕ್ಕೂ ಆನಂದಮಯವಾದ ನಾಡಲ್ಲಿ ಬದುಕುತ್ತೇವಾ? ಅಭಿವೃದ್ಧಿ ಕಾಣುತ್ತೇವಾ? ದ್ವೇಷ ಎಂಬುದು ಒಳಗೆ ಉರಿಯುವ ಒಂದು ಜ್ವಾಲಾಮುಖಿಯಂತೆ. ಈ ಭಾವನೆಯನ್ನು ದೇಹ, ಮನಸ್ಸಿನಿಂದ ಕಿತ್ತು ಹಾಕುವುದು ಸುಲಭವಲ್ಲ. ಈಗ ಮುಸ್ಲಿಂ ದ್ವೇಷವಿದ್ದರೆ ಆಗ ಮತ್ತೊಂದು ದ್ವೇಷ ಹುಟ್ಟುಹಾಕಬಲ್ಲೆವು. ಪ್ರಜಾಪ್ರಭುತ್ವ, ಸಮಾನತೆ, ನಮ್ಮ ರಾಷ್ಟ್ರ ಬದುಕಿನ ರೀತಿ, ಇವು ಈಗ ನಿಜಕ್ಕೂ ಅರ್ಥವಾಗುವ ಭಾಷೆಗಳಾಗಿ ಉಳಿದಿಲ್ಲ.

ನೀವೂ ಉಸಿರಾಡಿ ನಮಗೂ ಉಸಿರಾಡಲು ಬಿಡಿ, ನೀವೂ ಬದುಕಿ, ನಮಗೂ ಬದುಕಲು ಬಿಡಿ ಎಂಬುದು ಪ್ರಾಣಿ, ಪಶು, ಪಕ್ಷಿಗಳ ಬದುಕಿನ ಮೂಲ ಸೂತ್ರ. ಇಂಥ ಸರಳವಾದ ಪ್ರಕೃತಿ ಭಾಷೆಯನ್ನು ಅರ್ಥ ಮಾಡಿಕೊಳ್ಳಲಾಗದ ಕ್ರೌರ್ಯವನ್ನು ಈಗ ಕಾಣುತ್ತಿದ್ದೇವೆ.

ಶ್ಯಾಮಲ ಗುರುಪ್ರಸಾದ್, ಹುಬ್ಬಳ್ಳಿ

ಮಾನ್ ಮಾದರಿ ನಡೆ

ಶಾಸಕರಾಗಿ ಎಷ್ಟು ಬಾರಿ ಆಯ್ಕೆಯಾದರೂ ಒಂದೇ ಅವಧಿಗೆ ಪಿಂಚಣಿ ನೀಡಲಾಗುವುದು ಎಂಬ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರ ಘೋಷಣೆ ಅಭಿನಂದನಾರ್ಹ. ಮಾನ್ ಅವರ ಈ ನಿರ್ಧಾರದಿಂದ ಸರ್ಕಾರದ ಬೊಕ್ಕಸಕ್ಕೆ ಉಳಿತಾಯವಾಗಲಿದೆ. ಇದನ್ನು ವಿರೋಧ ಪಕ್ಷಗಳು ಸಹ ಸ್ವಾಗತಿಸಿರುವುದು ಸಂತಸದ ವಿಷಯ. ಪಂಜಾಬ್ ಸರ್ಕಾರದ ಈ ನಿರ್ಧಾರವನ್ನು ಇತರ ರಾಜ್ಯಗಳು ಆದರ್ಶವಾಗಿ ಸ್ವೀಕರಿಸಿ ತಮ್ಮಲ್ಲೂ ಈ ನಿಯಮವನ್ನು ಜಾರಿಗೆ ತರಬೇಕು.

ಚನ್ನಕೇಶವ ಜಿ.ಕೆ., ತರೀಕೆರೆ

ದೈವ ಮನಸ್ಸಿನ ಕಲಾಮಂದಿರವಾಗಲಿ

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ಹಾಗೂ ನಯನ ರಂಗಮಂದಿರದ ಬಾಡಿಗೆ ಪರಿಷ್ಕರಣೆ ಕುರಿತ ಸಚಿವರ ಹೇಳಿಕೆ ಸ್ವಾಗತಾರ್ಹ. ಆದರೆ ಇಲ್ಲಿ ಆಗಬೇಕಿರುವ ಗುರುತರ ಬದಲಾವಣೆ ಎಂದರೆ, ರಂಗತಂಡವೊಂದು ಕಲಾಕ್ಷೇತ್ರವನ್ನು ಮೊದಲೇ ಕಾಯ್ದಿರಿಸಿದ್ದರೆ, ಅದೇ ದಿನ ಸರ್ಕಾರಿ ಕಾರ್ಯಕ್ರಮ ನಿಗದಿಯಾಯಿತೆಂಬ ಕಾರಣಕ್ಕೆ ರಂಗತಂಡಕ್ಕೆ ನೀಡಿದ್ದ ಬಳಕೆಯ ಅವಕಾಶವನ್ನು ಹಿಂಪಡೆಯುವ ಹಾಗಿಲ್ಲ. ಹಾಗೇನಾದರೂ ಪಡೆದರೆ ತಂಡಕ್ಕೆ ಆಗುವ ಆರ್ಥಿಕ ನಷ್ಟವನ್ನು ಸರ್ಕಾರ ಭರಿಸಬೇಕು.

ರಂಗಮಂದಿರವನ್ನು ಕಾಯ್ದಿರಿಸಿ ಪ್ರಭಾವಿಗಳು ಹಾಗೂ ಮಧ್ಯವರ್ತಿಗಳು ಕಾಳಸಂತೆಯಲ್ಲಿ ಮಾರಾಟ ಮಾಡಿಕೊಳ್ಳುವ ವಿಚಾರದಲ್ಲಿ ತೆಗೆದುಕೊಂಡಿರುವ ಕ್ರಮ ಎಷ್ಟರಮಟ್ಟಿಗೆ ಜಾರಿಗೆ ಬರುವುದೋ ಕಾದು ನೋಡಬೇಕು. ಅದೇನೇ ಇರಲಿ, ಅಂತಹ ವ್ಯಕ್ತಿ ಹಾಗೂ ಸಂಸ್ಥೆಯ ಮೇಲೆ ಅತ್ಯುಗ್ರ ಕ್ರಮ ಕೈಗೊಳ್ಳಬೇಕಿದೆ. ರವೀಂದ್ರ ಕಲಾಕ್ಷೇತ್ರವನ್ನು ವಾಣಿಜ್ಯ ಕೇಂದ್ರವನ್ನಾಗಿ ಮಾಡದೆ, ಭಕ್ತರು ನೀಡುವ ಕಾಣಿಕೆ ಪಡೆದು ಆಶೀರ್ವಾದ ನೀಡುವ ದೈವ ಮನಸ್ಸಿನ ಕಲಾಮಂದಿರ ಎಂಬಂತೆ ಪೋಷಿಸಬೇಕಿದೆ.

ಆರ್.ವೆಂಕಟರಾಜು, ಬೆಂಗಳೂರು

ಹಸಿರು ತೆರಿಗೆಯ ಕ್ರಮ ಸರಿಯಲ್ಲ

15 ವರ್ಷಕ್ಕೂ ಹೆಚ್ಚು ಹಳೆಯದಾದ ವಾಹನಗಳಿಗೆ ಫಿಟ್‌ನೆಸ್ ಸರ್ಟಿಫಿಕೇಟ್ ಪಡೆಯಲು ಹೆಚ್ಚು ತೆರಿಗೆ ವಿಧಿಸುವ ಕ್ರಮ ಅವೈಜ್ಞಾನಿಕವಾದುದು. ಹಳೆಯ ವಾಹನಗಳ ಓಡಾಟ ಕಡಿಮೆಯಾದರೆ ವಾಯುಮಾಲಿನ್ಯ ತಗ್ಗುತ್ತದೆ ಎಂಬುದನ್ನು ಒಪ್ಪಬಹುದು. ಆದರೆ ಅದೇ ಹಳೆಯ ವಾಹನಗಳಿಗೆ ಹೆಚ್ಚು ದಂಡ ವಿಧಿಸಿ ಫಿಟ್‌ನೆಸ್ ಸರ್ಟಿಫಿಕೇಟ್ ನೀಡಿದರೆ ಅವು ಕಡಿಮೆ ಹೊಗೆಯನ್ನೇನೂ ಉಗುಳುವುದಿಲ್ಲ. ಹಸಿರು ತೆರಿಗೆ ಹೆಚ್ಚಿಸುವುದರಿಂದ ಖಜಾನೆ ತುಂಬಿಸಬಹುದೇ ವಿನಾ ವಾಯುಮಾಲಿನ್ಯವನ್ನು ನಿಯಂತ್ರಣಕ್ಕೆ ತರಲಾಗದು. ಅದರ ಬದಲು, ಹಳೆಯ ವಾಹನಗಳಿಗೆ ಹೊಸ ತಂತ್ರಜ್ಞಾನ ಅಳವಡಿಸಿ, ನವೀನ ಮಾದರಿಯ ಉಪಕರಣ ಜೋಡಿಸುವುದನ್ನು ಕಡ್ಡಾಯ ಮಾಡಿದರೆ ವಾಯುಮಾಲಿನ್ಯ ತಗ್ಗಿಸಬಹುದು.

ಗಣಪತಿ ನಾಯ್ಕ್, ಕಾನಗೋಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತಕ್ಕೆ ಕಾಂಗ್ರೆಸ್ ಪಕ್ಷ ಅನಿವಾರ್ಯವೇ? ಆ ಪಕ್ಷದ ಪುನರುತ್ಥಾನ ಸಾಧ್ಯವೇ?

ದೇಶದ ಉಳಿವಿಗೆ ಕಾಂಗ್ರೆಸ್ ಅಗತ್ಯ

ಹೌದು, ವಾಸ್ತವಿಕ ಚಿತ್ರಣವು ಕಠೋರವಾಗಿದೆ. ಭಾರತದ ಮಾಧ್ಯಮದ ಸಂಪಾದಕೀಯ ಕೊಠಡಿಗಳಲ್ಲಿ ವಿಷದ ಮುಳ್ಳುಗಳನ್ನು ಪ್ರತಿದಿನ ಹರಿತಗೊಳಿಸುತ್ತಲೇ ಬರಲಾಗುತ್ತಿದೆ. ಮೇಲಿನ ಯಾವ ಸಂಗತಿಗಳನ್ನೂ ಅಲ್ಲಗಳೆಯದೇ ಒತ್ತಿಹೇಳಬೇಕಾದ ಮಾತೆನೆಂದರೆ ಕಾಂಗ್ರೆಸ್ ಪಕ್ಷವಿಲ್ಲದ ಭಾರತವನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಆ ಪಕ್ಷ ಏನನ್ನು ಪ್ರತಿನಿಧಿಸುವುದೋ ಮತ್ತು ಅದು ಯಾವ ಸ್ಥಳವನ್ನು ತುಂಬಿದೆಯೋ –ಅವುಗಳು ದೇಶ ಉಳಿಯಲು ಮತ್ತು ಬೆಳೆಯಲು ಬೇಕೇಬೇಕು

• ಶಶಿ ತರೂರ್

ಐದು ರಾಜ್ಯಗಳ ಚುನಾವಣಾ ಫಲಿತಾಂಶವು ಕಾಂಗ್ರೆಸ್ ಪಕ್ಷದ ಒಳಗೆ ಮಾತ್ರವಲ್ಲ; ಅದರ ಹೊರ ಆವರಣದ ಸುತ್ತಲೂ ಕತ್ತಿಗಳನ್ನು ಝಳಪಿಸುವಂತೆ ಮಾಡಿದೆ. ಹಾಗೆಯೇ ಈ 'ಗ್ರ್ಯಾಂಡ್ ಓಲ್ಡ್ ಪಾರ್ಟಿ'ಗೆ ಶ್ರದ್ಧಾಂಜಲಿ ಸಲ್ಲಿಸಿ ಲೇಖನಗಳನ್ನು ಬರೆಯುವಲ್ಲಿ ಹಲವು ಪೆನ್ನುಗಳೂ ಕಾರ್ಯಪ್ರವೃತ್ತವಾಗಿವೆ. ಫಲಿತಾಂಶದ ಕುರಿತು ಮಾಹಿತಿ ತಂದ ಸುದ್ದಿಯು ಪಕ್ಷದ ಪಾಲಿಗೆ ಖಂಡಿತವಾಗಿಯೂ ನಿರೀಕ್ಷಿಸಿದ್ದಕ್ಕಿಂತ ಕೆಟ್ಟದ್ದಾಗಿತ್ತು. 'ಇದೊಂದು ಸಂಪೂರ್ಣ ಸೋಲು. ಪಕ್ಷ ಉತ್ತಮ ಸಾಧನೆ ಮಾಡಲಿದೆ ಎಂದು ನಿರೀಕ್ಷಿಸಿದ್ದ ರಾಜ್ಯಗಳಲ್ಲೂ ಗೆಲುವು 'ಕೈ' ತಪ್ಪಿ ಹೋಗಿದ್ದಕ್ಕೆ ಯಾವುದೇ ಸಮಾಧಾನವನ್ನು ಕೊಟ್ಟುಕೊಳ್ಳುವುದು ಸಾಧ್ಯವೇ ಇಲ್ಲ.

ಐದು ವರ್ಷಗಳಿಂದ ಆಡಳಿತ ನಡೆಸಿದ್ದ ಪಂಜಾಬ್‌ನಲ್ಲಿಯೂ ನಾವು ಅಧಿಕಾರವನ್ನು ಕಳೆದುಕೊಂಡೆವು. ಎಂಟು ತಿಂಗಳ ಹಿಂದಿನವರೆಗೂ ನಾವು ಅಲ್ಲಿ ಪುನರಾಯ್ಕೆ ಆಗುವುದು ಖಚಿತವಾಗಿತ್ತು. ಆದರೆ, ಕೊನೆಗೆ ದೊರೆತದ್ದು ಹೀನಾಯ ಸೋಲು. ಅದೇ ಉತ್ತರಾಖಂಡ ಮತ್ತು ಗೋವಾ ರಾಜ್ಯಗಳಲ್ಲಿ ನಮ್ಮ ಪಕ್ಷ ಸೋಲು ಕಂಡದ್ದು ಅದು ವಿಲಕ್ಷಣವೆನಿಸಿತು. ಮಣಿಪುರದಲ್ಲಿ ಬಿಜೆಪಿಯ ಸಮಸ್ಯೆಗಳನ್ನು ಲಾಭ ಮಾಡಿಕೊಳ್ಳುವುದರಲ್ಲಿ ನಾವು ವಿಫಲವಾದೆವು. ಬಿಜೆಪಿ ಮತ್ತೆ ಅಧಿಕಾರಕ್ಕೆ ತಂದರು. ಇನ್ನು ಉತ್ತರ ಪ್ರದೇಶ. ಒಂದುಕಾಲದಲ್ಲಿ ಕಾಂಗ್ರೆಸ್‌ನಿಂದ ದೇಶಕ್ಕೆ ಐವರು ಪ್ರಧಾನಿಗಳನ್ನು ಕೊಟ್ಟಿದ್ದ ಈ ರಾಜ್ಯ, ನಮ್ಮ ಪಕ್ಷವನ್ನು ಹೇಗೆ ತಿರಸ್ಕರಿಸಿತೆಂದರೆ ನಮ್ಮನ್ನು ಕಣದಲ್ಲಿದ್ದ ಆಟಗಾರ ಎಂದೂ ಅಲ್ಲಿನ ಮತದಾರ ಪರಿಗಣಿಸಲಿಲ್ಲ.

ಇಷ್ಟು ಕೆಟ್ಟಸ್ಥಿತಿ ಸಾಲದೆಂಬಂತೆ ಸಂಖ್ಯೆಗಳು ಸಹ ದೇಶದಾದ್ಯಂತ ಪಕ್ಷಕ್ಕೆ ಬೆಂಬಲ ಕುಸಿಯುತ್ತಿರುವ ದುಃಖದ ಕಥೆಯನ್ನು ಹೇಳತೊಡಗಿದವು. ಕಾಂಗ್ರೆಸ್ ಪಕ್ಷದ ಮತಗಳಿಕೆ ಪ್ರಮಾಣವು ಎಂದಿಗೂ ಶೇ 30ಕ್ಕಿಂತ ಕೆಳಮಟ್ಟಕ್ಕೆ ಕುಸಿದಿರಲಿಲ್ಲ. ಆದರೆ, 2019ರ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷಗಳಿಸಿದ್ದು ಶೇ 19.49ರಷ್ಟು ಮತಗಳನ್ನು ಮಾತ್ರ. ಪಕ್ಷದ ಮತಬುಟ್ಟಿಯ ಗಾತ್ರ ನಾಟಕೀಯವಾಗಿ ಕುಗ್ಗಿಹೋದ ಕಥೆಯನ್ನು ರಾಜ್ಯದಿಂದ ರಾಜ್ಯಕ್ಕೆ ದೆಹಲಿಯ ಬೆಳವಣಿಗೆಗಳು ಬಲು ಚೆನ್ನಾಗಿ ಕಟ್ಟಿಕೊಡುತ್ತವೆ. 21ನೇ ಶತಮಾನದ ಆರಂಭಿಕ ಕಾಲಘಟ್ಟದಿಂದಲೂ ಸತತ ಮೂರು ಬಾರಿ ಈ ರಾಜ್ಯದಲ್ಲಿ ಅಧಿಕಾರದ ಗದ್ದುಗೆ ಹಿಡಿದಿದ್ದ ಕಾಂಗ್ರೆಸ್‌ನ ಮತಗಳಿಕೆ ಪ್ರಮಾಣವು 2020ರಲ್ಲಿ ಶೇ 40.31ರಿಂದ ಶೇ 4.36ಕ್ಕೆ ಕುಸಿದಿತ್ತು. ಹಲವು ರಾಜ್ಯಗಳಲ್ಲಿ ಮತಗಳಿಕೆ ಪ್ರಮಾಣ ಇನ್ನೂ ಕುಸಿಯುತ್ತಲೇ ಇದ್ದು, ಕಾಂಗ್ರೆಸ್ ಪಕ್ಷ ಕೂಡ ಕಣದಲ್ಲಿದೆ ಎನ್ನುವುದನ್ನೇ ಕಡೆಗಣಿಸಲಾಗುತ್ತಿರುವುದು ಸ್ಪಷ್ಟ.

ಹೌದು, ವಾಸ್ತವಿಕ ಚಿತ್ರಣವು ಕಠೋರವಾಗಿದೆ. ಭಾರತದ ಮಾಧ್ಯಮದ ಸಂಪಾದಕೀಯ ಕೊಠಡಿಗಳಲ್ಲಿ ವಿಷದ ಮುಳ್ಳುಗಳನ್ನು ಪ್ರತಿದಿನ ಹರಿತಗೊಳಿಸುತ್ತಲೇ ಬರಲಾಗುತ್ತಿದೆ. ಈ ಯಾವ ಸಂಗತಿಗಳನ್ನೂ ಅಲ್ಲಗಳೆಯದೇ ಒತ್ತಿಹೇಳಬೇಕಾದ ಮಾತೆನೆಂದರೆ ಕಾಂಗ್ರೆಸ್ ಪಕ್ಷವಿಲ್ಲದ ಭಾರತವನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಆ ಪಕ್ಷ ಏನನ್ನು ಪ್ರತಿನಿಧಿಸುವುದೋ ಮತ್ತು ಅದು ಯಾವ ಸ್ಥಳವನ್ನು ತುಂಬಿದೆಯೋ – ಅವುಗಳು ದೇಶ ಉಳಿಯಲು ಮತ್ತು ಬೆಳೆಯಲು ಬೇಕೇಬೇಕು. ಪಕ್ಷವನ್ನು ಮುಖ್ಯವಾಗಿ ಅದರ ಮೌಲ್ಯಗಳು, ತತ್ವಗಳು ಮತ್ತು ನಂಬಿಕೆಗಳು ಮತ್ತು ಅವುಗಳನ್ನು ಕಾರ್ಯಗತಗೊಳಿಸಲು ಅದು ರೂಪಿಸುವ ನೀತಿಗಳಿಂದ ವ್ಯಾಖ್ಯಾನಿಸಲಾಗಿದೆ. ಆ ವಿಚಾರಗಳಿಗೆ ಪಕ್ಷವೇ ಸಂಘಟನಾ ವಾಹಕವೂ ಆಗಿದೆ. ಆದರೆ, ಆ ಹೊಣೆಗಾರಿಕೆ ನಿಭಾಯಿಸುವ ವಿಷಯದಲ್ಲಿ ಎಡವಿದ್ದು ಆಗಿದೆ.

ಕಾಂಗ್ರೆಸ್‌ನ ಡಿಎನ್‌ಎಯಲ್ಲಿ ಹೆಣೆದುಕೊಂಡ ಬಹು ಅಮೂಲ್ಯವಾದ ಮೌಲ್ಯವೆಂದರೆ ಅದರ ಜಾತ್ಯತೀತ ಮನೋಭಾವ. ದೇಶ ಇಬ್ಭಾಗವಾಗುವುದನ್ನು ಕಾಂಗ್ರೆಸ್ ತಡೆಯಲು ಯತ್ನಿಸಿತಾದರೂ ಅದು ಅನಿವಾರ್ಯವಾದಾಗ ಭಾರತೀಯ ಮುಸ್ಲಿಮರಿಗಾಗಿಯೇ ಪಾಕಿಸ್ತಾನ ದೇಶ ಜನ್ಮತಾಳಿದ್ದು ಮತ್ತು ಭಾರತ ಹಿಂದೂಗಳಿಗೆ ಸೇರಿದ್ದು ಎಂಬ ವಾದವನ್ನು ಎಂದಿಗೂ ಒಪ್ಪಲಿಲ್ಲ. ಜವಾಹರಲಾಲ್ ನೆಹರೂ ಅಥವಾ ಪಕ್ಷದ ಇತರ ನಾಯಕರು ಭಾರತವು ತನ್ನ ಚರಿತ್ರೆಗೆ, ನಾಗರಿಕತೆಗೆ ಕೊಡುಗೆ ಕೊಟ್ಟ ಎಲ್ಲರಿಗೂ ಸೇರಿದ್ದು ಎಂದು ಬಲವಾಗಿ ನಂಬಿದ್ದರು. ದೇಶದ ಬಹುಸಂಖ್ಯಾತ ಸಮುದಾಯವು ಅಲ್ಪಸಂಖ್ಯಾತ ಸಮುದಾಯದ ಹಕ್ಕುಗಳ ರಕ್ಷಣೆ ಮಾಡುವ, ಆ ಸಮುದಾಯದ ಉತ್ತಮ ಬದುಕಿಗೆ ನೆರವಾಗುವ ಹೊಣೆಗಾರಿಕೆಯನ್ನೂ ಹೊಂದಿದೆ ಎಂದು ಪ್ರತಿಪಾದಿಸಿದ್ದರು. ಸರ್ಕಾರದ ನೀತಿ ಮತ್ತು ವೈಯಕ್ತಿಕ ಆಚರಣೆ ಎರಡರಲ್ಲೂ, ಪ್ರತಿಯೊಂದು ಧರ್ಮ, ಜಾತಿ, ಜನಾಂಗ ಮತ್ತು ಭಾಷಾ ಸಮುದಾಯವನ್ನು ಸ್ವೀಕರಿಸುವ ಭಾರತದ ಕಲ್ಪನೆಯ ಪರವಾಗಿ ಕಾಂಗ್ರೆಸ್ ನಿಂತಿತು.

'ವಿವಿಧತೆಯಲ್ಲಿ ಏಕತೆ' ಸ್ವತಂತ್ರ ಭಾರತವನ್ನು ವ್ಯಾಖ್ಯಾನಿಸುವ ತುಂಬಾ ಪ್ರಬಲವಾದ ಘೋಷಣೆ. 1947ರಲ್ಲಿ ದೆಹಲಿಯಲ್ಲಿ ನಡೆದ ವಿಭಜನೆಯ ಗಲಭೆಗಳ ಸಮಯದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರ ಕ್ರಿಯೆಗಳು ಆ ಘೋಷಣೆಯ ಮೂರ್ತರೂಪವಾಗಿದ್ದವು. ಜಾತ್ಯತೀತ ಮನೋಭಾವದ ರಕ್ಷಣೆಗೆ ನಮ್ಮ ಪಕ್ಷದ್ದು ಬಲಿಷ್ಠ ಹಾಗೂ ಬದ್ಧತೆಯಿಂದ ಕೂಡಿದ ಧ್ವನಿಯಾಗಿದೆ. ನಮ್ಮ ಈ ಮೌಲ್ಯಗಳ ಮೇಲೆ ನಾವು ಇನ್ನಷ್ಟು ನಂಬಿಕೆಯಿಟ್ಟು ಮುನ್ನಡೆಯಬೇಕಿದೆ. ಹಿಂದೂ ರಾಷ್ಟ್ರದ ಮೂರ್ಖತನದ ಅನ್ವೇಷಣೆಯಲ್ಲಿ ಭಾರತೀಯ ಬಹುತ್ವವನ್ನು ಬಿಜೆಪಿ ಕೈಬಿಟ್ಟಿರುವುದು ಅಲ್ಪಸಂಖ್ಯಾತರಲ್ಲಿ ಅಸುರಕ್ಷಿತ ಮನೋಭಾವ ಹುಟ್ಟುಹಾಕಿದೆ.

ಬಿಜೆಪಿ ಮತ್ತು ನಮ್ಮ ಭಿನ್ನಾಭಿಪ್ರಾಯಗಳು ಸ್ಪಷ್ಟವಾಗಿವೆ. ನಾವು ಮುಸ್ಲಿಮರನ್ನು ಸಬಲೀಕರಣಗೊಳಿಸಲು ಪ್ರಯತ್ನಿಸುತ್ತೇವೆ, ಅವರನ್ನು ಘೆಟ್ಟೊಗಳಲ್ಲಿ ಸೀಮಿತಗೊಳಿಸಲು ಬಯಸುವುದಿಲ್ಲ. ನಾವು ಮುಸ್ಲಿಂ ಅಭ್ಯರ್ಥಿಗಳಿಗೆ ಚುನಾವಣಾ ಟಿಕೆಟ್ ನೀಡುತ್ತೇವೆ; ಸ್ವತಂತ್ರ ಭಾರತದ ಇತಿಹಾಸದಲ್ಲಿ ಲೋಕಸಭೆಯಲ್ಲಿ ಯಾವುದೇ ಚುನಾಯಿತ ಮುಸ್ಲಿಂ ಸಂಸದರನ್ನು ಹೊಂದಿರದ ಮೊದಲ ಸರ್ಕಾರ ಬಿಜೆಪಿ ನೇತೃತ್ವದ್ದಾಗಿದೆ. ತನ್ನ ಎರಡನೇ ಅವಧಿಯಲ್ಲೂ ಈ ಕೊರತೆಯನ್ನು ನಿವಾರಿಸಲು ಅದು ವಿಫಲವಾಗಿದೆ. ಬಿಜೆಪಿಯ ಬೆಂಬಲಿಗರು ಧ್ರುವೀಕರಣವನ್ನು ಉತ್ತೇಜಿಸಲು ಅಲ್ಪಸಂಖ್ಯಾತ ವಿರೋಧಿ ಹಿಂಸಾಚಾರವನ್ನು ಪ್ರಚೋದಿಸುತ್ತಾರೆ; ನಾವು ಜ್ವಾಲೆಯನ್ನು ನಂದಿಸಲು ಪ್ರಯತ್ನಿಸುತ್ತೇವೆ, ಕ್ರೋಧವನ್ನು ಎಂದಿಗೂ ಸಮರ್ಥಿಸುವುದಿಲ್ಲ. ನಾವು ಅಲ್ಪಸಂಖ್ಯಾತರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಕೆಲಸ ಮಾಡುತ್ತೇವೆ, ಬಿಜೆಪಿಯವರು ಈ ವಿಷಯವೇ ಅಪ್ರಸ್ತುತ ಎನ್ನುವ ನಾಟಕವಾಡುತ್ತಾರೆ. ರಾಷ್ಟ್ರಪಿತ ಮಹಾತ್ಮ ಗಾಂಧಿ ಪ್ರತಿಪಾದಿಸಿದ ಎಲ್ಲರನ್ನೂ ಒಳಗೊಂಡ ಸ್ವತಂತ್ರ, ಗಣತಂತ್ರ ಭಾರತವನ್ನು ಕಾಪಿಟ್ಟುಕೊಳ್ಳುವುದೇ ಕಾಂಗ್ರೆಸ್‌ನ ಹೆಬ್ಬಯಕೆಯಾಗಿದೆ.

ಕಾಂಗ್ರೆಸ್ ಪ್ರತಿಪಾದಿಸುತ್ತಿರುವ ಮೌಲ್ಯಗಳಲ್ಲಿ ಸಾಮಾಜಿಕ ನ್ಯಾಯವೂ ಒಂದು. ಆರ್ಥಿಕ ವಿಚಾರಗಳ ಕುರಿತು ಹೇಳುವುದಾದರೆ ಭಾರತ ನೆಹರೂಯುಗದ ಸಮಾಜವಾದದಿಂದ ದೂರ ಸರಿದು ದಶಕಗಳೇ ಆಗಿವೆ. ಕಾಂಗ್ರೆಸ್ ನೇತೃತ್ವದ ಸರ್ಕಾರ 1991ರಲ್ಲಿ ತಂದ ಆರ್ಥಿಕ ಸುಧಾರಣೆಗಳಿಂದಲೇ ಆ ಬದಲಾವಣೆಗಳು ಘಟಿಸಿವೆ. ನೆಹರೂ ಸಮಾಜವಾದವನ್ನು ಅಲ್ಲಗಳೆಯುವುದು ಇತ್ತೀಚೆಗೆ ಫ್ಯಾಷನ್ ಆಗಿಬಿಟ್ಟಿದೆ. ಸಮಾಜವಾದದ ಮಾದರಿಯಲ್ಲಿ ಹಲವು ಕೊರತೆಗಳು ಇದ್ದವು ಎನ್ನುವುದನ್ನು ನಾವು ನಿರಾಕರಿಸುವುದಿಲ್ಲ. ನೆಹರೂ ಅವರ ಸ್ವಂತ ಮೊಮ್ಮಗ ಕೂಡ ಇದನ್ನು ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ, ನೆಹರೂ ಅವರ ಸಮಾಜವಾದ ಬಡವರ ಕಲ್ಯಾಣದ ಉದ್ದೇಶವನ್ನು ಹೊಂದಿತ್ತು. ಅಂತ್ಯೋದಯದ ಕನಸನ್ನು ಅದು ಕಂಡಿತ್ತು.

ಸಂಪತ್ತು ವೃದ್ಧಿ ಹಾಗೂ ಹಂಚಿಕೆಯಲ್ಲಿ ಖಾಸಗಿ ಸಹಭಾಗಿತ್ವವನ್ನು ಕಾಂಗ್ರೆಸ್ ಪಕ್ಷವೂ ಬೆಂಬಲಿಸುತ್ತದೆ. ಕಾಂಗ್ರೆಸ್ ಕೊಟ್ಟ ಇಬ್ಬರು ಪ್ರಧಾನಿಗಳಾದ ನರಸಿಂಹರಾವ್ ಮತ್ತು ಮನಮೋಹನ್ ಸಿಂಗ್ ಉದಾರೀಕರಣದ ಹರಿಕಾರರು ಎಂಬುದನ್ನು ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತೇವೆ. ರಾಜೀವ್ ಗಾಂಧಿ ಅವರು ತಂತ್ರಜ್ಞಾನ ಮತ್ತು ಟೆಲಿಕಾಂ ವಲಯಕ್ಕೆ ಕೊಟ್ಟ ಉತ್ತೇಜನ, ರಾವ್ ಅವರ ಆರ್ಥಿಕ ಸುಧಾರಣೆ ಮತ್ತು ಸಿಂಗ್ ಅವರು ಜಾಗತೀಕರಣಕ್ಕೆ ನೀಡಿದ ವೇಗದಿಂದ ದೇಶ ಯಾವ ರೀತಿಯಲ್ಲಿ ಪ್ರಗತಿಯತ್ತ ದಾಪುಗಾಲು ಹಾಕಿತೆಂದರೆ 2008ರ ಆರ್ಥಿಕ ಹಿಂಜರಿತದಿಂದ ಸಂಕಷ್ಟಕ್ಕೆ ಸಿಲುಕದಂತೆ ಅದು ಬಚಾವಾಯಿತು. ಇಷ್ಟಾಗಿಯೂ ನಾವು ಸಮಾಜವಾದಿಗಳು ಎಂದು ಕರೆದುಕೊಳ್ಳಲು ಇಷ್ಟಪಡುತ್ತೇವೆ. ಏಕೆಂದರೆ, ಸಮಾಜದ ದುರ್ಬಲ ವರ್ಗದವರ ಏಳ್ಗೆಯೂ ನಮಗೆ ಮುಖ್ಯವಾಗಿದೆ. ಆದ್ದರಿಂದಲೇ ಮಾಹಿತಿ ಹಕ್ಕು (ಆರ್‌ಟಿಐ), ಶಿಕ್ಷಣ ಹಕ್ಕು (ಆರ್‌ಟಿಇ), ಉದ್ಯೋಗದ ಹಕ್ಕು, ಆಹಾರದ ಹಕ್ಕು, ಭೂಮಿಗೆ ನ್ಯಾಯಸಮ್ಮತ ಬೆಲೆ ಪಡೆಯುವ ಹಕ್ಕು ನಮ್ಮ ಪಕ್ಷದ ನೇತೃತ್ವದ ಸರ್ಕಾರಕ್ಕೆ ಮುಖ್ಯವಾಗಿವೆ.

ನೆಹರೂ ಅವರು ಭಾರತೀಯ ಬಾಹ್ಯಾಕಾಶ ಸಂಸ್ಥೆ, ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಸ್ಥಾಪಿಸಿ ಭದ್ರಬುನಾದಿ ಹಾಕಿದ್ದರಿಂದಲ್ಲವೇ ದೇಶ ತಂತ್ರಜ್ಞಾನ ಕ್ಷೇತ್ರದಲ್ಲಿ ಇಷ್ಟೊಂದು ಪ್ರಗತಿ ಸಾಧಿಸಿರುವುದು? ನೆಹರೂ ಪ್ರಣೀತವಾದ ವಿದೇಶಾಂಗ ನೀತಿ ಎಷ್ಟು ಪ್ರಬಲವಾದುದು ಎನ್ನುವುದನ್ನು ಮತ್ತೆ ವಿಸ್ತರಿಸಿ ಹೇಳಬೇಕಿಲ್ಲ. ರಾಷ್ಟ್ರೀಯ ಭದ್ರತೆಯನ್ನು ಕಾಂಗ್ರೆಸ್ ಎಷ್ಟೊಂದು ಗಂಭೀರವಾಗಿ ತೆಗೆದುಕೊಂಡಿತ್ತು ಎನ್ನುವುದಕ್ಕೆ ಬಾಂಗ್ಲಾದೇಶದ ವಿಷಯದಲ್ಲಿ ಇಂದಿರಾ ಗಾಂಧಿ ವಹಿಸಿದ ನಿರ್ಣಾಯಕ ಮಧ್ಯಸ್ಥಿಕೆಗಿಂತ ಬೇರೆ ಉದಾಹರಣೆ ಬೇಕಿಲ್ಲ. ಗಡಿ ತಂಟೆಯ ವಿಷಯವಾಗಿ ಚೀನಾ ಜತೆಗೆ ನಡೆದ ಸಮ್‌ದೊರೊಂಗ್ ಛು ಮುಖಾಮುಖಿಯಲ್ಲಿ ರಾಜೀವ್ ಗಾಂಧಿ ನಡೆದುಕೊಂಡ ರೀತಿಯೂ ಉಲ್ಲೇಖನಾರ್ಹ. ಚೀನಾದೊಂದಿಗೆ ಈಗಿನ ಗಡಿ ವಿವಾದದಲ್ಲಿ ಏನಾಯಿತು, ಮೋದಿ ನೇತೃತ್ವದ ಸರ್ಕಾರ ಹೇಗೆ ಎಡವಿತು ಎಂಬುದು ಇಡೀ ದೇಶಕ್ಕೆ ಗೊತ್ತಿದೆ.

ಭಾರತಕ್ಕೆ ತೀರಾ ಅಗತ್ಯವಾಗಿರುವ ಪಕ್ಷ ಕಾಂಗ್ರೆಸ್. ರಾಷ್ಟ್ರಮಟ್ಟದಿಂದ ಸ್ಥಳೀಯಮಟ್ಟದವರೆಗೆ ನಾಯಕತ್ವದಲ್ಲಿ ಬಿಸಿರಕ್ತದ ಹೊಸಮುಖಗಳಿಗೆ ಅವಕಾಶ ನೀಡುವ ಮೂಲಕ ಅದು ಪುನರುತ್ಥಾನದ ಹಾದಿ ಹಿಡಿಯಬೇಕು. ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವವನ್ನು ಬಲಗೊಳಿಸಬೇಕು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಚುನಾವಣೆ ಮೂಲಕವೇ ಸದಸ್ಯರನ್ನು ಆಯ್ಕೆ ಮಾಡಬೇಕು. ಆಡಳಿತ ಪಕ್ಷದ ವಿರುದ್ಧ ದಾಳಿ ನಡೆಸುವುದರಿಂದ ಕಾಂಗ್ರೆಸ್ ಮೇಲೆ ನಕಾರಾತ್ಮಕ ಪರಿಣಾಮವೇ ಹೆಚ್ಚು ಎನ್ನುವ ದೂರನ್ನು ನಾನು ನಿರಾಕರಿಸುವೆ. ದೇಶದ ಒಳಿತಿಗಾಗಿ ಸೂಕ್ತ ವಿಷಯಗಳನ್ನು ಮುಂದಿಟ್ಟುಕೊಂಡು ಧ್ವನಿ ಎತ್ತಲು ಹಿಂಜರಿಕೆ ಸಲ್ಲ. 'ಎಲ್ಲಿದೆ ಸಬ್‌ಕಾ ಸಾಥ್ ಸಬ್‌ಕಾ ವಿಶ್ವಾಸ್', 'ಯಾರಿಗೆ ಬಂತು ಅಚ್ಛೇ ದಿನ್' ಪ್ರಶ್ನೆಯನ್ನು ನಾವು ಕೇಳಬೇಕು. ಕೋವಿಡ್‌ನ ನಿರ್ವಹಣೆಯಲ್ಲಿ ಆದ ವೈಫಲ್ಯವನ್ನು ಎತ್ತಿತೋರಬೇಕು. ಪಕ್ಷ ಪುನರುತ್ಥಾನದತ್ತ ಸಾಗುವ ಹಾದಿಯೇ ಇದಾಗಿದೆ.

ಲೇಖಕ: ಕಾಂಗ್ರೆಸ್ ಸಂಸದ, (ಲೇಖನದ ಮೂಲ ಮತ್ತು ವಿಸ್ತೃತರೂಪ ಓಪನ್ ಮ್ಯಾಗಝಿನ್‌ನಲ್ಲಿ ಪ್ರಕಟ)

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 84

ಶಿವನ ಬಲಪಾರ್ಶ್ವದಲ್ಲಿ ಹುಟ್ಟಿದ ಬ್ರಹ್ಮ

ಈಗ ಬ್ರಹ್ಮ ತಾನು ವಿಷ್ಣುವಿನ ನಾಭಿಯಿಂದ ಹುಟ್ಟಿದ ಕತೆಯನ್ನು ನಾರದನಿಗೆ ಹೇಳುತ್ತಾನೆ.

'ಶಿವನ ಇಚ್ಛೆಯಂತೆ ನಾರಾಯಣನು 24 ತತ್ವಗಳೆಲ್ಲವನ್ನೂ ತೆಗೆದುಕೊಂಡು ಬ್ರಹ್ಮರೂಪವಾದ ಆ ನೀರಿನ ಮಲಗಿದ ನಂತರ ಅವನ ನಾಭಿಯಿಂದ ಶ್ರೇಷ್ಠವಾದ, ನಾನಾ ಎಸಳುಗಳು ಕಮಲವೊಂದು ಹೊರ ಬಂದಿತು. ಅದರ ಬಣ್ಣ ಕರ್ಣಿಕಾರವಾಗಿತ್ತು. ಅಂದರೆ ಬೆಟ್ಟದ ತಾವರೆಪುಷ್ಪದಂತೆ ಇತ್ತು. ಅದು ಅನೇಕ ಯೋಜನಗಳಷ್ಟು ಅಗಲವಾಗಿತ್ತು, ಎತ್ತರವಾಗಿತ್ತು. ಅದರ ಪ್ರಭೆಯು ಕೋಟಿ ಸೂರ್ಯರಿಗೆ ಸರಿಸಮವಾಗಿತ್ತು. ಅದು ಬಹು ಸುಂದರವಾಗಿ, ಅತಿ ರಮಣೀಯವಾಗಿ, ಮಹಾದ್ಭುತವಾಗಿ, ಪುನಃ ಪುನಃ ನೋಡಬೇಕು ಎಂದೆನಿಸುವಂತೆಯೂ ಅತ್ಯುತ್ತಮವಾಗಿ ಶೋಭಿಸುತ್ತಿತ್ತು.

'ಜಗಜ್ಜನನಿಯೊಡಗೂಡಿದ ಪರಮಪುರುಷನಾದ ಆ ಶಂಕರನು ತನ್ನ ಶರೀರದ ಬಲಭಾಗದಿಂದ ಬ್ರಹ್ಮನಾದ ನನ್ನನ್ನು ಸೃಷ್ಟಿಸಿದ. ಮಹೇಶ್ವರನು ನನ್ನನ್ನು ಮಾಯೆಯಿಂದ ಮೋಹಿತನನ್ನಾಗಿ ಮಾಡಿದ. ಒಡನೆಯೇ ನಾನು ಲೀಲಾಮಾತ್ರದಿಂದ ವಿಷ್ಣುವಿನ ನಾಭಿಕಮಲದಿಂದ ಹೊರಗೆ ಬರುವಂತೆ ಮಾಡಿದ. ಈ ರೀತಿಯಾಗಿ ನಾನು ಹುಟ್ಟುವಾಗಲೇ, ಹಿರಣ್ಯಗರ್ಭನೂ ನಾಲ್ಕು ಮುಖಗಳುಳ್ಳವನೂ ಕೆಂಪುಬಣ್ಣವುಳ್ಳವನೂ ಮೂರುಪಟ್ಟೆ ವಿಭೂತಿಯಿಂದ ಭೂಷಿತವಾದ ಲಲಾಟಪ್ರದೇಶವುಳ್ಳವನೂ ಆಗಿದ್ದೆ. ಆ ಶಿವನ ಪುತ್ರನಾದ ನಾನು ಕಮಲದಿಂದ ಕೂಡಿ ವಿಷ್ಣುವಿನ ನಾಭಿಯಿಂದ ಜಗತ್ತಿಗೆ ಬಂದೆ.

'ನಾನು ಶಿವನ ಮಾಯೆಯಿಂದ ಮೋಹಿತನಾಗಿ ಜ್ಞಾನವಿಲ್ಲದಂತಾಗಿದ್ದೆ. ಕಮಲವನ್ನು ಹೊರತು, ನನ್ನೀದೇಹಕ್ಕೆ ಕಾರಣಭೂತನಾದ ಆ ಜನಕ ಯಾರೆಂದು ಅರಿಯಲಿಲ್ಲ. ನಾನು ಯಾರು? ಎಲ್ಲಿಂದ ಬಂದೆ? ನನ್ನ ಕೆಲಸವಾದರೂ ಏನು? ನಾನು ಯಾರಿಗೆ ಮಗನಾಗಿ ಹುಟ್ಟಿದೆ? ನಾನೀಗ ಏಕೆ ಸೃಷ್ಟಿಸಲ್ಪಟ್ಟೆ? ಈ ಸಂಶಯಗಳಿಂದ ತೊಳಲುತ್ತಿದ್ದ ನನಗೆ ಇದ್ದಕ್ಕಿದ್ದಂತೆಯೇ ಒಂದು ವಿಚಾರ ಹೊಳೆಯಿತು. ನನಗೇಕೆ ಈ ರೀತಿ ಮಂಕು ಕವಿಯಿತು? ಈ ಅಜ್ಞಾನದಿಂದ ಹೊರಬರಲು ಜ್ಞಾನವನ್ನು ಸಂಪಾದಿಸುವುದು ಒಳ್ಳೆಯದಲ್ಲವೇ? ಈ ತಾವರೆಹೂವಿನ ಕೆಳಗಡೆ, ಅಂದರೆ, ಎಲೆಗಳು ಬೆಳೆದಿರುವ ಸ್ಥಳದಲ್ಲಿ ನನ್ನ ಜನಕನು ಇದ್ದೇ ಇರಬೇಕು. ಸಂಶಯವಿಲ್ಲ ಅಂದುಕೊಂಡೆ. ಓ ನಾರದ, ಹೀಗೆ ಬುದ್ಧಿಯುಂಟಾದ ಮೇಲೆ ನಾನು ಕಮಲದಿಂದ ಕೆಳಗಿಳಿದೆ. ನೂರು ವರ್ಷಗಳವರೆಗೂ ಅದರ ಪ್ರತಿಯೊಂದು ನಾಳದಲ್ಲಿಯೂ ಸುತ್ತಾಡಿದೆ.

'ಆದರೇನು ಫಲ? ನಾನು ಕಮಲದ ಬುಡವನ್ನು ಕಂಡುಹಿಡಿಯಲಾಗಲಿಲ್ಲ. ಪುನಃ ನನ್ನನ್ನು ಸಂಶಯ ಆವರಿಸಿತು. ಆಮೇಲೆ ಕಮಲದ ಮೇಲಿನ ಕೊನೆಯನ್ನು ಕಾಣಬೇಕೆಂದು ಇಚ್ಛೆಯುಂಟಾಯಿತು. ಬಳಿಕ ಆ ಕಮಲದ ದಂಟಿನ ಮಾರ್ಗವಾಗಿ ಮೇಲೇರತೊಡಗಿದೆ. ಮಾಯಾಮೋಹಿತನಾದ ನಾನು ಆ ಕಮಲದ ಮೊಗ್ಗನ್ನೂ ಹೊಂದಲಾಗಲಿಲ್ಲ. ಮತ್ತೆ ನಾನು ನಾನಾ ಮಾರ್ಗದಲ್ಲಿ ಸುತ್ತುತ್ತಿರುವಂತೆಯೇ ನೂರು ವರ್ಷಗಳು ಕಳೆದುಹೋದವು. ಆಗ ನಾನು ಒಂದು ದಿನ ಅಲ್ಲಿಯೇ ಕ್ಷಣಕಾಲ ಮಂಕುಹಿಡಿದವನಂತೆ ನಿಂತುಬಿಟ್ಟಂಥ ಪ್ರಸಂಗ ಜರುಗಿತು.

'ಎಲೈ ನಾರದಮುನಿಯೇ, ಆಗ ನನಗೆ ಶಿವನ ಇಚ್ಛೆಯಿಂದ, ಮೋಹವನ್ನು ಧ್ವಂಸಗೊಳಿಸುವಂಥ ಪರಮಶುಭಕರವಾದ, ಶ್ರೇಷ್ಠವಾದ, 'ತಪ' ಎಂದರೆ ತಪಸ್ಸನ್ನು ಮಾಡು ಎಂಬ ಮಾತು ಕೇಳಿಬಂದಿತು. ನನ್ನ ಜನಕನನ್ನು ಕಾಣಬೇಕೆಂಬ ಹಿರಿಯಾಸೆಯಿಂದ ಮತ್ತೆ ಹನ್ನೆರಡು ವರ್ಷಗಳ ಕಾಲ ಘೋರವಾದ ತಪಸ್ಸನ್ನಾಚರಿಸಿದೆ. ಆಗ ನನ್ನ ಮುಂದೆ ನಾಲ್ಕು ತೋಳುಗಳಿಂದ ಮತ್ತು ಒಳ್ಳೆಯ ಕಣ್ಣುಗಳಿಂದ ಶೋಭಿಸುತ್ತಿದ್ದ ಭಗವಂತನಾದ ನಾರಾಯಣ ಆವಿರ್ಭವಿಸಿದ. ಆತ ತನ್ನ ನಾಲ್ಕು ಕೈಗಳಲ್ಲೂ ಶಂಖ, ಚಕ್ರ, ಗದಾ, ಪದ್ಮಗಳನ್ನು ಧರಿಸಿದ್ದ. ನೀರು ತುಂಬಿದ ಮೇಘದಂತೆ ಆತನ ಶರೀರಕಾಂತಿಯು ಶ್ಯಾಮಲವಾಗಿತ್ತು. ಹೊಂಬಣ್ಣದ ಪಟ್ಟೆಮಡಿಯನ್ನುಟ್ಟಿದ್ದ. ಕಿರೀಟವೇ ಮೊದಲಾದ ಆಭರಣಗಳಿಂದ ಅಲಂಕೃತನಾಗಿದ್ದ. ನಗುತ್ತಿರುವ ಆತನ ಮುಖವು ಕಮಲವನ್ನು ಹೋಲುತ್ತಿತ್ತು. ಸೌಂದರ್ಯದಲ್ಲಿ, ಕೋಟಿ ಮನ್ಮಥರು ಒಟ್ಟಿಗೆ ಬಂದು ನಿಂತರೂ ಆತನನ್ನು ಸರಿಗಟ್ಟಲಾರರು. ಅಂತಹ ವೈಭವದಿಂದ ಮೆರೆಯುತ್ತಿದ್ದ ನಾರಾಯಣನನ್ನು ಶಿವಮಾಯಾಮೋಹಿತನಾದ ನಾನು ಕಂಡೆ' ಎಂದು ಬ್ರಹ್ಮ ನಾರದನಿಗೆ ತನ್ನ ಹುಟ್ಟಿನ ಕತೆಯನ್ನು ಹೇಳತೊಡಗುತ್ತಾನೆ.

ಕಾಂಗ್ರೆಸ್ ರಾಜಕೀಯ ಸಂಸ್ಕೃತಿ ಮುಕ್ತ ಭಾರತ

• ಸಿ.ಟಿ.ರವಿ

ವಿಪಕ್ಷಗಳಿದ್ದರಷ್ಟೇ ಪ್ರಜಾಪ್ರಭುತ್ವಕ್ಕೆ ಮೆರಗು. ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದಂತೆ ಒಂದೊಂದು ರಾಜಕೀಯ ಪಕ್ಷಕ್ಕೆ ಒಂದೊಂದು ಸಂಸ್ಕಾರ, ಸಂಸ್ಕೃತಿ ಇರುತ್ತದೆ. ಕಾಂಗ್ರೆಸ್ ಸಂಸ್ಕೃತಿಯಲ್ಲಿ ಆಂತರಿಕ ಪ್ರಜಾಪ್ರಭುತ್ವದ ಸೌಂದರ್ಯವೇ ಇಲ್ಲ

'ಸ್ವಾತಂತ್ರ್ಯಪೂರ್ವ ಕಾಂಗ್ರೆಸ್ ಪಕ್ಷವನ್ನು ಸ್ವಾತಂತ್ರ್ಯಾನಂತರ ಸಂಪೂರ್ಣವಾಗಿ ವಿಸರ್ಜಿಸಬೇಕು. ಏಕೆಂದರೆ ಅದೊಂದು ಸ್ವಾತಂತ್ರ್ಯ ಹೋರಾಟಗಾರರ ವೇದಿಕೆ. ಅನೇಕರ ತ್ಯಾಗ, ಬಲಿದಾನಗಳ ಫಲವಾಗಿ ಸ್ವಾತಂತ್ರ್ಯ ಬಂದಿತು. ಹಾಗಾಗಿ ಯಾರೂ ಸಹ ಕಾಂಗ್ರೆಸ್ ಪಕ್ಷವನ್ನು ದುರುಪಯೋಗಪಡಿಸಿಕೊಳ್ಳಬಾರದು. ಕಾಂಗ್ರೆಸ್ ಪಕ್ಷವನ್ನು ವಿಸರ್ಜನೆ ಮಾಡಿ ನಿಮ್ಮ ಇಚ್ಛೆಯಂತೆ ಪಕ್ಷಗಳನ್ನು ಕಟ್ಟಿಕೊಂಡು ಆಡಳಿತ ನಡೆಸಿ' ಎಂದು ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರೇ ಪ್ರತಿಪಾದಿಸಿದ್ದರು.

ಒಂದು ವೇಳೆ ಗಾಂಧೀಜಿ ಹತ್ಯೆಯಾಗದೇ ಇದ್ದಿದ್ದರೆ ಅವರು ಕಾಂಗ್ರೆಸ್ ಪಕ್ಷದ ವಿಸರ್ಜನೆಗೆ ಹೋರಾಟ ಮಾಡುತ್ತಿದ್ದರೇನೋ! ಸ್ವಾತಂತ್ರ್ಯಪೂರ್ವ ಕಾಂಗ್ರೆಸ್ ಪಕ್ಷದ ಆಶಯಗಳಿಗೆ ಗಾಂಧೀಜಿಯ ವಾರಸುದಾರ ಎನ್ನುವವರು ಧಕ್ಕೆ ತಂದಿದ್ದಾರೆ. ಸೇವೆಯ ಬದಲಿಗೆ ಸ್ವಜನಪಕ್ಷಪಾತವನ್ನು, ಪಾರದರ್ಶಕತೆಯ ಬದಲಿಗೆ ಕೆಂಪು ಪಟ್ಟಿಯನ್ನು, ರಾಷ್ಟ್ರೀಯ ಹಿತಾಸಕ್ತಿ ಬದಲಿಗೆ ಮತ ಬ್ಯಾಂಕ್ ಹಿತಾಸಕ್ತಿಯನ್ನು ರೂಪಿಸಿಕೊಂಡು ಪ್ರಜಾಪ್ರಭುತ್ವ ವ್ಯವಸ್ಥೆಯ ಕತ್ತು ಹಿಸುಕಿದ್ದಾರೆ. ಹೊರಗಡೆ ಪ್ರಜಾಪ್ರಭುತ್ವದ ಬಗ್ಗೆ ಭಾಷಣ ಮಾಡುತ್ತಾರೆ. ಒಳಗೆ ತಮ್ಮ ವಂಶಪಾರಂಪರ್ಯದ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಪ್ರಜಾಪ್ರಭುತ್ವ ಎಂದರೆ ಜನರ ಮೂಸೆಯಿಂದ ನಾಯಕ ತಯಾರಾಗಿ ಜನರ ಮಧ್ಯೆಯಿಂದ ಆಯ್ಕೆಯಾಗಿ ಬರಬೇಕು. ಆದರೆ ಕಾಂಗ್ರೆಸ್, ರಾಜಪ್ರಭುತ್ವದ ಮಾದರಿಯನ್ನು ಪಕ್ಷದ ಒಳಗೆ ಅಳವಡಿಸಿಕೊಂಡು ಹಣ, ಅಧಿಕಾರದ ಬಲದಿಂದ ನಿಯಂತ್ರಿಸುವುದು ಎಷ್ಟರ ಮಟ್ಟಿಗೆ ಸರಿ? ಇದು ಪ್ರಜಾಪ್ರಭುತ್ವಕ್ಕೆ ಮಾರಕವಲ್ಲವೇ?

ದೇಶ ಬ್ರಿಟಿಷರಿಂದ ಬಂಧಮುಕ್ತವಾದ ಮೇಲೆ ಕಾಂಗ್ರೆಸ್ ಪಕ್ಷದಲ್ಲಿ ಸಂಸ್ಕೃತಿಯ ಅಧಃಪತನ ಆರಂಭವಾಯಿತು. ಇತ್ತೀಚೆಗೆ ನಡೆದ ಪಂಚರಾಜ್ಯಗಳ ಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯವಾಗಿ ಸೋತಿದೆ. 'ಕಾಂಗ್ರೆಸ್ ಮುಕ್ತ ಭಾರತ' ಅಂದರೆ ಕಾಂಗ್ರೆಸ್ ಐತಿಹಾಸಿಕ ಸಿದ್ಧಾಂತಗಳನ್ನು ಸರ್ವನಾಶ ಮಾಡವುದು ಅಲ್ಲ. ಕಾಂಗ್ರೆಸ್ ಮುಕ್ತ ಎಂದರೆ ಸ್ವಜನಪಕ್ಷಪಾತಮುಕ್ತ. ಭ್ರಷ್ಟಾಚಾರ ಮುಕ್ತ ಪಕ್ಷವಾಗಬೇಕು. ಜಾತಿಯತೆ ಮುಕ್ತ ಪಕ್ಷವಾಗಬೇಕು. ವಂಶಪಾರಂಪರ್ಯಮುಕ್ತ ಪಕ್ಷವಾಗಬೇಕು. ಒಂದು ಕಾಲದಲ್ಲಿ ಸಮೃದ್ಧವಾಗಿ ನಳನಳಿಸುತ್ತಿದ್ದ ಕಾಂಗ್ರೆಸ್ ಪಕ್ಷಕ್ಕೆ ಬರಸಿಡಿಲು ಬಡಿಯಲು ಕಾರಣ ಏನು ಎಂಬುದಕ್ಕೆ ಆತ್ಮಾವಲೋಕನ ಅಗತ್ಯವಿದೆ. ಅಧಿಕಾರ ಇದ್ದಾಗ ಸಿದ್ಧಾಂತಗಳನ್ನು ಗಾಳಿಗೆ ತೂರಿ, ಆನೆ ನಡೆದಿದ್ದೇ ದಾರಿ ಎಂದರೆ ಹೇಗೆ? ಆನೆಗೂ ವಯಸ್ಸಾಗುತ್ತದೆ. ಆದರೆ ಭುವಿಯೊಳಗಿನ ಸತ್ವಕ್ಕೆ ವಯಸ್ಸಾಗುವುದಿಲ್ಲ. ಆನೆ ನಡೆದ ದಾರಿಯಲ್ಲಿ ಗರಿಕೆ ಹುಟ್ಟಿ ಮತ್ತೆ ದಾರಿ ಮಾಯವಾಗುವುದು ಸಹಜ ಪ್ರಕ್ರಿಯೆ.

ಕಾಂಗ್ರೆಸ್ ಆಗಲಿ, ಬೇರೆ ಪಕ್ಷವಾಗಲಿ ರಾಜಕೀಯ ಪರಿಧಿಯಿಂದ ಶಾಶ್ವತವಾಗಿ ಮುಕ್ತವಾಗಬೇಕು ಎನ್ನುವ ಸೀಮಿತ ಉದ್ದೇಶ ನಮ್ಮದಲ್ಲ. ವಿಪಕ್ಷಗಳಿದ್ದರಷ್ಟೇ ಪ್ರಜಾಪ್ರಭುತ್ವಕ್ಕೆ ಮೆರುಗು. ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಪಾದಿಸಿದಂತೆ ಒಂದೊಂದು ರಾಜಕೀಯ ಪಕ್ಷಕ್ಕೆ ಒಂದೊಂದು ಸಂಸ್ಕಾರ, ಸಂಸ್ಕೃತಿ ಇರುತ್ತದೆ. ಆದರೆ ಕಾಂಗ್ರೆಸ್ ಸಂಸ್ಕೃತಿಯಲ್ಲಿ ಆಂತರಿಕ ಪ್ರಜಾಪ್ರಭುತ್ವದ ಸೌಂದರ್ಯವೇ ಇಲ್ಲ.

ದೇಶದ ಮೊದಲ ಪ್ರಧಾನಿ ನೆಹರೂ, ನಂತರ ಮಗಳು ಇಂದಿರಾಗಾಂಧಿ, ನಂತರ ಅವರ ಮಗ ರಾಜೀವ್ ಗಾಂಧಿ ಅಧಿಕಾರ ಹಿಡಿದರು. ನೆಹರೂ ಮತ್ತು ಇಂದಿರಾ ಮಧ್ಯೆ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಪ್ರಧಾನಿ ಆದರೂ, ವಿಧಿಯಾಟಕ್ಕೆ ಬಲಿಯಾದರು. ವಂಶಪಾರಂಪರ್ಯ ಆಡಳಿತಕ್ಕೆ ಜೋತು ಬಿದ್ದು ಅಧಿಕಾರದ ದಾಹ ತೀರಿಸಿಕೊಳ್ಳಲು ರಾಜಕಾರಣ ಮಾಡುವವರೆಲ್ಲ ಪ್ರಜಾಪ್ರಭುತ್ವದ ಪ್ರತಿಪಾದಕರೇ? ಕಾಂಗ್ರೆಸ್ ನಾಯಕರಿಗೆ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ.

ಕಾಂಗ್ರೆಸ್‌ನ ಚುಕ್ಕಾಣಿ ಹಿಡಿಯುವಲ್ಲಿ ಸೋನಿಯಾ ಗಾಂಧಿ ಅವರ ನಂತರ ಅವರ ಪುತ್ರ ರಾಹುಲ್ ಗಾಂಧಿ. ಭವಿಷ್ಯದಲ್ಲಿ ಪ್ರಿಯಾಂಕಾ ಗಾಂಧಿ ವಾದ್ರಾ ಪಟ್ಟಕ್ಕೇರಬಹುದೇನೋ? ಅವರಿಗೆ ಕೌಟುಂಬಿಕ ವಾರಸುದಾರಿಕೆಯಿಂದ ಹೊರಬರುವ ಚಿಂತನೆಯೇ ಇಲ್ಲ. ಪಕ್ಷ ಅವರ ಕಪಿ ಮುಷ್ಠಿಯಲ್ಲಿರಬೇಕು ಎಂಬ ಉತ್ಕಟ ಬಯಕೆ.

'ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ' ಎಂಬ ಗಾದೆ ಮಾತಿನಂತೆ ಉಳಿದ ಪ್ರಾದೇಶಿಕ ಪಕ್ಷಗಳು ಸಹ ಅಧಿಕಾರದ ಲಾಲಸೆಗೆ ಜೋತು ಬಿದ್ದಿವೆ. ಉದಾಹರಣೆಗೆ ನ್ಯಾಷನಲ್ ಕಾನ್ಫರೆನ್ಸ್, ಮಹಾರಾಷ್ಟ್ರದಲ್ಲಿ ಎನ್‌ಸಿಪಿ, ಬಿಹಾರದಲ್ಲಿ ಆರ್‌ಜೆಡಿ, ತಮಿಳುನಾಡಿನಲ್ಲಿ ಡಿಎಂಕೆ, ಕರ್ನಾಟಕದಲ್ಲಿ ಜೆಡಿಎಸ್, ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷಗಳಲ್ಲಿ ಕಾಂಗ್ರೆಸ್ ಸಂಸ್ಕೃತಿಯೇ ಅವ್ಯಾಹತವಾಗಿ ಬೆಳೆದುಬಂದಿದೆ. ಜಾತ್ಯತೀತ ಹೆಸರಿನಲ್ಲಿ ಜಾತಿ ರಾಜಕರಣ, ಓಲೈಕೆ ರಾಜಕಾರಣ ಮಾಡಲಾಗುತ್ತಿದೆ. ಜಾತ್ಯತೀತತೆಗೆ ನಿಜವಾದ ಪರಿಭಾಷೆ ಸರ್ವಧರ್ಮ ಸಮಭಾವ. ಆದರೆ ಪ್ರಸ್ತುತ ಸನ್ನಿವೇಶದಲ್ಲಿ ನಿಜವಾದ ಪರಿಭಾಷೆ ಅದಲ್ಲ.

ಅಲ್ಪಸಂಖ್ಯಾತರ ಓಲೈಕೆ ಮಾಡಿದರೆ ಆ ಪಕ್ಷ ಜಾತ್ಯತೀತ. ಬಹುಸಂಖ್ಯಾತರನ್ನು ದೂಷಿಸಿದರೆ ಆ ನಾಯಕ ಅಥವಾ ಪಕ್ಷ ಜಾತ್ಯತೀತ. ಜಾತಿ ರಾಜಕಾರಣ ಮಾಡಿದರೆ ಅ ಪಕ್ಷ ಜಾತ್ಯತೀತ. ಮುಸ್ಲಿಂ ಅಥವಾ ಕ್ರಿಶ್ಚಿಯನ್ ಓಲೈಕೆ ರಾಜಕಾರಣ ಮಾಡಿದರೆ ಜಾತ್ಯತೀತ ನಾಯಕ. ಆದರೆ ಹಿಂದೂ ಓಲೈಕೆ ಮಾಡಿದರೆ ಕೋಮುವಾದಿ. ಹಿಂದುತ್ವದ ರಾಜಕಾರಣ ಮಾಡಿದರೆ ಆ ಪಕ್ಷ ಅಥವಾ ನಾಯಕ ಕೋಮುವಾದಿ ಎಂಬ ಪಟ್ಟ ಕಟ್ಟುವ ಕೀಳು ಮನಸ್ಥಿತಿಯ ಸೋ ಕಾಲ್ಡ್ ನಾಯಕರಲ್ಲಿನ ಬೌದ್ಧಿಕ ದಿವಾಳಿತನಕ್ಕೆ ಅವರ ಈ ನಡೆಯೇ ಸಾಕ್ಷಿ. ಆ ರೀತಿ ಸನ್ನಿವೇಶ ಸೃಷ್ಟಿಸಿದ್ದೇ ಕಾಂಗ್ರೆಸ್ ಪಕ್ಷ.

ನಿಜವಾದ ಜಾತ್ಯತೀತತೆ ಅಂದರೆ 'ಸಬ್‌ಕಾ ಸಾತ್, ಸಬ್‌ಕಾ ವಿಕಾಸ್, ಸಬ್‌ಕಾ ಪ್ರಯಾಸ್ ಸಬ್‌ಕಾ ನ್ಯಾಯ್'. ನಮ್ಮ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯಾವುದೇ ಯೋಜನೆಗಳಲ್ಲಿ ಜಾತಿಯ ಸೋಂಕಿಲ್ಲ. ಆದರೆ ಕಾಂಗ್ರೆಸ್ ಯೋಜನೆಗಳಲ್ಲಿ (ಶಾದಿಭಾಗ್ಯ ಮತ್ತಿತರ ಯೋಜನೆಗಳು) ಜಾತಿಯ ಸೋಂಕು ಕೋವಿಡ್ ಸೋಂಕಿನಂತೆ ವ್ಯಾಪಿಸಿತ್ತು. ಸೈನ್ಯದಲ್ಲಿ ನಿಷ್ಠೆಯಿಂದ ದೇಶ ರಕ್ಷಿಸುವ ಸೈನಿಕರಲ್ಲೂ ಜಾತಿ ಹುಡುಕುವ ಕೆಲಸ ಮಾಡಿದ್ದು ಯಾರು?

ಇನ್ನು ಭ್ರಷಾಚಾರದ ವಿಷಯಕ್ಕೆ ಬಂದರಂತೂ ನೆಹರೂ ಕಾಲದಲ್ಲಿ ನಡೆದ ದೊಡ್ಡ ಭ್ರಷ್ಟಾಚಾರದ ಹಗರಣಗಳ ಪೈಕಿ ರಾಮಕಿಶನ್ ದಾಲ್ಮಿಯಾ ಎಂಬ ಉದ್ಯಮಿ ಆ ಕಾಲಕ್ಕೆ ನಡೆಸಿದ್ದ ಷೇರು ಪೇಟೆಯ ಅಕ್ರಮವನ್ನು ಫಿರೋಜ್ ಬಯಲಿಗೆಳೆದಿದ್ದರು. ತುಳಸೀ ದಾಸ್ ಮತ್ತು ಮನಮೋಹನ ದಾಸ್ ಮುಂಧ್ರಾ ಸಹೋದರರು ಸರ್ಕಾರಿ ಸ್ವಾಮ್ಯದ ಜೀವ ವಿಮಾ ನಿಗಮಕ್ಕೆ ಅಂದಿನ ಕಾಲದಲ್ಲಿ ಮಾಡಿದ 22 ಲಕ್ಷ ರೂಪಾಯಿಗಳ ವಂಚನೆಯ ಭಾರೀ ದೊಡ್ಡ ಹಗರಣವನ್ನು ಫಿರೋಜ್ ಗಾಂಧಿ ಸಂಸತ್ತಿನ ಅಂಗಳದಲ್ಲೇ ಬಯಲಿಗೆಳೆದಿದ್ದರು! ಇದರಿಂದ ನೆಹರೂ ಸರ್ಕಾರ ಇಕ್ಕಟ್ಟಿಗೆ ಸಿಲುಕಿತು. ಇಂದಿರಾ ಗಾಂಧಿಯ ಮಗ ರಾಜೀವ್ ಗಾಂಧಿ ಅವರು ಬೊಫೋರ್ಸ್ ಗನ್ ಖರೀದಿಯಲ್ಲಿ ಬಹುಕೋಟಿ ಹಗರಣ ನಡೆದು ಅಧಿಕಾರ ಕಳೆದುಕೊಂಡರು.

ಇನ್ನು ಸೋನಿಯಾ ಕಾಂಗ್ರೆಸ್ ಅಧ್ಯಕ್ಷೆಯಾಗಿ ಯುಪಿಎ ಸರ್ಕಾರದ ರಿಮೋಟ್ ಕಂಟ್ರೋಲ್ ಆಗಿ ಮಾಡಿದ ಭ್ರಷ್ಟಾಚಾರಗಳ ಸರಮಾಲೆಯ ಬಗ್ಗೆ ನಿಮಗೆಲ್ಲಾ ಗೊತ್ತೇ ಇದೆ. ಆದರೆ ನ್ಯಾಷನಲ್ ಹೆರಾಲ್ಡ್‌ನ ಐದು ಸಾವಿರ ಕೋಟಿ ರೂಪಾಯಿ ಮೌಲ್ಯದ ಆಸ್ತಿಪಾಸ್ತಿಗಳ ಅಕ್ರಮ ವರ್ಗಾವಣೆ, ಆ ಆಸ್ತಿಯ ಮೂಲಕ ಕೋಟಿಗಟ್ಟಲೇ ರೂಪಾಯಿ ಆದಾಯವನ್ನು ಅಕ್ರಮವಾಗಿ ಪಡೆದದ್ದರಲ್ಲಿ ಸೋನಿಯಾ ಮತ್ತು ರಾಹುಲ್ ಹೆಸರು ನೇರವಾಗಿಯೇ ಬೆಸೆದುಕೊಂಡಿದೆ. ಅಷ್ಟೇ ಅಲ್ಲ ಅಗಸ್ಟಾ ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ಹಗರಣದ ಸುದ್ದಿ ಯಾರಿಗೆ ತಾನೆ ಗೊತ್ತಿಲ್ಲ? 2004 ರಿಂದ 2014ರವರೆಗೆ ಕಾಂಗ್ರೆಸ್ ಅಧಿಕಾರದ ಅವಧಿಯಲ್ಲಿ ಸರ್ಕಾರದ ವಿರುದ್ಧ ಕೇಳಿಬಂದ ಭ್ರಷ್ಟಾಚಾರ ಅಪರಿಮಿತ. ಅದರಲ್ಲಿ 2ಜಿ ತರಂಗಾಂತರ ಹಂಚಿಕೆಯಲ್ಲಿ ₹1.76 ಲಕ್ಷ ಕೋಟಿ ಭ್ರಷ್ಟಾಚಾರ ದೇಶದಾದ್ಯಂತ ದೊಡ್ಡ ಸುದ್ದಿಯಾಗಿತ್ತು. ರಾಜೀವ್ ಗಾಂಧಿ ಪ್ರಧಾನಿ ಆಗಿದ್ದಾಗ 1986ರಲ್ಲಿ ಹೇಳಿದ ಮಾತು ಈಗಲೂ ಆಗಾಗ ಬಳಕೆಯಾಗುತ್ತಲೇ ಇರುತ್ತದೆ. ಒಂದು ರೂಪಾಯ ಯೋಜನೆ ಕಟ್ಟಕಡೆಯ ಮನುಷ್ಯನಿಗೆ ತಲುಪುವಷ್ಟರಲ್ಲಿ ಶೇ 15ಕ್ಕೆ ಸೀಮಿತವಾಗುತ್ತದೆ ಎಂದು ಹೇಳಿದ್ದರು. ಆಗ ದೇಶದಲ್ಲಿ ಅಧಿಕಾರದಲ್ಲಿ ಇದ್ದವರು ಯಾರು? 'ಲೈಸೆನ್ಸ್ ರಾಜ್' ವ್ಯವಸ್ಥೆ ಜಾರಿಗೆ ತಂದು ಭ್ರಷ್ಟಾಚಾರವನ್ನು ಹಾಸಿ ಹೊದ್ದು ಮಲಗಿದ್ದವರು ಕಾಂಗ್ರೆಸ್ ನಾಯಕರಲ್ಲದೆ ಮತ್ತ್ಯಾರು?

ಕಾಂಗ್ರೆಸ್ ಪಕ್ಷದಲ್ಲಿ ರಾಷ್ಟ್ರಹಿತಕ್ಕಿಂತ ವ್ಯಕ್ತಿಗತ ಹಿತಾಸಕ್ತಿಗೆ ಹೆಚ್ಚಿನ ಆದ್ಯತೆ. ಕಾಂಗ್ರೆಸ್ ಮುಕ್ತ ಎಂದು ಹೇಳಿದರೆ 'ರಾಷ್ಟ್ರ ಸರ್ವಪರಿ' ಎಂದೇ ನಿಜವಾದ ಅರ್ಥ. ರಾಷ್ಟ್ರ ಮೊದಲು ನಂತರ ಪಕ್ಷ, ಆನಂತರ ಅಧಿಕಾರ ಎಂಬುದು ಬಿಜೆಪಿ ಸಿದ್ಧಾಂತ ಮತ್ತು ಸಂಸ್ಕೃತಿ. ಪ್ರಜಾಪ್ರಭುತ್ವದಲ್ಲಿ 'ಕಾಂಗ್ರೆಸ್ ಮುಕ್ತ' ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅತಿಯಾದ ಜಾತಿವಾದ ತೊಲಗಬೇಕು. ಅಂತಿಮವಾಗಿ ಕಾಂಗ್ರೆಸ್ ಮುಕ್ತವೆಂದರೆ ಸ್ವಾತಂತ್ರ್ಯ ನಂತರ ಕಾಂಗ್ರೆಸ್ ಪಕ್ಷ ಹುಟ್ಟುಹಾಕಿದ ರಾಜಕೀಯ ಸಂಸ್ಕೃತಿ ಮುಕ್ತ ಭಾರತವಾಗಬೇಕು.

ಲೇಖಕರು: ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು, ಚಿಕ್ಕಮಗಳೂರು ಶಾಸಕರು

ಪದಬಂಧ 4916

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ನಡುವೆ ವೇಶ ಧರಿಸಿ ನೋಡಿದ ಜಾಗ! (4)
3.ಅಕ್ಕಿ ತೊಳೆದ ನೀರು (4)
5.ಓದುಗ ಇಲ್ಲಿದ್ದಾನೆ (3)
6.ಪದಾತಿಯಲ್ಲಿ ಗಂಡನಿದ್ದಾನಲ್ಲಾ? (2)
8.ಒತ್ತಾಯವನ್ನು ಹೀಗೆನ್ನಿ (3)
10.ಕೆಲವರು ಮಾಡುವ ಕಾರ್ಯ (3)
13.ಹಮ್ಮೀರನಿಗೊಲಿದ ಶಿವ (2)
15.ಕಾಡನ್ನು ಹೀಗೂ ಹೇಳುವರು (3)
16.ಕರದಲ್ಲಿ ಹಿಡಿದ ಖಡ್ಗ (4)
17.ರಸಸ್ವಾದನ ಶಕ್ತಿ (4)

ಮೇಲಿಂದ ಕೆಳಕ್ಕೆ

1.ಹುದುಗಿಟ್ಟ ಧನ (3)
2.ಈತ ಮುಸಲ್ಮಾನ ದೊರೆ (3)
3.ಪೆದ್ದನಿಲ್ಲಿದ್ದಾನೆ (3)
7.ಅರಿವು ಹೀಗೆ ಬಂದಿದೆ (5)
9.ಶೀರೋನಾಮೆಯಿದು (5)
11.ಸರಿಯಾದ ಸಮಯ (3)
12.ಬೆಲೆ ಕಟ್ಟಲಾಗದ್ದು ಉಲ್ಟಾ ಆಗಿದೆ (3)
14.ವಿರಳವಾದ ಚಿತ್ರವಿಲ್ಲಿ ಉಲ್ಟಾ ಆಗಿದೆಯಲ್ಲಾ! (3)

4915ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಲೋಮ 4.ಕಣ್ಣೀರು
6.ಜಲಜನಕ 7.ಯಪಾ
9.ಮಾತು 10.ನಾಳ 11.ನಿಜ
13. ಗುಣವಾಚಕ
16.ಡೆರಬಿ 17.ರುಧಿರ

ಮೇಲಿಂದ ಕೆಳಕ್ಕೆ:
1.ವಿನಿಮಯ 2.ಖನಿಜ
3.ಸಹಜ 4.ಕಳಂಕ
5.ರುಜುವಾತು 8.ಪಾತಾಳ
9.ಮಾನಿನಿ
10.ನಾಯಿಕೊಡೆ
12.ಜನಿವಾರ 13.ಗುಲಾಬಿ
14.ವಾರ್ಧಕ್ಯ
15.ಕಶೇರು

ಸುಡೊಕು 5302

				5			2	1
			2		1	7	9	
	1			9				5
5		7			9	1		
	6			2	5		8	
9		8	6			5		2
1		2		8			6	
			5		6	2		3
6		3		4			5	8

5301 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಏಪ್ರಿಲ್ 2, 2022

ಶ್ರೀಶುಭಕೃತು ನಾಮ ಸಂವತ್ಸರ ಉತ್ತರಾಯಣ - ವಸಂತ ಋತು - ಮೀನ ಮಾಸದ 19 ನೇ ದಿನ ತಿಥಿ: (ಚೈತ್ರ ಶುದ್ಧ) ಪ್ರತಿಪದ್ ಗಂ. 11-59 ನಕ್ಷತ್ರ: ರೇವತಿ ಗಂ. 11-21 ಯೋಗ: ಐಂದ್ರ ಗಂ. 08-30, ಕರಣ: ಬವ ಗಂ. 11-59. ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 06-29 ಸೂರ್ಯಾಸ್ತ : 06-39 ಮುಸ್ಲಿಂ ದಿನಾಂಕ : 29 ಶಬನ್ ದಿನ ವಿಶೇಷ : ಯುಗಾದಿ, ಚೈತ್ರ ಶುಕ್ಲಾದಿ (ಗುಡಿ ಪಾಡವ, ಯುಗಾದಿ), ವಸಂತ ನವರಾತ್ರಾರಂಭ, ತೆಲುಗು ಹೊಸವರ್ಷ ದಿನ, ಚೇತಿ ಚಾಂದ್ (ಸಿಂಧಿ ಹೊಸ ವರ್ಷ ದಿನ) ಅದೃಷ್ಟ ಸಂಖ್ಯೆ: 7, 8

ಮೇಷ: ಕಾರ್ಯಕ್ಷೇತ್ರದಲ್ಲಿ ಹಿಡಿತಕ್ಕೆ ಸಿಕ್ಕದೆ ಇರುವ ಕೆಲಸಗಳನ್ನು ಸಮರ್ಥವಾಗಿ ಅರ್ಥೈಸಿಕೊಂಡು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾಗುವಿರಿ. ಹಣಕಾಸಿನ ಸಮಸ್ಯೆಗಳು ಹಂತ ಹಂತವಾಗಿ ಪರಿಹಾರ ಕಾಣಲಿದೆ.

ವೃಷಭ: ವ್ಯವಹಾರಗಳ ವಿಷಯಕ್ಕೆ ಸಂಬಂಧಿಸಿದಂತೆ ಪಾಲುದಾರರೊಂದಿಗೆ ಜರೂರಿನಲ್ಲಿ ಚರ್ಚೆ ನಡೆಸಬೇಕಾದ ಪರಿಸ್ಥಿತಿ. ಮನೆಯಲ್ಲಿ ದೇವತಾ ಕಾರ್ಯ ನಡೆಸುವ ಯೋಚನೆ ಬರಲಿದೆ. ಜಾಹಿರಾತು ಏಜೆನ್ಸಿಯವರಿಗೆ ಅಧಿಕ ಆದಾಯ.

ಮಿಥುನ: ವ್ಯಾಪಾರ ವ್ಯವಹಾರಗಳಲ್ಲಿ ನಡೆಯುತ್ತಿದ್ದ ಅವ್ಯವಹಾರಗಳು ಹಿಡಿತಕ್ಕೆ ಬರಲಿದೆ. ಕೊಡು-ಕೊಳ್ಳುವಿಕೆಗಳಿಂದ ಅಧಿಕ ಲಾಭವಿರುವುದು. ಪ್ರತಿಭೆಗೆ ಅನುಗುಣವಾದ ಉದ್ಯೋಗ ಅವಕಾಶ ದೊರೆತು ಸಂತಸವಾಗಲಿದೆ.

ಕರ್ಕಾಟಕ: ಅತ್ಯಂತ ಬುದ್ಧಿವಂತ, ತಿಳಿವಳಿಕೆ ಹೊಂದಿವರಾದ ನೀವು ಇಂದು ಗ್ರಹಚಾರದ ಫಲವಾಗಿ ಮನೋಬಲದಿಂದ ಕಾರ್ಯ ಸಾಧಿಸುವಲ್ಲಿ ವಿಫಲರಾಗುವಿರಿ. ಉತ್ಪಾದಿತ ವಸ್ತುಗಳಿಗೆ ಬೇಡಿಕೆ ದೊರೆತು ಸಂತಸ.

ಸಿಂಹ: ಉದ್ಯೋಗದಲ್ಲಿ ಉತ್ತಮ ಅಭಿವೃದ್ಧಿ. ಮನೆಯಲ್ಲಿ ಮಂಗಳಕಾರ್ಯಗಳು ನೆರವೇರುತ್ತವೆ. ಉದ್ಯೋಗಕ್ಕಾಗಿ ಹೊರ ದೇಶದ ಪ್ರಯಾಣದ ಅವಕಾಶಗಳು ಸಿಗಬಹುದು. ಭೂ ವ್ಯವಹಾರಗಳು ನಿಧಾನವಾಗಿ ಕೈಗೂಡುವುದು.

ಕನ್ಯಾ: ಪ್ರಾರಂಭಿಸಿದ ಎಲ್ಲಾ ಕೆಲಸಗಳಲ್ಲಿಯೂ ಯಶಸ್ಸು, ಲಾಭ, ಅಭಿವೃದ್ಧಿಗಳಿಂದ ಮನಸ್ಸಿಗೆ ಸಂತಸ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆತು ಮುಂದಿನ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ.

ತುಲಾ: ನಿಮ್ಮ ಉದ್ಯೋಗದಲ್ಲಿನ ಬದಲಾವಣೆಯು ಉತ್ಸಾಹವನ್ನು ಹೆಚ್ಚಿಸುವುದು. ನೂತನ ಮನೆ ನಿರ್ಮಾಣ ಅಥವಾ ನಿವೇಶನಗಳ ಖರೀದಿಯ ಆಲೋಚನೆಗಳಿಗೆ ಪೂರಕವಾದ ವಾತಾವರಣ ಸ್ನೇಹಿತರಿಂದ ಸಿಗಲಿದೆ.

ವೃಶ್ಚಿಕ: ಮಾತೃವರ್ಗದವರ ನೆರವಿನಿಂದ ಆರ್ಥಿಕ ಚೇತರಿಕೆ. ಇಂದು ನಿಮ್ಮ ಅದೃಷ್ಟ ಚೆನ್ನಾಗಿರುವ ಕಾರಣ ಬಂದ ಅವಕಾಶಗಳನ್ನು ಸದುಪಯೋಗಿಸಿಕೊಂಡಲ್ಲಿ ವ್ಯಾಪಾರ ವ್ಯವಹಾರದಲ್ಲಿ ಅಧಿಕ ಲಾಭ ಕಾಣಬಹುದು.

ಧನು: ಕೌಟುಂಬಿಕವಾಗಿ ಖರ್ಚುಗಳು ಅಧಿಕವೆನಿಸಿದರೂ ಆರ್ಥಿಕವಾಗಿ ನಿಮ್ಮ ಆದಾಯ ಯಾವುದೇ ರೀತಿಯ ಏರಿಳಿತಗಳಿಲ್ಲದೆ ಸಮನಾಗಿರುವುದು. ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಹೆಚ್ಚಿನ ಕೆಲಸವಿರಲಿದೆ.

ಮಕರ: ಕಾರ್ಯರಂಗದಲ್ಲಿ ಮುನ್ನಡೆಗೆ ಸಹೋದ್ಯೋಗಿಗಳ ನಿರ್ಧಾರಗಳಿಂದ ಸಮಸ್ಯೆ ಇರುತ್ತದೆ ಆದ್ದರಿಂದ ಯೋಚಿಸಿ ಸ್ವಂತ ನಿರ್ಧಾರ ತೆಗೆದುಕೊಳ್ಳುವುದು ಒಳ್ಳೆಯದು. ಸಂಜೆಯ ಸಮಯದಲ್ಲಿ ಸಣ್ಣ ವಿಹಾರಕ್ಕೆ ತೆರಳುವಂತೆ ಆಗುವುದು.

ಕುಂಭ: ಈ ದಿನ ಆತ್ಮಗೌರವ, ರಕ್ಷಣೆ ದೃಷ್ಟಿಯಿಂದ ಸಂದರ್ಭಗಳೊಡನೆ ರಾಜಿಮಾಡಿಕೊಳ್ಳುವುದು ಉತ್ತಮ. ವಿವಿಧ ಮೂಲಗಳಿಂದ ದ್ರವ್ಯಲಾಭ. ಪೂರ್ಣ ಪ್ರಯತ್ನದಿಂದ ಕುಟುಂಬದ ಜಟಿಲ ಸಮಸ್ಯೆಗಳನ್ನು ಪರಿಹರಿಸುವಿರಿ.

ಮೀನ: ದಾಂಪತ್ಯದಲ್ಲಿ ಉತ್ತಮ ಅನ್ಯೋನ್ಯತೆಯು ವೃದ್ಧಿಯಾಗಲಿದೆ. ಕುಟುಂಬದಲ್ಲಿ ಸಂತಸದ ವಾತಾವರಣ. ಹೈನುಗಾರಿಕೆಯಲ್ಲಿ ಆದಾಯವನ್ನು ಹೆಚ್ಚಿಸಿಕೊಳ್ಳುವಿರಿ. ಅವಿವಾಹಿತರಿಗೆ ಕಂಕಣ ಭಾಗ್ಯ ದೊರೆಯುವುದು.

ಶಿವಕುಮಾರ ಶ್ರೀ ಜಯಂತ್ಯುತ್ಸವದಲ್ಲಿ ಮುಖ್ಯಮಂತ್ರಿ ಘೋಷಣೆ • ನಿರ್ಧಾರಕ್ಕೆ ಸಿದ್ಧಗಂಗಾ ಮಠಾಧೀಶರ ವಿರೋಧ

ಶಾಲಾ ಬಿಸಿಯೂಟಕ್ಕೆ ಸ್ವಾಮೀಜಿ ಹೆಸರು

ಪ್ರಜಾವಾಣಿ ವಾರ್ತೆ

ತುಮಕೂರು: ‘ಶಾಲೆಗಳಲ್ಲಿ ನೀಡುತ್ತಿರುವ ಮಧ್ಯಾಹ್ನದ ಬಿಸಿಯೂಟಕ್ಕೆ ಶಿವಕುಮಾರ ಸ್ವಾಮೀಜಿ ಅವರ ಹೆಸರು ಇಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿ ದರು.

ಸಿದ್ಧಗಂಗಾ ಮಠದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಶಿವಕುಮಾರ ಸ್ವಾಮೀಜಿ 115ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ‘ಸ್ವಾಮೀಜಿ ಲಿಂಗೈಕ್ಯರಾದ ದಿನವನ್ನು (ಜ. 31) ದಾಸೋಹ ದಿನ ಎಂದು ಆಚರಿಸಲಾಗುತ್ತಿದೆ. ಅದೇ ರೀತಿ ಬಿಸಿಯೂಟಕ್ಕೆ ಸ್ವಾಮೀಜಿ ಅವರ ಅವರ ಜನ್ಮದಿನದ ನೆನಪಿನಲ್ಲಿ ಇಡಲಾಗುವುದು. ಈ ಕುರಿತು ಶೀಘ್ರ ಆದೇಶ ಹೊರಡಿಸಲಾಗುವುದು’ ಎಂದು ಹೇಳಿದರು.

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು, ಮಧ್ಯಾಹ್ನದ ಬಿಸಿಯೂಟಕ್ಕೆ ಶಿವಕುಮಾರ ಸ್ವಾಮೀಜಿ ಹೆಸರಿಡಬೇಕು ಎಂಬ ಬೇಡಿಕೆ ಇಟ್ಟಿದ್ದರು. ಮುಖ್ಯಮಂತ್ರಿ ಇದಕ್ಕೆ ಸ್ಪಂದಿಸಿ ಈ ಭರವಸೆ ನೀಡಿದರು.

ಸ್ವಾಮೀಜಿ ವಿರೋಧ: ‘ಮಠದಲ್ಲಿ ಶಿವಕುಮಾರ ಸ್ವಾಮೀಜಿ ಆರಂಭಿಸಿದ್ದ ದಾಸೋಹ ಎಲ್ಲರಿಗೂ ಮಾದರಿಯಾಗಿದೆ. ಅವರು ಮಾಡುತ್ತಿದ್ದ ಕಾಯಕದಿಂದ ಪ್ರೇರಿತರಾಗಿ ಶಾಲೆಗಳಲ್ಲಿ ಬಿಸಿಯೂಟಕ್ಕೆ ಆರಂಭಿಸಲಾಗಿದೆ. ಕಾಯಕದ ಜತೆಗೆ ಸ್ವಾಮೀಜಿ ಹೆಸರು ಸೇರಿಕೊಂಡಿರುವುದರಿಂದ ಶಿವಕುಮಾರ ಸ್ವಾಮೀಜಿ ಹೆಸರು ಇಡುವ ಅಗತ್ಯವಿಲ್ಲ’ ಎಂದು ಸಿದ್ಧಗಂಗಾ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಪ್ರತಿಪಾದಿಸಿದರು.

ತುಮಕೂರಿನಲ್ಲಿ ಶುಕ್ರವಾರ ನಡೆದ ಶಿವಕುಮಾರ ಸ್ವಾಮೀಜಿ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಜನರತ್ತ ಕೈ ಬೀಸಿದರು. ಗೃಹ ಸಚಿವ ಆರಗ ಜ್ಞಾನೇಂದ್ರ, ಸಿದ್ಧಲಿಂಗ ಸ್ವಾಮೀಜಿ, ಶಾಸಕ ಬಿ.ಎಸ್‌.ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದ್ದಾರೆ —ಪ್ರಜಾವಾಣಿ ಚಿತ್ರ

ಶಿವಕುಮಾರ ಶ್ರೀ ಆಧುನಿಕ ಬಸವಣ್ಣ: ಅಮಿತ್ ಶಾ ಬಣ್ಣನೆ

ತುಮಕೂರು: ‘ಉತ್ತರದಲ್ಲಿ ಗಂಗಾ, ದಕ್ಷಿಣದಲ್ಲಿ ಸಿದ್ಧಗಂಗಾ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಿದ್ಧಗಂಗಾ ಮಠವನ್ನು ಬಣ್ಣಿಸಿದರು.

ಭಾಷಣದ ಉದ್ದಕ್ಕೂ ಮಠದ ಸೇವೆಯನ್ನು ಸ್ಮರಿಸಿದ ಅವರು, ‘ಉತ್ತರದಲ್ಲಿ ಗಂಗಾ ನದಿ ಹರಿಯುತ್ತಿದೆ. ಇಲ್ಲಿ ಸಿದ್ಧಗಂಗೆ ಹೆಸರು ಪ್ರಖ್ಯಾತವಾಗಿದೆ. ಗಂಗೆಯಲ್ಲಿ ಸ್ನಾನ ಮಾಡಿದರೆ ಜೀವನದಲ್ಲಿ ಮಾಡಿದ ಪಾಪ ಕಳೆಯುತ್ತದೆ. ಸಿದ್ಧಗಂಗಾ ಮಠಕ್ಕೆ ಬಂದರೆ ಅನೇಕ ಜನ್ಮಕ್ಕೆ ಸಾಕಾಗುವಷ್ಟು ಪುಣ್ಯ ಬರುತ್ತದೆ’ ಎಂದು ಅಭಿಪ್ರಾಯಪಟ್ಟರು.

ಶಿವಕುಮಾರ ಸ್ವಾಮೀಜಿ ಅವರನ್ನು ‘ಆಧುನಿಕ ಬಸವಣ್ಣ’ ಎಂದು ಕರೆದರು.

ಬಸವಣ್ಣನ ವಚನಗಳು ಮಾದರಿ ಆಗಿರುವಂತೆ, ದೇಶಕ್ಕೆ ಸ್ವಾಮೀಜಿ ಅವರು ಮಾದರಿಯಾಗಿದ್ದಾರೆ. ತ್ರಿವಿಧ ದಾಸೋಹ, ಕಾಯಕದ ಮೂಲಕ ಎಲ್ಲರ ಮನ ಗೆದ್ದಿದ್ದಾರೆ. ಸಿದ್ಧಗಂಗಾ ಮಠ ಹೆಸರಿಗೆ ತಕ್ಕಂತೆ ಸಿದ್ಧಾಂತದ ಮಠವಾಗಿದೆ ಎಂದು ಹೇಳಿದರು.

ಮಠಕ್ಕೆ ಬರುತ್ತಿದ್ದಂತೆ ಮೊದಲಿಗೆ ಶ್ರೀಗಳ ಗದ್ದುಗೆಗೆ ತೆರಳಿ ದರ್ಶನ ಪಡೆದರು. ವೇದಿಕೆ ಕಾರ್ಯಕ್ರಮದಲ್ಲಿ ಶಾ, ಹಿಂದೆ ತಾವು ಮಠಕ್ಕೆ ಭೇಟಿ ಕೊಟ್ಟಿದ್ದ ನೆನಪುಗಳನ್ನು ಮೆಲುಕು ಹಾಕಿದರು.

ಪಠ್ಯಕ್ಕೆ ಬೇಡಿಕೆ: ಶಾಸಕ ಬಿ.ಎಸ್. ಯಡಿಯೂರಪ್ಪ ಮಾತನಾಡಿ, ‘ಶಿವಕುಮಾರ ಸ್ವಾಮೀಜಿ ಜೀವನ ಚರಿತ್ರೆಯನ್ನು ಮುಂದಿನ ಪೀಳಿಗೆಗೆ ತಿಳಿಸಿಕೊಡುವ ಅಗತ್ಯವಿದೆ. ಹಾಗಾಗಿ ಸ್ವಾಮೀಜಿ ಅವರ ಜೀವನ ಚರಿತ್ರೆಯನ್ನು ಪಠ್ಯದಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಬೇಕು’ ಎಂದು ಬಸವರಾಜ ಬೊಮ್ಮಾಯಿ ಅವರನ್ನು ಒತ್ತಾಯಿಸಿದರು.

ಮುಸ್ಲಿಂ ದಂಪತಿ ಮಗುವಿಗೆ ಶ್ರೀಗಳ ಹೆಸರು

‘ಶಿವಮಣಿ’ ಜತೆಗೆ ತಾಯಿ ಶಾಹಿಸ್ತಾ

ತುಮಕೂರು: ಸಿದ್ಧಗಂಗಾ ಮಠದಲ್ಲಿ ಶುಕ್ರವಾರ ಶಿವಕುಮಾರ ಸ್ವಾಮೀಜಿ ಜಯಂತಿ ನಿಮಿತ್ತ ಹಮ್ಮಿಕೊಂಡಿದ್ದ ನಾಮಕರಣ ಕಾರ್ಯಕ್ರಮದಲ್ಲಿ ಮುಸ್ಲಿಂ ಕುಟುಂಬದ ಮಗುವಿಗೆ ‘ಶಿವಮಣಿ’ ಎಂದು ನಾಮಕರಣ ಮಾಡಲಾಯಿತು.

ಸ್ವಾಮೀಜಿ ಜಯಂತಿ ಆಚರಣೆ ಸಮಯದಲ್ಲಿ ಪ್ರತಿ ವರ್ಷವೂ ನಾಮಕರಣ ಕಾರ್ಯ ನೆರವೇರಿಸಲಾಗುತ್ತದೆ. ಈ ಬಾರಿ 115ನೇ ಜಯಂತಿ ಅಂಗವಾಗಿ 115 ಮಕ್ಕಳಿಗೆ ಶಿವಕುಮಾರ ಸ್ವಾಮೀಜಿ ಹೆಸರು ಇಡಲಾಯಿತು. ಅದರಲ್ಲಿ ಗಮನ ಸೆಳೆದಿದ್ದು ನಗರದ ಕ್ಯಾತ್ಸಂದ್ರದ ಶಾಹಿಸ್ತಾ ಮತ್ತು ಜಮೀರ್ ದಂಪತಿಯ ಮಗುವಿಗೆ ಇಟ್ಟ ‘ಶಿವಮಣಿ’ ಎಂಬ ಹೆಸರು.

‘ನಮಗೆ ಹಿಂದೂಗಳಂತೆ ಇರಲು ಇಷ್ಟ. ಹಾಗಾಗಿ ಮಠದ ಆವರಣದಲ್ಲಿ ಮಗುವಿಗೆ ಸ್ವಾಮೀಜಿ ಹೆಸರು (‘ಶಿವ’ ಹೆಸರಿನಿಂದ ಆರಂಭ) ಇಡಲಾಗಿದೆ. ಸ್ವಾಮೀಜಿ ನಡೆದಾಡಿದ ಸ್ಥಳದಲ್ಲಿ ನಾಮಕರಣ ಮಾಡುತ್ತಿರುವುದು ತುಂಬಾ ಖುಷಿ ನೀಡಿದೆ. ಇಂತಹ ಒಂದು ಉತ್ತಮ ಅವಕಾಶ ನಮಗೆ ದೊರೆತಿದೆ’ ಎಂದು ಶಾಹಿಸ್ತಾ ಸಂಭ್ರಮಪಟ್ಟರು. ‘ಸ್ವಾಮೀಜಿ ವಿಚಾರಗಳು ನಮಗೆಲ್ಲಾ ಮಾದರಿ. ಸಮಾನತೆಯ ಸಂದೇಶ ಸಾರಿದ್ದರು. ಶಾಂತಿ, ಸಹಬಾಳ್ವೆ ನಡೆಸಲು ಅವರ ಹಾದಿಯಲ್ಲಿ ಮುನ್ನಡೆಯಬೇಕು’ ಎಂದು ಅವರು ಹೇಳಿದರು.

ಸಿದ್ಧಗಂಗಾಶ್ರೀಗೆ ಭಾರತ ರತ್ನ: ಪಿಐಎಲ್ ವಜಾ

ಬೆಂಗಳೂರು: ‘ಸಿದ್ಧಗಂಗೆಯ ಶಿವಕುಮಾರ ಸ್ವಾಮೀಜಿಯವರಿಗೆ ಮರಣೋತ್ತರವಾಗಿ ‘ಭಾರತ ರತ್ನ’ ನೀಡುವಂತೆ ಪ್ರಧಾನಿಯವರಿಗೆ ನಿರ್ದೇಶಿಸಬೇಕು’ ಎಂದು ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ತುಮಕೂರಿನ ರೆಹಾನ್ ಖಾನ್ ಅವರು ಅರ್ಜಿ ಸಲ್ಲಿಸಿದ್ದರು. ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ನ್ಯಾಯಪೀಠ ವಿಚಾರಣೆ ನಡೆಸಿ, ‘ಇಂತಹವರಿಗೇ ಪ್ರಶಸ್ತಿ ನೀಡಿ ಎಂದು ನಿರ್ದೇಶಿಸಲು ನ್ಯಾಯಾಲಯಕ್ಕೆ ಸಾಧ್ಯವಿಲ್ಲ’ ಎಂದು ಅಭಿಪ್ರಾಯಪಟ್ಟಿತು.

ಸುದ್ದಿ 2 ನಿಮಿಷ

ಉತ್ತರ ಕೊಡಿ ಅಮಿತ್ ಶಾ, ಸಿದ್ದರಾಮಯ್ಯ ಸವಾಲು

ಬೆಂಗಳೂರು: ರಾಜ್ಯ ಪ್ರವಾಸ ಕೈಗೊಂಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ನೋಟು ರದ್ದು, ಕೃಷಿ ಕಾಯ್ದೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನೆ ಕೇಳಿದ್ದಾರೆ.

‘ಆನ್ಸರ್ ಮಾಡಿ ಅಮಿತ್ ಶಾ’ ಹೆಸರಿನಲ್ಲಿ ಸರಣಿ ಟ್ವೀಟ್ ಮಾಡಿರುವ ಅವರು, ‘ಸಹಕಾರ ಸಮ್ಮೇಳನದಲ್ಲಿ ಭಾಷಣ ಆರಂಭಿಸುವ ಮುನ್ನ ಈ ಪ್ರಶ್ನೆಗಳಿಗೆ ಉತ್ತರಿಸಿ’ ಎಂದು ಕೇಳಿದ್ದಾರೆ.

‘ಸಹಕಾರ ಸಮ್ಮೇಳನಕ್ಕೆ ಅದ್ದೂರಿ ಚಾಲನೆ ನೀಡುತ್ತಿದ್ದೀರಿ. ಈ ಮೂಲಕ ಸಹಕಾರ ಸಂಸ್ಥೆಗಳನ್ನು ಭ್ರಷ್ಟಾಚಾರದ ಕೇಂದ್ರಗಳನ್ನಾಗಿ ಮಾಡಿಕೊಳ್ಳುವ ಬಗ್ಗೆ ಕರ್ನಾಟಕದ ಬಿಜೆಪಿ ನಾಯಕರಿಗೆ ತರಬೇತಿ ನೀಡುತ್ತೀರಾ’ ಎಂದು ವ್ಯಂಗ್ಯವಾಗಿ ಪ್ರಶ್ನಿಸಿದ್ದಾರೆ.

‘ರಾಜ್ಯ ಸರ್ಕಾರ ಯಶಸ್ವಿನಿ ಯೋಜನೆಯನ್ನು ಮರು ಆರಂಭಿಸಿದೆ. ನೀವು ಈ ಯೋಜನೆಗೆ ಚಾಲನೆ ನೀಡುತ್ತಿದ್ದೀರಿ. ಅಂದರೆ, ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆಯು ವಿಫಲವಾಗಿದೆಯೇ’ ಎಂದು ಪ್ರಶ್ನಿಸಿದ್ದಾರೆ.

‘ನೋಟು ರದ್ದುಗೊಳಿಸುವ ಹಗರಣಕ್ಕೆ ಮುನ್ನ ಸಹಕಾರ ಬ್ಯಾಂಕ್‌ಗಳ ಜತೆಗಿನ ನಿಮ್ಮ ಸಂಬಂಧ ಏನು’ ಎಂದು ಪ್ರಶ್ನಿಸಿದ್ದಾರೆ.

‘ನೋಟು ರದ್ದುಗೊಳಿಸಿದ ದಿನದ ಅದೇ ರಾತ್ರಿ ₹500 ಕೋಟಿ ಮೊತ್ತವನ್ನು ಎಡಿಸಿ ಬ್ಯಾಂಕ್‌ನಲ್ಲಿ ಠೇವಣಿ ಇರಿಸಲಾಯಿತು. ಈ ಬ್ಯಾಂಕ್‌ನಲ್ಲಿ ನೀವೇ ನಿರ್ದೇಶಕರಾಗಿದ್ದೀರಿ’ ಎಂದು ಹೇಳಿದ್ದಾರೆ.

‘ಮೆಕ್ಕೆಜೋಳ ಖರೀದಿ ಪ್ರಕ್ರಿಯೆ: ಕರ್ನಾಟಕ ಅನುಮತಿ ಕೇಳಿಲ್ಲ’

ನವದೆಹಲಿ: ಕರ್ನಾಟಕ ಸರ್ಕಾರವು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆ ಅಡಿ ಮೆಕ್ಕೆಜೋಳ ಖರೀದಿ ಕೇಂದ್ರ ಆರಂಭಿಸಲು ಇದುವರೆಗೆ ಅನುಮತಿ ಕೇಳಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ರಾಜ್ಯಸಭೆಯಲ್ಲಿ ಜೆಡಿಎಸ್‌ನ ಎಚ್‌.ಡಿ. ದೇವೇಗೌಡ ಅವರ ಪ್ರಶ್ನೆಗೆ ಉತ್ತರ ನೀಡಿದ ಕೇಂದ್ರದ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಈ ವಿವರ ನೀಡಿದ್ದಾರೆ. ರಾಜ್ಯದ ರೈತರಿಂದ ಕನಿಷ್ಠ ಬೆಂಬಲ ಬೆಲೆ ಅಡಿ ಮೆಕ್ಕೆಜೋಳ ಖರೀದಿಸುವಂತೆ ದೇವೇಗೌಡರು ಕೋರಿದ್ದರು.

ಮೆಕ್ಕೆಜೋಳ ಖರೀದಿ ಪ್ರಕ್ರಿಯೆ ಆರಂಭಿಸಲು ರಾಜ್ಯ ಸರ್ಕಾರ ಅನುಮತಿ ಕೇಳಿಲ್ಲ. ಈ ಸಂಬಂಧ ಕರ್ನಾಟಕದ ಮುಖ್ಯಮಂತ್ರಿ ಜೊತೆ ಸಮಾಲೋಚನೆ ನಡೆಸಲಾಗುವುದು ಎಂದು ಗೋಯಲ್ ಭರವಸೆ ನೀಡಿದರು.

ರಾಗಿ ಖರೀದಿ ಪ್ರಮಾಣ ಕಡಿಮೆ– ಬೇಸರ: ಪ್ರಸಕ್ತ ಸಾಲಿನಲ್ಲಿ ಕನಿಷ್ಠ ಬೆಂಬಲ ಬೆಲೆ ಅಡಿ ರಾಜ್ಯದಲ್ಲಿ ಒಟ್ಟು 7 ಲಕ್ಷ ಟನ್ ರಾಗಿ ಖರೀದಿಸಬೇಕಿದೆ. ಆದರೆ, ಹಾಸನ ಜಿಲ್ಲೆಯಲ್ಲಿ ಇದುವರೆಗೆ ಕೇವಲ ಒಂದು ಕ್ವಿಂಟಲ್ ರಾಗಿ ಖರೀದಿಸಲಾಗಿದೆ ಎಂದು ದೇವೇಗೌಡರು ಬೇಸರ ವ್ಯಕ್ತಪಡಿಸಿದರು.

ಅತಿಹೆಚ್ಚು ಸದಸ್ಯತ್ವ ನೋಂದಣಿ ಮಾಡಿದ ಕಾರ್ಯಕರ್ತರಿಗೆ ಪಕ್ಷದ ಮುಖಂಡ ರಾಹುಲ್ ಗಾಂಧಿ ಸಭೆಯಲ್ಲಿ ಪ್ರಮಾಣಪತ್ರ ನೀಡಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇದ್ದರು —ಪ್ರಜಾವಾಣಿ ಚಿತ್ರ

ಭ್ರಷ್ಟ ಸರ್ಕಾರ: ರಾಹುಲ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿಯೇ ಅತ್ಯಂತ ಭ್ರಷ್ಟ ಸರ್ಕಾರ ಕರ್ನಾಟಕದಲ್ಲಿದೆ. ಇದು ಶೇ 40ರ ಕಮಿಷನ್ ಪಡೆಯುವ ಸರ್ಕಾರ ಎನ್ನುವ ಅಪಖ್ಯಾತಿಗೆ ಒಳಗಾಗಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಬಿಜೆಪಿಯ ಭ್ರಷ್ಟಾಚಾರ ಮತ್ತು ಕೋಮುವಾದದ ವಿರುದ್ಧ ಟೀಕಾ ಪ್ರಹಾರ ನಡೆಸಿದ ಅವರು, ‘ಕರ್ನಾಟಕದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿರುವುದನ್ನು ಗುತ್ತಿಗೆದಾರರೇ ಬಹಿರಂಗಪಡಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಭ್ರಷ್ಟಾಚಾರದ ವಿರುದ್ಧ ಸದಾ ಮಾತನಾಡುತ್ತಾರೆ. ಈಗ ಅವರು ಕರ್ನಾಟಕಕ್ಕೆ ಬಂದು ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ ಜನ ಅಪಹಾಸ್ಯ ಮಾಡುತ್ತಾರೆ’ ಎಂದು ಲೇವಡಿ ಮಾಡಿದರು.

‘ಬಿಜೆಪಿಯ ಸುಳ್ಳುಗಳನ್ನು ಬಯಲು ಮಾಡುವ ಮೂಲಕ ಚುನಾವಣೆಯಲ್ಲಿ ನಿರ್ಣಾಯಕ ವಿಜಯ ಸಾಧಿಸಬೇಕು. ಬೆಲೆ ಏರಿಕೆ, ನಿರುದ್ಯೋಗ, ಭ್ರಷ್ಟಾಚಾರ ಮತ್ತು ಆರ್ಥಿಕತೆ ಬಗ್ಗೆ ಬಿಜೆಪಿ ಮಾತನಾಡುವುದಿಲ್ಲ. ಆರ್ಥಿಕ ವ್ಯವಸ್ಥೆ ಕುಸಿದಿದೆ. ಹೀಗಾಗಿಯೇ, ಕೋಮುವಾದ ವಿಷಯವನ್ನು ಮುನ್ನೆಲೆಗೆ ತಂದಿದೆ. ಕೇಂದ್ರದ ನೀತಿಗಳಿಂದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಮುಚ್ಚಿವೆ. ನಿರುದ್ಯೋಗ ಹೆಚ್ಚಿದೆ. ಬಡವರಿಂದ ಹಣ ಕಿತ್ತು ಒಂದಿಬ್ಬರು ಉದ್ಯಮಿಗಳ ಜೇಬು ತುಂಬಿಸುವ ಕೆಲಸ ಆಗುತ್ತಿದೆ’ ಎಂದು ದೂರಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ‘ಮುಂದಿನ ಚುನಾವಣೆಯಲ್ಲಿ ಅಭ್ಯರ್ಥಿ ಯಾರು ಎಂದು ನಾನು ನಿರ್ಧರಿಸುವುದಿಲ್ಲ. ಸ್ಥಳೀಯರೇ ಅಭ್ಯರ್ಥಿಗಳನ್ನು ಆಯ್ಕೆ ಮಾಡುವರು. ಕಾರ್ಯಕರ್ತರ ಧ್ವನಿಯೇ ಕಾಂಗ್ರೆಸ್ ಅಧ್ಯಕ್ಷರ ಧ್ವನಿಯಾಗಲಿದೆ’ ಎಂದರು.

ರಾಜ್ಯಸಭೆ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು, ‘ನಮ್ಮ ಜತೆಯಲ್ಲಿದ್ದವರಿಗೆ ಹೆಚ್ಚಿನ ಶಕ್ತಿ ತುಂಬಬೇಕು. ದೀನದಲಿತರು, ಬಡವರು ರೈತರ ಬಗ್ಗೆ ಪಕ್ಷದ ಯೋಜನೆಗಳು, ಸಿದ್ಧಾಂತಗಳ ಬಗ್ಗೆ ಹಳ್ಳಿಗಳಲ್ಲಿ ಪ್ರಚಾರ ಮಾಡಬೇಕು’ ಎಂದರು.

'ರಾಜ್ಯದಲ್ಲಿ 60 ಲಕ್ಷ ಸದಸ್ಯರನ್ನು ಮಾಡಲಾಗಿದೆ. ಇದರಲ್ಲಿ ಒಬ್ಬ ಸದಸ್ಯ 3 ಮತ ತಂದರೂ ಪಕ್ಷ ಅಧಿಕಾರಕ್ಕೆ ಬರುತ್ತದೆ. ಹೀಗಾಗಿ ವ್ಯಾಪಕ ಪ್ರಚಾರ ಕೈಗೊಳ್ಳಬೇಕು’ ಎಂದರು.

ಅವಕಾಶ ಕೊಡಿಸಿ: ‘ಕಾಂಗ್ರೆಸ್ ನಾಯಕರ ಒಡೆತನದ ಶಿಕ್ಷಣ ಸಂಸ್ಥೆಗಳಲ್ಲಿ ಎನ್‌ಎಸ್‌ಯುಐ ಸಂಘಟನೆ ಕಟ್ಟಲು ಅವಕಾಶವನ್ನೇ ಕೊಡುತ್ತಿಲ್ಲ. ಒಳಗೆ ಬಿಡಲು ಅವಕಾಶ ಕೊಡದೇ ಇದ್ದರೆ ಸಂಘಟನೆ ಬೆಳೆಯುವುದು ಹೇಗೆ. .?’

ಎನ್‌ಎಸ್‌ಯುಐನ ವಿದ್ಯಾರ್ಥಿಯೊಬ್ಬರು ರಾಹುಲ್ ಗಾಂಧಿ ಮುಂದೆ ಇಂತಹ ಪ್ರಶ್ನೆ ಇಟ್ಟರು. ‘ನಮ್ಮ ನಾಯಕರ ಸಂಸ್ಥೆಗಳಲ್ಲೇ ನಮ್ಮನ್ನು ಒಳಗೆ ಬಿಡದೇ ಇದ್ದರೆ ಸಂಘಟನೆ ಬೆಳೆಯುವುದು ಹೇಗೆ?’ ಎಂದು ಪ್ರಶ್ನಿಸಿದರು.

> **ಭಾರತ ಸರ್ವಜನಾಂಗದ ಶಾಂತಿಯ ತೋಟ. ಭಾವನೆಗಳನ್ನು ಕೆರಳಿಸಿ ಶಾಂತಿ ಕದಡುವ ಕಾರ್ಯದಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗಳು ತೊಡಗಿವೆ. ಇವುಗಳಿಗೆ ತಕ್ಕ ಪಾಠ ಕಲಿಸಬೇಕು**
> **ಎಂ.ಬಿ. ಪಾಟೀಲ,** ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ

> **ಬಿಜೆಪಿ ನಮ್ಮ ಶತ್ರು ಅಲ್ಲ. ಆರ್‌ಎಸ್‌ಎಸ್ ನಮ್ಮ ದೊಡ್ಡ ಶತ್ರು. ಪಕ್ಷದಲ್ಲಿ ಯುವಕರಿಗೆ ಮುಕ್ತ ಅವಕಾಶಗಳನ್ನು ಕಲ್ಪಿಸಬೇಕು ಮತ್ತು ನಮ್ಮ ಕಾರ್ಯಸೂಚಿಯನ್ನು ಹೆಚ್ಚು ಬಿಂಬಿಸಬೇಕು**
> **ಬಿ.ಕೆ. ಹರಿಪ್ರಸಾದ್,** ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

> **ಸಾಮೂಹಿಕ ನಾಯಕತ್ವದಲ್ಲಿ ನಂಬಿಕೆ ಇದೆ. ಎಂದಿಗೂ ವ್ಯಕ್ತಿ ಪೂಜೆ ಮಾಡಿಲ್ಲ. ಪಕ್ಷ ಪೂಜೆಯೇ ಮುಖ್ಯ. ಪಕ್ಷ ಇದ್ದರೆ ಮಾತ್ರ ನಮಗೆ ಅಸ್ತಿತ್ವ ಎನ್ನುವುದನ್ನು ನಂಬಿದ್ದೇನೆ.**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಎಲ್ಲರ ಪ್ರಗತಿಯೇ ಗುರಿ: ಶಾ ನುಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಮೂಲೆ ಮೂಲೆಗೂ ಸಹಕಾರ ಆಂದೋಲನ ತಲುಪಿ ಸುವ ಜತೆಗೆ ಆಧುನಿಕತೆ ಸ್ಪರ್ಶ ನೀಡಲಾಗುವುದು. ಎಲ್ಲರನ್ನು ಆರ್ಥಿಕವಾಗಿ ಸಬಲರಾಗಿಸುವುದು ಮೋದಿ ಸರ್ಕಾರದ ಗುರಿ’ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಹೇಳಿದರು

ಶುಕ್ರವಾರ ಅರಮನೆ ಮೈದಾನದಲ್ಲಿ ಸಹಕಾರ ಸಮ್ಮೇಳನದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಹಿಡಿದು ನಬಾರ್ಡ್‌ವರೆಗೆ ಪೂರ್ಣ ವ್ಯವಸ್ಥೆಯನ್ನು ಕಂಪ್ಯೂಟರೀಕರಣ ಮಾಡಲಾಗುವುದು ಮತ್ತು ಎಲ್ಲದಕ್ಕೂ ಅನ್ವಯವಾಗುವಂತೆ ಏಕ ರೂಪದ ಬ್ಯಾಂಕಿಂಗ್ ಮಾದರಿಯ ಸಾಫ್ಟ್‌ವೇರ್ ರೂಪಿಸಲಾಗುತ್ತಿದೆ. ಇದರಿಂದ ಈವರೆಗೆ ನಡೆಯುತ್ತಿದ್ದ ಭ್ರಷ್ಟಾಚಾರಗಳಿಗೆ ಕಡಿವಾಣ ಹಾಕಲಾಗುವುದು. ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲಾಗುವುದು ಎಂದು ಹೇಳಿದರು.

‘ನಾನು ಸಹಕಾರ ಕ್ಷೇತ್ರದಲ್ಲಿ ಸಕ್ರಿಯನಾಗಿದ್ದೇನೆ. ಸಹಕಾರ ಕ್ಷೇತ್ರವನ್ನು ದೇಶದ ಮೂಲೆ ಮೂಲೆಯಲ್ಲಿ ಸಮೃದ್ಧಗೊಳಿಸುವಲ್ಲಿ ಹಲವು ಸವಾಲುಗಳಿರುವುದು ನಿಜ. ಆದರೆ, ಅದನ್ನು ನಿವಾರಿಸಿ ಮುನ್ನಡೆಯುವ ವಿಶ್ವಾಸವಿದೆ’ ಎಂದರು.

ದೇಶ ವ್ಯಾಪಿ ಸಹಕಾರ ಕ್ಷೇತ್ರದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಮತ್ತು ಹಣದ ದುರ್ಬಳಕೆಗೆ ಕಡಿವಾಣ ಹಾಕಲಾಗುವುದು. ಸಹಕಾರ ಸಂಘಗಳಲ್ಲಿ ನಡೆಯುವ ಚುನಾವಣೆ, ಸಿಬ್ಬಂದಿ ನೇಮಕಾತಿ ಮತ್ತು ಖರೀದಿಗಳಲ್ಲಿ ಪಾರದರ್ಶಕತೆ ತರಲಾಗುವುದು. ಖರೀದಿಗಳನ್ನು ಆನ್‌ಲೈನ್ ನೆರವು ಪಡೆಯಲಾಗುವುದು. ಈ ಮೂಲಕ ಭ್ರಷ್ಟಾಚಾರವನ್ನು ಶೂನ್ಯ ಮಟ್ಟಕ್ಕೆ ತರಲಾಗುವುದು ಎಂದು ಶಾ ಹೇಳಿದರು.

ಶಾ ಈಗಲೂ ಸಹಕಾರ ಸಂಘದ ಅಧ್ಯಕ್ಷ !

‘ಅಮಿತ್ ಶಾ ಅವರು ಈಗಲೂ ಪ್ರಾಥಮಿಕ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿದ್ದಾರೆ. ಈ ಬಾರಿ ಅವರ ವಿರುದ್ಧ ಯುವಕನೊಬ್ಬ ಚುನಾವಣೆಯಲ್ಲಿ ಸ್ಪರ್ಧಿಸಿದ್ದ. ಆದರೆ ಶಾ ಅವರೇ ಗೆದ್ದು ಅಧ್ಯಕ್ಷರಾಗಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಸಹಕಾರ ಕ್ಷೇತ್ರ ಅವರಿಗೆ ಪ್ರಬಲ ಇಚ್ಛೆಯ ಕ್ಷೇತ್ರವಾಗಿದ್ದು, ಆ ಕಾರಣಕ್ಕೆ ಅವರು ಮೊದಲ ಸಹಕಾರ ಸಚಿವರಾದರು. ಈ ಕ್ಷೇತ್ರದಲ್ಲಿ ಕ್ರಾಂತಿ ಸೃಷ್ಟಿಸಲು ಶಾ ಅವರಿಂದ ಸಾಧ್ಯ’ ಎಂದು ಅಭಿಪ್ರಾಯಪಟ್ಟರು.

‘ಕ್ಷೀರ ಸಮೃದ್ಧಿ ಬ್ಯಾಂಕ್ ದೇಶಕ್ಕೆ ಮಾದರಿ’

‘ನಂದಿನಿ ಕ್ಷೀರ ಸಮೃದ್ಧಿ ಸಹಕಾರಿ ಬ್ಯಾಂಕ್ ಸ್ಥಾಪಿಸುವ ಮೂಲಕ ಕರ್ನಾಟಕದ ದೇಶಕ್ಕೆ ಮಾದರಿಯಾಗಿದೆ. ಪಶುಪಾಲಕರ ಆರ್ಥಿಕ ಸಬಲೀಕರಣಕ್ಕೆ ಮೀಸಲಾದ ಬ್ಯಾಂಕ್ ದೇಶದಲ್ಲಿ ಬೇರೆಲ್ಲೂ ಇಲ್ಲ’ ಎಂದು ಅಮಿತ್ ಶಾ ಮೆಚ್ಚುಗೆ ವ್ಯಕ್ತಪಡಿಸಿದರು.

ಬೊಮ್ಮಾಯಿ ನೇತೃತ್ವದ ಸರ್ಕಾರ ಪ್ರಗತಿಪರ ಯೋಜನೆಗಳನ್ನು ಹಮ್ಮಿಕೊಂಡು ಅಭಿವೃದ್ಧಿಗೆ ಒತ್ತು ನೀಡುತ್ತಿದೆ. ಕ್ಷೀರ ಸಮೃದ್ಧಿ ಬ್ಯಾಂಕ್ ಸ್ಥಾಪನೆಯ ಮೂಲಕ ಗ್ರಾಮೀಣಾಭಿವೃದ್ಧಿಯನ್ನು ಬಲಪಡಿಸುವ ಕೆಲಸ ಮಾಡಿದೆ. ಹಾಲು ಉತ್ಪಾದಕರಿಗೆ ಕ್ರೆಡಿಟ್ ಕಾರ್ಡ್ ನೀಡುವ ಮೂಲಕ ರೈತರನ್ನು ಆತ್ಮನಿರ್ಭರರನ್ನಾಗಿ ಮಾಡಬೇಕು. ಇದಕ್ಕೆ ಅಗತ್ಯವಿರುವ ಎಲ್ಲ ರೀತಿ ನೆರವನ್ನು ಕೇಂದ್ರ ಸರ್ಕಾರದಿಂದ ನೀಡಲಾಗುವುದು ಎಂದೂ ಹೇಳಿದರು.

ಮುಸ್ಲಿಮರನ್ನು ಖಳನಾಯಕರನ್ನಾಗಿಸುತ್ತಿರುವ ಬಿಜೆಪಿ: ಸಿದ್ದರಾಮಯ್ಯ

‘ಧಾರ್ಮಿಕ ವಿಷಯಗಳನ್ನು ವಿವಾದವನ್ನಾಗಿರಿಸಿ ಮುಸ್ಲಿಮರನ್ನು ಖಳನಾಯಕರನ್ನಾಗಿ ಬಿಂಬಿಸುವ ಯತ್ನವನ್ನು ಬಿಜೆಪಿ ಮಾಡುತ್ತಿದೆ’ ಎಂದು ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

‘ಬಿಜೆಪಿಯು ಮತ ಧ್ರುವೀಕರಣಕ್ಕಾಗಿ ಮುಂದಿನ ಒಂದು ವರ್ಷ ಸಮಾಜ ವಿಭಜಿಸುವ, ಕೋಮು ವೈಷಮ್ಯದ ವಿಚಾರಗಳನ್ನು ಮುನ್ನೆಲೆಗೆ ತರಲಿದೆ. ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರ ಜತೆಗೆ ನಿಂತು ಬದ್ಧತೆ ತೋರಬೇಕಿದೆ. ಜಾತ್ಯತೀತ ವಿಷಯದಲ್ಲಿ ಸ್ಪಷ್ಟ ನಿಲುವು ಹೊಂದಬೇಕು. ಸ್ಪಷ್ಟತೆ ಇಲ್ಲದಿದ್ದರೆ ನಾವು ಯಾರಿಗೂ ನ್ಯಾಯ ಕೊಡಿಸಲು ಸಾಧ್ಯವಾಗುವುದಿಲ್ಲ’ ಎಂದು ಪ್ರತಿಪಾದಿಸಿದರು.

‘ಹಿಜಾಬ್ ವಿವಾದದ ವಿಷಯವೇ ಅಲ್ಲ. ಅದು ಧಾರ್ಮಿಕ ಪದ್ಧತಿ. ಸರ್ಕಾರ ಮನಸ್ಸು ಮಾಡಿದ್ದರೆ ಆರಂಭದಲ್ಲೇ ವಿವಾದ ಬಗೆಹರಿಸಬಹುದಿತ್ತು. ಆರ್‌ಎಸ್‌ಎಸ್, ಬಜರಂಗದಳದಂತಹ ಸಂಘಟನೆಗಳು ಸರ್ಕಾರದ ಕುಮ್ಮಕ್ಕಿನಿಂದ ಮುಸ್ಲಿಮರನ್ನು ಖಳನಾಯಕರನ್ನಾಗಿ ಬಿಂಬಿಸುವ ಯತ್ನ ಮಾಡಿದವು’ ಎಂದು ಕಿಡಿಕಾರಿದರು.

‘ಇಂತಹ ಕೋಮುವಾದದ ವಿಷಯಗಳಿಗೆ ಎಸ್‌ಡಿಪಿಐ ಕುಮ್ಮಕ್ಕೂ ಇದೆ. ಹೀಗಾಗಿ, ಕೋಮು ಸೌಹಾರ್ದತೆಗೆ ಧಕ್ಕೆ ತರುತ್ತಿರುವ ಎಲ್ಲ ಸಂಘಟನೆಗಳನ್ನು ನಿಷೇಧಿಸಬೇಕು ಎಂದು ಅಧಿವೇಶನದಲ್ಲಿ ಒತ್ತಾಯಿಸಿದ್ದೆ. ಆದರೆ, ಸರ್ಕಾರ ಯಾವ ಸಂಘಟನೆಗಳನ್ನು ನಿಷೇಧಿಸಲಿಲ್ಲ. ಕೋಮು ಸಂಘರ್ಷದ ವಿಚಾರಗಳನ್ನು ಮುಂದಿಟ್ಟು ಕೊಂಡೇ ರಾಜಕೀಯ ಮಾಡುತ್ತಿರುವ ಬಿಜೆಪಿ, ಗೋಹತ್ಯೆ ನಿಷೇಧ, ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸಿತು. ಈಗ ಹಿಜಾಬ್, ಭಗವದ್ಗೀತೆ, ಹಲಾಲ್ ವಿಚಾರಗಳನ್ನು ಪ್ರಸ್ತಾಪ ಮಾಡಿದೆ. ಈ ಎಲ್ಲ ವಿಚಾರಗಳು ಸಂವಿಧಾನ ವಿರುದ್ಧವಾಗಿವೆ’ ಎಂದರು.

‘ಮುಂಬರುವ ಚುನಾವಣೆಯಲ್ಲಿ ಈ ಅನೈತಿಕ, ಕೋಮುವಾದಿ ಮತ್ತು ಭ್ರಷ್ಟ ಬಿಜೆಪಿ ಸರ್ಕಾರವನ್ನು ಅಧಿಕಾರದಿಂದ ಕಿತ್ತೊಗೆಯಲು ನಾವೆಲ್ಲರೂ ಶ್ರಮಿಸಬೇಕು’ ಎಂದರು.

‘ಭಾರತ ಬಯಸಿದ್ದನ್ನು ಪೂರೈಸುತ್ತೇವೆ’

ಒಂದನೇ ಪುಟದಿಂದ

ರಷ್ಯಾ–ಉಕ್ರೇನ್ ಯುದ್ಧ ಆರಂಭವಾಗುವುದಕ್ಕೂ ಮುನ್ನ ಇದ್ದ ಬೆಲೆಯಲ್ಲಿ ಪ್ರತಿ ಬ್ಯಾರೆಲ್‌ಗೆ 35 ಡಾಲರ್‌ನಷ್ಟು ವಿನಾಯಿತಿಯಲ್ಲಿ ಕಚ್ಚಾತೈಲ ಪೂರೈಕೆ ಮಾಡುವ ಪ್ರಸ್ತಾವವನ್ನು ರಷ್ಯಾ ಭಾರತದ ಮುಂದೆ ಇರಿಸಿತ್ತು. ರಷ್ಯಾದ ಈ ಪ್ರಸ್ತಾವದ ಬೆನ್ನಲ್ಲೇ ಅಮೆರಿಕವು ಎಚ್ಚರಿಕೆ ನೀಡಿತ್ತು. ‘ರಷ್ಯಾ ಜತೆಗೆ ಈಗ ಇರುವ ವ್ಯಾಪಾರವನ್ನು ಮುಂದುವರಿಸುವುದಕ್ಕೆ ಆಕ್ಷೇಪಗಳಿಲ್ಲ. ಬದಲಿಗೆ ವ್ಯಾಪಾರವನ್ನು ಹೆಚ್ಚಿಸಿದರೆ ನಿರ್ಬಂಧಕ್ಕೆ ಗುರಿಯಾಗಬೇಕಾಗುತ್ತದೆ’ ಎಂದು ಅಮೆರಿಕವು ಗುರುವಾರವಷ್ಟೇ ಎಚ್ಚರಿಕೆ ನೀಡಿತ್ತು.

ರಷ್ಯಾದಿಂದ ಕಡಿಮೆ ಬೆಲೆಗೆ ಕಚ್ಚಾತೈಲ ಖರೀದಿಸುವ ಸಂಬಂಧ ಭಾರತ ಮತ್ತು ರಷ್ಯಾದ ಉನ್ನತಾಧಿಕಾರಿಗಳು ಮಾತುಕತೆ ನಡೆಸುತ್ತಿದ್ದಾರೆ ಎಂದು ಮೂಲಗಳು ಹೇಳಿದ್ದವು. ಇದಕ್ಕೆ ಬ್ರಿಟನ್ ಸಹ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಗುರುವಾರ ಭಾರತಕ್ಕೆ ಭೇಟಿ ನೀಡಿದ್ದ ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಲಿಸ್ ಟ್ರಸ್ ಅವರು, ರಷ್ಯಾದಿಂದ ಕಚ್ಚಾತೈಲ ಖರೀದಿಸದಂತೆ ಹೇಳಿದ್ದರು. ಅವರೊಂದಿಗೆ ಮಾತುಕತೆಯಲ್ಲಿದ್ದ ವಿದೇಶಾಂಗ ಸಚಿವ ಎಸ್.ಜೈಶಂಕರ್, ಈ ಒತ್ತಾಯಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು.

‘ರಷ್ಯಾದಿಂದ ಹೆಚ್ಚಿನ ಕಚ್ಚಾತೈಲ ಖರೀದಿಸುತ್ತಿರುವ ಮೊದಲ 10 ದೇಶಗಳು ಯೂರೋಪ್‌ನಲ್ಲಿಯೇ ಇವೆ. ಯುದ್ಧ ಆರಂಭವಾದ ನಂತರ ಈ ದೇಶಗಳು ರಷ್ಯಾದಿಂದ ಖರೀದಿಸಿದ ಕಚ್ಚಾತೈಲದ ಪ್ರಮಾಣದಲ್ಲಿ ಶೇ 15ರಷ್ಟು ಏರಿಕೆಯಾಗಿದೆ. ಮುಂದಿನ ಆರು ತಿಂಗಳ ನಂತರವೂ ಪರಿಸ್ಥಿತಿ ಹೀಗೇ ಇರಲಿದೆ’ ಎಂದು ಜೈಶಂಕರ್ ಕಟುಮಾತುಗಳಿಂದ ಉತ್ತರ ನೀಡಿದ್ದಾರೆ. ಜತೆಗೆ, ರಷ್ಯಾದಿಂದ ಕಚ್ಚಾತೈಲವನ್ನು ಖರೀದಿಸುವ ಆಯ್ಕೆಯನ್ನು ಭಾರತ ಮುಕ್ತವಾಗಿ ಇರಿಸಿಕೊಂಡಿದೆ ಎಂಬ ಸಂದೇಶವನ್ನು ಬ್ರಿಟನ್ ವಿದೇಶಾಂಗ ಕಾರ್ಯದರ್ಶಿಗೆ ನೀಡಿ ದ್ದರು. ಇದರ ಬೆನ್ನಲ್ಲೇ ರಷ್ಯಾವನ್ನು ನಂಬಲು ಸಾಧ್ಯವಿಲ್ಲ ಎಂದು ಅಮೆರಿಕವು ಶುಕ್ರವಾರ ಮತ್ತೊಮ್ಮೆ ಎಚ್ಚರಿಕೆ ನೀಡಿದೆ. ಆದರೆ ಭಾರತದ ನಿಲುವನ್ನು ಗೌರವಿಸುತ್ತೇವೆ ಎಂದು ಬ್ರಿಟನ್ ಹೇಳಿದೆ.

> **ರಷ್ಯಾ ವಿರುದ್ಧ ಹೇರಲಾಗಿರುವ ನಿರ್ಬಂಧಗಳನ್ನು ಅನುಷ್ಠಾನಕ್ಕೆ ತರಬೇಕಾದದ್ದು ನಮ್ಮೆಲ್ಲರ ಹೊಣೆ. ರಷ್ಯಾದ ಮೇಲಿನ ಕಚ್ಚಾತೈಲ ಅವಲಂಬನೆ ತಗ್ಗಿಸಬೇಕು**
> **ಲಿಸ್ ಟ್ರಸ್,** ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ

> **ನಾವು ರಷ್ಯಾದಿಂದ ಕಚ್ಚಾತೈಲ ಖರೀದಿಯನ್ನು ಆರಂಭಿಸಿದ್ದೇವೆ. ಇದನ್ನು ಮುಂದುವರೆಸುತ್ತೇವೆ. ದೇಶದ ಜನತೆಗೆ ಯಾವುದು ಒಳಿತೋ ಅದನ್ನು ಮಾಡುತ್ತೇವೆ**
> **ನಿರ್ಮಲಾ ಸೀತಾರಾಮನ್,** ಕೇಂದ್ರ ಹಣಕಾಸು ಸಚಿವೆ

ಸಚಿವರು, ಸಂಸದರು, ಶಾಸಕರ ವಿರುದ್ಧ ರಿಟ್ ಅರ್ಜಿ

ದ್ವೇಷಭಾಷಣ ಆರೋಪ: ಕ್ರಮಕ್ಕೆ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಸ್ಲಿಮರ ಜೊತೆ ವ್ಯಾಪಾರ ನಡೆಸದಂತೆ ಹಿಂದೂಗಳನ್ನು ಪ್ರಚೋದಿಸಿ ಉದ್ದೇಶಪೂರ್ವಕವಾಗಿ ಅಸಹ್ಯಕರ ಮತ್ತು ದ್ವೇಷದ ಮಾತುಗಳನ್ನು ಆಡುತ್ತಿರುವ ಜನಪ್ರತಿನಿಧಿಗಳ ವಿರುದ್ಧ ಕೂಡಲೇ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ತಕ್ಕ ಕ್ರಮ ಕೈಗೊಳ್ಳುವಂತೆ ಕೇಂದ್ರ ಮತ್ತು ಸರ್ಕಾರಕ್ಕೆ ನಿರ್ದೇಶಿಸಬೇಕು‘ ಎಂದು ಕೋರಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಲಾಗಿದೆ.

ಈ ಕುರಿತಂತೆ ಮಂಡ್ಯ ಜಿಲ್ಲೆಯ ನಾಗಮಂಗಲದ ಖಲೀಮುಲ್ಲಾ ಸಲ್ಲಿಸಿರುವ ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ಅರ್ಜಿದಾರರ ಪರ ವಕೀಲ ರಹಮತ್ ಉಲ್ಲಾ ಕೊತ್ವಾಲ್, ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠಕ್ಕೆ ಶುಕ್ರವಾರ ಮನವಿ ಮಾಡಿದರು.

ಆದರೆ, ಈ ಮನವಿ ನಿರಾಕರಿಸಿದ ನ್ಯಾಯಪೀಠ, ‘ಎಂದಿನಂತೆಯೇ ಪ್ರಕರಣ ವಿಚಾರಣೆಗೆ ನಿಗದಿಯಾಗಲಿ‘ ಎಂದು ಸೂಚಿಸಿದರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಗೃಹ ಮತ್ತು ಕಾನೂನು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಅಲ್ಪ ಸಂಖ್ಯಾತರ ಆಯೋಗದ ಕಾರ್ಯದರ್ಶಿ, ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ಮತ್ತು ರಾಜ್ಯ ಡಿಜಿ– ಐಜಿಗಳನ್ನು ಪ್ರತಿವಾದಿಗಳನ್ನಾಗಿ ಕಾಣಿಸಲಾಗಿದೆ.

‘ಅರ್ಜಿಯಲ್ಲಿ ಕಾಣಿಸಿರುವ ಜನಪ್ರತಿನಿಧಿಗಳ ವಿರುದ್ಧ ಪ್ರತಿವಾದಿಗಳು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ಸೂಕ್ತ ಕಾನೂನು ಕ್ರಮ ಜರುಗಿಸಲು ನಿರ್ದೇಶಿಸಬೇಕು‘ ಎಂದು ಅರ್ಜಿದಾರರು ಕೋರಿದ್ದಾರೆ.

ಅರ್ಜಿಯಲ್ಲಿ ಏನಿದೆ?: ‘ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದ ಪ್ರತಾಪ ಸಿಂಹ, ತೇಜಸ್ವಿ ಸೂರ್ಯ, ರಾಜ್ಯದ ಸಚಿವ ಕೆ.ಎಸ್.ಈಶ್ವರಪ್ಪ, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಸಿ.ಟಿ. ರವಿ, ಎಂ.ಪಿ.ರೇಣುಕಾಚಾರ್ಯ, ಹಿಂದೂಪರ ಸಂಘಟನೆಯ ಋಷಿ ಕುಮಾರ ಸ್ವಾಮೀಜಿ (ಕಾಳಿಸ್ವಾಮಿ), ಶ್ರೀರಾಮ ಸೇನೆ ಮುಖಂಡ ಪ್ರಮೋದ ಮುತಾಲಿಕ, ಯುವ ಬ್ರಿಗೇಡ್ ಸಂಘಟನೆ ಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಮತ್ತಿ ತರರು ಮುಸ್ಲಿಂ ಸಮುದಾಯದ ವಿರುದ್ಧದ್ವೇಷ ಭಾಷಣ ಮಾಡುತ್ತಿದ್ದಾರೆ’ ಎಂದು ಆರೋಪಿಸಲಾಗಿದೆ.

ಧರ್ಮೋದ್ಧಾರದ ಸೋಗಿನಲ್ಲಿ ಅಶಾಂತಿ ಸೃಷ್ಟಿ: ಎಚ್‌ಡಿಕೆ

ಬೆಂಗಳೂರು: ‘ಧರ್ಮ-ಜಾತಿ ಆಧಾರದಲ್ಲಿ ಜನರನ್ನು ವಿಘಟಿಸುವ ವಿಶ್ವ ಹಿಂದೂ ಪರಿಷತ್, ಬಜರಂಗದಳದಂತಹ ಕಿಡಿಗೇಡಿ ಸಂಘಟನೆಗಳು ಧರ್ಮೋದ್ಧಾರದ ಸೋಗಿನಲ್ಲಿ ಅಶಾಂತಿ ಸೃಷ್ಟಿಸುತ್ತಿವೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

ಕರ್ನಾಟಕವು ವಿಶ್ವಹಿಂದೂ ಪರಿಷತ್, ಬಜರಂಗದಳದ ಜಹಗೀರಲ್ಲ. ಅವು ಹಿಂದೂಗಳ ಪ್ರಾತಿನಿಧಿಕ ಸಂಸ್ಥೆಗಳೂ ಅಲ್ಲ. ಒಂದು ಪಕ್ಷದ ಬಾಲಂಗೋಚಿಗಳಷ್ಟೇ. ಹಿಂದೂ, ಹಿಂದುತ್ವ ಎನ್ನುವ ಪರಂಪರೆ ಇವರ ಗುತ್ತಿಗೆಯೂ ಅಲ್ಲ. ಧರ್ಮ ರಕ್ಷಣೆ ಎಂದರೆ ಇನ್ನೊಬ್ಬರ ಅನ್ನ ಕಸಿಯುವುದಲ್ಲ? ನೆಮ್ಮದಿಯ ನಾಡಿಗೆ ಕಿಚ್ಚಿಡುವುದಲ್ಲ? ಎಂದವರು ಹೇಳಿದ್ದಾರೆ.

ಕೊರೊನಾ ಕಾಲದಲ್ಲಿ ನೀವೊಬ್ಬರೇ ಜನರ ಸೇವೆ ಮಾಡಿಲ್ಲ. ಎಲ್ಲರೂ ಜಾತಿ, ಧರ್ಮ ಮೀರಿ ಸೇವೆ ಮಾಡಿದ್ದಾರೆ. ‘ಶವ ಸಂಸ್ಕಾರದಲ್ಲೂ ಕೀರ್ತಿ’ ಹುಡುಕುವ ನಿಮ್ಮಗಳ ವಿಕೃತ ಮನಸ್ಥಿತಿಗೆ ನನ್ನ ಮರುಕವಿದೆ. ಇದಾ ನಿಮ್ಮ ಧರ್ಮ? ಎಂದು ಪ್ರಶ್ನಿಸಿದ್ದಾರೆ.

‘ಧರ್ಮ ರಕ್ಷಣೆ ಎಂದರೆ ಶಿವಮೊಗ್ಗದಲ್ಲಿ ಸಚಿವರೇ 144 ಸೆಕ್ಷನ್ ಉಲ್ಲಂಘಿಸುವುದಾ? ಅವರೇ ನಿಂತು ಹಿಂಸೆಗೆ ಪ್ರಚೋದನೆ ಕೊಡುವುದಾ? ನಾವ್ಯಾರೂ ಹೀಗೆ ಮಾಡಿಲ್ಲ. ಸಮಾಜಘಾತುಕ ಶಕ್ತಿಗಳನ್ನು ಮಟ್ಟ ಹಾಕಿ ಎಂದು ನೇರವಾಗಿ ಹೇಳಿದ್ದೇನೆ. ಹಿಜಾಬ್ ಗಲಾಟೆ ಹಿಂದಿರುವ ಕಾಣದ ಕೈಗಳಿಗೆ ಕೋಳ ಹಾಕಿ ಎಂದು ಸದನದಲ್ಲೇ ಆಗ್ರಹಿಸಿದ್ದೇನೆ’ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ರಾಜ್ಯಸಭೆ: 100ಕ್ಕೆ ಏರಿದ ಬಿಜೆಪಿ ಬಲ

ನವದೆಹಲಿ (ಪಿಟಿಐ): ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯ ಬಲ ಈಗ 100ಕ್ಕೆ ಏರಿದೆ. 1990ರ ನಂತರ ಯಾವುದೇ ಪಕ್ಷವು 100 ಸದಸ್ಯರನ್ನು ಹೊಂದಿದ ಹಿರಿಮೆಗೆ ಪಾತ್ರವಾಗಿರಲಿಲ್ಲ.

ಕಾಂಗ್ರೆಸ್ ಪಕ್ಷವು 1990ರಲ್ಲಿ 108 ಸದಸ್ಯರನ್ನು ಹೊಂದಿತ್ತು. ತದನಂತರ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಆ ಪಕ್ಷದ ಸಂಖ್ಯಾಬಲ ಕ್ರಮೇಣ ಇಳಿಮುಖವಾಯಿತು. 2014ರಲ್ಲಿ ಬಿಜೆಪಿ ಸದಸ್ಯ ಬಲ 55 ಇತ್ತು, ಕ್ರಮೇಣ ಏರಿಕೆಯಾಗಿದೆ. 245 ಸದಸ್ಯ ಬಲದ ರಾಜ್ಯಸಭೆಯಲ್ಲಿ ಬಿಜೆಪಿಯ ಬಲ 97 ಇತ್ತು. ಈಚೆಗೆ 13 ಸ್ಥಾನಗಳಿಗೆ ನಡೆದ ದ್ವೈವಾರ್ಷಿಕ ಚುನಾವಣಾ ಫಲಿತಾಂಶ ಶುಕ್ರವಾರ ಪ್ರಕಟವಾಗಿದ್ದು, ಬಿಜೆಪಿ 3 ಸ್ಥಾನ ಗೆದ್ದಿದೆ. ಇದರೊಂದಿಗೆ ಪಕ್ಷದ ಒಟ್ಟು ಬಲ ಮೂರಂಕಿಗೆ ತಲುಪಿದೆ.

ರಾಜ್ಯಸಭೆಯ ದ್ವೈವಾರ್ಷಿಕ ಚುನಾವಣೆಯ ಫಲಿತಾಂಶಗಳ ನಂತರದ ಪಕ್ಷಗಳ ಬಲಾಬಲ ಪಟ್ಟಿ ರಾಜ್ಯಸಭೆಯ ವೆಬ್‌ಸೈಟ್‌ನಲ್ಲಿ ಇನ್ನೂ ಪರಿಷ್ಕರಣೆಗೊಳ್ಳಬೇಕಿದೆ. ಬಿಜೆಪಿಯ 100 ಸದಸ್ಯರ ಬಲ ಮತ್ತೆ ಏರುಪೇರಾಗುವ ಸಂಭವವಿದೆ. ಶೀಘ್ರದಲ್ಲಿಯೇ ಆಂಧ್ರಪ್ರದೇಶ, ಛತ್ತೀಸಗಡ, ಮಹಾರಾಷ್ಟ್ರ, ರಾಜಸ್ಥಾನ, ಜಾರ್ಖಂಡ್ ರಾಜ್ಯಗಳಿಂದ ರಾಜ್ಯಸಭೆಯ 52 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ನಿವೃತ್ತಿ ಆಗಲಿರುವ ಸದಸ್ಯರಲ್ಲಿ 11 ಮಂದಿ ಉತ್ತರ ಪ್ರದೇಶದಿಂದ ಆಯ್ಕೆಯಾಗಿದ್ದವರು. ಸದ್ಯದ ಸ್ಥಿತಿಯಲ್ಲಿ ಉತ್ತರಪ್ರದೇಶದಲ್ಲಿ ಬಿಜೆಪಿಯು 8 ಸ್ಥಾನ ಗೆಲ್ಲಲು ಶಕ್ತವಾಗಿದೆ.

ಕೊಡಗು ಜಿಲ್ಲೆಯ ವಿವಿಧೆಡೆ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ನಾಪೋಕ್ಲು ಸುತ್ತಮುತ್ತ ಶುಕ್ರವಾರ ಬಿರುಸಿನ ಮಳೆಯಾಯಿತು.

ಬೇತು, ಚೋನಕೆರೆ, ಹಳೇ ತಾಲ್ಲೂಕು, ಎಮ್ಮೆಮಾಡು, ಕುಂಜಿಲ ಮತ್ತು ಮಡಿಕೇರಿಯ ಸುತ್ತಮುತ್ತಲ ಪ್ರದೇಶಗಳಲ್ಲಿ ಸಾಧಾರಣ ಮಳೆಯಾಗಿದೆ.

ಸಾಬರಮತಿ ಆಶ್ರಮ ಅಭಿವೃದ್ಧಿ ಕಾರ್ಯ ಪ್ರಶ್ನಿಸಿ ಗುಜರಾತ್ ಹೈಕೋರ್ಟ್‌ಗೆ ಅರ್ಜಿ

ತುಷಾರ್ ಗಾಂಧಿ ಅರ್ಜಿ ಮರುಪರಿಶೀಲಿಸಿ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ಅಹಮದಾಬಾದ್‌ನಲ್ಲಿ ಸಾಬರಮತಿ ಆಶ್ರಮ ಮತ್ತು ಸುತ್ತಮುತ್ತಲಿನ ಪ್ರದೇಶವನ್ನು ಅಭಿವೃದ್ಧಿಪಡಿಸುವ ಗುಜರಾತ್ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಮಹಾತ್ಮ ಗಾಂಧಿ ಅವರ ಮರಿಮೊಮ್ಮಗ ತುಷಾರ್ ಗಾಂಧಿ ಅವರು ಸಲ್ಲಿಸಿದ ಅರ್ಜಿಯನ್ನು ಮರುಪರಿಶೀಲಿಸುವಂತೆ ಸುಪ್ರೀಂಕೋರ್ಟ್ ಶುಕ್ರವಾರ ಗುಜರಾತ್ ಹೈಕೋರ್ಟ್‌ಗೆ ಸೂಚನೆ ನೀಡಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಸೂರ್ಯಕಾಂತ್ ಅವರನ್ನೊಳಗೊಂಡ ನ್ಯಾಯಪೀಠವು, ಗುಜರಾತ್ ಸರ್ಕಾರದಿಂದ ಸಮಗ್ರ ಅಫಿಡವಿಟ್‌ನ ವಿವರ ಕೇಳದೆಯೇ ಅಲ್ಲಿನ ಹೈಕೋರ್ಟ್ ಅರ್ಜಿಯನ್ನು ವಜಾಗೊಳಿಸಿದೆ. ಆದರೆ, ಅರ್ಹತೆಯ ಆಧಾರದಲ್ಲಿ ಅರ್ಜಿಯನ್ನು ಮರುಪರಿಶೀಲಿಸಬೇಕು ಹಾಗೂ ಅರ್ಜಿದಾರರಿಗೆ ಯೋಜನೆಯ ಸಮಗ್ರ ಮಾಹಿತಿ ನೀಡಬೇಕು ಎಂದು ಸೂಚಿಸಿತು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲೆ ಇಂದಿರಾ ಜೈಸಿಂಗ್ ಮತ್ತು ಗುಜರಾತ್ ಸರ್ಕಾರವನ್ನು ಪ್ರತಿನಿಧಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಈ ವಿಷಯವನ್ನು ಹೈಕೋರ್ಟ್‌ಗೆ ಹಿಂತಿರುಗಿಸಬಹುದು ಎಂದು ಒಪ್ಪಿಕೊಂಡರು.

‘ಈ ಯೋಜನೆಯು ಸಾಬರಮತಿ ಆಶ್ರಮದ ಭೌತಿಕ ರಚನೆಯನ್ನು ಬದಲಾಯಿಸುತ್ತದೆ ಮತ್ತು ಗಾಂಧೀಜಿಯವರ ಸಿದ್ಧಾಂತಕ್ಕೆ ಧಕ್ಕೆ ತರುವ ಆತಂಕವಿದೆ. ಯೋಜನೆಯ ಅನುಷ್ಠಾನದಿಂದ ಆಶ್ರಮ ಗಾಂಧಿ ತತ್ವವನ್ನು ಕಳೆದುಕೊಳ್ಳುವಂತಾಗಲಿದೆ’ ಎಂದು ಅರ್ಜಿದಾರ ತುಷಾರ್ ಗಾಂಧಿ ತಮ್ಮ ಅರ್ಜಿಯಲ್ಲಿ ಹೇಳಿದ್ದಾರೆ.

‘1933ರ ಸೆ.30ರಂದು ಗಾಂಧೀಜಿಯವರು ಲಿಖಿತವಾಗಿರುವ ನೀಡಿರುವ ಸೂಚನೆಯ ಪ್ರಕಾರ, ಆಶ್ರಮವನ್ನು ವಿಶ್ವದರ್ಜೆಯ ವಸ್ತುಸಂಗ್ರಹಾಲಯ ಮತ್ತು ಪ್ರವಾಸಿ ತಾಣ ಮಾಡಲು ಮರುವಿನ್ಯಾಸಗೊಳಿಸುವ ಮತ್ತು ಮರು ಅಭಿವೃದ್ಧಿ ಮಾಡುವ ನಿರ್ಧಾರವು ಮಹಾತ್ಮ ಗಾಂಧೀಜಿಯವರ ಇಚ್ಛೆಗೆ ಸಂಪೂರ್ಣವಾಗಿ ವಿರುದ್ಧವಾಗಿದೆ’ ಎಂದೂ ಅರ್ಜಿಯಲ್ಲಿ ಹೇಳಲಾಗಿದೆ.

ಸುಪ್ರೀಂ ಕೋರ್ಟ್‌ಗೆ ಕೇಂದ್ರದ ಮಾಹಿತಿ

ಕಾಯ್ದೆಯಡಿ ಬಡ್ತಿ ಮೀಸಲಾತಿ

ಕೇಂದ್ರ ಸರ್ಕಾರಿ ನೌಕರರು ಯಾರು, ಎಷ್ಟು?

ಕೇಂದ್ರ ಸರ್ಕಾರದ ವಿವಿಧ 75 ಸಚಿವಾಲಯಗಳು, ಇಲಾಖೆಗಳ ವ್ಯಾಪ್ತಿಯಲ್ಲಿನ ಒಟ್ಟು ಉದ್ಯೋಗಿಗಳ ಸಂಖ್ಯೆ 27,55,430. ಇವರಲ್ಲಿ ಪರಿಶಿಷ್ಟ ಜಾತಿಯ 4,79,301, ಪರಿಶಿಷ್ಟ ಪಂಗಡದ 2,14,738, ಒಬಿಸಿಯ 4,57,148 ನೌಕರರು ಇದ್ದಾರೆ.

ಸುಪ್ರೀಂ ಕೋರ್ಟ್‌ನ ನ್ಯಾಯಪೀಠಕ್ಕೆ ಶುಕ್ರವಾರ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಸರ್ಕಾರ ಈ ಮಾಹಿತಿಯನ್ನು ಒದಗಿಸಿದೆ.

ನವದೆಹಲಿ (ಪಿಟಿಐ): ಪರಿಶಿಷ್ಟ ಜಾತಿ, ಪಂಗಡದ ಉದ್ಯೋಗಿಗಳಿಗೆ ಬಡ್ತಿಯಲ್ಲಿ ಮೀಸಲಾತಿ ನೀತಿ ರದ್ದುಪಡಿಸುವುದು ಅನೇಕ ಸಮಸ್ಯೆಗಳಿಗೆ ಕಾರಣವಾಗಬಹುದು, ಇದರ ವಿರುದ್ಧ ಹಲವು ಮೇಲ್ಮನವಿಗಳೂ ದಾಖಲಾಗಬಹುದು ಎಂದು ಕೇಂದ್ರ ಸರ್ಕಾರ ಹೇಳಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರರಾವ್ ಮತ್ತು ಬಿ.ಆರ್. ಗವಾಯಿ ಅವರಿದ್ದ ಪೀಠಕ್ಕೆ ಸರ್ಕಾರ ಈ ಪ್ರಮಾಣಪತ್ರ ಸಲ್ಲಿಸಿದೆ. ಬಡ್ತಿ ನೀತಿಯು ಸಂವಿಧಾನ ಮತ್ತು ಕೋರ್ಟ್ ರೂಪಿಸಿದ ಕಾಯ್ದೆಗಳ ಪರಿಮಿತಿಯಲ್ಲಿಯೇ ಇದೆ ಎಂದು ಸರ್ಕಾರ ಸಮರ್ಥಿಸಿಕೊಂಡಿದೆ.

ಬಡ್ತಿಯಲ್ಲಿ ಮೀಸಲಾತಿಗೆ ಅವಕಾಶ ಇಲ್ಲವಾದರೆ, ಪರಿಶಿಷ್ಟ ಜಾತಿ, ಪಂಗಡದ ಉದ್ಯೋಗಿಗಳಿಗೆ ನೀಡಿರುವ ಬಡ್ತಿ ಸೌಲಭ್ಯಗಳನ್ನು ಹಿಂಪಡೆಯಬೇಕಾಗುತ್ತದೆ. ಹಿಂದಿನ ಹುದ್ದೆಗೆ ವಾಪಸಾತಿ, ವೇತನ ಅಥವಾ ಪಿಂಚಣಿಯ ಮರು ಪರಿಷ್ಕರಣೆ, ನಿವೃತ್ತಿಯಾಗಿರುವ ಪ್ರಕರಣಗಳಲ್ಲಿ ಉದ್ಯೋಗಿಗಳಿಗೆ ಹೆಚ್ಚುವರಿಯಾಗಿ ಪಾವತಿಯಾದ ಮೊತ್ತದ ವಸೂಲಾತಿ ಕ್ರಮಗಳು ಆಗಬೇಕಿದೆ ಎಂದು ತಿಳಿಸಿದೆ.

ಬಡ್ತಿ ಮೀಸಲಾತಿ ನೀತಿಯನ್ನು ಸಮರ್ಥಿಸಿಕೊಂಡಿರುವ ಕೇಂದ್ರ ಸರ್ಕಾರ, ಸರ್ಕಾರಿ ನೌಕರಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪ್ರಾತಿನಿಧ್ಯ ಸಮರ್ಪಕವಾಗಿಲ್ಲ. ಬಡ್ತಿ ಮೀಸಲಾತಿಯಿಂದ ಆಡಳಿತದ ಮೇಲೆ ನಕಾರಾತ್ಮಕ ಪರಿಣಾಮ ಬೀರುವುದಿಲ್ಲ ಎಂದು ತಿಳಿಸಿದೆ.

ಆಡಳಿತದ ದಕ್ಷತೆಯನ್ನು ಉದ್ಯೋಗಿಗಳ ವಾರ್ಷಿಕ ಸಾಧನೆಯ ಮೌಲ್ಯಮಾಪನ ವರದಿ ಆಧರಿಸಿ ನಿರ್ಧರಿಸಲಾಗುತ್ತದೆ. ಉದ್ಯೋಗಿಯ ಸೇವೆ, ವೈಯಕ್ತಿಕ ಕೊಡುಗೆ, ಕಾರ್ಯದಕ್ಷತೆಯನ್ನು ಈ ವರದಿಯು ಒಳಗೊಂಡಿರುತ್ತದೆ ಎಂದು ಸರ್ಕಾರ ತಿಳಿಸಿದೆ.

ಸುಪ್ರೀಂ ಕೋರ್ಟ್ ಜ.28ರಂದು ಪರಿಶಿಷ್ಟ ಜಾತಿ, ಪಂಗಡದ ಉದ್ಯೋಗಿಗಳಿಗೆ ಬಡ್ತಿಯಲ್ಲಿ ಮೀಸಲಾತಿ ಕುರಿತು 'ನಿರ್ದಿಷ್ಟ ಮಾನದಂಡ ನಿಗದಿಪಡಿಸಲು' ನಿರಾಕರಿಸಿತ್ತು. ಸೂಕ್ತ ಪ್ರಾತಿನಿಧ್ಯ ಇರುವಂತೆ ನೋಡಿಕೊಳ್ಳುವುದು ಸರ್ಕಾರದ ವಿವೇಚನೆಗೆ ಸೇರಿದೆ ಎಂದು ಹೇಳಿತ್ತು.

ಸಂವಿಧಾನದ ಅನುಸಾರ ಇದಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ನಿರ್ದಿಷ್ಟವಾಗಿ ಸೂಚನೆಯನ್ನು ನೀಡುವುದು ನ್ಯಾಯಸಮ್ಮತವೂ ಅಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು.

ಮೋದಿಗೆ ಜೀವ ಬೆದರಿಕೆ: ಇ-ಮೇಲ್ ಸತ್ಯಾಸತ್ಯತೆ ತನಿಖೆ

ಮುಂಬೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರಿಗೆ ಜೀವ ಬೆದರಿಕೆಗೆ ಸಂಬಂಧಿಸಿದ ಇ-ಮೇಲ್‌ನ ಸತ್ಯಾಸತ್ಯತೆ ಬಗ್ಗೆ ಮಹಾರಾಷ್ಟ್ರ ಪೊಲೀಸರು ಪರಿಶೀಲನೆ ನಡೆಸಲಿದ್ದಾರೆ ಎಂದು ಗೃಹ ಸಚಿವ ದಿಲೀಪ್ ವಲ್ಸೆ ಪಾಟೀಲ್ ಹೇಳಿದ್ದಾರೆ.

ನರೇಂದ್ರ ಮೋದಿ ಅವರನ್ನು ಕೊಲ್ಲುವ ಉದ್ದೇಶದೊಂದಿಗೆ 20 ಸ್ಲೀಪರ್‌ಸೆಲ್‌ಗಳು 20 ಕೆ.ಜಿ ಆರ್‌ಡಿಎಕ್ಸ್‌ನೊಂದಿಗೆ ಸಕ್ರಿಯವಾಗಿದೆ ಎಂಬ ಅಂಶವಿರುವ ಇ-ಮೇಲ್ ಸಂದೇಶ ಮುಂಬೈನಲ್ಲಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಕಚೇರಿಗೆ ಬಂದಿತ್ತು.

ಈ ಬಗ್ಗೆ ಶುಕ್ರವಾರ ಪ್ರತಿಕ್ರಿಯಿಸಿದ ಸಚಿವ ಪಾಟೀಲ್ ಅವರು, ಈ ಸಂಬಂಧ ಪೊಲೀಸರು ತನಿಖೆ ನಡೆಸಲಿದ್ದಾರೆ ಎಂದರು. ಮತ್ತೊಂದೆಡೆ ಇ-ಮೇಲ್ 2 ತಿಂಗಳ ಹಳೆಯದ್ದು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಕೋಮು ವಿಭಜನೆ ಬಗ್ಗೆ ಎನ್‌ಸಿಪಿ ಹೇಳಿಕೆ

'ಎಲ್ಲಾ ಕಾರ್ಪೊರೇಟ್ ಸಂಸ್ಥೆಗಳು ಧ್ವನಿಯೆತ್ತಲಿ'

ಮುಂಬೈ (ಪಿಟಿಐ): ಕರ್ನಾಟಕದಲ್ಲಿ ಹೆಚ್ಚುತ್ತಿರುವ ಧಾರ್ಮಿಕ ವಿಭಜನೆಯನ್ನು ತಡೆಯಲು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿರುವ ಬಯೊಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ ಅವರ ನಡೆಯನ್ನು ಎನ್‌ಸಿಪಿ ಶ್ಲಾಘಿಸಿದೆ.

ಷಾ ಅವರಂತೆ ಇತರ ಕಾರ್ಪೊರೇಟ್ ಸಂಸ್ಥೆಗಳು ಈ ವಿಷಯವಾಗಿ ಧ್ವನಿ ಎತ್ತಬೇಕು ಎಂದು ಎನ್‌ಸಿಪಿಯ ಮುಖ್ಯ ವಕ್ತಾರ ಮಹೇಶ ತಾಪಸೆ ಶುಕ್ರವಾರ ಹೇಳಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಸತ್ಯವನ್ನು ಹೇಳುವಂತಹ ಪ್ರಜ್ಞಾಪೂರ್ವಕ ಆಯ್ಕೆ ನಿಮ್ಮದಾಗಬೇಕು' ಎಂದು ಕಾರ್ಪೊರೇಟ್ ವಲಯದ ನಾಯಕರಿಗೆ ಮನವಿ ಮಾಡಿದ್ದಾರೆ.

'ಆರ್ಥಿಕ ಬಹಿಷ್ಕಾರಕ್ಕೆ ಒಳಗಾಗಿರುವವರಲ್ಲಿ ಆತ್ಮವಿಶ್ವಾಸ ತುಂಬಲು ಎಲ್ಲ ರಾಜ್ಯಗಳ ಮುಖಂಡರು ಮುಂದಾಗಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

'ಬೇರೆ ಧರ್ಮ, ಮತ ಅಥವಾ ಸಮುದಾಯಕ್ಕೆ ಸೇರಿದವರಾಗಿದ್ದಾರೆ ಎಂಬ ಏಕೈಕ ಕಾರಣಕ್ಕಾಗಿ ಜೀವನೋಪಾಯಕ್ಕಾಗಿ ನಂಬಿರುವ ದುಡಿಮೆಯನ್ನು ಅವರಿಂದ ಕಸಿಯಬಾರದು' ಎಂದು ಹೇಳಿದ್ದಾರೆ.

'ಮಹಾರಾಷ್ಟ್ರದಲ್ಲಿ ಎಲ್ಲರ ಒಳಗೊಳ್ಳುವಿಕೆಯಂತಹ ಪರಂಪರೆ ಛತ್ರಪತಿ ಶಿವಾಜಿ ಮಹಾರಾಜರ ಕಾಲದಿಂದಲೂ ಇದೆ. ಈಗ ಅಧಿಕಾರದಲ್ಲಿರುವ ಮಹಾ ವಿಕಾಸ್ ಆಘಾಡಿ (ಎಂವಿಎ) ಸರ್ಕಾರ ಈ ಪರಂಪರೆಯನ್ನು ಎತ್ತಿ ಹಿಡಿದಿದೆ' ಎಂದು ಅವರು ಹೇಳಿಕೆಯಲ್ಲಿ ವಿವರಿಸಿದ್ದಾರೆ.

ಕರ್ನಾಟಕದಲ್ಲಿ ಹಿಜಾಬ್ ವಿವಾದ, ಮುಸ್ಲಿಂ ವರ್ತಕರಿಗೆ ಆರ್ಥಿಕ ಬಹಿಷ್ಕಾರದ ಬಳಿಕ ಹಲಾಲ್ ಕಟ್‌ಗೆ ವಿರೋಧದ ಸರಣಿ ಬೆಳವಣಿಗೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ, 'ಧಾರ್ಮಿಕ ವಿಭಜನೆಯನ್ನು ದಯವಿಟ್ಟು ತಡೆಯಿರಿ' ಎಂದು ಕಿರಣ್ ಮಜುಂದಾರ್ ಷಾ ಅವರು ಗುರುವಾರ ಟ್ವೀಟ್ ಮಾಡಿದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಟ್ವಿಟರ್ ಖಾತೆಯನ್ನು ಟ್ಯಾಗ್ ಮಾಡಿ ಅವರು ಸರಣಿ ಟ್ವೀಟ್ ಮಾಡಿದ್ದರು.

ದಾಂದಲೆ: ವರದಿ ಕೇಳಿದ ಹೈಕೋರ್ಟ್

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನಿವಾಸದ ಮುಂದೆ ನಡೆದ ದಾಂದಲೆ ಪ್ರಕರಣದ ತನಿಖೆ ಯಾವ ಹಂತದಲ್ಲಿದೆ ಎಂಬ ಬಗ್ಗೆ ವರದಿ ನೀಡುವಂತೆ ಪೊಲೀಸರಿಗೆ ಸೂಚಿಸಿದ ದೆಹಲಿ ಹೈಕೋರ್ಟ್, ಜನರ ಗುಂಪೊಂದು ದಾಳಿ ನಡೆಸುವ ಸಂದರ್ಭದಲ್ಲಿ ಅಗತ್ಯವಿರುವಷ್ಟು ಪೊಲೀಸರನ್ನು ಏಕೆ ನಿಯೋಜಿಸಿರಲಿಲ್ಲ ಎಂದು ಪ್ರಶ್ನಿಸಿದೆ.

ಕರ್ನಾಟಕ ಸರ್ಕಾರ
ಜಂಟಿ ಕೃಷಿ ನಿರ್ದೇಶಕರ ಕಛೇರಿ, ಹಾಸನ.
Email-jdahassan@yahoo.com 09.2021 Phone No:08172-267158
ಸಂಖ್ಯೆ:ಜಕೃನಿಹಾ/ಹೊ.ಗು./2021–22 ದಿನಾಂಕ: 31.03.2022
ಇ–ಟೆಂಡರ್ ಪ್ರಕಟಣೆ
2022–23ನೇ ಸಾಲಿಗೆ ಹಾಸನ ಜಿಲ್ಲೆಯ ಕೃಷಿ ಇಲಾಖೆಯಲ್ಲಿನ ವಿವಿಧ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಅರ್ಹ ಸಂಸ್ಥೆಗಳಿಗೆ ಇ–ಟೆಂಡರ್ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು https://www.eproc.karnataka.gov.in ನಲ್ಲಿ ದಿನಾಂಕ 31.03.2022 ರಿಂದ ಲಭ್ಯವಿದ್ದು ಇಟೆಂಡರ್‌ನ ಸಲ್ಲಿಸಲು ಕೊನೆಯ ದಿನಾಂಕ 29.04.2022 ಬೆಳಗ್ಗೆ 11.00 ಗಂಟೆ ಆಗಿದ್ದು, ಅರ್ಹ ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಲು ಕೋರಿದೆ. ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆದುಕೊಳ್ಳಬಹುದು.
ಸಹಿ/– ಜಂಟಿ ಕೃಷಿ ನಿರ್ದೇಶಕರು, ಹಾಸನ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/01/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಶಾಂತಿನಗರ ವಿಭಾಗ,
ಪಿಯುಬಿ ಕಟ್ಟಡ, 9ನೇ ಮಹಡಿ, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 01
ಸಂಖ್ಯೆ: ಕಾಪಾಅ/ಶಾನ/ಟೆಂಡರ್–19/ತಿದ್ದುಪಡಿ/2022–23 ದಿನಾಂಕ: 01.04.2022
ತಿದ್ದುಪಡಿ ಪ್ರಕಟಣೆ
ವಿಷಯ: ಟೆಂಡರ್ ಪ್ರಕಟಣೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿರುವ ಬಗ್ಗೆ.
ಉಲ್ಲೇಖ: 1. ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ಶಾನ/ಟೆಂಡರ್/19/2021–22 ದಿನಾಂಕ: 28.03.2022
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರನ್ವಯ ಶಾಂತಿನಗರ ವಿಭಾಗದ ವ್ಯಾಪ್ತಿಯ ವಾರ್ಡ್ ಸಂಖ್ಯೆ–111ರ ವ್ಯಾಪ್ತಿಯಲ್ಲಿ ಬರುವ ಎಂ.ಜಿ ಪಾರ್ಕ್ ಅಭಿವೃದ್ಧಿಪಡಿಸುವ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರನ್ನು ತಾಂತ್ರಿಕ ಕಾರಣಗಳಿಂದ ತಾತ್ಕಾಲಿಕವಾಗಿ ಮುಂದೂಡಲಾಗಿರುತ್ತದೆ.
ಸಹಿ/–
ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ
ಕೋವಿಡ್‌-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರ ಕಚೇರಿ, ಕೃಭಾಜನಿನಿ,
ನಾಬಂಧ ಕಾಲುವೆ, ವಿಭಾಗ–5, ರೋಡಲಬಂಡಾ.
ಸಂ: ಕೃಭಾನಿನಿ/ನಾಬದಂಕಾ/ವಿ–5/ಯೋಶಾ/2021–22/979 ದಿ: 21.03.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ (ನಿ), ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ವಾರ್ಷಿಕ ಕಾರ್ಯಕ್ರಮ ಪಟ್ಟಿಯ ಕಾಮಗಾರಿಗೆ ಶೇಕಡವಾರು ಟೆಂಡರ್‌ನ್ನು ಈ ಕೆಳಗೆ ತಿಳಿಸಿರುವಂತೆ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.
ಕಾಮಗಾರಿಯ ಸಂಖ್ಯೆ: 01, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 11.04.2022 ಸಂಜೆ 5.00 ಗಂಟೆವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 13.04.2022 ಬೆಳಿಗ್ಗೆ 11.00 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 16.04.2022 ಬೆಳಿಗ್ಗೆ 11.00 ಗಂಟೆಗೆ. ಎಲ್ಲಾ ಬಿಡ್‌ಗಳ ಟೆಂಡರ್‌ಗಳನ್ನು ಈ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಅಂತರ್ ಜಾಲ ವಿಳಾಸ www.eproc.karnataka.gov.in ದಲ್ಲಿ ಅಥವಾ ಈ ಕೆಳಸಹಿದಾರರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಎಕ್ಸಿಕ್ಯೂಟೀವ್ ಇಂಜಿನಿಯರ್
ಕೃಭಾ.ಜ.ನಿನಿ, ನಾಬದಂಕಾಲುವೆ, ವಿಭಾಗ–5, ರೋಡಲಬಂಡಾ.
ವಾ.ಸಾ.ಸಂ.ಇ/ರಾಯಚೂರು/02/ಎಂ.ಸಿ.&ಎ/2022–23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಡೆತನದ್ದು)
ಕಾರ್ಯಪಾಲಕ ಅಭಿಯಂತರರ ಕಛೇರಿ, ಕೃಭಾಜನಿನಿ, ಮುಏನೀ,
ವಿಭಾಗ ನಂ.4 ದೇವರಹಿಪ್ಪರಗಿ. ತಾ॥ದೇವರಹಿಪ್ಪರಗಿ ಜಿ॥ ವಿಜಯಪುರ.
ಸಂಖ್ಯೆ: ಕೃ.ಭಾ.ಜ.ನಿ.ನಿ/ಮುಏನೀ/ವಿ–4/ಟೆಂಡರ್/2021–22/916 ದಿನಾಂಕ:29.03.2022
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರು ಶೇಕಡಾವಾರು ಆಧಾರದ ಮೇಲೆ ಅರ್ಹ ಗುತ್ತಿಗೆದಾರರಿಂದ ಇಂಡೆಂಟ್ ಸಂಖ್ಯೆ KBJNL/2021-22/RD/WORK_INDENT21992 ಮತ್ತು KBJNL/2021-22/RD/WORK_INDENT21994 ಕಾಮಗಾರಿಗೆ ಎರಡು ಕವರ್‌ಗಳಲ್ಲಿ (ತಾಂತ್ರಿಕ ಬಿಡ್ & ಆರ್ಥಿಕ ಬಿಡ್) ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್ ಗಿಟ್ಟ ಮೊತ್ತ ಮತ್ತು ಇ.ಎಮ್.ಡಿ. ಮೊತ್ತ ಇಂಡೆಂಟ್ ಸಂಖ್ಯೆಗಳ ಅನುಕ್ರಮವಾಗಿ 187.98 ಲಕ್ಷಗಳು ಮತ್ತು 2.82 ಲಕ್ಷಗಳು ಹಾಗೂ 186.50 ಲಕ್ಷಗಳು ಮತ್ತು 2.80 ಲಕ್ಷಗಳು.
ಸದರಿ ಟೆಂಡರನ್ನು ದಿನಾಂಕ: 06.04.2022 ರಿಂದ ವೀಕ್ಷಿಸಬಹುದಾಗಿದ್ದು, ಪೂರ್ಣಗೊಳಿಸಿದ ಟೆಂಡರನ್ನು ಸಲ್ಲಿಸುವ ಕೊನೆಯ ದಿ: 16.04.2022 ಸಾಯಂಕಾಲ 5.30 ಗಂಟೆಯಾಗಿರುತ್ತದೆ. ಸದರಿ ಕಾಮಗಾರಿಗಳ ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 13.04.2022 ರಂದು ಬೆಳಿಗ್ಗೆ 11.00 ಗಂಟೆಗೆ ಮುಖ್ಯ ಇಂಜಿನಿಯರರ ಕಚೇರಿ, ಕೃ.ಭಾ.ಜ.ನಿ.ನಿ. ಅಣೆಕಟ್ಟು ವಲಯ ಆಲಮಟ್ಟಿಯಲ್ಲಿ ನಡೆಸಲಾಗುವುದು. ಕಾಮಗಾರಿ ಕುರಿತು ಪ್ರಶ್ನಾವಳಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 11.04.2022 ಸಾಯಂಕಾಲ 5.30 ಗಂಟೆಯಾಗಿರುತ್ತದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18.04.2022 ಬೆಳಿಗ್ಗೆ 11.00 ಗಂಟೆ ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಾಲತಾಣ (ವೆಬ್ ಸೈಟ್) https://eproc.karnataka.gov.in/eportal/index.seam ದಲ್ಲಿ ಹಾಗೂ ಈ ಕೆಳಗೆ ಸಹಿ ಮಾಡಿದ ಕಛೇರಿಯ ಕೆಲಸದ ಅವಧಿಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ.
ಸಹಿ/–ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಮುಏನೀ, ವಿಭಾಗ–04, ದೇವರಹಿಪ್ಪರಗಿ
ವಾಸಾಸಂಇ/ವಿಜಯಪುರ/02/ಎಂಸಿಎ/2022–23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕೃಭಾಜನಿನಿ,
ಎ.ಎಲ್.ಬಿ.ಸಿ ವಿಭಾಗ, ಆಲಮಟ್ಟಿ–586201.
ತಾ॥ ಬ.ಬಾಗೇವಾಡಿ, ಜಿ॥ ವಿಜಯಪೂರ.
ಸಂಖ್ಯೆ:ಕೃ.ಭಾ.ಜ.ನಿ.ನಿ/ಎಎಲ್‌ಬಿಸಿ ವಿಭಾಗ/ಡಿಎಮ್/ಟೆಂಡರ/ಮುಸ್ತಾ & ಕಾಲುವೆ ವಾರ್ಷಿಕ ನಿರ್ವಹಣೆ/2021–22/2954 ದಿನಾಂಕ:28.03.2022
ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಎ ಎಲ್ ಬಿ ಸಿ ವಿಭಾಗ ಆಲಮಟ್ಟಿ, ತಾ: ಬ.ಬಾಗೇವಾಡಿ ಇವರು ಶೇಕಡಾವಾರು ಟೆಂಡರನ್ನು ಆಹ್ವಾನಿಸಿರುತ್ತಾರೆ. ಕೆಬಿಜೆಎನ್‌ಎಲ್ ಕಾಯ್ದೆ ನಿಯಮ–28 ರನ್ವಯ ದ್ವಿ–ಲಕೋಟೆಯಲ್ಲಿ ಟೆಂಡರನ್ನು ಸಂದಾಯ ಮಾಡುವಂತೆ ಕೋರಲಾಗಿದೆ. ಸಿವಿಲ್ ಕಾಮಗಾರಿ ಸಿಇಜಿಐ ಪ್ರಥಮ ದರ್ಜೆ & ಮೆಲ್ಪಟ್ಟ / ಪಿಡಬ್ಲ್ಯೂಡಿ ನೋಂದಾಯಿತ ಪ್ರಥಮ ದರ್ಜೆ & ಮೇಲ್ಪಟ್ಟ & ಲೇಬರ್ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿರುತ್ತದೆ. ಇಂಡೆಂಟ್ ಸಂಖ್ಯೆ: 21955, 21931, 21933, 21982, 21937, 21995, 21964, 21933 & 21934 ಟೆಂಡರಗಳ ಒಟ್ಟು ಮೊತ್ತ ರೂ. 463.82 ಲಕ್ಷಗಳು.
ಟೆಂಡರನ ವಿವಿಧ ಹಂತಗಳನ್ನು 1) ಟೆಂಡರ ಡಾಕುಮೆಂಟ್‌ಗಳನ್ನು ಇ–ಪೋರ್ಟಲ್‌ನಲ್ಲಿ ವೀಕ್ಷಿಸಲು & ಭರ್ತಿ ಮಾಡಿದ ಬಿಡ್‌ನ್ನು ಸಲ್ಲಿಸುವ ಕಾಲಾವಧಿ ದಿನಾಂಕ: 04.04.2022 ರಿಂದ 16.04.2022 ರ ಸಾಯಂಕಾಲ 5.00 ಘಂಟೆಯವರೆಗೆ. 2) ಲಕೋಟೆ–1 (ತಾಂತ್ರಿಕ ಬಿಡ್)ನ್ನು ತೆರೆಯುವ ದಿನಾಂಕ; 18.04.2022 ಬೆಳಿಗ್ಗೆ 11.00 ಘಂಟೆಗೆ 3) ಲಕೋಟೆ–2 (ಆರ್ಥಿಕ ಬಿಡ್)ನ್ನು ತೆರೆಯುವ ದಿನಾಂಕ; 21.04.2022 ಬೆಳಿಗ್ಗೆ 11.00 ಘಂಟೆಗೆ.
ಟೆಂಡರಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ಅವಧಿಯಲ್ಲಿ ಅಥವಾ http://eproc.karnataka.gov.in/eportal /ines.seam and www.kbjnl.karnataka.gov.in ವೆಬ್‌ಸೈಟನಲ್ಲಿ ಪಡೆದುಕೊಳ್ಳಬಹುದು.
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ
ವಾಸಾಸಂಇ/ವಿಜಯಪುರ/06/ಎಂಸಿಎ/2022–23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ, ತಾ: ಹುಬ್ಬಳ್ಳಿ, ಜಿ: ಧಾರವಾಡ 580023.
e-mail :- knnl@knnlindia.com ಫೋನ್ :0836–2315225 ಫ್ಯಾಕ್ಸ್:2315226.
Website:- www.knnlindia.com e-mail :-eemrbcc3byt@gmail.com
ಸಂ.ಕನೀನಿನಿ/ಮಬದವಿ–3/ಇ.ಇ–1/ಇ–ಟೆಂಡರ್/2022–23/01 ದಿ:–01/04/2022
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರವರು ಕನೀನಿನಿ, ಮಬದಕಾನಿ ವಿಭಾಗ ನಂ.3, ಬ್ಯಾಹಟ್ಟಿ ವ್ಯಾಪ್ತಿಯ 4701 M&MI ಲೆಕ್ಕಶೀರ್ಷಿಕೆ ಅಡಿ ಈ ಕೆಳಗೆ ನಮೂದಿಸಿರುವ ಇಂಡೆಂಟ ನಂಬರಿನ 01 ಕಾಮಗಾರಿಗೆ ಶೇಕಡಾವಾರು ಟೆಂಡರನ್ನು ದ್ವಿಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರಮೆಂಟ್ ಮೂಲಕ ಆಹ್ವಾನಿಸಲಾಗಿದೆ.
Work Indent No :-33176
ಕಾಮಗಾರಿಯ ಅಂದಾಜು ಮೊತ್ತ: ರೂ.150.00 ಲಕ್ಷಗಳು
ಇ.ಎಂ.ಡಿ ಮೊತ್ತ:- ರೂ.1.50 ಲಕ್ಷಗಳು
ಇ–ಪೋರ್ಟಲ್ ಮೂಲಕ ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 16/04/2022 ರ 4.00 pm ತನಕ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18/04/2022 ರಂದು ಮುಂಜಾನೆ: 11.00 am ರಿಂದ. ಹಾಗೂ ಕಾಮಗಾರಿಯ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ಮುಖೇನ http://eproc.karnataka.gov.in ಮೂಲಕ ದಿನಾಂಕ: 05/04/2022 ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ: 0836–2315225 ನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು
ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ
ವಾ.ಸಾ.ಇ/ಧಾ/09/2022–23/ದೇಶಪಾಂಡೆಪಬ್ಲಿಸಿಟಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)
ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ ನಂ.4, ಹೊಸದುರ್ಗ, ಚಿತ್ರದುರ್ಗ (ಜಿ)
ಫೋನ್/ಫ್ಯಾಕ್ಸ್ 08199–230018. ಇ–ಮೇಲ್: eeubpdvn4@gmail.com
ಸಂಖ್ಯೆ : ಕಾಇಂ/ವಿಜನಿನಿ/ಭಮೇಯೋ/ವಿ–4/ಹೊ/ಟೆಂಡರ್–15/2021–22/ ದಿ : 30.03.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಲೆ.ಶೀರ್ಷಿಕೆ 4701 ಐ.ಇ.ಬಿ.ಆರ್ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ "Construction of Retaining Wall including nala training on left bank of Hebburunala near Benakunase village of Ajjampura Taluka, chikkamagalur dist for letting out of water from UBP main canal to Vanivilasasagara dam. (Indent No.2115)" ಕಾಮಗಾರಿಗೆ ದ್ವಿಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನ http://www.eproc.karnataka.gov.in ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ:30.03.2022 ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು. ದಿನಾಂಕ:07.04.2022 ರ ಅಪರಾಹ್ನ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು._ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ/ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ ಮೊತ್ತ/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ http://www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ:01.04.2022ರ ಅಪರಾಹ್ನ 1.30 ಗಂಟೆಯವರೆಗೆ ಸಂಪರ್ಕಿಸಬಹುದು. ಸದರಿ ಕಾಮಗಾರಿಗಳಿಗೆ ಪ್ರೀ–ಬಿಡ್ ಸಭೆಯನ್ನು ಮುಖ್ಯ ಅಭಿಯಂತರರು, ವಿಜನಿನಿ, ಭ.ಮೇ.ಯೋ ವಲಯ, ಚಿತ್ರದುರ್ಗ ಇವರ ಕಚೇರಿಯಲ್ಲಿ ದಿನಾಂಕ:04.04.2022 ರಂದು ಮಧ್ಯಾಹ್ನ 3.30 ಗಂಟೆಗೆ ನೆಡೆಸಲಾಗುವುದು. ಸ್ವೀಕೃತ ಟೆಂಡರ್‌ಗಳ ತಾಂತ್ರಿಕ ಬಿಡ್‌ನ್ನು ದಿನಾಂಕ:08.04.2022 ರಂದು ಸಂಜೆ 4.30 ಗಂಟೆಯ ನಂತರ ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಕಾರ್ಯಪಾಲಕ ಅಭಿಯಂತರರು, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.04, ಹೊಸದುರ್ಗ ರವರ ಕಛೇರಿಯಲ್ಲಿ ಹಾಗೂ ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ವಿ.ಸೂ:– ಇ.ಪಿ.ಎಫ್ ನೋಂದಣೆ ಕಡ್ಡಾಯವಾಗಿದ್ದು, ಇ.ಪಿ.ಎಫ್ ನೋಂದಣೆ ಇಲ್ಲದ ಗುತ್ತಿಗೆದಾರರ ಟೆಂಡರ್ ಬಿಡ್‌ಗಳನ್ನು ಅನರ್ಹಗೊಳಿಸಲಾಗುವುದು.
DIPR/CTA/MCA/1119/2021-22 ಸಹಿ/– ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.04, ಹೊಸದುರ್ಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ಯೋಜನೆ-ಪೂರ್ವ), ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡ (ಪಿಯುಬಿ), 21ನೇ ಮಹಡಿ, ಎಂ.ಜಿ. ರಸ್ತೆ ಬೆಂಗಳೂರು-01.
ಸಂಖ್ಯೆ:ಕಾಅ(ಯೋ-ಪೂ)/ಟೆಂಡರ್/01/2022-23 ದಿನಾಂಕ: 01-04-2022
ಅಲ್ಪಾವಧಿ ಟೆಂಡರ್‌ಗೆ ಆಹ್ವಾನ (ದ್ವಿ ಲಕೋಟೆ ಪದ್ಧತಿ) (ಕೆಡಬ್ಲ್ಯೂ-3)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಕಾರ್ಯಪಾಲಕ ಅಭಿಯಂತರರು, (ಯೋಜನೆ-ಪೂರ್ವ) ಬೃಬೆಂಮಪಾ, ರವರು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1)	ವಾರ್ಡ್ ನಂ.111ರ ನೇತಾಜಿ ಸುಭಾಷ್ ಚಂದ್ರ ಬೋಸ್ ಬಹುಮಹಡಿ ಕಟ್ಟಡ ಮತ್ತು ಜಂಟಿ ಆಯುಕ್ತರು (ಪೂರ್ವ) ವಲಯ ಕಚೇರಿ ಸಂಕೀರ್ಣ ಮತ್ತು ಆವರಣದಲ್ಲಿ ಹೌಸ್ ಕೀಪಿಂಗ್ ಸೇವೆಯನ್ನು ಒದಗಿಸುವುದು.	52.75	1,05,500

ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 04-04-2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2. ಟೆಂಡರ್ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 12-04-2022ರ ಸಂಜೆ 4:00 ಗಂಟೆಯೊಳಗೆ 3. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 13-04-2022ರ ಸಂಜೆ 4:30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಭೇಟಿನೀಡಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, (ಯೋಜನೆ-ಪೂರ್ವ), ಬೃಬೆಂಮಪಾ.
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಲೋಕೋಪಯೋಗಿ ಇಲಾಖೆ. ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.
ಕ್ರಸಂ:ಕಾಇಂ:ಲೋಇವಿ:ತುಮ:ಕಿಇಂ–2:ಟೆಂಡರ್–44/2021–22 ದಿನಾಂಕ: 29.03.2022
ಟೆಂಡರ್ ಪ್ರಕಟಣೆ ಸಂ.44/2021–22 ದಿನಾಂಕ: 29.03.2022
ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 44/2021–22: ದಿನಾಂಕ 29–03–2022ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054–04–337–0–01–133: ವಿಶೇಷ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 01 ಪ್ಯಾಕೇಜ್ ಕಾಮಗಾರಿಗೆ ಇ–ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತ ರೂ.841.12ಲಕ್ಷಗಳು, ಇ.ಎಂ.ಡಿ ಮೊತ್ತ ರೂ.12,61,700/–, ಅರ್ಹ ಗುತ್ತಿಗೆದಾರರು: 1 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 06 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 11.04.2022 ರ 16.00 ಗಂಟೆ ವರೆಗೆ, ಇ–ಪ್ರೂಕ್ಯೂರ್‌ಮಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ 31.03.2022 ರಿಂದ 13.04.2022ರ 16.00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 13.04.2022 ರ ಸಂಜೆ 16.00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 16.04.2022 ರ ಬೆಳಗ್ಗೆ 11.00 ಗಂಟೆಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 20.04.2022ರ ಬೆಳಗ್ಗೆ 11.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/782/MCA/2021-22

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www:eepwdmys21@gmail.com ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810
ಐಟಂವಾರು ಟೆಂಡರು ಅಧಿಸೂಚನೆ ಸಂ.28/2021–22/ ದಿನಾಂಕ: 31.03.2022
ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ 1 ಕಾಮಗಾರಿಗೆ KW-3 ನಿಬಂಧನೆ ಮತ್ತು ಷರತ್ತುಗಳನ್ವಯ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಟೆಂಡರಿಗಿಟ್ಟ ಮೊತ್ತ ರೂ. 100.00 ಲಕ್ಷಗಳು ಮತ್ತು ಇ.ಎಂ.ಡಿ ಮೊತ್ತ ರೂ.2.00 ಲಕ್ಷಗಳು. 3ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ನೊಂದಾಯಿಸಿರುವವರು ಭಾಗವಹಿಸಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (31.03.2022 ರಿಂದ16.04.2022 ರ ಸಂಜೆ 4.00 ಘಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೊಕ್ಯೂರ್ ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.

ಕರ್ನಾಟಕ ಸರ್ಕಾರ
ಜಲಾನಯನ ಅಭಿವೃದ್ಧಿ ಇಲಾಖೆ
ಆಯುಕ್ತರ ಕಾರ್ಯಾಲಯ, 7ನೇ ಮಹಡಿ, ಕ.ಗೃ.ಮಂ ಸಂಕೀರ್ಣ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009
ಸಂ: ಜಅಇ/ಉಕೃನಿ/ರಿವಾರ್ಡ್/ಸಂ./ ಮಾಸಸಂ/2021–22 ದಿನಾಂಕ: 30.03.2022
ಟೆಂಡರ್ ಆಹ್ವಾನಿಸುವ ಸೂಚನೆ
ರಿವಾರ್ಡ್ ಯೋಜನೆಯಡಿ ಮಾನವ ಸಂಪನ್ಮೂಲ ಒದಗಿಸುವ ಸಂಸ್ಥೆಯ ಸಂಗ್ರಹಣೆ
ಜಲಾನಯನ ಅಭಿವೃದ್ಧಿ ಇಲಾಖೆಯು ಕರ್ನಾಟಕ ಇ–ಸಂಗ್ರಹಣೆ ವೇದಿಕೆ (https://eproc.karnataka.gov.in) ಮೂಲಕ ವಿಶ್ವಬ್ಯಾಂಕ್ ನೆರವಿನ ರಿವಾರ್ಡ್ ಯೋಜನೆಯಡಿ ಈ ಕೆಳಗೆ ನಮೂದಿಸಿದ ಮಾನವ ಸಂಪನ್ಮೂಲವನ್ನು ಒದಗಿಸುವ ಸಂಸ್ಥೆಯ ಸಂಗ್ರಹಣೆಗಾಗಿ ಬಿಡ್‌ಗಳನ್ನು ಆಹ್ವಾನಿಸುತ್ತಿದೆ.

ವಿವರಗಳು	ಸಂ.	ಇ.ಎಂ.ಡಿ ಮೊತ್ತ (ರೂ.)
ರಿವಾರ್ಡ್ ಯೋಜನೆಯಡಿ ಬೇಕಾಗುವ ಮಾನವ ಸಂಪನ್ಮೂಲ		
Schedule-I: ಜಲಾನಯನ ಕೇಂದ್ರ ಕಚೇರಿಗೆ ಬೇಕಾಗುವ ತಾಂತ್ರಿಕ ಹಾಗೂ ಸಹಾಯಕ ಸಿಬ್ಬಂದಿ	29	Rs. 8,91,540/-
Schedule-II: ಯೋಜನಾ ಪ್ರದೇಶಕ್ಕೆ ಬೇಕಾಗುವ ತಾಂತ್ರಿಕ ಹಾಗೂ ಸಹಾಯಕ ಸಿಬ್ಬಂದಿ	111	

ಟೆಂಡರ್ ದಾಖಲಾತಿಗಳೊಂದಿಗೆ ವಿವರವಾದ ಮಾಹಿತಿಯನ್ನು ಕರ್ನಾಟಕ ಇ–ಸಂಗ್ರಹಣೆ ವೇದಿಕೆಯಲ್ಲಿ ದಿನಾಂಕ: 01.04.2022 ರಿಂದ ಲಭ್ಯವಿರುತ್ತದೆ. ಆಸಕ್ತಿಯುಳ್ಳ ಸಂಸ್ಥೆಗಳು ಹಾಗೂ ಅವರ ಅಧಿಕೃತ ಏಜೆಂಟರುಗಳು ವಿವರಗಳನ್ನು ಅವಲೋಕಿಸಿ ಟೆಂಡರ್ಗಳನ್ನು ಸಲ್ಲಿಸುವುದು, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 28.04.2022 ಸಂಜೆ 5.30 ಗಂಟೆಯವರೆಗೆ ಮತ್ತು ಬಿಡ್ ಪೂರ್ವ ಸಭೆಯನ್ನು ದಿನಾಂಕ: 12.04.2022 ಅಪರಾಹ್ನ 12.30 ಗಂಟೆಗೆ ನಿಗದಿಪಡಿಸಲಾಗಿದೆ
ಸಹಿ/–
ನಿರ್ದೇಶಕರು
ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
DIPR/CP/007/Zenkar/2022-23
ಕೋವಿಡ್‌-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರಾಸಕೈಅನಿನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560 010.
ದೂರವಾಣಿ: 080-23407011-25, ಇ–ಮೇಲ್: kssidcho@vsnl.com
ಸಂಖ್ಯೆ:ಇಎನ್‌ಜಿಜಿ:ಅಅ:ಇಪಿ–66:ಹುಮ್ನಾಬಾದ್:ವಿದ್ಯುತ್:2022–23 ದಿ:01–04–2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಸ್.ಐ.ಡಿ.ಸಿ ರವರ ಪರವಾಗಿ ಅಧೀಕ್ಷಕ ಅಭಿಯಂತರರು ಕೆ.ಟಿ.ಪಿ.ಪಿ ನಿಯಮ 2000 ರ ಪ್ರಕಾರ ಕಾಮಗಾರಿಗಳಿಗೆ ಪಿಡಬ್ಲ್ಯೂಡಿ ಪರವಾನಗಿಯುಳ್ಳ (ವಿದ್ಯುತ್) ಸಾಕಷ್ಟು ಅನುಭವವುಳ್ಳ ಅರ್ಹ ಗುತ್ತಿಗೆದಾರರು ಇವರಿಂದ ಇ–ಪ್ರೊಕ್ರ್ಯರ್‌ಮೆಂಟ್ ಮೂಲಕ Single Cover System ಮುಖಾಂತರ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಕೆಲಸದ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಲಕ್ಷಗಳಲ್ಲಿ)
ಬೀದರ್ ಜಿಲ್ಲೆಯ ಹುಮ್ನಾಬಾದ್ 2ನೇ ಹಂತದಲ್ಲಿ ಐಇ ಯಲ್ಲಿ ಅಭಿವೃದ್ಧಿಪಡಿಸಿದ ಪ್ಲಾಟ್‌ಗಳಿಗೆ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡುವುದರೊಂದಿಗೆ ಕೈಗಾರಿಕಾ ಪ್ರದೇಶದ ಬಾಕಿ ಉಳಿದ ವಿದ್ಯುದ್ದೀಕರಣ ಕಾಮಗಾರಿ. (ಮರು ಟೆಂಡರ್).	22.00	0.44

ಟೆಂಡರ್ ಪ್ರಕ್ರಿಯೆ ಶುಲ್ಕ : ಇ–ಪೋರ್ಟಲ್‌ನಂತೆ. ಪೂರ್ಣಗೊಳಿಸುವ ಕಾಲಾವಧಿ : 6 ತಿಂಗಳು. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ವಿವರವಾದ ಟೆಂಡರ್ ಪ್ರಕಟಣೆಯನ್ನು, ದಾಖಲಾತಿಗಳನ್ನು https://www.eproc.karnataka.gov.in (ವಾಣಿಜ್ಯ ಮತ್ತು ಕೈಗಾರಿಕೆ) ಮೂಲಕ ದಿನಾಂಕ: 05–04–2022 ಬೆಳ್ಳಿಗೆ 11:30ರ ನಂತರ ಪಡೆದುಕೊಳ್ಳಬಹುದು.
ಭರ್ತಿ ಮಾಡಲಾದ ಟೆಂಡರ್‌ನೊಡನೆ ಟೆಂಡರ್‌ಗೆ ಸಂಬಂಧಿಸಿದ ಇ.ಎಂ.ಡಿ ಮೊತ್ತವನ್ನು ಆನ್‌ಲೈನ್ ಗೇಟ್‌ವೇ ಪೋರ್ಟಲ್ ವೆಬ್‌ಸೈಟ್ https://www.eproc.karnataka.gov.in (Commerce and Industries) ಇ–ಪೋರ್ಟಲ್ ಮೂಲಕ ದಿನಾಂಕ: 12–04–2022ರ ಸಂಜೆ 4:00 ಗಂಟೆಯೊಳಗೆ ಸಲ್ಲಿಸಬಹುದಾಗಿದೆ. ಬಿಡ್ಡನ್ನು 16–04–2022 ರಂದು ಬೆಳಿಗ್ಗೆ 11.30 ಗಂಟೆಗೆ ಅಥವಾ ನಂತರದ ಕೆಲಸದ ದಿನದಂದು ತೆರೆಯಲಾಗುವುದು.
ಹೆಚ್ಚಿನ ಮಾಹಿತಿಯನ್ನು ಈ ಕೆಳಸಹಿದಾರ ಅಧಿಕಾರಿಯವರ ಕಛೇರಿಯಲ್ಲಿ ಅಥವಾ ಇ–ಪ್ರೊಕ್ಯುರ್‌ಮೆಂಟ್ ವೆಬ್‌ಸೈಟ್ https://www.eproc.karnataka.gov.in ಅಥವಾ ಇ–ಪ್ರಕ್ಯೂರ್‌ಮೆಂಟ್ ಸೆಲ್ / ಹೆಲ್ಪ್‌ಡೆಸ್ಕ್ (ದೂರವಾಣಿ 080–25501227 / 25501216) ಮುಖಾಂತರ ಪಡೆಯಲು ಕೋರಿದೆ.
ಸಹಿ/–
ಅಧೀಕ್ಷಕ ಅಭಿಯಂತರರು – ಪ್ರ
ವಾಸಾಸಂಇ/ವಾ.ಪ್ರ/ಜಗದಾಳೆ ಅಡ್ವರ್ಟೈಸಿಂಗ್/17/2022–23
ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಂಟಿ ಸಾರ್ವಜನಿಕ ನೋಟೀಸು
ವಿಸೇಜ್ ಹೋಲ್ಡಿಂಗ್ಸ್ ಆ್ಯಂಡ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್, ನುವೀನ್ ಗ್ಲೋಬಲ್ ಇಂಪ್ಯಾಕ್ಟ್ ಫಂಡ್ ಇಂಡಿಯಾ ಎಸ್.ಎ.ಆರ್.ಎಲ್ ಮತ್ತು ಪೆಟ್ಟೆಲಾರ್ ಎಫೆಕ್ಟೆನ್‌ಬಿವಾರ್‌ಬೆಡ್‌ರಿಫ್ ಎನ್.ವಿ., ಈ ಕಂಪನಿಗಳು ಒಟ್ಟಾಗಿ ಇದೇ ದಿನಪತ್ರಿಕೆಯಲ್ಲಿ ೧೮ ಮಾರ್ಚ್, ೨೦೨೨ರಂದು ಪ್ರಕಟಿಸಿದ್ದ ನೋಟೀಸನ್ನೇ ಈಗ ಸ್ಥಳೀಯ ಕನ್ನಡ ಭಾಷೆಯಲ್ಲಿ ಈ ಕೆಳಗಿನಂತೆ ಮರು–ಪ್ರಕಟಿಸಲಾಗಿದೆ.
ಈ ನೋಟೀಸನ್ನು (೧) ವಿಸೇಜ್ ಹೋಲ್ಡಿಂಗ್ಸ್ ಆ್ಯಂಡ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್ ("ಕಂಪನಿ"), (೨) ನುವೀನ್ ಗ್ಲೋಬಲ್ ಇಂಪ್ಯಾಕ್ಟ್ ಫಂಡ್ ಇಂಡಿಯಾ ಎಸ್.ಎ.ಆರ್.ಎಲ್ ಮತ್ತು (೩) ಪೆಟ್ಟೆಲಾರ್ ಎಫೆಕ್ಟೆನ್‌ಬಿವಾರ್‌ಬೆಡ್‌ರಿಫ್ ಎನ್.ವಿ. (ಇನ್ನು ಮುಂದೆ ಒಟ್ಟಾಗಿ ಇವರನ್ನು "ಹೊಸ ಹೂಡಿಕೆದಾರರು" ಎಂದು ಗುರುತಿಸಿದೆ) ಇವರುಗಳು ಈ ಮುಂದಿನ ಅಗತ್ಯಗಳಿಗೆ ಅನುವಾಗಿ ಜಂಟಿಯಾಗಿ ನೀಡುತ್ತಿದ್ದಾರೆ: (ಎ) 'ಬ್ಯಾಂಕಿಂಗೇತರ ಆರ್ಥಿಕ ಕಂಪನಿಗಳ (ಎನ್‌ಬಿಎಫ್‌ಸಿ) ವಶಪಡಿಸುವಿಕೆಯ/ ನಿಯಂತ್ರಣದ ವರ್ಗಾವಣೆಯ ಪ್ರಸಂಗಗಳಲ್ಲಿ (ಕಾಲಕ್ರಮೇಣ ಶೇರುಗಳ ಹಿಡಿತವನ್ನು ವರ್ಧಿಸಿಕೊಳ್ಳುವ ಮೂಲಕ ಎನ್‌ಬಿಎಫ್‌ಸಿ.ಯ ಪಾವತಿಸಿದ ಈಕ್ವಿಟಿ ಕ್ಯಾಪಿಟಲ್‌ನಲ್ಲಿ ಶೇ. ೨೬ ಯಾ ಅದಕ್ಕೂ ಹೆಚ್ಚಿನ ಭಾಗದ ವಶದಲ್ಲಿ/ವರ್ಗಾವಣೆಯಲ್ಲಿ ಪರಿಣಮಿಸುವ ಪ್ರಸಂಗಗಳೂ ಸೇರಿದಂತೆ) ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ("ಆರ್‌ಬಿಐ") ಪೂರ್ವ ಅನುಮತಿಯನ್ನು ಪಡೆದುಕೊಳ್ಳುವ ಅಗತ್ಯ'ಕ್ಕೆ ಸಂಬಂಧಿಸಿದಂತೆ ದಿನಾಂಕ ೦೯ನೇ ಜುಲೈ, ೨೦೧೫ರಂದು ಆರ್‌ಬಿಐ ಹೊರಡಿಸಿರುವ ಸುತ್ತೋಲೆ; ಮತ್ತು (ಬಿ) ನಾನ್ ಬ್ಯಾಂಕಿಂಗ್ ಫೈನಾನ್ಷಿಯಲ್ ಕಂಪನಿ– ಸಿಸ್ಟಮಿಕಲಿ ಇಂಪಾರ್ಟೆಂಟ್ ನಾನ್–ಡಿಪಾಸಿಟ್ ಟೇಕಿಂಗ್ ಕಂಪನಿ (ರಿಸರ್ವ್ ಬ್ಯಾಂಕ್) ನಿರ್ದೇಶನಗಳು, ೨೦೧೬ ("ಎನ್‌ಬಿಎಫ್‌ಸಿ ನಿರ್ದೇಶನಗಳು") ಇದರ ನಿಬಂಧನೆಗಳು.
ಕಂಪನಿಯ ಶೇರು ಹಿಡುವಳಿಯಲ್ಲಿ ಪ್ರಸ್ತಾವಿತ ಬದಲಾವಣೆ ಶೇ. ೨೬ಕ್ಕಿಂತ ಹೆಚ್ಚಾಗುವುದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ೧೭ನೇ ಮಾರ್ಚ್, ೨೦೨೨ ರಂದು ತನ್ನ ಅನುಮೋದನೆಯನ್ನು ನೀಡಿದೆ ಮತ್ತು ಆ ಕಾರಣಕ್ಕಾಗಿಯೇ ಕಂಪನಿ ಮತ್ತು ಹೊಸ ಹೂಡಿಕೆದಾರರು ಇಬ್ಬರೂ ಸೇರಿ ಮೇಲೆ ಹೇಳಿರುವ ಸುತ್ತೋಲೆಯ ಪ್ರಕಾರ ಈ ನೋಟೀಸನ್ನು ನೀಡುತ್ತಿದ್ದಾರೆ.
ಹಿನ್ನೆಲೆ
ವಿಸೇಜ್ ಹೋಲ್ಡಿಂಗ್ಸ್ ಆ್ಯಂಡ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್ ("ಕಂಪನಿ") ಕಂಪನಿಯು ಬ್ಯಾಂಕಿಂಗೇತರ ಹಣಕಾಸಿನ ಕಂಪನಿಯಾಗಿದ್ದು ಭಾರತೀಯ ರಿಸರ್ವ್ ಬ್ಯಾಂಕಿನೊಂದಿಗೆ (ಆರ್.ಬಿ.ಐ) ಸಾಲದ ಕಂಪನಿ ಎಂದು ನೋಂದಾವಣೆ ಮಾಡಿಕೊಂಡಿದೆ (ಆರ್.ಬಿ.ಐ. ನೋಂದಾವಣೆ ಸಂಖ್ಯೆ ಬಿ–೦೨.೦೦೨೫೫). ಈ ಕಂಪನಿಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರದ ವಾಣಿಜ್ಯೋದ್ಯಮಗಳಿಗೆ ಹಣಕಾಸು ಒದಗಿಸುವ ವ್ಯವಹಾರದಲ್ಲಿ ತೊಡಗಿದ್ದು ಎನ್.ಬಿ.ಎಫ್.ಸಿ. ಯ 'ಸಿಸ್ಟಮಿಕಲಿ ಇಂಪಾರ್ಟೆಂಟ್ ನಾನ್–ಡಿಪಾಸಿಟ್ ಟೇಕಿಂಗ್ ನಾನ್–ಬ್ಯಾಂಕಿಂಗ್ ಫೈನಾನ್ಷಿಯಲ್ ಕಂಪನೀಸ್' ಪರಿಧಿಯೊಳಗೆ ಬರುತ್ತದೆ.
ಹೊಸ ಹೂಡಿಕೆದಾರರ ವಿವರಗಳು
(೧) ನುವೀನ್ ಗ್ಲೋಬಲ್ ಇಂಪ್ಯಾಕ್ಟ್ ಫಂಡ್ ಇಂಡಿಯಾ ಎಸ್.ಎ.ಆರ್.ಎಲ್., ಲುಕ್ಸೆಂಬರ್ಗ್‌ನ ಕಾನೂನುಗಳ ಅಡಿಯಲ್ಲಿ ಅಸ್ತಿತ್ವಕ್ಕೆ ಬಂದಿದ್ದು ತನ್ನ ಪ್ರಧಾನ ವ್ಯವಹಾರ ಸ್ಥಳವನ್ನು ಈ ವಿಳಾಸದಲ್ಲಿ ಹೊಂದಿದೆ: ೧೦, ರೂ ಡಿ ಶಟೌವ್ ಡಿ, ಎಲ್–೩೩೬೪, ಲ್ಯೂಡಲೇಂಗ್, ಲುಕ್ಸೆಂಬರ್ಗ್, ಇನ್ನು ಮುಂದೆ ಇದನ್ನು "ನುವೀನ್" (ಸನ್ನದು/ನೋಂದಾವಣೆ ಸಂ. ಬಿ ೨೪೭೫೨೫) ಎಂದು ಉಲ್ಲೇಖಿಸಲಾಗುವುದು.
(೨) ಪೆಟ್ಟೆಲಾರ್ ಎಫೆಕ್ಟೆನ್‌ಬಿವಾರ್‌ಬೆಡ್‌ರಿಫ್ ಎನ್.ವಿ.: ಇದು ಎಎಸ್‌ಎನ್ ಮೈಕ್ರೋಕ್ರೆಡಿಟ್‌ಪೂಲ್‌ನ ಸ್ವತ್ತುಗಳ ಕಾನೂನಾತ್ಮಕ ಒಡೆಯನಾಗಿ ಕೆಲಸ ಮಾಡುತ್ತಿದೆ, ನೆದರ್‌ಲ್ಯಾಂಡ್ಸ್‌ನ ಕಾನೂನುಗಳ ಅಡಿಯಲ್ಲಿ ಅಸ್ತಿತ್ವಕ್ಕೆ ಬಂದಿದ್ದು ತನ್ನ ಪ್ರಧಾನ ವ್ಯವಹಾರ ಸ್ಥಳವನ್ನು ಈ ವಿಳಾಸದಲ್ಲಿ ಹೊಂದಿದೆ: ಬೆಜುಯ್ಡನ್‌ಹಾಟ್ಸೆವೆಗ್ ೧೫೩, ೨೫೯೪ ಎಜಿ, ದಿ ಹೇಗ್, ದಿ ನೆದರ್‌ಲ್ಯಾಂಡ್ಸ್, ಇನ್ನು ಮುಂದೆ ಇದನ್ನು "ಎಎಸ್‌ಪಿ" (ಸನ್ನದು/ನೋಂದಾವಣೆ ಸಂ. ೧೬೦೬೫೭೮೧೦) ಎಂದು ಉಲ್ಲೇಖಿಸಲಾಗುವುದು.
ಪ್ರಸ್ತಾವಿತ ವ್ಯವಹಾರ ಮತ್ತು ಪ್ರಸ್ತಾವಿತ ವ್ಯವಹಾರಕ್ಕೆ ಕಾರಣ:
ಹೊಸ ಹೂಡಿಕೆದಾರರು ಒಟ್ಟಾಗಿ ಸದರಿ ಕಂಪನಿಯ ಪಾವತಿಸಿದ ಇಕ್ವಿಟಿ ಬಂಡವಾಳದ ಶೇ.೨೬ ಕ್ಕಿಂತ ಹೆಚ್ಚು ಶೇರುಗಳ ಒಡೆತನವನ್ನು ಪೂರ್ಣವಾಗಿ ಡೈಲ್ಯೂಟ್ ಮಾಡುವ ಆಧಾರದ ಮೇಲೆ, ಕಂಪನಿಯು ನೀಡುತ್ತಿರುವ ಇಕ್ವಿಟಿ ಶೇರುಗಳಿಗೆ ಚಂದಾದಾರರಾಗುವ ಮೂಲಕ, ಹೊಂದಲು ಉದ್ದೇಶಿಸಿದ್ದಾರೆ ("ಪ್ರಸ್ತಾವಿತ ವ್ಯವಹಾರ").
ಪ್ರಸ್ತಾವಿತ ವ್ಯವಹಾರದ ಬಗ್ಗೆ ಆಲೋಚನೆ ಬರುವುದಕ್ಕೆ ಕಾರಣ, ಕಂಪನಿಗೆ ತನ್ನ ವ್ಯವಹಾರಗಳನ್ನು ವಿಸ್ತರಿಸಲು ಹೆಚ್ಚುವರಿ ನಿಧಿಗಳ ಅವಶ್ಯಕತೆಯಿದೆ.
ಶೇರು ಹಿಡುವಳಿಯಲ್ಲಿನ ಪ್ರಸ್ತಾವಿತ ಬದಲಾವಣೆಗಳು ಮತ್ತು ಪ್ರಸ್ತಾವಿತ ವ್ಯವಹಾರದಿಂದಾಗಿ ಕಂಪನಿಯ ನಿರ್ದೇಶಕರ ಮಂಡಳಿಯಲ್ಲಿ ಆಗುವ ಬದಲಾವಣೆಗಳ ಬಗ್ಗೆ ಸಾರ್ವಜನಿಕರಿಗೆ ಸೂಚನೆಯನ್ನು ನೀಡುವುದೇ ಈ ನೋಟೀಸಿನ ಉದ್ದೇಶ.
ಸಹಿ/–
ವಿಸೇಜ್ ಹೋಲ್ಡಿಂಗ್ಸ್ ಆ್ಯಂಡ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್
ಸಹಿ/–
ನುವೀನ್ ಗ್ಲೋಬಲ್ ಇಂಪ್ಯಾಕ್ಟ್ ಫಂಡ್ ಇಂಡಿಯಾ ಎಸ್.ಎ.ಆರ್.ಎಲ್.
ಸಹಿ/–
ಪೆಟ್ಟೆಲಾರ್ ಎಫೆಕ್ಟೆನ್‌ಬಿವಾರ್‌ಬೆಡ್‌ರಿಫ್ ಎನ್.ವಿ.: ಇದು ಎಎಸ್‌ಎನ್ ಮೈಕ್ರೋಕ್ರೆಡಿಟ್‌ಪೂಲ್‌ನ ಸ್ವತ್ತುಗಳ ಕಾನೂನಾತ್ಮಕ ಒಡೆಯನಾಗಿ ಕೆಲಸ ಮಾಡುತ್ತಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
("ವಿ ಟಿ ಯು ಅಧಿನಿಯಮ 1994" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)
"ಜ್ಞಾನ ಸಂಗಮ" ಬೆಳಗಾವಿ–590 018, ಕರ್ನಾಟಕ, ರಾಜ್ಯ
ಪ್ರೊ. ಎ.ಎಸ್. ದೇಶಪಾಂಡೆ ಬಿ.ಇ., ಎಮ್.ಟೆಕ್.,ಪಿಎಚ್.ಡಿ., ಕುಲಸಚಿವರು
ದೂರವಾಣಿ ಸಂ. (0831) 2498100 ಫ್ಯಾಕ್ಸ ಸಂ. (0831) 2405467
ಕ್ರಮ ಸಂಖ್ಯೆ:ವಿ.ತಾ.ವಿ./ಬೆ/ಸ್ಥಾ.ಅ./ಸ.ಅ./ಎಚ್‌ಕೆ–ಎಸ್/2021–22/ಐ.ಎಫ್.ಟಿ. ನಂ.33/6599 ದಿನಾಂಕ:31 MAR 2022
ಅಲ್ಪಾವಧಿ ಟೆಂಡರ ಪ್ರಕಟಣೆ (ದ್ವಿ ಲಕೋಟಿ ಪದ್ಧತಿಯಲ್ಲಿ) (ಇ–ಪ್ರೊಕ್ಯೂರಮೆಂಟ್ ಮೂಲಕ) 2ನೇ ಕರೆ
ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರು ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999 ನಿಯಮ–2000 ರನ್ವಯ ಸ್ವಚ್ಛತಾ ಕೆಲಸಗಳನ್ನು ನಿರ್ವಹಿಸುವ ಸಿಬ್ಬಂದಿ ಹಾಗೂ ಮಾನವ ಸಂಪನ್ಮೂಲ ಸಿಬ್ಬಂದಿಗಳನ್ನು ಹೊರ ಸಂಪನ್ಮೂಲ ಏಜನ್ಸಿಯಿಂದ ಮತ್ತು ಭದ್ರತಾ ಸಿಬ್ಬಂದಿಗಳನ್ನು ಹೊರ ಸಂಪನ್ಮೂಲ ಏಜನ್ಸಿಯಿಂದ ಒದಗಿಸುವ ಕೆಲಸವನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯ ಮೂಲಕ ಅಲ್ಪಾವಧಿ ಟೆಂಡರನ್ನು ಆಮಂತ್ರಿಸಲಾಗಿದೆ. 1)ವಿತಾವಿ, "ಜ್ಞಾನ ಸಂಗಮ", ಆವರಣ, ಬೆಳಗಾವಿ ಹಾಗೂ ವಿತಾವಿ ಪ್ರಾದೇಶಿಕ ಕಛೇರಿಗಳಾದ ಬೆಂಗಳೂರು, ಮೈಸೂರು, ಕಲಬುರಗಿ, ವಿಸ್ತರಣಾ ಕೇಂದ್ರ, ಮಂಗಳೂರು, ಮತ್ತು ಸ್ನಾತಕೋತ್ತರ ಕೇಂದ್ರ, ವಿಐಎಟಿ., ಮುದ್ದೇನಹಳ್ಳಿ ಮತ್ತು ವಿತಾವಿ ಎನ್‌ಎಎಸ್‌ಡಿ., ದಾಂಡೇಲಿಗೆ ಮಾನವ ಸಂಪನ್ಮೂಲ ಸಿಬ್ಬಂದಿಗಳನ್ನು ಹೊರ ಸಂಪನ್ಮೂಲ ಏಜನ್ಸಿಯಿಂದ ಒದಗಿಸುವ ಕೆಲಸದ ಮೊತ್ತ ರೂ.3,66,04,023/–, 2)ವಿತಾವಿ, "ಜ್ಞಾನ ಸಂಗಮ", ಆವರಣ, ಬೆಳಗಾವಿ ಹಾಗೂ ವಿತಾವಿ ಪ್ರಾದೇಶಿಕ ಕೇಂದ್ರಗಳಾದ ಬೆಂಗಳೂರು, ಮೈಸೂರು, ಕಲಬುರಗಿ, ವಿಸ್ತರಣಾ ಕೇಂದ್ರ, ಮಂಗಳೂರು, ಎನ್‌ಎಎಸ್‌ಡಿ., ದಾಂಡೇಲಿ ಮತ್ತು ಸ್ನಾತಕೋತ್ತರ ಕೇಂದ್ರ, ವಿಐಎಟಿ., ಮುದ್ದೇನಹಳ್ಳಿ ಆವರಣದಲ್ಲಿ ಸ್ವಚ್ಛತಾ ಕೆಲಸಗಳನ್ನು ನಿರ್ವಹಿಸಲು ಹೊರ ಸಂಪನ್ಮೂಲ ಏಜನ್ಸಿಯಿಂದ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಕೆಲಸದ ಮೊತ್ತ ರೂ.3,92,10,109/–, 3)ವಿತಾವಿ, "ಜ್ಞಾನ ಸಂಗಮ", ಆವರಣ, ಬೆಳಗಾವಿ ಹಾಗೂ ವಿತಾವಿ ಪ್ರಾದೇಶಿಕ ಕೇಂದ್ರಗಳಾದ ಬೆಂಗಳೂರು, ಮೈಸೂರು, ಕಲಬುರಗಿ, ಯುಬಿಡಿಟಿ., ತಾಂತ್ರಿಕ ಮಹಾವಿದ್ಯಾಲಯ, ದಾವಣಗೆರೆ, ವಿಸ್ತರಣಾ ಕೇಂದ್ರ, ಮಂಗಳೂರು, ಸ್ನಾತಕೋತ್ತರ ಕೇಂದ್ರ, ವಿಐಎಟಿ., ಮುದ್ದೇನಹಳ್ಳಿ ಮತ್ತು ಎನ್‌ಎಎಸ್‌ಡಿ., ದಾಂಡೇಲಿ ಆವರಣದಲ್ಲಿ ಭದ್ರತಾ ಸೇವೆಯನ್ನು ನಿರ್ವಹಿಸಲು ಹೊರ ಸಂಪನ್ಮೂಲ ಏಜನ್ಸಿಯಿಂದ ಸೇವೆಯನ್ನು ಒದಗಿಸುವ ಕೆಲಸದ ಮೊತ್ತ ರೂ.3,69,00,409/– ಮತ್ತು 4)ಯುಬಿಡಿಟಿ., ತಾಂತ್ರಿಕ ಮಹಾವಿದ್ಯಾಲಯ, ದಾವಣಗೆರೆ ಆವರಣದಲ್ಲಿ ಸ್ವಚ್ಛತಾ ಕೆಲಸಗಳನ್ನು ನಿರ್ವಹಿಸುವ ಸಿಬ್ಬಂದಿ ಹಾಗೂ ಮಾನವ ಸಂಪನ್ಮೂಲ ಸಿಬ್ಬಂದಿಗಳನ್ನು ಹೊರ ಸಂಪನ್ಮೂಲ ಏಜನ್ಸಿಯಿಂದ ಒದಗಿಸುವ ಕೆಲಸದ ಮೊತ್ತ ರೂ.1,93,00,411/–. ಇತರೆ ಮಾಹಿತಿಗಳನ್ನು http://eproc.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ: 01–04–2022 ರಿಂದ ಪಡೆದುಕೊಳ್ಳಬಹುದು.
ಸಹಿ/–ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,ಬೆಳಗಾವಿ
DIPR/BGM/RO-NO-09/MCA/2022-23

ಶುಭಕೃತು ಸಂವತ್ಸರ
ಶುಭವೇ ಹೆಚ್ಚಾಗಲಿರುವ ವರ್ಷ

ಪ್ಲವ ಸಂವತ್ಸರ ಕಳೆದು, 'ಶುಭಕೃತು' ನಾಮ ಸಂವತ್ಸರ ಆರಂಭವಾಗುತ್ತಿದೆ. ಹೆಸರೇ ಸೂಚಿಸುವಂತೆ ಈ ಸಂವತ್ಸರ ಅಧಿಕಾಂಶ ಶುಭವನ್ನೇ ಹೊತ್ತು ತರಲಿದೆ. ಪ್ರತಿ ವರ್ಷವೂ ಚೈತ್ರಶುಕ್ಲ ಪಾಡ್ಯಮಿಯಂದು ಯುಗಾದಿ ಹಬ್ಬವನ್ನು ಸಡಗರ–ಸಂಭ್ರಮದಿಂದ ಆಚರಿಸುವ ದಿನ. ಈ ಬಾರಿ ಏಪ್ರಿಲ್ 2 ಶನಿವಾರ ಚಾಂದ್ರಮಾನ ಯುಗಾದಿ. ನಿಸರ್ಗದಲ್ಲಿ ಹೇಗೆ ಕಾಲಗಳು, ಋತುಗಳು ಬದಲಾಗಿ ಪರಿವರ್ತನೆ ಹೊಂದುವುದೋ ಹಾಗೆ ಅದಕ್ಕೆ ಹೊಂದಿಕೊಂಡು ಬರುವ ಸುಖ–ದುಃಖಗಳನ್ನೂ ನಗುಮೊಗದಿಂದ ಸ್ವೀಕರಿಸಿ ಹೊಸ ಜೀವನ ಪ್ರಾರಂಭಿಸಿ ಎನ್ನುವುದೇ ಈ ಹಬ್ಬದ ಸಂದೇಶ.

ಮಳೆ ನಕ್ಷತ್ರಗಳು

ಅಶ್ವಿನಿ, ಭರಣಿ, ಕೃತ್ತಿಕಾ, ರೋಹಿಣಿ, ಮೃಗಶಿರಾ, ಆರಿದ್ರಾ, ಪುನರ್ವಸು, ಆಶ್ಲೇಷಾ, ಪುಷ್ಯಾ, ಹಸ್ತಾ, ಚಿತ್ತಾ, ಸ್ವಾತಿ, ವಿಶಾಖಾ ನಕ್ಷತ್ರಗಳು ಮಳೆ ನಕ್ಷತ್ರಗಳು.

ಭೂಮಿಯಲ್ಲಿ ಬೀಜ ಬಿತ್ತಲು: ಪಂಚಮೀ, ಸಪ್ತಮೀ, ತ್ರಯೋದಶೀ ಈ ತಿಥಿಗಳೂ, ಸೋಮ, ಬುಧ, ಗುರು, ಶುಕ್ರವಾರಗಳೂ, ರೋಹಿಣಿ, ಪುಷ್ಯಾ, ಆಶ್ಲೇಷಾ, ಮಖಾ, ಉತ್ತರಾ, ಹಸ್ತಾ, ಸ್ವಾತಿ, ಅನೂರಾಧಾ, ಮೂಲಾ, ಉತ್ತರಾಷಾಢಾ, ಶ್ರವಣ, ಶತಭಿಷಾ, ಉತ್ತರಾಭಾದ್ರಾ, ರೇವತಿ - ಈ ನಕ್ಷತ್ರಗಳು ಪ್ರಶಸ್ತ. ಅಶ್ವಿನಿ, ಮೃಗಶಿರ, ಜ್ಯೇಷ್ಠಾ ನಕ್ಷತ್ರಗಳು ಮಧ್ಯಮ. ಭಾನುವಾರ ಸಿಂಹಲಗ್ನದಲ್ಲಿ ಸಕಲ ಬೀಜಗಳನ್ನೂ ಬಿತ್ತಬಹುದು. ಸೋಮವಾರ ಮಿಥುನ ಲಗ್ನದಲ್ಲಿ ನಾಟಿ ಮಾಡಬಹುದು. ಮಂಗಳವಾರ ಮೇಷ, ವೃಶ್ಚಿಕಗಳಲ್ಲಿ ಸಿರಿಧಾನ್ಯಗಳನ್ನು ಬಿತ್ತಬೇಕು. ಬುಧವಾರ ಮಿಥುನ ಲಗ್ನದಲ್ಲಿ ಅಡಿಕೆ ಸಸಿಯನ್ನೂ, ಗುರುವಾರ ಧನುರ್ಮೀನ ಲಗ್ನಗಳಲ್ಲಿ ಹೂವಿನ ಗಿಡಗಳನ್ನೂ, ಶನಿವಾರ ಮಕರ, ಕುಂಭ ಲಗ್ನಗಳಲ್ಲಿ ಎಳ್ಳು, ರಾಗಿ ಮುಂತಾದ ಕರಿಯ ಧಾನ್ಯಗಳನ್ನೂ ಬಿತ್ತಬೇಕು.

ಯುಗಾದಿ ಜೀವನದ ವಿವೇಕ

• ಎಸ್. ಸೂರ್ಯಪ್ರಕಾಶ ಪಂಡಿತ್

ಮತ್ತೊಮ್ಮೆ ಯುಗಾದಿ ಬಂದಿದೆ; ನೂತನ ಸಂವತ್ಸರ ಆರಂಭವಾಗಿದೆ. ಈ ಹೊಸ ವರ್ಷ ತನ್ನ ಹೆಸರಿನಲ್ಲೇ ಒಳಿತನ್ನಂತೂ ತುಂಬಿಕೊಂಡುಬರುತ್ತಿದೆ. 'ಈ ವರ್ಷ ಸಂತೋಷವನ್ನು ತರಲಿ; ಧೈರ್ಯವಾಗಿ ರಸ್ತೆಗಳಲ್ಲಿ ಓಡಾಡುವಂತಾಗಲಿ; ಮಕ್ಕಳು ಹೊರಗೆ ಆಟ ಆಡುವಂತಾಗಲಿ; ಒಬ್ಬರ ಮನೆಗೆ ಇನ್ನೊಬ್ಬರು ಎಂದಿನಂತೆ ವಿಶ್ವಾಸದಿಂದ ಹೋಗಿ–ಬರುವಂತಾಗಲಿ; ಪರಸ್ಪರ ಸ್ನೇಹ–ಬಾಂಧವ್ಯಗಳ ಎಳೆ ಗಟ್ಟಿಯಾಗಲಿ' – ಇವು, ಇಂಥವು ನಮ್ಮೆಲ್ಲರ ಆಶಯವೂ ಆಗಿದೆ. ಸುಮಾರು ಎರಡು ವರ್ಷಗಳಿಂದ ಒಂದು ವಿಧದ 'ವಿಚಿತ್ರವೂ ವಿಭಿನ್ನವೂ' ಎನಿಸಿದ ಆಘಾತಕ್ಕೆ ತುತ್ತಾಗಿರುವ ನಮ್ಮೆಲ್ಲರಿಗೂ ಈಗ ಸಾಂತ್ವನ, ನೆಮ್ಮದಿ, ಭರವಸೆ, ಸಂತೋಷ ಬೇಕಿದೆ; ಶುಭ ಎಂದರೆ ಇಂಥವೇ ಅಲ್ಲವೆ?

ಯುಗಾದಿ ಎಂದ ಕೂಡಲೇ ಬೇವು–ಬೆಲ್ಲ ಎನ್ನುತ್ತೇವೆ. 'ಬೇವು–ಬೆಲ್ಲ' ಎಂದರೆ ಸುಖ–ದುಃಖಗಳು ಎಂದು ವರ್ಗೀಕರಿಸುತ್ತೇವೆ. ಈ ಎರಡನ್ನೂ ಸಮಾನವಾಗಿ ಸ್ವೀಕರಿಸಬೇಕು ಎಂಬ ಆಶಯವೇ ಯುಗಾದಿಯ ಸಂದೇಶ ಎಂಬ ತತ್ತ್ವವನ್ನೂ ಹೊರಡಿಸುತ್ತೇವೆ. ಯುಗಾದಿಯ ಪರ್ವದಲ್ಲಿ ಸಮತೋಲನದ ಈ ಪಾಠ ಸೇರಿದೆಯೆ?

ಯುಗಾದಿಗೂ ಪ್ರಕೃತಿಗೂ ನೇರ ನಂಟಿದೆ. ಕಾಲದ ಅಳತೆಯೊಂದಿಗೆ ನಂಟನ್ನು ಹೊಂದಿರುವ ಹಬ್ಬ ಯುಗಾದಿ. ಯುಗದ ಆರಂಭವೇ 'ಯುಗಾದಿ'. 'ಯುಗ' ಎಂದರೆ ವಿಸ್ತಾರವಾದ ಕಾಲದ ಎಣಿಕೆ ಎಂದು ಒಂದು ಅರ್ಥ; ನಾಲ್ಕು ಯುಗಗಳ ಚಕ್ರ, ಸೃಷ್ಟಿ–ಪ್ರಳಯ – ಇವು ಅದರೊಂದಿಗೆ ಸೇರಿಕೊಳ್ಳುತ್ತವೆ. 'ಯುಗ' ಎಂದರೆ ಜೋಡಿ ಎಂಬ ಅರ್ಥವೂ ಇದೆ; ಸುಖ–ದುಃಖ, ಒಳಿತು–ಕೆಡಕು ಎಂಬ ಭಾವಗಳೂ ಕತ್ತಲೆ–ಬೆಳಕು, ಹುಟ್ಟು–ಸಾವು ಎಂಬ ಜೋಡಿಗಳೂ ಸೃಷ್ಟಿನಿಯಮದ ಅನಿವಾರ್ಯ ತಥ್ಯಗಳು ಎಂಬುದನ್ನು ಈ 'ಯುಗ'ದ ಕಲ್ಪನೆಯಲ್ಲಿ ಕಾಣಬಹುದು. ನೇಗಿಲಿನ ಮತ್ತು ಬಂಡಿಯ ನೊಗಕ್ಕೂ 'ಯುಗ' ಎಂದು ಹೆಸರು; ಇದು ಜೀವನಪಯಣವನ್ನೂ ಸಂಕೇತಿಸುತ್ತದೆ; ಜೀವನಾಧಾರವಾದ ಕೃಷಿಯನ್ನೂ ಸಂಕೇತಿಸುತ್ತದೆ. ಯುಗಗಳ ಕಲ್ಪನೆ, ಸೃಷ್ಟಿಚಕ್ರ, ಪ್ರಕೃತಿಯ ವಿನ್ಯಾಸ, ಕೃಷಿ – ಇವಾವುದೂ ಏಕಮುಖ ಸಂಚಾರವಲ್ಲ; ಇವೆಲ್ಲವೂ ಸುಖ–ದುಃಖ, ಹುಟ್ಟು–ಸಾವು, ರಾತ್ರಿ–ಹಗಲು – ಇಂಥ ಜೋಡಿಯ ಸಾಮರಸ್ಯದ ಕುಣಿತಗಳೇ ಹೌದು ಎಂಬುದು ಎದ್ದುಕಾಣುವ ವಿವರ. ಜೀವನಚಕ್ರದ ಓಟ ನಿರಂತರವಾಗಿರಬೇಕು; ಕತ್ತಲೆ–ಬೆಳಕುಗಳು ಈ ಓಟಕ್ಕೆ ಅಡ್ಡಿಗಳನ್ನಾಗಿಸಿಕೊಳ್ಳಬಾರದು ಎಂಬ ಪ್ರಕೃತಿಯ ಪಾಠವೇ ಯುಗಾದಿಯ ಸಂದೇಶವೂ ಆಗಿದೆ.

ಬದಲಾವಣೆ ಜಗದ ನಿಯಮ. ಬದಲಾವಣೆ ಎಂದರೆ ಈಗಿರುವ ಸ್ಥಿತಿಗೆ ಒದಗುವ ಮಾರ್ಪಾಡು; ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಸಾಗುವ ಸಹಜಯಾನ. ಪ್ರಕೃತಿಯಲ್ಲಿ ಉಂಟಾಗುವ ಇಂಥ ಸುಂದರವಾದ ಬದಲಾವಣೆಯ ಸಮಯವನ್ನೇ ನಮ್ಮ ಪೂರ್ವಜರು ಸೃಷ್ಟಿಯ ಮೊದಲ ಕ್ಷಣ, ನಮ್ಮ ಜೀವನದ ಪ್ರಥಮ ಮುಹೂರ್ತ, ಕಾಲಚಕ್ರದ ಆರಂಭ ಗತಿ ಎಂದರು. ಇದೇ 'ಯುಗಾದಿ'.

ಬದಲಾವಣೆ ಎಂದರೆ ಹೊಸತು; ಹೊಸತು ಎಂದರೆ ಉಲ್ಲಾಸ; ಉಲ್ಲಾಸ ಎಂದರೆ ಬದುಕು. ಬದುಕು ಎಂದರೆ ಬದಲಾವಣೆ. ಇದು ಯುಗಾದಿಯ ಸಂದೇಶವೂ ಹೌದು, ಸಂತೋಷವೂ ಹೌದು.

ಬೀಜ ಮೊಳಕೆಯಾಗಿ ಒಡೆಯುತ್ತದೆ; ಗಿಡವಾಗುತ್ತದೆ; ಮರವಾಗಿ ಬೆಳೆಯುತ್ತದೆ; ಮರದಲ್ಲಿ ಹೂವು ಅರಳುತ್ತದೆ; ಅರಳಿದ ಹೂವು ಕಾಯಾಗಿ ಕಸುವನ್ನು ಪಡೆಯುತ್ತದೆ; ಹಣ್ಣಾಗುತ್ತದೆ. ಹಣ್ಣು ಮರದ ಕೊನೆಯ ಸ್ಥಿತಿಯಲ್ಲ – ಅದರ ಪುನರ್ಜನ್ಮದ ಮೊದಲ ಹಂತ. ಹಣ್ಣಿನಲ್ಲಿರುವ ಬೀಜ ಮುಂದಿನ ಮರದ ಸೂಕ್ಷ್ಮರೂಪ. ಬೀಜವೊಂದು ಮರವಾಗಿ ಬೆಳೆಯುವ ಹಂತಗಳು ಒಂದು ಇನ್ನೊಂದಕ್ಕೆ ಪೂರಕ; ಯಾವುದೇ ಹಂತವೂ ತನ್ನಷ್ಟಕ್ಕೆ ತಾನೇ ಶ್ರೇಷ್ಠವೂ ಅಲ್ಲ, ಕನಿಷ್ಠವೂ ಅಲ್ಲ. ಎಲ್ಲ ಹಂತಗಳೂ ಸುಂದರವಾದಂಥವು; ಅನಿವಾರ್ಯವಾದಂಥವು; ಪರಿಪೂರ್ಣವಾದಂಥವು. ಪ್ರಕೃತಿಯ ಈ ಬದಲಾವಣೆಯ ಸೊಗಸಿನ ಸಂದರ್ಭಗಳೇ ಋತುಗಳು. ವಸಂತಋತು ಎಂದರೆ ಪ್ರಕೃತಿಯು ಹಸಿರಿನಿಂದ ಸಜ್ಜಾಗುವ ಸುಂದರಸಮಯ. ಈ ಋತುವಿನ ಚೈತ್ರಮಾಸದ ಮೊದಲ ದಿನವೇ ಯುಗಾದಿ. ಚಿಗುರೊಂದು ಮುಂದೆ ಹಣ್ಣಾಗಿ ಪೂರ್ಣತೆಯನ್ನು ಪಡೆಯಲು ಸಾಧ್ಯವಾಗಿಸುವಂಥ ಆರಂಭದ ಕ್ಷಣವಿದು. ಉದುರುವಿಕೆ; ಅರಳುವಿಕೆ; ಅಗಲುವಿಕೆ; ಚಿಗುರುವಿಕೆ – ಇವು ಸಮಗ್ರವೂ ಪರಿಪೂರ್ಣವೂ ಆದ ಕಾರ್ಯಚಕ್ರದ ಬೇರೆ ಬೇರೆ ಗತಿಗಳಷ್ಟೆ. ಇಂಥ ಸಂದೇಶವನ್ನು ನಮಗೆ ಪ್ರಕೃತಿ ನೀಡುತ್ತಿದೆ.

ಸುಖ–ದುಃಖಗಳನ್ನು ಹೀಗೆ ನಾವು ಸ್ವೀಕರಿಸಿದ್ದೇವೆ ಎಂಬುದರ ಸಾಂಕೇತಿಕತೆಯನ್ನು ಬೇವು–ಬೆಲ್ಲಗಳ ಮಿಶ್ರಣವನ್ನು ತಿನ್ನುವುದರಲ್ಲಿ ಕಾಣಬಹುದಾಗಿದೆ. ಯುಗದ ಆದಿಯಲ್ಲಿಯೇ ಬದುಕನ್ನು ಧೈರ್ಯವಾಗಿಯೂ ಸಂತಸವಾಗಿಯೂ ಸ್ವೀಕರಿಸುವಂಥ ವಿವೇಕವೇ ಯುಗಾದಿಹಬ್ಬದ ಮೂಲತತ್ತ್ವ. ಇದೇ ನಮಗಿಂದು ಬೇಕಾಗಿರುವ ಅಂತರಂಗದ ಸತ್ತ್ವ.

ಹೊಸ ವರ್ಷದ ಫಲಾಫಲಗಳು

• ಭಾರತಿ ರವೀಂದ್ರ

ಸಂವತ್ಸರ ಪುರುಷನ ಮಂತ್ರಿಮಂಡಲ: ಈ ವರ್ಷ ಯುಗಾದಿಯು ಶನಿವಾರ ಬಂದಿರುವುದರಿಂದ ಈ ಸಂವತ್ಸರದ ರಾಜ ಶನಿ ಮಹಾರಾಜನೇ ಆಗಿರುವನು. ಶನಿಯು ಶ್ರಮಿಕ ವರ್ಗ ಸೂಚಕ. ಸೇವಕನೇ ರಾಜನಾಗಿರುವನು ಈ ವರ್ಷ. ಶ್ರಮಿಕ ಹಿನ್ನೆಲೆಯಲ್ಲಿರುವವರು ರಾಜಕೀಯ ಕ್ಷೇತ್ರದಲ್ಲಿ ಮುನ್ನೆಲೆಗೆ ಬರುವರು. ನಾಯಕ ಹಾಗೂ ಸರ್ಕಾರವನ್ನು ಪ್ರತಿನಿಧಿಸುವ ರವಿಗೂ ಶನಿಗೂ ವಿರೋಧವಿರುವುದರಿಂದ ಆಳ್ವಿಕೆಯಲ್ಲಿ ಅನೇಕ ವಿಪ್ಲವಗಳನ್ನು ಸೂಚಿಸುತ್ತಿದೆ.

ಗುರು ಮಂತ್ರಿಯಾಗಿರುವುದರಿಂದ ದೇಶದಲ್ಲಿ ಸುವೃಷ್ಟಿ, ಸಮೃದ್ಧಿಗಳು ಉಂಟಾಗುವುವು. ಗುರುವಿನ ಸ್ಥಾನ ಗಮನಿಸಿದಾಗ ಆರ್ಥಿಕವಾಗಿ ಮುಗ್ಗಟ್ಟಿನ ಸ್ಥಿತಿ ಎದುರಿಸಬೇಕಾಗುವುದು. ಬುಧ ಸೇನಾಧಿಪತಿಯಾಗಿ, ಅರ್ಘ್ಯಾಧಿಪತಿ, ಮೇಘಾಧಿಪತಿಯೂ ಆಗಿರುವುದರಿಂದ ಪ್ರಕೃತಿಯಲ್ಲಿ ಒಳ್ಳೆಯ ಮಳೆ-ಬೆಳೆಯಾಗಿ ಶ್ರಮಕ್ಕೆ ತಕ್ಕ ಫಲ ಸಿಗುವ ಯೋಗ. ಆದರೆ ಅಕ್ಕಪಕ್ಕದ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ನಮಗೂ ತಟ್ಟುವುದು. ರವಿ ಸಸ್ಯಾಧಿಪನಾಗಿರುವುದರಿಂದ ಕೆಲವು ಸಸ್ಯಗಳಿಂದ ರೈತರಿಗೆ ನಷ್ಟವುಂಟಾದರೂ, ಕಡಲೆ ಹಾಗೂ ಅವರೆಬೆಳೆಗೆ ಬೆಲೆ ಬರುವುದು. ಶುಕ್ರ ಧಾನ್ಯಾಧಿಪತಿಯಾಗಿ ಅತಿವೃಷ್ಟಿ, ಅನಾವೃಷ್ಟಿಗೆ ಕಾರಣನಾಗುವನು. ಹೂವಿನ ವ್ಯಾಪಾರಿಗಳಿಗೆ ಶುಭ. ಕಲಾವಿದರಿಗೂ ಶುಭ. ಕುಜ ರಸಾಧಿಪತಿನಾಗಿರುವುದರಿಂದ ಅಗ್ನಿ ಅವಘಡಗಳು ಅಧಿಕ. ನೀರಸಾಧಿಪತಿ ಶನಿಯಾಗಿದ್ದು ಚಿನ್ನ, ಬೆಳ್ಳಿ, ಪೆಟ್ರೋಲ್, ತೈಲ ಬೆಲೆಗಳೆಲ್ಲಾ ಏರುವುವು. ಬಲರಾಮ ಪಶುನಾಯಕನಾಗಿ, ಶನಿ ರಾಜನಾದಾಗ ಸುವೃಷ್ಟಿ, ಸಸ್ಯಸಮೃದ್ಧಿಯಾಗಿ ಪಶುಗಳ ಆರೋಗ್ಯವೂ ಚೆನ್ನಾಗಿರುವುದು. ಶನಿ ಹಾಗೂ ಕುಜ ಮಕರದಲ್ಲಿರುವುದು ದೇಶ–ದೇಶಗಳ ನಡುವೆ ದ್ವೇಷವನ್ನು ಸೂಚಿಸುವನು. ಅಗ್ನಿತತ್ವ ರಾಶಿಯಲ್ಲಿ ರಾಹು ಹಾಗೂ ವಾಯುತತ್ವ ರಾಶಿಯಲ್ಲಿ ಕೇತು ಇರುವುದರಿಂದ ಅಗ್ನಿ ಅವಘಡಗಳು, ದುರಂತಗಳ ಸಂಭವ.

ಗುರುವು ಸ್ವಸ್ಥಾನದಲ್ಲಿ, ಶನಿಯು ಮುದಿತಾವಸ್ಥೆಯಲ್ಲಿ ವರ್ಷಪೂರ್ತಿ ಇರುವುದರಿಂದ ಈ ವರ್ಷ ಶುಭಫಲಗಳುಂಟಾಗುವುವು. ಈ ಗ್ರಹಗಳ ಜೊತೆಗೆ ರವಿ, ಕುಜ, ಶುಕ್ರ ಗ್ರಹಗಳ ಗೋಚಾರಫಲವನ್ನೂ ನಾವು ವಿಶ್ಲೇಷಣೆ ಮಾಡಿದಾಗ ನಿಖರ ಫಲ ತಿಳಿಯುವುದು. ಈ ವರ್ಷ ರಾಷ್ಟ್ರದಲ್ಲಿ ಅನ್ನಕ್ಕೆ ಕೊರತೆಯಿಲ್ಲ. ರೈತರಿಗೂ ಒಳ್ಳೆಯದಾಗುವುದು. ಒಳ್ಳೆಯ ಮಳೆ-ಬೆಳೆ ಯೋಗವಿದೆ. ಹೈನುಗಾರಿಕೆ, ಫಸಲು ಹಾಗೂ ಸಣ್ಣಪುಟ್ಟ ಧಾನ್ಯಗಳು ಚೆನ್ನಾಗಿ ಫಲಿಸುವುದು. ಹೂವಿನ ವ್ಯಾಪಾರಿಗಳಿಗೂ ಶುಭ. ಶನಿಯೇ ರಾಜಾಧಿಪತಿಯಾಗಿರುವುದರಿಂದ ಅಧರ್ಮ ಮಾಡಿದವರು, ಎಂದರೆ ಭ್ರಷ್ಟಾಚಾರದ ಹಿನ್ನೆಲೆಯಿರುವವರು, ಕಷ್ಟವನ್ನು ಅನುಭವಿಸಬೇಕಾಗುವುದು.

ಗ್ರಹಣವಿಚಾರ

ಈ ವರ್ಷ ಭಾರತ ದೇಶದಲ್ಲಿ ಎರಡು ಗ್ರಹಣಗಳು ಗೋಚರಿಸುವುವು. ಅಕ್ಟೋಬರ್ 25ರಂದು ಕೇತುಗ್ರಸ್ತ ಸೂರ್ಯಗ್ರಹಣ; ಚಿತ್ತಾ, ಸ್ವಾತಿ ನಕ್ಷತ್ರದವರು ಮತ್ತು ಕನ್ಯಾ, ತುಲಾ ರಾಶಿಯವರು ಶಾಂತಿಯನ್ನು ಮಾಡಿಸಿಕೊಳ್ಳಬೇಕಾಗುವುದು. ನವೆಂಬರ್ 8ರಂದು ರಾಹುಗ್ರಸ್ತ ಚಂದ್ರಗ್ರಹಣ - ಭರಣಿ ನಕ್ಷತ್ರ, ಮೇಷ ರಾಶಿಯವರು ಶಾಂತಿಯನ್ನು ಮಾಡಿಕೊಳ್ಳ ಬೇಕಾಗುತ್ತದೆ.

ದ್ವಾದಶ ರಾಶಿಗಳ ಫಲ:

ಯುಗಾದಿಯ ದಿನ ಸೂರ್ಯೋದಯವು 6 ಗಂಟೆ 19 ನಿಮಿಷಕ್ಕೆ ಆಗುವುದರಿಂದ, ಮೀನ ಲಗ್ನ, ಮೀನ ರಾಶಿ, ರೇವತಿ ನಕ್ಷತ್ರದಲ್ಲಿ ಈ ವರ್ಷ ಪ್ರಾರಂಭವಾಗುತ್ತಿದೆ. ಈ ಸಂವತ್ಸರ ಆರಂಭವಾದ 15–20 ದಿನಗಳಲ್ಲೇ ಪ್ರಧಾನ ಗ್ರಹಗಳಾದ ಗುರು, ಶನಿ, ರಾಹು-ಕೇತು ಗ್ರಹಗಳ ಸ್ಥಾನ ಪಲ್ಲಟವಾಗುವುದರಿಂದ ಪಲ್ಲಟದ ನಂತರದ ಫಲವನ್ನೇ ಹೇಳಲಾಗಿದೆ. ಗುರು, ರಾಹು–ಕೇತು ಗ್ರಹಗಳು 13-4-2022ರಂದು ಸ್ಥಾನ ಪಲ್ಲಟವಾಗುವುವು. ಗುರುಗ್ರಹವು ಮೀನ ರಾಶಿಗೆ, ರಾಹು ಮೇಷಕ್ಕೂ, ಕೇತು ಗ್ರಹವು ತುಲಾ ರಾಶಿಗೂ ಚಲಿಸುವುದು. ಶನಿಗ್ರಹವು 29-4-2022ರಂದು ಕುಂಭರಾಶಿಯನ್ನು ಪ್ರವೇಶಿಸುವುದು.

ಮೇಷ: ಮಿಶ್ರ ಫಲದಾಯಕ. ಈ ರಾಶಿಯ ದ್ವಾದಶದಲ್ಲಿ ಈ ವರ್ಷ ಗುರು ಸಂಚಾರವಿರುವುದಿಂದ ಖರ್ಚು ಹೆಚ್ಚು. ದಾನಧರ್ಮಗಳಿಗೆ, ಶುಭ ಕಾರ್ಯಗಳಿಗೆ ಹಣ ವ್ಯಯ. ಅಧಿಕ ತಿರುಗಾಟ, ಕೆಲಸ ಕಾರ್ಯಗಳಲ್ಲಿ ಅಡಚಣೆ. ಆರೋಗ್ಯದ ಬಗ್ಗೆ ಜಾಗೃತಿ ಅಗತ್ಯ. ಆದರೆ ಗುರುವಿನ ದುಷ್ಫಲವನ್ನು ಲಾಭದ ಶನಿ ತಕ್ಕಮಟ್ಟಿಗೆ ತಡೆಯುವುದು. ಉದ್ಯೋಗದಲ್ಲಿ ಬದಲಾವಣೆಯ ಯೋಗ. ಆರೋಗ್ಯದಲ್ಲಿ ಸುಧಾರಣೆ, ಆರ್ಥಿಕ ಸ್ಥಿತಿ ಪ್ರಗತಿ, ಕುಟುಂಬದಲ್ಲಿ ಸೌಖ್ಯ, ಬಂಧುಮಿತ್ರರಿಂದ ಸಹಾಯ. ರಾಹು ರಾಶಿಯಲ್ಲೇ ಇದ್ದು ಮನಸ್ಸಿಗೆ ನಾನಾ ರೀತಿಯ ಚಿಂತೆ. ದೇವತಾಕಾರ್ಯಗಳಿಂದ ನೆಮ್ಮದಿ. ಕಬ್ಬಿಣ, ಲೋಹಗಳ ವ್ಯಾಪಾರಿಗಳಿಗೆ ಅಧಿಕ ಲಾಭ. ಗುರುವಿನ ಆರಾಧನೆ ಅತ್ಯಗತ್ಯ.

ವೃಷಭ: ಶುಭಫಲ. ಗುರು ಲಾಭದಲ್ಲಿರುವುದರಿಂದ ಉತ್ತಮ ಸಮಯ. ಯಶಸ್ಸು, ವೃದ್ಧಿ, ತೇಜಸ್ಸು, ಸರ್ವತ್ರ ವಿಜಯ. ಮನೆಯಲ್ಲಿ ಶುಭಕಾರ್ಯಗಳು ನಡೆಯುತ್ತವೆ. ರಾಜಕಾರಣಿಗಳಿಗೂ ಜಯ. ದಶಮದ ಶನಿಯಿಂದ ಅಧಿಕಾರದಲ್ಲಿ ಬಡ್ತಿ; ವ್ಯಾಪಾರ ವೃದ್ಧಿ. ರೈತರಿಗೆ ಶುಭ. ಕಡಲೆಕಾಯಿ ಹಾಗೂ ಕಬ್ಬು ಬೆಳೆಗಾರರಿಗೆ ಲಾಭ. ದ್ವಾದಶದ ರಾಹುವಿನಿಂದ ನಿದ್ರಾಹೀನತೆ, ಅಧಿಕ ಖರ್ಚು. ಆರೋಗ್ಯದಲ್ಲಿ ಎಚ್ಚರ ಅಗತ್ಯ. ವಾಹನ ವಿಷಯದಲ್ಲಿ ಜಾಗ್ರತೆಯಿರಲಿ. ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳು ನಡೆಯಲಿವೆ. ವಕೀಲರಿಗೆ, ಸರ್ಕಾರಿ ಉದ್ಯೋಗಿಗಳಿಗೆ ಅನುಕೂಲ. ದುರ್ಗಾರಾಧನೆಯಿಂದ ಅಧಿಕ ಫಲ.

ಮಿಥುನ: ಮಧ್ಯಮ ಫಲ. ಕರ್ಮದ ಗುರು, ಭಾಗ್ಯದ ಶನಿಯಿಂದ ಶುಭಫಲ. ಉದ್ಯೋಗದಲ್ಲಿ ಪ್ರಗತಿ, ಪದೋನ್ನತಿ, ಹೊಸ ಜವಾಬ್ದಾರಿ, ನಿರೀಕ್ಷಿಸುತ್ತಿದ್ದ ವೇತನ ಬಡ್ತಿ ಪ್ರಾಪ್ತಿ. ಮನೆಯಲ್ಲಿ ಶುಭಕಾರ್ಯ. ನವಮದ ಶನಿ ಸಂಚಾರದಿಂದ ಆರೋಗ್ಯದಲ್ಲಿ ಗಮನವಿರಲಿ. ದೂರ ಪ್ರಯಾಣ, ಉದ್ಯೋಗದಲ್ಲಿ ಬದಲಾವಣೆ. ಮನಸ್ಸಿಗೆ ಅಶಾಂತಿ, ನಿಧಾನ ಪ್ರಗತಿ. ಧಾರ್ಮಿಕ ಸಿದ್ಧಿ, ಯೋಗಶಾಸ್ತ್ರಗಳಲ್ಲಿ ಪರಿಣತಿ. ಲಾಭದ ರಾಹುವಿನಿಂದ ವಿದೇಶ ಪ್ರಯಾಣಯೋಗ. ಭೂಮಿಲಾಭದ ಸಾಧ್ಯತೆ. ವ್ಯಾಪಾರದಲ್ಲಿ ಲಾಭ. ಆರೋಗ್ಯದಲ್ಲಿ ಚೇತರಿಕೆ. ಆದರೆ ಪಂಚಮದ ಕೇತುವಿನಿಂದ ಮಕ್ಕಳ ವಿಚಾರದಲ್ಲಿ ಜಾಗ್ರತೆ ಅಗತ್ಯ. ರಾಜಕಾರಣಿಗಳಿಗೆ ಸಾಮಾನ್ಯ ಫಲ. ವಿದ್ಯಾರ್ಥಿಗಳಿಗೆ ಮಧ್ಯಮ ಫಲ. ವಿಷ್ಣುವಿನ ಆರಾಧನೆಯಿಂದ ಅನುಕೂಲಕರ.

ಕರ್ಕಾಟಕ: ಮಿಶ್ರ ಫಲ. ನವಮ ಭಾವದ ಗುರುವಿನಿಂದ ಭಾಗ್ಯೋದಯ, ಸಂತಸ, ಶುಭ ಫಲಗಳು. ಧನಲಾಭ, ಧರ್ಮಾಚರಣೆ; ಮನೆಯಲ್ಲಿ ಮಂಗಳಕಾರ್ಯ. ಇಚ್ಛಿಸಿದ ಕಾರ್ಯದಲ್ಲಿ ಜಯ, ತೀರ್ಥಕ್ಷೇತ್ರ ಭೇಟಿ. ಅಷ್ಟಮ ಭಾವದ ಶನಿಯಿಂದ ಆರೋಗ್ಯದಲ್ಲಿ ಏರುಪೇರು, ಧನಹಾನಿ, ಶತ್ರುಗಳಿಂದ ತೊಂದರೆ, ಮನೆಯಲ್ಲಿ ಅಶಾಂತಿಯ ವಾತಾವರಣ, ವ್ಯಾಪಾರದಲ್ಲಿ ನಷ್ಟ. ಹಣಕಾಸಿನ ವ್ಯವಹಾರದಲ್ಲಿ ಎಚ್ಚರಿಕೆ ಅಗತ್ಯ. ದಶಮ ಭಾವದ ರಾಹುವಿನಿಂದ ರಾಜಕಾರಣಿಗಳಿಗೆ ತೊಂದರೆ. ಉದ್ಯೋಗದಲ್ಲಿ ವಿಘ್ನ. ಕೋರ್ಟ್ ಕೇಸ್ ಇದ್ದಲ್ಲಿ ವಿಳಂಬ. ಭೂಸಂಬಂಧಿತ ಕಾರ್ಯದಲ್ಲಿ ವಿಘ್ನ. ರೈತಾಪಿ ವರ್ಗಕ್ಕೂ ವಿದ್ಯಾರ್ಥಿಗಳಿಗೂ ಶುಭ. ಸಂಕಷ್ಟ ಗಣಪತಿಯನ್ನು ಆರಾಧಿಸಿ.

ಸಿಂಹ: ಮಿಶ್ರ ಫಲ. ಅಷ್ಟಮದ ಗುರುವಿನಿಂದ ಚೋರ ಭಯ, ಅಗ್ನಿಭೀತಿ. ಅನಾರೋಗ್ಯ ಸಮಸ್ಯೆ, ಅಧಿಕಾರಿಗಳಿಂದ ಕಿರಿಕಿರಿ, ಮೋಸ ಹೋಗುವ ಭಯ. ಸಪ್ತಮದ ಶನಿಯಿಂದ ರೋಗ, ದುಃಖ, ವಿವಾಹಾದಿ ಕಾರ್ಯಗಳಲ್ಲಿ ವಿಳಂಬ, ಧನಹಾನಿ, ಉದ್ಯೋಗದಲ್ಲಿ ತೊಂದರೆ, ಸಂಬಂಧಿಕರೊಡನೆ ಮನಸ್ತಾಪ. ನವಮದ ರಾಹುವಿನಿಂದ ಮನೆಯಲ್ಲಿ ಅನೇಕ ತೊಂದರೆ. ತೇಜೋಹಾನಿ, ಮನೋವ್ಯಥೆ. ಆದರೂ ಆತ್ಮವಿಶ್ವಾಸವಿರಲಿ. ರಾತ್ರಿ ಕಳೆದ ನಂತರ ಹಗಲು ಬರಲೇಬೇಕು; ಹಾಗಾಗಿ ಸದ್ಗುರುಗಳ ಹಾಗೂ ಹಿರಿಯರ ಆಶೀರ್ವಾದದಿಂದ ಕಷ್ಟಗಳ ಪ್ರಮಾಣ ವರ್ಷದ ಅಂತ್ಯದ ಹೊತ್ತಿಗೆ ಕಡಿಮೆಯಾಗುವುದು. ಉಮಾಮಹೇಶ್ವರನನ್ನು ಆರಾಧಿಸಿ.

ಕನ್ಯಾ: ಗುರುಬಲವಿದೆ. ಬಹುತೇಕ ಶುಭಫಲವಿದೆ. ವಿವಾಹದ ಅಪೇಕ್ಷಿಗಳಿಗೆ ಕಂಕಣಬಲವಿದೆ. ಇಚ್ಛಿಸಿದ ಕಾರ್ಯದಲ್ಲಿ ಜಯ, ವ್ಯಾಪಾರದಲ್ಲಿ ಲಾಭ, ಗೌರವ ಲಭ್ಯ. ಅರ್ಧಕ್ಕೆ ನಿಂತ ಕಾರ್ಯಗಳು ಪೂರ್ಣಗೊಳ್ಳಲಿವೆ. ಪಂಚಮ ಶನಿಯ ಬಿಡುಗಡೆಯಿಂದ ಆರೋಗ್ಯದಲ್ಲಿ ಸುಧಾರಣೆ. ಧನ-ಧಾನ್ಯಾಭಿವೃದ್ಧಿ, ಬಂಧು ಬಳಗದವರೊಡನೆ ಸಂತಸ, ಕೃಷಿಯಲ್ಲಿ ಅಭಿವೃದ್ಧಿ, ಸೇವಕವರ್ಗದಿಂದ ಸಹಾಯ ಲಭ್ಯ. ಧಾರ್ಮಿಕ ಕ್ಷೇತ್ರ ಭೇಟಿ. ಆದರೆ ಅಷ್ಟಮ ರಾಹುವಿನಿಂದ ತೊಂದರೆಗಳೂ ಎದುರಾಗುವುವು. ಅನಾರೋಗ್ಯ, ಧನಹಾನಿ, ದುಃಖ, ಮಾನಸಿಕ ಕ್ಷೋಭೆ, ಆರೋಗ್ಯದಲ್ಲಿ ಏರುಪೇರು, ದಾಂಪತ್ಯಕಲಹ, ಬಂಧುವೈರ, ಕೃಷಿಕರಿಗೆ ಲಾಭ. ದುರ್ಗಾಸಪ್ತಶತಿಯ ಪಾರಾಯಣದಿಂದ ಅನುಕೂಲ.

ತುಲಾ: ಗುರುಬಲವಿಲ್ಲ. ಪಂಚಮ ಶನಿ, ಆರರ ಗುರು ಸ್ವಲ್ಪ ವ್ಯತಿರಿಕ್ತ ಫಲಗಳನ್ನು ಕೊಡುತ್ತಾರೆ. ಆದರೆ ಆರರ ಅಧಿಪತಿ ಆರರಲ್ಲೇ ಇರುವುದು ಸಮಾಧಾನ. ವೃಥಾ ಪ್ರಯಾಣ, ಅನಾರೋಗ್ಯ, ವ್ಯಾಪಾರದಲ್ಲಿ ನಷ್ಟ. ವಿದ್ಯಾಭ್ಯಾಸದಲ್ಲಿ ಏರುಪೇರು, ವ್ಯಾಪಾರದಲ್ಲಿ ಅಲ್ಪ ಲಾಭ. ವ್ಯವಸಾಯದಲ್ಲಿ ಕಡಿಮೆ ಲಾಭ. ಪಂಚಮದ ಶನಿಯಿಂದ ಮನಸ್ಸಿಗೆ ಖೇದ, ಕಲಹ, ಉದ್ಯೋಗದಲ್ಲಿ ಬಡ್ತಿ ವಿಳಂಬ, ಅಪಜಯ, ಧನಹಾನಿ. ಆದರೆ ಶನಿ ತುಲಾರಾಶಿಗೆ ಯೋಗಕಾರಕನಾಗಿರುವುದರಿಂದ ಶನಿಯ ಬಾಧೆಗಳು ಅಷ್ಟು ಬಾಧಿಸುವುದಿಲ್ಲ. ಸಪ್ತಮದ ರಾಹುವಿನಿಂದ ದಾಂಪತ್ಯ ವಿರಸ, ಸ್ನೇಹಿತರೊಡನೆ ವಿರೋಧ, ಅಸಮಾಧಾನ. ಕಬ್ಬಿಣ ವ್ಯಾಪಾರಿಗಳಿಗೆ ಶುಭ. ರೈತರಿಗೆ ಭೂಮಿ ವಿಚಾರದಲ್ಲಿ ಕಲಹಗಳಿದ್ದರೆ ಇತ್ಯರ್ಥವಾಗುವುದು. ಗುರುಹಿರಿಯರ ಆಶೀರ್ವಾದದಿಂದ ಮತ್ತು ಕುಲದೇವತಾ ಅನುಗ್ರಹದಿಂದ ವರ್ಷದ ಅಂತ್ಯದಲ್ಲಿ ನೆಮ್ಮದಿ ಸಿಗಲಿದೆ. ಆಂಜನೇಯನನ್ನು ಆರಾಧಿಸಿ.

ವೃಶ್ಚಿಕ: ಆಶಾದಾಯಕ ಫಲ. ಗುರುಬಲವಿದೆ. ಸಂತಾನಸುಖವಿದ್ದು ಭಾಗ್ಯೋದಯವಾಗುತ್ತದೆ. ಕಾರ್ಯದಲ್ಲಿ ಜಯ, ಸಜ್ಜನರ ಸಹವಾಸ, ಸರ್ವರಿಂದ ಮನ್ನಣೆ, ಕೀರ್ತಿ, ಗೌರವ ಗಳಿಕೆ. ಮನೆಯಲ್ಲಿ ಶುಭಕಾರ್ಯ, ರಾಜಕಾರಣಿಗಳಿಗೆ ಶುಭಸಮಯ. ಚತುರ್ಥದ ಶನಿಯಿಂದ ಆರೋಗ್ಯದಲ್ಲಿ ಏರುಪೇರು, ಆಸ್ತಿನಾಶ, ಸಹೋದರರಲ್ಲಿ ವಾಗ್ವಾದ, ಮನೆಯಲ್ಲಿ ಅಶಾಂತಿ ವಾತಾವರಣ. ಷಷ್ಠ ಭಾವದ ರಾಹುವಿನಿಂದ ಶುಭಫಲ. ಧನ-ಧಾನ್ಯಾಭಿವೃದ್ಧಿ, ಕೃಷಿಯಲ್ಲಿ ಅಭಿವೃದ್ಧಿ, ಬಂಧುಮಿತ್ರರ ಸಹಾಯ. ಮಕ್ಕಳ ವಿಷಯದಲ್ಲಿ ಎಚ್ಚರ. ಶತ್ರುಧ್ವಂಸ. ಕೋರ್ಟ್ ಕೇಸಿದ್ದರೆ ಜಯ. ಬಾಲಾ ತ್ರಿಪುರಸುಂದರಿಯ ಆರಾಧನೆಯಿಂದ ಅನುಕೂಲ.

ಧನುಸ್ಸು: ಸಾಧಾರಣ ಫಲ. ಸುಖಭಾವದ ಗುರುವಿನಿಂದ ಸಂತಸದ ಸಮಯ. ಕುಟುಂಬ ಸೌಖ್ಯ, ಸಮಾಜದಲ್ಲಿ ಮನ್ನಣೆ, ಕೀರ್ತಿ– ಪ್ರಶಸ್ತಿಗಳು ಪ್ರಾಪ್ತಿ. ರಾಜಕಾರಣದಲ್ಲಿ ಉನ್ನತ ಸ್ಥಾನದ ಲಾಭ. ಆರ್ಥಿಕ ಸ್ಥಿತಿ ಉತ್ತಮ. ತೃತೀಯ ಶನಿಯಿಂದ ಯತ್ನಿಸಿದ ಕಾರ್ಯದಲ್ಲಿ ಜಯ, ಆರೋಗ್ಯದಲ್ಲಿ ಚೇತರಿಕೆ, ಉದ್ಯೋಗದಲ್ಲಿ ಬಡ್ತಿ, ಗೃಹನಿರ್ಮಾಣ ಯೋಗ. ಪಂಚಮದ ರಾಹುವಿನಿಂದ ಮಕ್ಕಳಿಗೆ ದೃಷ್ಟಿದೋಷ, ಅನಾರೋಗ್ಯ ಸಮಸ್ಯೆ ಕಾಡಲಿದೆ. ಮನಸ್ಸಿಗೆ ಸಂತಾಪ, ದುಃಖ, ಬಂಧುವರ್ಗದಲ್ಲಿ ಕಲಹ. ದತ್ತಾತ್ರೇಯನ ಆರಾಧನೆಯಿಂದ ಅಶುಭಫಲದ ತೀವ್ರತೆ ಕಡಿಮೆಯಾಗುವುದು.

ಮಕರ: ಶುಭಾಶುಭ ಫಲ. ರಾಶ್ಯಾಧಿಪತಿಯೂ ಶನಿಯಾಗಿ, ಸಂವತ್ಸರಾಧಿಪತಿಯೂ ಶನಿಯೂ ಆಗಿರುವನು. ತೃತೀಯದ ಗುರು ಅಧಿಕ ದುಃಖ, ಧನಹಾನಿ, ಭೂಮಿ ಸಂಬಂಧಿತ ಕಾರ್ಯಗಳಲ್ಲಿ ವಿಳಂಬ. ಮಾನಸಿಕ ಒತ್ತಡ. ದ್ವಿತೀಯದ ಶನಿಯಿಂದ ವೃಥಾ ತಿರುಗಾಟ, ಅಧೈರ್ಯ, ಹಣದ ಮುಗ್ಗಟ್ಟು. ಚತುರ್ಥದ ರಾಹುವಿನಿಂದ ಕುಟುಂಬದಲ್ಲಿ ಅಸಮಾಧಾನ, ಆರೋಗ್ಯದ ಕಡೆ ಗಮನವಿರಲಿ. ಆದರೆ ಭಾಗ್ಯಸ್ಥಾನ ನೋಡುತ್ತಿರುವ ಗುರುವಿನಿಂದ ನೆಮ್ಮದಿ. ಮಕರ ರಾಶ್ಯಾಧಿಪತಿಯೂ ಶನಿಯೇ ಆಗಿರುವುದರಿಂದ ಶನಿಯ ಬಾಧೆಗಳ ತೀವ್ರತೆ ಕಡಿಮೆಯಿರುವುದು. ಹನುಮಾನ್ ಚಾಲೀಸ್ ಪಠಣದಿಂದ ಶುಭ.

ಕುಂಭ: ಮಿಶ್ರಫಲ. ದ್ವಿತೀಯ ಗುರುವಿನಿಂದ ಗುರುಬಲವಿದ್ದು, ಸಮೃದ್ಧಿ, ಸೌಭಾಗ್ಯವೃದ್ಧಿ. ಕೀರ್ತಿಗೌರವ, ಸನ್ಮಾನ. ಶುಭಕಾರ್ಯಗಳು ಕೈಗೂಡುವುವು. ವ್ಯಾಪಾರದಲ್ಲಿ ಅಭಿವೃದ್ಧಿ. ಶನಿಯು ರಾಶಿಯಲ್ಲೇ ಇದ್ದು ಸೋಮಾರಿತನ, ಕಾರ್ಯದಲ್ಲಿ ವಿಳಂಬ, ಕೋಪ, ಚಿಂತೆ ಕಾಡುವುದು. ಸಂಗಾತಿಯ ಆರೋಗ್ಯದ ಬಗ್ಗೆ ಜಾಗೃತಿ ಅಗತ್ಯ. ಸ್ವಂತ ಉದ್ಯಮಿಗಳಿಗೆ ಲಾಭ. ಶನಿಯು ಸ್ವಸ್ಥಾನದಲ್ಲೇ ಇರುವುದರಿಂದ ಶನಿಯ ಬಾಧೆ ತೀವ್ರತರವಾಗಿ ಬಾಧಿಸುವುದಿಲ್ಲ. ತೃತೀಯ ರಾಹುವಿನಿಂದ ಕಾರ್ಯಗಳಲ್ಲಿ ಮುನ್ನುಗ್ಗುವ ಧೈರ್ಯ, ಕಾರ್ಯದಲ್ಲಿ ಜಯ, ಸಂತಸದ ವಾತಾವರಣ, ಧರ್ಮಕಾರ್ಯದಲ್ಲಿ ಆಸಕ್ತಿ, ದಾನ ಧರ್ಮಗಳಿಗೆ ವೆಚ್ಚ, ಉದ್ಯಮಿಗಳಿಗೆ ಲಾಭ. ಹನುಮಂತನನ್ನು ಸ್ಮರಿಸಿ.

ಮೀನ: ಮಿಶ್ರಫಲ. ಜನ್ಮಗುರುಃ ನರೋ ದುಃಖಂ – ಎಂಬ ಮಾತಿನಂತೆ ದುಃಖವೂ ಕಾಡುವುದು. ಆದರೆ ಜನ್ಮದ ಗುರು ಬಲಿಷ್ಠನಾಗಿರುವುದರಿಂದ ನೆಮ್ಮದಿ, ಕಷ್ಟ ನಷ್ಟಗಳಿಂದ ಪಾರಾಗುವ ಸಮಯ. ಸ್ಥಿರಾಸ್ತಿ ಯೋಗ, ಸರ್ಕಾರಿ ನೌಕರಿ ಲಾಭ, ಆಸ್ತಿಕಲಹ ಇತ್ಯರ್ಥ. ರಾಜಕಾರಣಿಗಳಿಗೆ ಶುಭ ಸಮಯ. ದ್ವಾದಶದ ಶನಿಯಿಂದ ವಾಹನಗಳೆಡೆ ಎಚ್ಚರ ಅಗತ್ಯ. ವೃಥಾ ತಿರುಗಾಟ. ಧನವ್ಯಯ, ವ್ಯಾಪಾರ ವ್ಯವಹಾರದಲ್ಲಿ ಅಲ್ಪ ಪ್ರಗತಿ. ದ್ವಿತೀಯದ ರಾಹುವಿನಿಂದ ವೃಥಾ ವಾಗ್ವಾದ, ತೇಜೋ ಹಾನಿ, ವೈರತ್ವ. ಮಕ್ಕಳಿಗೆ, ಉದ್ಯೋಗಸ್ಥರಿಗೆ ಶುಭ ಸಮಯ. ವಿದೇಶ ಪ್ರಯಾಣಯೋಗ. ನಡೆಯುತ್ತಿರುವ ದಶೆ ಚೆನ್ನಾಗಿದ್ದರೆ ಅಶುಭ ಫಲದ ತೀವ್ರತೆ ಕಡಿಮೆಯಿರುವುದು. ಗುರುಹಿರಿಯರ ಆಶೀರ್ವಾದದ ಜೊತೆಗೆ ಕುಲದೇವತಾ ಅನುಗ್ರಹದಿಂದ ಆದಾಯಕ್ಕೆ ಕೊರತೆಯಿರುವುದಿಲ್ಲ. ಗುರುವನ್ನು ಆರಾಧಿಸಿ.

ಉಕ್ರೇನ್ ವೈಮಾನಿಕ ದಾಳಿಗೆ ರಷ್ಯಾದ ಇಂಧನ ಸಂಗ್ರಹಾಗಾರ ಧ್ವಂಸ

ಅತ್ತ ಶಾಂತಿ; ಇತ್ತ ದಾಳಿ–ಪ್ರತಿದಾಳಿ

ಮಾಸ್ಕೊ (ಎಎಫ್‌ಪಿ): ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ 37 ದಿನಗಳನ್ನು ಪೂರೈಸಿದೆ. ಸಂಘರ್ಷ ಶಮನಗೊಳಿಸಲು ಉಭಯ ರಾಷ್ಟ್ರಗಳ ರಾಜತಾಂತ್ರಿಕರ ನಡುವೆ ಶಾಂತಿ ಮಾತುಕತೆ ಒಂದೆಡೆ ನಡೆಯುತ್ತಿದ್ದರೆ, ಪರಸ್ಪರರ ಆಯಕಟ್ಟಿನ ಸೇನಾ ತಾಣಗಳ ಮೇಲೆ ದಾಳಿ- ಪ್ರತಿ ದಾಳಿ ಇನ್ನೊಂದೆಡೆ ನಿರಂತರವಾಗಿ ನಡೆಯುತ್ತಿದೆ.

ರಷ್ಯಾದ ಬೆಲ್‌ಗೊರೊಡ್ ಪಟ್ಟಣದ ಇಂಧನ ಸಂಗ್ರಹಾಗಾರದ ಮೇಲೆ ಉಕ್ರೇನ್ ವೈಮಾನಿಕ ದಾಳಿ ನಡೆಸಿದ್ದು, ಬಾಂಬ್ ಸ್ಫೋಟಕ್ಕೆ ಸಂಗ್ರಹಾಗಾರ ಹೊತ್ತಿ ಉರಿದಿದೆ. ಇಬ್ಬರು ಸಿಬ್ಬಂದಿ ಗಾಯಗೊಂಡಿದ್ದಾರೆ ಎಂದು ಗವರ್ನರ್ ಹೇಳಿದ್ದಾರೆ.

ಉಭಯ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಶಸ್ತ್ರಾಸ್ತ್ರ ಸಂಘರ್ಷದಲ್ಲಿ ಉಕ್ರೇನ್, ಇದೇ ಮೊದಲ ಬಾರಿಗೆ ರಷ್ಯಾ ನೆಲದಲ್ಲಿ ವೈಮಾನಿಕ ದಾಳಿ ನಡೆಸಿದೆ. ಭಾರೀ ಬೆಂಕಿ ಹೊತ್ತಿ ಉರಿಯುತ್ತಿರುವ ದೃಶ್ಯದ ವಿಡಿಯೊ ತುಣುಕನ್ನು ರಷ್ಯಾದ ತುರ್ತು ಸೇವೆ ಸಚಿವಾಲಯ ಬಿಡುಗಡೆ ಮಾಡಿದೆ.

'ಉಕ್ರೇನಿನ ಎರಡು ಸೇನಾ ಹೆಲಿಕಾಪ್ಟರ್‌ಗಳು ನಡೆಸಿದ ವಾಯು ದಾಳಿಯಿಂದಾಗಿ ಪೆಟ್ರೋಲ್ ಸಂಗ್ರಹಾಗಾರದಲ್ಲಿ ಬೆಂಕಿ ಹೊತ್ತಿದೆ. ಹೆಲಿಕಾಪ್ಟರ್‌ಗಳು ಕಡಿಮೆ ಎತ್ತರದಲ್ಲಿ ರಷ್ಯಾದ ವಾಯುಪ್ರದೇಶವನ್ನು ಪ್ರವೇಶಿಸಿವೆ' ಎಂದು ಬೆಲ್‌ಗೊರೊಡ್ ಪ್ರಾದೇಶಿಕ ಗವರ್ನರ್ ವ್ಯಾಚೆಸ್ಲಾವ್ ಗ್ಲಾಡ್ಕೊವ್ ಟೆಲಿಗ್ರಾಮ್‌ನಲ್ಲಿ ಶುಕ್ರವಾರ ತಿಳಿಸಿದ್ದಾರೆ.

ರಷ್ಯಾದ ಬೆಲ್‌ಗೊರೊಡ್‌ನ ತೈಲ ಸಂಗ್ರಹಾಗಾರ ಉಕ್ರೇನ್ ವಾಯು ದಾಳಿಗೆ ತುತ್ತಾಗಿದ್ದು, ಬೆಂಕಿ ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ ಚಿತ್ರವನ್ನು ರಷ್ಯಾ ಶುಕ್ರವಾರ ಬಿಡುಗಡೆ ಮಾಡಿದೆ– ಎಪಿ/ ಪಿಟಿಐ ಚಿತ್ರ

ಈ ಸಂಗ್ರಹಾಗಾರವು ರಷ್ಯಾದ ತೈಲ ದೈತ್ಯ ಕಂಪನಿ ರೋಸ್ನೆಫ್ಟ್ ಒಡೆತನದ್ದು. ಘಟನಾ ಸ್ಥಳದಿಂದ ಕಂಪನಿಯು ತನ್ನ ಸಿಬ್ಬಂದಿಯನ್ನು ಸ್ಥಳಾಂತರಿಸಿದೆ.

ಬೆಲ್‌ಗೊರೊಡ್‌ನಲ್ಲಿ ರಷ್ಯಾ ಸೇನೆಯ ಶಸ್ತ್ರಾಸ್ತ್ರ ಸಂಗ್ರಹಾಗಾರದಲ್ಲಿ ಈ ವಾರದ ಆರಂಭದಲ್ಲಿ ಭಾರೀ ಸ್ಫೋಟಗಳು ಕೇಳಿಬಂದಿದ್ದವು. ಆದರೆ, ಸೇನಾ ಅಧಿಕಾರಿಗಳು ಸ್ಫೋಟಗಳಿಗೆ ಸ್ಪಷ್ಟ ವಿವರಣೆ ನೀಡಿರಲಿಲ್ಲ.

ಉಕ್ರೇನಿನಿಂದ ಕ್ಷಿಪಣಿ ದಾಳಿ ನಡೆದಿರುವುದಾಗಿ ಹಲವು ಮಾಧ್ಯಮಗಳು ವರದಿ ಮಾಡಿದ್ದವು.

ರಷ್ಯಾ ರಕ್ಷಣಾ ಸಚಿವಾಲಯ ಪ್ರತ್ಯೇಕ ಹೇಳಿಕೆಯಲ್ಲಿ, 'ಉಕ್ರೇನಿನಲ್ಲಿ ಐದು ಶಸ್ತ್ರಾಸ್ತ್ರ ಸಂಗ್ರಾಹಾಗಾರ, ಕ್ಷಿಪಣಿಗಳು ಮತ್ತು ಫಿರಂಗಿಗಳು ಸೇರಿ ಆರು ಸೇನಾ ಸೌಲಭ್ಯಗಳ ತಾಣಗಳನ್ನು ನಾಶಪಡಿಸಲಾಗಿದೆ' ಎಂದು ಹೇಳಿದೆ.

ನಾಗರಿಕರ ಸ್ಥಳಾಂತರ ಕಷ್ಟ: ರಷ್ಯಾದ ದಾಳಿಯಿಂದಾಗಿ ಸಂಕಷ್ಟಕ್ಕೆ ಸಿಲುಕಿದ ನಾಗರಿಕರನ್ನು ಯುದ್ಧಪೀಡಿತ ಸ್ಥಳಗಳಿಂದ ಸ್ಥಳಾಂತರಿಸಲು ಸಾಧ್ಯವಾಗಲಿದೆಯೇ ಎಂಬುದನ್ನು ಖಚಿತಪಡಿಸಲಾಗದು ಎಂದು ರೆಡ್ ಕ್ರಾಸ್ ಸಂಸ್ಥೆಯ ಅಂತರರಾಷ್ಟ್ರೀಯ ಸಮಿತಿ ಕಳವಳ ವ್ಯಕ್ತಪಡಿಸಿದೆ. ಅಲ್ಲದೆ ಮರಿಯುಪೊಲ್ ನಗರಕ್ಕೆ ನೆರವು ಕಲ್ಪಿಸುವುದನ್ನು ಖಾತ್ರಿಪಡಿಸಲಾಗದು ಎಂದಿದೆ.

37ನೇ ದಿನದ ಬೆಳವಣಿಗೆಗಳು

- ಮುತ್ತಿಗೆ ಹಾಕಿರುವ ಮರಿಯುಪೊಲ್ ಸೇರಿ ದೇಶದ ಪೂರ್ವ ಮತ್ತು ದಕ್ಷಿಣದಲ್ಲಿ ಭಾರೀ ದಾಳಿ ನಡೆಸಲು ರಷ್ಯಾ ತನ್ನ ಸೇನಾ ಪಡೆಗಳನ್ನು ಮರುಸಂಯೋಜಿಸಿ ಬಲಗೊಳಿಸುತ್ತಿದೆ. ಮರಿಯುಪೊಲ್‌ನಲ್ಲಿ ಸಿಲುಕಿರುವ ನಾಗರಿಕರನ್ನು ಸ್ಥಳಾಂತರಿಸಲು ಮತ್ತಷ್ಟು ಹೊಸ ಪ್ರಯತ್ನ ಮಾಡಲಾಗುವುದು– ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ
- ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಭಾರತವು ನ್ಯಾಯ ಮತ್ತು ತರ್ಕಬದ್ಧ ನೀತಿ ಹೊಂದಿದೆ. ಉಕ್ರೇನ್ ಬಿಕ್ಕಟ್ಟು ಪರಿಹರಿಸಲು ಭಾರತ ಸಶಕ್ತವಾಗಿದೆ. ಭಾರತ ಅಮೆರಿಕದ ಪ್ರಭಾವಕ್ಕೆ ಒಳಗಾಗುವುದಿಲ್ಲ – ರಷ್ಯಾ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಹೇಳಿಕೆ
- ಉಕ್ರೇನ್ ಮೇಲಿನ ರಷ್ಯಾ ಆಕ್ರಮಣದಲ್ಲಿ ರಷ್ಯಾ ಪಡೆಗಳಿಗೆ ನಾಯಕತ್ವ ಕೊರತೆ ಇದೆ. ಭೂ, ವಾಯು, ನೌಕಾ ಪಡೆಗಳ ನಡುವೆ ಸಮನ್ವಯವೂ ಇಲ್ಲ. ಜತೆಗೆ ಕಳಪೆ ಯುದ್ಧತಂತ್ರಗಳಿಂದ ಸುಮಾರು 7,000 ದಿಂದ 15,000 ಸೈನಿಕರನ್ನು ರಷ್ಯಾ ಕಳೆದುಕೊಂಡಿದೆ– ಅಮೆರಿಕ ರಕ್ಷಣಾ ಇಲಾಖೆ ಹಿರಿಯ ಅಧಿಕಾರಿಗಳ ವಿಶ್ಲೇಷಣೆ
- ಬ್ರಸೆಲ್ಸ್‌ನಲ್ಲಿ ನಡೆದ ಶೃಂಗಸಭೆಯಲ್ಲಿ ಉಕ್ರೇನ್ ಬಿಕ್ಕಟ್ಟು ಪ್ರಮುಖ ಚರ್ಚೆಯ ವಿಷಯವಾಗಿತ್ತು. ರಷ್ಯಾಗೆ ಸಹಾಯ ಮಾಡದಂತೆ ಐರೋಪ್ಯ ಒಕ್ಕೂಟವು ಚೀನಾ ಪ್ರಧಾನಿ ಲಿ ಕೆಕಿಯಾಂಗ್ ಅವರಿಗೆ ಮನವಿ ಮಾಡಿತು
- ಉಕ್ರೇನ್‌ನಲ್ಲಿ ಯುದ್ಧಕ್ಕೆ ಅಮೆರಿಕ ಪ್ರಚೋದನೆ ನೀಡುತ್ತಿದೆ. ಸೋವಿಯತ್ ಒಕ್ಕೂಟದ ವಿಭಜನೆಯ ಬಳಿಕ ನ್ಯಾಟೊ ಕೂಡ ವಿಸರ್ಜಿಸಬೇಕಿತ್ತು – ಚೀನಾದ ವಿದೇಶಾಂಗ ಇಲಾಖೆ ವಕ್ತಾರ ಝೂವೊ ಲಿಜಿಯಾನ್
- ಯುರೋಪ್‌ಗೆ ಅನಿಲ ಪೂರೈಕೆಯನ್ನು ರಷ್ಯಾ ಸ್ಥಗಿತಗೊಳಿಸುವುದಿಲ್ಲ ಎಂದು ಕ್ರೆಮ್ಲಿನ್ ವಕ್ತಾರ ಪೆಸ್ಕೊವ್ ಹೇಳಿದ್ದಾರೆ
- ಆಸ್ಟ್ರೇಲಿಯಾದ ಸಂಸತ್ ಉದ್ದೇಶಿಸಿ ಭಾವನಾತ್ಮಕ ಭಾಷಣ ಮಾಡಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ 'ರಷ್ಯಾ ನಿಜವಾಗಿಯೂ ಆಸ್ಟ್ರೇಲಿಯಾಕ್ಕೂ ಅಪಾಯಕಾರಿ' ಎಂದು ಎಚ್ಚರಿಸಿದ್ದಾರೆ
- 10 ಸಾವಿರ ಉಕ್ರೇನ್ ನಿರಾಶ್ರಿತರಿಗೆ ಆಶ್ರಯ ನೀಡಲು ಸಿದ್ಧತೆಯಲ್ಲಿರುವ ಅಮೆರಿಕವು, ಆಫ್ರಿಕಾದ ನಿರಾಶ್ರಿತರನ್ನು ಬಲವಂತವಾಗಿ ಗಡೀಪಾರು ಮಾಡಲು ಸಜ್ಜಾಗಿದೆ ಎಂದು ಆಫ್ರಿಕಾದ ನಿರಾಶ್ರಿತರು ಆರೋಪಿಸಿದ್ದಾರೆ
- ರಷ್ಯಾದ ಪಡೆಗಳು ಚೆರ್ನೊಬಿಲ್ ಅಣು ವಿದ್ಯುತ್ ಸ್ಥಾವರ ತೊರೆದಿದ್ದು, ಸ್ಥಾವರನ್ನು ಉಕ್ರೇನ್ ಸರ್ಕಾರ ನಿಯಂತ್ರಣಕ್ಕೆ ತೆಗೆದುಕೊಂಡಿದೆ. ರಷ್ಯಾಯೋಧರು ಹಾನಿ ಮಾಡಿದ್ದಾರೆಯೇ ಎನ್ನುವುದನ್ನು ವಿಶ್ವಸಂಸ್ಥೆಯ ಅಣು ಏಜೆನ್ಸಿ ಜೊತೆಗೂಡಿ ಪರಿಶೀಲಿಸಲಾಗುವುದು– ಉಕ್ರೇನ್ ವಿದೇಶಾಂಗ ಸಚಿವ ಡಿಮಿಟ್ರ ಕುಲೆಬಾ
- ರಷ್ಯಾದ ಪಡೆಗಳನ್ನು ಕೀವ್‌ನಿಂದ ಹಿಮ್ಮೆಟ್ಟಿಸಲಾಗುತ್ತಿದೆ. ಆದರೆ, ರಾಜಧಾನಿಗೆ ಸಮೀಪವಿರುವ ಕೆಲವು ಪ್ರದೇಶಗಳಲ್ಲಿ ಹೋರಾಟ ತೀವ್ರಗೊಂಡಿದೆ– ಉಕ್ರೇನ್ ಅಧಿಕಾರಿಗಳ ಹೇಳಿಕೆ

ಶಾಂತಿಗಾಗಿ ವರ್ಚುವಲ್ ಮಾತುಕತೆ ಪುನರಾರಂಭ

ಲುವಿವ್ (ಎಪಿ): ಸಂಘರ್ಷ ಶಮನಗೊಳಿಸಲು ರಷ್ಯಾ ಮತ್ತು ಉಕ್ರೇನ್ ನಿಯೋಗಗಳ ನಡುವೆ ಟರ್ಕಿಯ ಇಸ್ತಾಂಬುಲ್‌ನಲ್ಲಿ ನಡೆದ ಕೊನೆಯ ಸಭೆಯ ಮೂರು ದಿನಗಳ ನಂತರ ಶುಕ್ರವಾರ ಉಭಯ ರಾಷ್ಟ್ರಗಳ ನಡುವೆ ವರ್ಚುವಲ್ (ವಿಡಿಯೊ ಲಿಂಕ್) ಮೂಲಕ ಶಾಂತಿಮಾತುಕತೆಗಳು ಪುನರಾರಂಭಗೊಂಡಿವೆ.

ರಷ್ಯಾ ನಿಯೋಗದ ಮುಖ್ಯಸ್ಥ ವ್ಲಾಡಿಮಿರ್ ಮೆಡಿನ್‌ಸ್ಕಿ ಮಾತುಕತೆಯಲ್ಲಿ ತೊಡಗಿರುವ ನಿಯೋಗಗಳ ಚಿತ್ರವನ್ನು ಶುಕ್ರವಾರ ಬಿಡುಗಡೆ ಮಾಡಿದ್ದಾರೆ.

'ಮಾತುಕತೆಗಳು ಪುನರಾರಂಭಗೊಂಡಿವೆ' ಎಂದು ಉಕ್ರೇನ್ ಅಧ್ಯಕ್ಷರ ಕಚೇರಿಯೂ ದೃಢಪಡಿಸಿದೆ.

'ಕ್ರಿಮಿಯಾ ಮತ್ತು ಡಾನ್‌ಬಾಸ್‌ನಲ್ಲಿ ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಮೆಡಿನ್‌ಸ್ಕಿ ಮಾತುಕತೆ ವೇಳೆ ಸ್ಪಷ್ಟಪಡಿಸಿದರು.

ರಷ್ಯಾ 2014ರಲ್ಲಿ ದಕ್ಷಿಣ ಉಕ್ರೇನ್‌ನಲ್ಲಿನ ಕ್ರಿಮಿಯಾ ಪೆನಿನ್ಸುಲಾವನ್ನು ಸ್ವಾಧೀನಪಡಿಸಿಕೊಂಡಿತು. ರಷ್ಯನ್ ಭಾಷಿಗರು ಹೆಚ್ಚಿರುವ ಡಾನ್‌ಬಾಸ್ ಕೈಗಾರಿಕಾ ಪ್ರದೇಶವಾಗಿದ್ದು, ರಷ್ಯಾ ಬೆಂಬಲಿತ ಪ್ರತ್ಯೇಕತಾವಾದಿಗಳು 2014ರಿಂದ ಡಾನ್‌ಬಾಸ್‌ನ ಸ್ವಾತಂತ್ರ್ಯಕ್ಕಾಗಿ ಉಕ್ರೇನ್ ಸೇನಾ ಪಡೆಗಳೊಂದಿಗೆ ಹೋರಾಟ ನಡೆಸುತ್ತಲೇ ಇದ್ದಾರೆ.

ಯುದ್ಧ ಅಪರಾಧ ತನಿಖೆಗೆ ಒತ್ತಾಯ

ಕೀವ್(ಎಎಫ್‌ಪಿ): ರಷ್ಯಾದ ಯುದ್ಧ ಕೈದಿಗಳ ಕಾಲುಗಳಿಗೆ ಉಕ್ರೇನ್ ಯೋಧರು ಗುಂಡು ಹಾರಿಸಿರುವ ವಿಡಿಯೊಗಳು ಬಹಿರಂಗಗೊಂಡಿರುವ ಬೆನ್ನಲ್ಲೇ ಯುದ್ಧ ಅಪರಾಧಗಳು ನಡೆದಿರುವ ಸಾಧ್ಯತೆಗಳ ಬಗ್ಗೆ ತನಿಖೆ ನಡೆಸುವಂತೆ ಉಕ್ರೇನ್ ಅಧಿಕಾರಿಗಳಿಗೆ ಮಾನವ ಹಕ್ಕುಗಳ ಕಣ್ಗಾವಲು ಸಂಸ್ಥೆ ಸೂಚಿಸಿದೆ.

ಸೆರೆ ಸಿಕ್ಕ ಯೋಧರ ಮೇಲೆ ಹಲ್ಲೆ ನಡೆಸಿ, ಕಾಲುಗಳಿಗೆ ಗುಂಡು ಹಾರಿಸಿರುವುದು ಖಚಿತಪಟ್ಟರೆ, ಅದು ಯುದ್ಧಾಪರಾಧ ಎನಿಸಲಿದೆ. ಇದು ಅಂತರರಾಷ್ಟ್ರೀಯ ಮಾನವೀಯ ಹಕ್ಕುಗಳ ಗಂಭೀರ ಉಲ್ಲಂಘನೆಯೂ ಆಗುತ್ತದೆ. ಇದರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮಾನವ ಹಕ್ಕುಗಳ ಕಣ್ಗಾವಲು ಸಂಸ್ಥೆ ಹೇಳಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಉಕ್ರೇನ್ ಅಧ್ಯಕ್ಷರ ಸಲಹೆಗಾರ ಒಲೆಕ್ಸಿ ಅರೆಸ್ಟೊವಿಚ್, 'ಇಂಥ ಘಟನೆಗಳು ನಡೆದಿದ್ದರೆ ಅದು ಯುದ್ಧ ಅಪರಾಧವೇ. ಇಂತಹ ಕೃತ್ಯಗಳಲ್ಲಿ ತೊಡಗಿದವರು ಶಿಕ್ಷೆಗೆ ಗುರಿಯಾಗಲಿದ್ದಾರೆ. ಯುದ್ಧ ಕೈದಿಗಳನ್ನು ನಾವು ಜಿನೀವಾ ಒಪ್ಪಂದದಂತೆ ನಡೆಸಿಕೊಳ್ಳಬೇಕು' ಎಂದು ಹೇಳಿದ್ದಾರೆ.

ವಿಡಿಯೊದ ನೈಜತೆ ದೃಢೀಕರಿಸಲು ಸಾಧ್ಯವಾಗದಿದ್ದರೂ, ಉಕ್ರೇನ್ ಪಡೆಗಳು ಹಾರ್ಕಿವ್ ನಗರದ ಹೊರವಲಯದ ಮಾಲಾ ರೋಗನ್ ಗ್ರಾಮದಲ್ಲಿ ಸೆರೆ ಸಿಕ್ಕ ಸೈನಿಕರ ಮೇಲೆ ಯುದ್ಧಾಪರಾಧ ಎಸಗಿರುವುದು ಕಂಡುಬಂದಿದೆ ಎಂದು ಸುದ್ದಿಸಂಸ್ಥೆ ಹೇಳಿದೆ.

ಎಫ್‌ಐಎಚ್ ಪ್ರೊ ಲೀಗ್ ಹಾಕಿ: ಇಂಗ್ಲೆಂಡ್ ಎದುರಾಳಿ

ಅಗ್ರಸ್ಥಾನದ ಮೇಲೆ ಭಾರತದ ಕಣ್ಣು

ಅಮಿತ್ ರೋಹಿದಾಸ್– ಎಎಫ್‌ಪಿ ಚಿತ್ರ

ಭುವನೇಶ್ವರ (ಪಿಟಿಐ): ಅಗ್ರಸ್ಥಾನದ ಮೇಲೆ ಕಣ್ಣಿಟ್ಟಿರುವ ಭಾರತ ಹಾಕಿ ತಂಡವು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ ಪಂದ್ಯದಲ್ಲಿ ಶನಿವಾರ ಇಂಗ್ಲೆಂಡ್ ಸವಾಲು ಎದುರಿಸಲಿದೆ.

ಪ್ರವಾಸಿ ತಂಡದ ಎದುರು ಎರಡು ಪಂದ್ಯಗಳನ್ನು ಆಡಲಿದ್ದು, ಎರಡನೇ ಹಣಾಹಣಿಯು ಭಾನುವಾರ ನಡೆಯಲಿದೆ.

ಟೋಕಿಯೊ ಒಲಿಂಪಿಕ್ಸ್ ಕಂಚು ವಿಜೇತ ಭಾರತ ತಂಡವು ಸದ್ಯ ಲೀಗ್‌ನ ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ತಂಡದ ಬಳಿ 16 ಪಾಯಿಂಟ್‌ಗಳಿವೆ. ಜರ್ಮನಿ (17 ಪಾಯಿಂಟ್ಸ್) ಮೊದಲ ಸ್ಥಾನದಲ್ಲಿದೆ.

ಅಮಿತ್ ರೋಹಿದಾಸ್ ಅವರು ಭಾರತ ತಂಡದ ನಾಯಕತ್ವ ವಹಿಸಿದ್ದಾರೆ.

ಪ್ರತಿ ಪಂದ್ಯದಲ್ಲೂ ಭಾರತದ ಬ್ಯಾಕ್‌ಲೈನ್ ವಿಭಾಗದ ಮೇಲೆ ಒತ್ತಡ ಬೀಳುತ್ತಿರುವುದರಿಂದ ಡಿಫೆನ್ಸ್ ವಿಭಾಗದ ಕುರಿತು ಕಳವಳ ಹೆಚ್ಚಾಗಿದೆ.

ತಂಡದ ಫಾರ್ವರ್ಡ್ ವಿಭಾಗವು ಪರಿಣಾಮಕಾರಿಯಾಗಿದೆ. ಎಂಟು ಪಂದ್ಯಗಳಿಂದ 42 ಗೋಲುಗಳನ್ನು ಗಳಿಸಿದ್ದು ಇದಕ್ಕೆ ಸಾಕ್ಷಿ. ಮನದೀಪ್ ಸಿಂಗ್ ಈ ವಿಭಾಗದ ಶಕ್ತಿಯಾಗಿದ್ದಾರೆ. ಮನ್‌ಪ್ರೀತ್ ಸಿಂಗ್ ನೇತೃತ್ವದ ಮಿಡ್‌ಫೀಲ್ಡಿಂಗ್‌ನಲ್ಲಿ ಹಾರ್ದಿಕ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್, ನೀಲಕಂಠ ಶರ್ಮಾ ಮತ್ತು ಸುಮಿತ್ ಇದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತ 3–1ರಿಂದ ಇಂಗ್ಲೆಂಡ್ ತಂಡವನ್ನು ಮಣಿಸಿತ್ತು. ಇಂಗ್ಲೆಂಡ್ ತಂಡವು ಲೀಗ್‌ನ ಪಾಯಿಂಟ್ಸ್ ಪಟ್ಟಿಯಲ್ಲಿ ಸದ್ಯ ಏಳನೇ ಸ್ಥಾನದಲ್ಲಿದೆ. ಹೊಸ ನಾಯಕ ಟಾಮ್ ಸೊರ್ಸ್‌ಬೈ ನೇತೃತ್ವದಲ್ಲಿ ಆತಿಥೇಯ ತಂಡದ ಸವಾಲಿಗೆ ಸಜ್ಜಾಗಿದೆ.

ಎಫ್‌ಐಎಚ್ ವಿಶ್ವ ರ‍್ಯಾಂಕಿಂಗ್

4	ಭಾರತ	7	ಇಂಗ್ಲೆಂಡ್

ಪ್ರೊ ಲೀಗ್ ಪಾಯಿಂಟ್ಸ್ ಪಟ್ಟಿಯಲ್ಲಿ ಸ್ಥಾನ

2	ಭಾರತ	7	ಇಂಗ್ಲೆಂಡ್

ಪಂದ್ಯ ಆರಂಭ: ರಾತ್ರಿ 7.30

ಮಿಯಾಮಿ: ಫೈನಲ್‌ಗೆ ನವೊಮಿ

ನೊವೊಮಿ ಒಸಾಕ –ಎಎಫ್‌ಪಿ ಚಿತ್ರ

ಮಿಯಾಮಿ (ಎಎಫ್‌ಪಿ): ಜಯದ ಸಂಭ್ರಮದಲ್ಲಿ ಅಂಗಣದಲ್ಲೇ ಆನಂದ ಬಾಷ್ಪ ಸುರಿಸಿದ ಜಪಾನ್‌ನ ನವೊಮಿ ಒಸಾಕ, ಮಿಯಾಮಿ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಫೈನಲ್ ಪ್ರವೇಶಿಸಿದರು.

ಗುರುವಾರ ತಡರಾತ್ರಿ ನಡೆದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಒಲಿಂಪಿಕ್ ಚಾಂಪಿಯನ್ ಬೆಲಿಂದಾ ಬೆನ್ಸಿಕ್ ವಿರುದ್ಧ ನವೊಮಿ 4-6, 6-3, 6-4ರಲ್ಲಿ ಜಯ ಗಳಿಸಿ ಮೊದಲ ಬಾರಿ ಮಿಯಾಮಿ ಓಪನ್ ಟೂರ್ನಿಯ ಪ್ರಶಸ್ತಿ ಹಂತ ತಲುಪಿದರು.

ಅಂತಿಮ ಹಣಾಹಣಿಯಲ್ಲಿ ಅವರು ಪೋಲೆಂಡ್‌ನ ಇಗಾ ಸ್ವಾಟೆಕ್ ವಿರುದ್ಧ ಸೆಣಸುವರು. ಎರಡನೇ ಶ್ರೇಯಾಂಕಿತ ಆಟಗಾರ್ತಿ ಸ್ವಾಟೆಕ್ 6-2 7-5ರಲ್ಲಿ ಅಮೆರಿಕದ ಜೆಸಿಕಾ ಪೆಗುಲ ಅವರನ್ನು ಸೋಲಿಸಿದರು. ಇದು ಈ ಬಾರಿ ಅವರ ಸತತ 16ನೇ ಗೆಲುವು ಆಗಿದೆ.

21 ವರ್ಷದ ಸ್ವಾಟೆಕ್ ಅವರು 2016ರ ನಂತರ ಇಂಡಿಯನ್ ವೆಲ್ಸ್ ಮತ್ತು ಮಿಯಾಮಿ ಓಪನ್‌ನಲ್ಲಿ ಸತತ ಎರಡು ಬಾರಿ ಫೈನಲ್ ಪ್ರವೇಶಿಸಿದ ಮೊದಲ ಆಟಗಾರ್ತಿ ಎನಿಸಿಕೊಂಡರು.

ಫಿಫಾ ವಿಶ್ವಕಪ್: ಚೆಂಡು ಬಿಡುಗಡೆ

ನವದೆಹಲಿ (ಪಿಟಿಐ): ಕ್ರೀಡಾ ಪೋಷಾಕು ಗಳ ಸಂಸ್ಥೆ ಅಡಿಡಾಸ್ ಈ ಬಾರಿಯ ವಿಶ್ವಕಪ್ ಫುಟ್ ಬಾಲ್ ಟೂರ್ನಿಯ ಅಧಿಕೃತ ಚೆಂಡನ್ನು ಶುಕ್ರವಾರ ಬಿಡುಗಡೆ ಮಾಡಿದೆ. ಕತಾರ್‌ನಲ್ಲಿ ನಡೆಯಲಿರುವ ಟೂರ್ನಿಯ ಚೆಂಡಿಗೆ ಅಲ್ ರಿಹ್ಲಾ ಎಂದು ಹೆಸರಿಡಲಾಗಿದೆ.

ಫಿಫಾ ವಿಶ್ವಕಪ್ ಟೂರ್ನಿಗಾಗಿ ಅಡಿಡಾಸ್ ಸತತ 14ನೇ ಬಾರಿ ಚೆಂಡು ಸಿದ್ಧಗೊಳಿಸಿದೆ. ಈ ಬಾರಿ ಚೆಂಡು ತಯಾರಿಯಲ್ಲಿ ಪರಿಸರ ರಕ್ಷಣೆಗೆ ಒತ್ತು ನೀಡಲಾಗಿದೆ. ಜಲಾಧಾರಿತ ಶಾಯಿ ಮತ್ತು ಅಂಟು ಮಾತ್ರ ಬಳಸಿ ಈ ಚೆಂಡು ತಯಾರಿಸಲಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,465
ಇಂದಿನ ಅಂತ್ಯ	17,670
▲	205
ದಿನದ ಗರಿಷ್ಠ	17,703

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹400
12 ಮೊಟ್ಟೆಗೆ	₹54
ಮೈಸೂರು	
100 ಮೊಟ್ಟೆಗೆ	₹400

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1600)
ಸೋಯಾ (ರಿಫೈನ್ಡ್)	₹1462 (1465)
ಸೂರ್ಯಕಾಂತಿ (ರಿಫೈನ್ಡ್)	₹1700 (1700)
ಪಾಮೋಲಿನ್	₹1435 (1435)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹10000-15000

ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಿಸುವ ಉದ್ದೇಶ

ದಿನಕ್ಕೆ 10 ಲಕ್ಷ ಬ್ಯಾರಲ್ ಮಾರುಕಟ್ಟೆಗೆ: ಅಮೆರಿಕ



ಮುಖ್ಯಾಂಶಗಳು

- ರಷ್ಯಾ–ಉಕ್ರೇನ್ ಸಂಘರ್ಷದಿಂದ ತೈಲ ದರ ಏರಿಕೆ
- ಅಮೆರಿಕದಲ್ಲಿ ಇದೆ 56.8 ಕೋಟಿ ಬ್ಯಾರಲ್ ತೈಲ ಸಂಗ್ರಹ

ವಾಷಿಂಗ್ಟನ್ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರ ಏರಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ಅಮೆರಿಕವು ತನ್ನ ಸಂಗ್ರಹಾಗಾರದಿಂದ ಮುಂದಿನ ಆರು ತಿಂಗಳುಗಳವರೆಗೆ ಪ್ರತಿ ದಿನವೂ 10 ಲಕ್ಷ ಬ್ಯಾರಲ್ ಕಚ್ಚಾ ತೈಲವನ್ನು ಬಿಡುಗಡೆ ಮಾಡಲಿದೆ.

ರಷ್ಯಾ ದೇಶವು ಉಕ್ರೇನ್ ಮೇಲೆ ಸಮರ ಆರಂಭಿಸಿದ ಬಳಿಕ ಕಚ್ಚಾ ತೈಲ ದರದಲ್ಲಿ ಭಾರಿ ಏರಿಕೆ ಕಂಡು, ಅನಿಲ ದರಗಳು ಸಹ ಹೆಚ್ಚಾದವು. ಆ ಬಳಿಕ ಅಮೆರಿಕವು ತುರ್ತು ಬಳಕೆಗೆ ಸಂಗ್ರಹಿಸಿ ಇಟ್ಟುಕೊಂಡಿರುವ ತೈಲವನ್ನು ಮಾರುಕಟ್ಟೆಗೆ ಬಿಡುವ ನಿರ್ಧಾರ ತೆಗೆದುಕೊಂಡಿತು.

ಮುಂದಿನ ಆರು ತಿಂಗಳುಗಳವರೆಗೆ ಪ್ರತಿ ದಿನವೂ 10 ಲಕ್ಷ ಬ್ಯಾರಲ್‌ಗಳಷ್ಟು ಕಚ್ಚಾ ತೈಲವನ್ನು ಸಂಗ್ರಹಾಗಾರದಿಂದ ಬಿಡುಗಡೆ ಮಾಡಲು ಒಪ್ಪಿಗೆ ನೀಡುತ್ತಿದ್ದೇನೆ' ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಗುರುವಾರ ಹೇಳಿದ್ದಾರೆ.

ಸಂಗ್ರಹಾಗಾರದಿಂದ ಈ ಪ್ರಮಾಣದಲ್ಲಿ ತೈಲ ಬಿಡುಗಡೆ ಮಾಡುತ್ತಿರುವುದು ಅಮೆರಿಕದ ಇತಿಹಾಸದಲ್ಲಿಯೇ ಇದೇ ಮೊದಲ ಬಾರಿಯಾಗಿದೆ ಎಂದೂ ಅವರು ತಿಳಿಸಿದ್ದಾರೆ.

ಸಂಗ್ರಹಾಗಾರಗಳಲ್ಲಿ 56.8 ಕೋಟಿ ಬ್ಯಾರಲ್‌ಗಳಷ್ಟು ತೈಲ ಸಂಗ್ರಹ ಇದೆ ಎಂದು ಅಮೆರಿಕದ ರಾಷ್ಟ್ರೀಯ ಆರ್ಥಿಕ ಸಮಿತಿ ನಿರ್ದೇಶಕ ಬ್ರಿಯಾನ್ ಡೀಸ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಸಂಗ್ರಹಾಗಾರದ ತೈಲ ಬಿಡುಗಡೆ ಮಾಡುವ ಕುರಿತು ಭಾರತವನ್ನೂ ಒಳಗೊಂಡು ಹಲವು ದೇಶಗಳೊಂದಿಗೆ ಮಾತುಕತೆ ನಡೆಸಲಾಗಿದೆ ಎಂದು ಅವರು ಹೇಳಿದ್ದಾರೆ.

'ಕಚ್ಚಾ ತೈಲ ಬೆಲೆ ತಗ್ಗಿಸಲು, ಮಾರುಕಟ್ಟೆಯಲ್ಲಿನ ಅಸ್ಥಿರತೆಯನ್ನು ನಿವಾರಿಸಲು ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರ ಸಿದ್ಧವಿದೆ' ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ರಾಜ್ಯ ಸಚಿವ ರಾಮೇಶ್ವರ ತೆಲಿ ಅವರು ಗುರುವಾರವಷ್ಟೇ ಲೋಕಸಭೆಗೆ ತಿಳಿಸಿದ್ದಾರೆ. 2021ರ ನವೆಂಬರ್‌ನಲ್ಲಿ ಭಾರತವು ತನ್ನ ಸಂಗ್ರಹಾಗಾರದಲ್ಲಿನ 50 ಲಕ್ಷ ಬ್ಯಾರೆಲ್ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ಒಪ್ಪಿತ್ತು.

ಇಂಧನ ಬೇಡಿಕೆ ಹೆಚ್ಚಳ

ನವದೆಹಲಿ (ಪಿಟಿಐ): ಆರ್ಥಿಕತೆಯಲ್ಲಿ ಚೇತರಿಕೆ ಹಾಗೂ ಕೋವಿಡ್ ಸಂಬಂಧಿತ ನಿರ್ಬಂಧಗಳನ್ನು ಹಿಂದಕ್ಕೆ ಪಡೆಯುತ್ತಿರುವುದರಿಂದ ದೇಶದ ಇಂಧನ ಬೇಡಿಕೆಯು ಮಾರ್ಚ್‌ನಲ್ಲಿ ಕೋವಿಡ್‌ಗೂ ಮುಂಚಿನ ಮಟ್ಟವನ್ನು ತಲುಪಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ — ಸಕಲೇಶಪುರ

ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	510

ರಬ್ಬರ್ ಧಾರಣೆ — ಎನ್.ಆರ್.ಪುರ

ಆರ್‌ಎಸ್‌ಎಸ್‌4	172
ಆರ್‌ಎಸ್‌ಎಸ್‌5	166
ಗುಡ್ ಲಾಟ್	162

ರಾಮನಗರ ರೇಷ್ಮೆಗೂಡು

ಮಿಶ್ರತಳಿ	256-675
ದ್ವಿತಳಿ	300-790

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15750	15600	15800	221.85 ಸೆಂಟ್ಸ್
ಎಸಿ	8260	7900	8400	
ಆರ್‌ಪಿ	9000	8900	9150	ಲಂಡನ್
ಆರ್‌ಸಿ	4150	3950	4100	2152 ಡಾಲರ್ಸ್

ಸುದ್ದಿ 2 ನಿಮಿಷ

ಬಿಎಸ್‌ಇ ಸೆನ್ಸೆಕ್ಸ್ 708 ಅಂಶ ಜಿಗಿತ



ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು 2022–23ನೇ ಹಣಕಾಸು ವರ್ಷವನ್ನು ಸಕಾರಾತ್ಮಕವಾಗಿ ಆರಂಭಿಸಿದವು. ವಿದೇಶಿ ಬಂಡವಾಳ ಒಳಹರಿವು ಮತ್ತು ಆರ್ಥಿಕ ಚೇತರಿಕೆಯನ್ನು ಸೂಚಿಸುವ ಅಂಶಗಳು ಸೂಚ್ಯಂಕಗಳ ಏರಿಕೆಗೆ ಬೆಂಬಲಿಸಿದವು ಎಂದು ವರ್ತಕರು ಹೇಳಿದ್ದಾರೆ.

2022–23ನೇ ಹಣಕಾಸು ವರ್ಷದ ಮೊದಲ ದಿನ ಶುಕ್ರವಾರ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 708 ಅಂಶ ಜಿಗಿತ ಕಂಡು 59,276 ಅಂಶಗಳಿಗೆ ಏರಿಕೆ ಕಂಡಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 205 ಅಂಶ ಹೆಚ್ಚಾಗಿ 17,670 ಅಂಶಗಳಿಗೆ ತಲುಪಿತು.

ವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 1914 ಅಂಶ ಏರಿಕೆ ಕಂಡಿವೆ. ಜಾಗತಿಕ ವಿದ್ಯಮಾನಗಳ ಪ್ರಭಾವಕ್ಕೆ ಒಳಗಾಗಿ ವಹಿವಾಟು ಮಂದಗತಿಯಲ್ಲಿ ಆರಂಭ ಆಯಿತು. ಬಳಿಕ ಬ್ಯಾಂಕಿಂಗ್, ವಿದ್ಯುತ್ ಮತ್ತು ರಿಯಲ್ ಎಸ್ಟೇಟ್ ವಲಯಗಳಲ್ಲಿ ಖರೀದಿ ಚಟುವಟಿಕೆ ಹೆಚ್ಚಾಗಿದ್ದರಿಂದ ವಹಿವಾಟು ಚೇತರಿಕೆ ಕಂಡಿತು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಹೀರೊ ಮೊಟೊಕಾರ್ಪ್ ಕಂಪನಿಯ ಷೇರು ಮೌಲ್ಯ ಬಿಎಸ್‌ಇನಲ್ಲಿ ಶೇ 2.39ರಷ್ಟು ಇಳಿಕೆ ಕಂಡು, ಪ್ರತಿ ಷೇರಿನ ಬೆಲೆ ₹ 2,241.80ಕ್ಕೆ ತಲುಪಿದೆ.

ಐ.ಟಿ. ದಾಳಿ ನಡೆದ ಬಳಿಕ ಕಂಪನಿಯಲ್ಲಿ ಅಕ್ರಮ ವಹಿವಾಟು ನಡೆದಿರುವುದು ತಿಳಿದುಬಂದಿದೆ. ಇದು, ಕಂಪನಿಯ ಷೇರುಗಳು ಮೌಲ್ಯ ಇಳಿಕೆಗೆ ಕಾರಣವಾಗಿದೆ.

ಬಿಇಎಲ್: ದಾಖಲೆಯ ವಹಿವಾಟು

ಬೆಂಗಳೂರು: ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) 2021–22ನೇ ಹಣಕಾಸು ವರ್ಷದಲ್ಲಿ ₹ 15 ಸಾವಿರ ಕೋಟಿ ಮೊತ್ತದ ವಹಿವಾಟು ನಡೆಸಿದೆ. ಈ ಮಾಹಿತಿಯು ತಾತ್ಕಾಲಿಕವಾಗಿದ್ದು, ಲೆಕ್ಕಪತ್ರ ಪರಿಶೋಧನೆಗೆ ಒಳಗಾಗಿಲ್ಲ ಎಂದು ಕಂಪನಿಯು ತಿಳಿಸಿದೆ.

ಕೋವಿಡ್ ಸಾಂಕ್ರಾಮಿಕ ಮತ್ತು ಸೆಮಿಕಂಡಕ್ಟರ್ ಕೊರತೆಯಂತಹ ಸಮಸ್ಯೆಗಳ ನಡುವೆಯೂ ಉತ್ತಮ ವಹಿವಾಟು ಸಾಧ್ಯವಾಗಿದೆ ಎಂದು ಹೇಳಿದೆ.

2020–21ನೇ ಹಣಕಾಸು ವರ್ಷದಲ್ಲಿ ಕಂಪನಿಯ ಒಟ್ಟಾರೆ ವಹಿವಾಟು ಮೊತ್ತವು ₹ 13,818 ಕೋಟಿಗಳಷ್ಟು ಇತ್ತು.

ಆತ್ಮನಿರ್ಭರ ಭಾರತ ಗುರಿ ಸಾಧನೆಯು ಮಹತ್ವವನ್ನು ಅರಿತಿದ್ದೇವೆ. ಭಾರತದಲ್ಲಿಯೇ ತಯಾರಿಸಿ, ಆಮದು ಪರ್ಯಾಯದಂತಹ ಉತ್ತೇಜನ ಕ್ರಮಗಳ ಮೂಲಕ ಸ್ವಾವಲಂಬನೆ ಸಾಧಿಸುವತ್ತ ಕಂಪನಿಯು ಹೆಚ್ಚಿನ ಶ್ರಮವಹಿಸಲಿದೆ ಎಂದು ಬಿಇಎಲ್ ಅಧ್ಯಕ್ಷೆ ಆನಂದಿ ರಾಮಲಿಂಗಮ್ ಹೇಳಿದರು.

ಪ್ರತಿಭಟನೆ 'ಭಯೋತ್ಪಾದಕ ಕೃತ್ಯ': ಸರ್ಕಾರದ ಟೀಕೆ

ಕೊಲಂಬೊ (ಪಿಟಿಐ): ಅಧ್ಯಕ್ಷ ಗೊಟಬಯಾ ರಾಜಪಕ್ಸ ಅವರ ರಾಜೀನಾಮೆಗೆ ಒತ್ತಾಯಿಸಿ, ಅವರ ನಿವಾಸದ ಮುಂದೆ ಜನರು ನಡೆಸಿದ ಪ್ರತಿಭಟನೆಯನ್ನು 'ಭಯೋತ್ಪಾದಕ ಕೃತ್ಯ' ಎಂದು ಸರ್ಕಾರ ಶುಕ್ರವಾರ ಟೀಕಿಸಿದೆ.

ಈ ಪ್ರತಿಭಟನೆ ಹಿಂದೆ ಪ್ರತಿಪಕ್ಷಗಳೊಂದಿಗೆ ಸಂಪರ್ಕ ಹೊಂದಿರುವ 'ಉಗ್ರಗಾಮಿಗಳ' ಕೈವಾಡ ಇದೆ ಎಂದೂ ಸರ್ಕಾರ ಆರೋಪಿಸಿದೆ.

ತೀವ್ರ ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿರುವ ಶ್ರೀಲಂಕಾದ ಜನರು, ದೇಶದ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ಅಧ್ಯಕ್ಷ ಗೊಟಬಯಾ ರಾಜಪಕ್ಸ ಅವರ ನಿವಾಸದ ಮುಂದೆ ಗುರುವಾರ ರಾತ್ರಿ ಭಾರಿ ಪ್ರತಿಭಟನೆ ನಡೆಸಿದ್ದರು.

ಪ್ರತಿಭಟನೆ ವೇಳೆ ಕೆಲ ಉದ್ರಿಕ್ತರು ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ. ಈ ವೇಳೆ ಪ್ರತಿಭಟನಕಾರರನ್ನು ನಿಯಂತ್ರಿಸಲು ಪೊಲೀಸರು ಲಾಠಿ ಪ್ರಹಾರ, ಅಶ್ರುವಾಯು ಹಾಗೂ ಜಲಫಿರಂಗಿ ಬಳಸಿದ್ದು, ಹಲವರು ಗಾಯಗೊಂಡಿದ್ದಾರೆ. ಅಲ್ಲದೆ ಹಲವು ಮಂದಿಯನ್ನು ಬಂಧಿಸಲಾಗಿದ್ದು, ಕೊಲಂಬೊ ನಗರದ ಬಹುತೇಕ ಭಾಗಗಳಲ್ಲಿ ಕರ್ಫ್ಯೂ ಹೇರಲಾಗಿತ್ತು. ಆ ಬಳಿಕ ಅದನ್ನು ತೆರವು ಮಾಡಲಾಗಿದೆ.

ಭಾರಿ ಬಿಗಿ ಭದ್ರತೆ: ದೇಶದ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಭಾರೀ ಆಕ್ರೋಶಗೊಂಡ ಪ್ರತಿಭಟನಕಾರರು ಅಧ್ಯಕ್ಷರ ನಿವಾಸಕ್ಕೆ ಮುತ್ತಿಗೆ ಹಾಕಿದ ಬೆನ್ನಲ್ಲೇ, ಶ್ರೀಲಂಕಾದಾದ್ಯಂತ ಭಾರಿ ಬಿಗಿ ಭದ್ರತೆ ಕೈಗೊಳ್ಳಲಾಗಿದೆ.

ನನ್ನ ಜೀವಕ್ಕೆ ಬೆದರಿಕೆ ಇದೆ: ಇಮ್ರಾನ್ ಖಾನ್

ಇಸ್ಲಾಮಾಬಾದ್ (ಪಿಟಿಐ): 'ನನ್ನ ಜೀವಕ್ಕೆ ಅಪಾಯ ಇದೆ. ಈ ಕುರಿತು ನನಗೆ ವಿಶ್ವಾಸಾರ್ಹ ಮಾಹಿತಿ ಇದೆ. ಇದಾವುದಕ್ಕೂ ನಾನು ಅಂಜುವುದಿಲ್ಲ. ಸ್ವತಂತ್ರ ಹಾಗೂ ಪ್ರಜಾತಾಂತ್ರಿಕ ಪಾಕಿಸ್ತಾನಕ್ಕಾಗಿ ನನ್ನ ಹೋರಾಟ ಮುಂದುವರಿಸುವೆ' ಎಂದು ಪ್ರಧಾನಿ ಇಮ್ರಾನ್ ಖಾನ್ ಶುಕ್ರವಾರ ಹೇಳಿದ್ದಾರೆ.

'ಎಆರ್‌ವೈ ನ್ಯೂಸ್' ಚಾನೆಲ್‌ಗೆ ಅವರು ಸಂದರ್ಶನ ನೀಡಿದ್ದಾರೆ.

'ಅವಿಶ್ವಾಸ ನಿರ್ಣಯ ಎದುರಿಸಬೇಕು ಇಲ್ಲವೇ ರಾಜೀನಾಮೆ ನೀಡಬೇಕು ಅಥವಾ ಚುನಾವಣೆ ಘೋಷಿಸಬೇಕು ಎಂಬ ಮೂರು ಆಯ್ಕೆಗಳನ್ನು ದೇಶದ ಮಿಲಿಟರಿ ನನಗೆ ನೀಡಿದೆ' ಎಂದೂ ಹೇಳಿದ್ದಾರೆ.

'ನನ್ನ ಜೀವಕ್ಕೆ ಬೆದರಿಕೆ ಮಾತ್ರ ಇಲ್ಲ. ವಿದೇಶಗಳ ಕೈಗೊಂಬೆಯಂತೆ ವರ್ತಿಸುತ್ತಿರುವ ವಿರೋಧ ಪಕ್ಷಗಳ ನಾಯಕರು ಕೂಡ ನನ್ನ ತೇಜೋವಧೆ ಮಾಡುತ್ತಿದ್ದಾರೆ' ಎಂದು ಕಿಡಿಕಾರಿದರು.

ಆಕ್ರೋಶ: 'ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಭೇಟಿ ಮಾಡಲು ರಷ್ಯಾಕ್ಕೆ ಭೇಟಿ ನೀಡಿದ್ದೆ. ಈ ಕಾರಣಕ್ಕೆ, ಭಾರತವನ್ನು ಬೆಂಬಲಿಸುವ 'ಶಕ್ತಿಶಾಲಿ ರಾಷ್ಟ್ರ'ವು ಪಾಕಿಸ್ತಾನದ ಮೇಲೆ ಕೋಪಗೊಂಡಿದೆ' ಎಂದು ಹೇಳುವ ಮೂಲಕ ಇಮ್ರಾನ್ ಅವರು ಅಮೆರಿಕ ವಿರುದ್ಧ ಪರೋಕ್ಷವಾಗಿ ಹರಿಹಾಯ್ದರು.

ಇದಕ್ಕೂ ಮುನ್ನ ಮಾತನಾಡಿದ ಅವರು, 'ನಾನು ರಷ್ಯಾಕ್ಕೆ ಭೇಟಿ ನೀಡಿದ್ದನ್ನು ವಿರೋಧಿಸುವ ಪ್ರಬಲ ದೇಶವು, ರಷ್ಯಾದಿಂದ ತೈಲವನ್ನು ಆಮದು ಮಾಡಿಕೊಳ್ಳುತ್ತಿರುವ ತನ್ನ ಮಿತ್ರರಾಷ್ಟ್ರ ಭಾರತವನ್ನು ಬೆಂಬಲಿಸುತ್ತಿದೆ' ಎಂದು ಅಮೆರಿಕ ವಿರುದ್ಧ ಕಿಡಿಕಾರಿದರು.

ಸಮನ್ಸ್: 'ದೇಶದ ಆಂತರಿಕ ವಿಷಯಗಳಲ್ಲಿ ಅಮೆರಿಕ ಹಸ್ತಕ್ಷೇಪ ಮಾಡುತ್ತಿದೆ' ಎಂದು ಆರೋಪಿಸಿ, ಅಮೆರಿಕದ ಹಿರಿಯ ರಾಜತಾಂತ್ರಿಕ ಅಧಿಕಾರಿಯೊಬ್ಬರಿಗೆ ಪಾಕಿಸ್ತಾನ ಸಮನ್ಸ್ ನೀಡಿ, ಪ್ರತಿಭಟನೆ ದಾಖಲಿಸಿತು ಎಂದು ಮಾಧ್ಯಮಗಳು ಶುಕ್ರವಾರ ವರದಿ ಮಾಡಿವೆ.

ಮುಂಬೈ ಧಾರಣೆ

ಶೇಂಗಾ 1-4-2022

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10600-10650
ದಪ್ಪ ಗುಜರಾತ್(ಹೊಸ)	9600-9650

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಸೋಯಾ ಕಚ್ಚಾ	1412 (1425)
ಪಾಮ್ ವಾರದ ಡೆಲಿವರಿ	1433 (1433)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 51,400 (51,400)

ಬೆಳ್ಳಿ ಕೆ.ಜಿ 66,800 (67,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಿಲಯನ್ಸ್ ಜುವೆಲ್ಸ್: ಯುಗಾದಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಪ್ರಮುಖ ಆಭರಣ ಬ್ರ್ಯಾಂಡ್ ಆಗಿರುವ ರಿಲಯನ್ಸ್ ಜುವೆಲ್ಸ್, ಯುಗಾದಿ ಪ್ರಯುಕ್ತ ಚಿನ್ನದ ಆಭರಣಗಳ ವಿಶೇಷ ಸಂಗ್ರಹವನ್ನು ಬಿಡುಗಡೆ ಮಾಡಿದೆ.

ದೇವಾಲಯದ ಚಿನ್ನದ ಆಭರಣ ಸಂಗ್ರಹವು ಹಬ್ಬದ ಅಲಂಕಾರಗಳು ಮತ್ತು ಆಚರಣೆಗಳಿಗೆ ಸೂಕ್ತವಾಗಿದೆ. ಇದು ನಿಮ್ಮ ಪ್ರೀತಿಪಾತ್ರರಿಗೆ ಉತ್ತಮ ಉಡುಗೊರೆಯ ಮತ್ತು ವೈಯಕ್ತಿಕ ಆಭರಣ ಸಂಗ್ರಹಗಳಿಗೆ ಹೆಚ್ಚುವರಿ ಆಯ್ಕೆಯಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು, ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

✓ ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Marketing & Sales

SKY SCOPE housing ltd Vp with min 2 yrs exp req Branch manager ,Sales manager Interested candidates share resume at - mrchandrasshp@gmail.com Contact-7411124596

WANTED SALES Representative for Surgical Industry. Must travel across the states .Email: info.albat@gmail.com Ph: +91-9560096877 / 9448992997

General

URGNTLY REQD delivery boys in Bangalore. Salary incentive. Female riders can apply. Call7892076087/ 9008046480/ 7019573722

✓ ಪ್ರತಿಷ್ಠಿತ ಲಿಮಿಟೆಡ್ ಕಂಪನಿಯೊಂದಕ್ಕೆ SSLC ಮೇಲ್ಪಟ್ಟ 800 ಯುವಕ ಯುವತಿಯರು ರಾಜ್ಯಾದ್ಯಂತ ಬೇಕಾಗಿದ್ದಾರೆ. ಉಚಿತ ವಸತಿಯೂಟದೊಂದಿಗೆ ESI, PF, OT ಸೇರಿ 13,000 -37,000/- 9353753194, 9663704915

ರಿಯಲ್ ಎಸ್ಟೇಟ್ ಸೆಲ್ಲಿಂಗ್

Residential/ Commercial

Peenya

T. DASARAHALLI 1350 Sqft East Facing Earning 54000 rent Ramesh Road Malleswaram Tailoring Society land 1.08 Cr Contact 7760080110

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವ್ಯಾಪಾರ

Business Offers

Finance

ಕಂಪನಿಯು ಎಲ್ಲಾ ರೀತಿಯ ವೈಯಕ್ತಿಕ, ಆಸ್ತಿ, ಪ್ರಾಜೆಕ್ಟ್ ಸಾಲ ಮತ್ತು ವ್ಯಾಪಾರವನ್ನು ಒದಗಿಸುತ್ತದೆ. ROI 4% (ಪ್ರತಿ ವಾರ್ಷಿಕ) ಅಗತ್ಯವಿರುವ DSA ಮತ್ತು ಏಜೆಂಟ್, 55000/ ಸಂಬಳ ಮತ್ತು 4% ಕಮಿಷನ್: 7404326304

ಭವಿಷ್ಯ

Astrology

★॥ಶ್ರೀದುರ್ಗಾಪರಮೇಶ್ವರಿ॥★ ಆರಾಧನೆಯಿಂದ ಗಂಡಹೆಂಡತಿ ಸಮಸ್ಯೆ, ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಪ್ರೀತಿಯಲ್ಲಿಮೋಸ ಯಾವುದೇ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. ಶ್ರೀರಾಘವೇಂದ್ರಗುರೂಜಿ. 8050061378

ಶ್ರೀ ಜೈ ಶಂಕರಿ ಜ್ಯೋತಿಷ್ಯ ಕೇಂದ್ರ: ವಿದ್ಯೆ, ಉದ್ಯೋಗ, ಸ್ತ್ರೀ-ಪುರುಷ ವಶೀಕರಣ, ಇಷ್ಟಪಟ್ಟವರು ನಿಮ್ಮಂತಾಗಲು, ಕೇವಲ ಮೂರು ದಿನಗಳಲ್ಲಿ ಶಾಶ್ವತವಾದ ಪರಿಹಾರ. Ph:9980057857 (ಫೋನಿನ ಮೂಲಕ ಪರಿಹಾರ ಮಾಡಿಕೊಡುತ್ತಾರೆ)

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಧರ್ಮಸ್ಥಳ: 7022443071

DH DECCAN HERALD — BOOK YOUR CLASSIFIEDS ONLINE — ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ASTRO YATRA

ಹೆಸರಿಗೆ ಮಾತ್ರ ಸಂಸಾರದಲ್ಲಿದ್ದೇವೆ PART I

ಧರ್ಮಶಾಸ್ತ್ರ ಜ್ಯೋತಿಷ್ಯಶಾಸ್ತ್ರ ಹುಟ್ಟಿ ಸಾವಿರಾರು ವರ್ಷಗಳಾದವು ಆದರೂ ಮಾನವಮಾತ್ರ ಸಮಾಜದಲ್ಲಿ ಭಿನ್ನಭೀನ್ನ ಪಾತ್ರ ಮಾಡುವುದರಲ್ಲಿ ನಿಸ್ಸೀಮ, ಇದು ಯಾವ ಪ್ರಾಣಿ ಪಕ್ಷಿಯ ಜಾತಿಯಲ್ಲಿ ಇಲ್ಲ. ಇವು ಜನನದಿಂದ ಮರಣದವರೆಗೂ ಒಂದೇ ಗುಣ, ಒಂದೇ ಸ್ವಭಾವ, ಮನುಷ್ಯನೇಕೆ ಎಂದರೆ ಅವನಿಗೆ ಮಾತಾಡುವ ಶಕ್ತಿ ಇದೆ. ಇದರಿಂದ ಒಟ್ಟಾರೇ 10, 100, 1000 ಜನರನ್ನು ಹಾಳು ಮಾಡುತ್ತಾನೆ. ಯಾವ ಪ್ರಾಣಿ ಪಕ್ಷಿಯು ಇನ್ನೊಂದು ವರ್ಗದವರನ್ನು ಕೆಡಿಸುವದಿಲ್ಲ ಜೀವಂತವಾಗಿ ಸಂಸಾರದಲ್ಲಿ ಇದ್ದವರೇ ವಿರಾಣಿಗಳಾಗಿ, ವಿರಶಕ್ತರಾಗಿ, ಸಾಂಸಾರಿಕ ಭಾದ್ಯತ್ವಗಳನ್ನು ಬಿಟ್ಟುಬಿಟ್ಟರೇ ಹೇಗೆ ? ಅವರ ಮಕ್ಕಳ ಬದುಕು ಏನಾಗಬೇಕು ? ಪತಿಪತ್ನಿಯರಲ್ಲಿ ಮನಸ್ತಾಪ, ತಂದೆ ಮಕ್ಕಳಲ್ಲಿ, ಅತ್ತೆಸೊಸೆಯಲ್ಲಿ, ಅಣ್ಣ-ತಮ್ಮಂದಿರಲ್ಲಿ ಹಿತ–ಅಹಿತಗಳನ್ನು ತಿಳಿಯುವವರು ಯಾರು. ಸತ್ತವರೇನೋ ಕರ್ಮವನ್ನು ಹರಿದುಕೊಂಡು ಹೋಗುತ್ತಾರೆ. ಬದುಕಿದ್ದವರಿಗೆ ಅರ್ಥವಾಗುವುದಿಲ್ಲವೆ, ಯಾರಿಂದ ಲಾಭವಿರುತ್ತದೋ ಅವರೇ ಪ್ರತಿಭಾವಂತರಲ್ಲಾ ಕೆಲವರು ತಮ್ಮ ಸ್ವಶಕ್ತಿಯಿಂದ ಏನಾದರೂ ಒಳ್ಳೆಯದನ್ನು ಸಾಧಿಸಿ ಸಮಾಜಕ್ಕೆ ಒಳ್ಳೆಯದನ್ನು ಮಾಡಿದರೆ ಅದನ್ನು ಪ್ರೋತ್ಸಾಹಿಸುವದನ್ನು ಬಿಟ್ಟು ಅಡ್ಡಗಾಲುಹಾಕುತ್ತಾರೆ. ಗಂಧವು ಕಸದಲ್ಲಿದರೂ ಬೆಲೆಯೇ ಅದನ್ನು ಸುಟ್ಟರೂ ಪರಿಸರದ ಗಾಳಿಯು ಸುಗಂಧ. ತಾರ್ಕಿಕ ದೃಷ್ಟಿ ಇರುವವರು ಧರ್ಮಾಧರ್ಮಗಳನ್ನು ತೂಕ ಮಾಡುತ್ತಾರೆ. ವಿಚಾರವಾದಿಗಳು ಯಾವಾಗಲೂ ಹಣದ ಹಿಂದೆ ಬೀಳುತ್ತಾರೆ, ಇದು ಅವರ ಅದೃಷ್ಟ ಶಾಶ್ವತವಲ್ಲ, ಪ್ರತಿಭಾವಂತರಿಗೆ ಹಣಹಿಂದೆ ಬರುವುದಿಲ್ಲ ಅವರು ಸತ್ತರೂ ಪ್ರತಿಭಯ ನೆನಪು ಎಲ್ಲರಲ್ಲಿ ಇರುತ್ತದೆ. ಇದು ಬರುವುದು ಅವರ ಜನ್ಮಯೋಗದ ಹುಟ್ಟಿನಲ್ಲೇ ಇರುತ್ತದೆ. ದೇವರನ್ನು, ದೆವ್ವವನ್ನು ನಂಬಿದವರು ಸ್ವರ್ಗನರಕಗಳನ್ನು ನಂಬಲೇ ಬೇಕು, ಪುತ್ರಸಂತಾನ, ವಂಶೋದ್ದಾರಕ ಚಿಹ್ನೆ ಇವರಿಂದ ಸದ್ಗತಿ ಸಿಗುವುದೋ ದುರ್ಗತಿ ಸಿಗುವುದೋ ನೀವೇ ತಿಳಿಯಿರಿ. ಶ್ರೀರಾಮಚಂದ್ರ ನಿಂದಲೇ ತಂದೆ ಧಶರತನಿಗೆ ಸದ್ಗತಿ ಸಿಗಲಿಲ್ಲ ಇನ್ನು ಈಗಿನ ವಿಜ್ಞಾನ ಯುಗದಲ್ಲಿ ನರಮಾನವರ ಪಾಡೇನು, ಅದಕ್ಕೆ ಪ್ರತಿಯೊಬ್ಬರು ಅವರವರ ಜೀವನ ಭವಿಷ್ಯ ಮತ್ತು ಜಾತಕ ವಿವರ ತಿಳಿಯಬೇಕು.(ನಾಳೇ ಮುಂದುವರಿಯುತ್ತದೆ.)

Contact: RAMASWAMY ASTROLEGER
1176/1, 36th Main Road, Poornapragna Nagara, Uttarahalli, Bangalore-560061
M: 94482 43757, 94816 43757

★ದೈವಜ್ಞ ಶ್ರೀದೇವಾನಂದನ್★ ರವರಿಂದ ಸರ್ವತೋಮುಖ ಅಭಿವೃದ್ಧಿ ಸುಖಶಾಂತಿ ಮಹಾವಶೀಕರಣ ಆಕರ್ಷಣ ಮತ್ತು ಶತ್ರು ಕೃತವ್ಯಾಧಿಗಳ ಪರಿಹಾರಕ್ಕೆ ಇಂದೇ ಸಂಪರ್ಕಿಸಿ: 9845005009

ಪ್ರವಾಸ

Travel Agencies

19.4.2022 ಕಾಶಿ, ಗಯ, ದೆಹಲಿ 13ದಿನಗಳು. 24.5.2022 ಡಾರ್ಜಿಲಿಂಗ್, ಗ್ಯಾಂಗ್ಟಾಕ್, ಕಲ್ಕತ್ತಾ, ಭುವನೇಶ್ವರ 12ದಿನಗಳು. 20.6.2022 ಚಾರ್ ಧಾಮ್ ಯಾತ್ರೆ. ನಂದಿನಿ ಟೂರಿಸ್ಟ್.9916574089.

★ಊಟ, ವಸತಿಯೊಂದಿಗೆ★ ವಿಮಾನದಲ್ಲಿ ಪ್ರವಾಸ 15.05.2022 12ದಿನಗಳು ಸಿಮ್ಲಾ,ಕುಲುಮನಾಲಿ, ಅಮೃತಸರ್,ವಾಘಗಡಿ, ವೈಷ್ಣೋದೇವಿ,ಶೀವಕೋರಿ,. 09.06.2022 13/7 ದಿನಗಳು ಕಾಶಿ,ಗಯಾ,ಅಲಹಬಾದ್, ಅಯೋಧ್ಯೆ,ನೈಮಿಷ್ಯಾರಣ್ಯ, ಹರಿದ್ವಾರ,ಋಷಿಕೇಶ ಪ್ರವಾಸ.ಆರ್. ಗಾಂಧಿ ಟೂರ್ಸ್.9902433500/ 9945445809

ಸುವರ್ಣಯಾತ್ರ ಪ್ಯಾಕೇಜ್ ಅವರಿಂದ ಯುಗಾದಿ ಹಬ್ಬದ ಶುಭಾಶಯಗಳು, ನೇಪಾಳ ಪ್ರವಾಸ 9ದಿನಗಳು 26.4.2022. ಕಾಶಿ ಪ್ರವಾಸ 18.4.2022, 7ದಿನಗಳು.8970949434, 9019462508.

Travel

ಸುಸಜ್ಜಿತ ವ್ಯವಸ್ಥೆಗಳೊದಿಗೆ 09.05.2022, 22.05.2022 ರಿಂದ 11ದಿನಗಳು ಕಾಶಿ,ನೇಪಾಳ. 01.05.2022, 21.05.2022 ರಿಂದ 12ದಿನಗಳು ಶಿಮ್ಲಾ, ಮನಾಲಿ, ವೈಷ್ಣೋದೇವಿ. 26.05.2022, 11.06.2022 ರಿಂದ 15ದಿನಗಳು ಚಾರ್‌ಧಾಮ್ ಯಾತ್ರೆ. ಗ್ರೂಪ್ ಪ್ರವಾಸಗಳು ಹಾಗು ಫ್ಯಾಮಿಲಿ ಪ್ರವಾಸಗಳಿಗೆ ಸಂಪರ್ಕಿಸಿ: 'ಆನಂದ್ ವಿಹಾರಿ' ಬೆಂಗಳೂರು-23. 8088887677, 080-23385837

★13.5.2022 ರಿಂದ★ 16ದಿನಗಳ ಯಾತ್ರೆ ಭುವನೇಶ್ವರ, ಕಾಶಿ, ಗಯಾ, ಅಲಹಾಬಾದ್, ಅಯೋಧ್ಯೆ, ಅಮೃತಸರ, ವೈಷ್ಣೋದೇವಿ. ಜೈ ಕರ್ನಾಟಕ ಟೂರ್ಸ್: 9480588568

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 02/05/22 ದೆಹಲಿ, ವೈಷ್ಣೋದೇವಿ.14/04/22 ಶಿರಡಿ, ಪಂಡರಾಪುರ.14/04/22 ಪೂರಿ ಜಗನ್ನಾಥ್. 14/04/22 ರಾಮೇಶ್ವರಂ, ಕನ್ಯಾಕುಮಾರಿ. 9964527782

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಛಾಯದೇವಿ
(ಶ್ರೀಮತಿ ಲೀಲಮ್ಮನವರ ಜೇಷ್ಠ ಪುತ್ರಿ)
ಇವರು ದಿನಾಂಕ 14-04-2021 ರಂದು ದೈವಾಧೀನರಾಗಿರುತ್ತಾರೆ. ತತ್ಸಂಬಂಧವಾದ ಮೊದಲನೇ ವರ್ಷದ ಪುಣ್ಯಸ್ಮರಣೆಯನ್ನು ದಿನಾಂಕ 03-04-2022 ರಂದು ಭಾನುವಾರ ಬೆಳಿಗ್ಗೆ 9:00 ಗಂಟೆಗೆ ಇವರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಇವರ ಬಂಧು ಮಿತ್ರರೆಲ್ಲರೂ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿಸುತ್ತೇವೆ.
ಇಂತಿ: ಶ್ರೀಮತಿ ಲೀಲಮ್ಮ, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು.

ವೈಕುಂಠ ಸಮಾರಾಧನೆ

ಶ್ರೀಮತಿ ರತ್ನಮ್ಮ
(ದಿ. ನಾರಾಯಣಪ್ಪನವರ ಧರ್ಮಪತ್ನಿ)
ಬೈರಸಂದ್ರ, ಸಿ.ವಿ. ರಾಮನ್‌ನಗರ, ಬೆಂ–93
ಇವರು ದಿನಾಂಕ 23.3.22 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 2.4.22ರಂದು ಶನಿವಾರ ಬೆಳಿಗ್ಗೆ 8.30ರಿಂದ 9.30 ರವರೆಗೆ ಪುಣ್ಯಾಹ ಮತ್ತು ವೈಕುಂಠ ಸಮಾರಾಧನೆಯನ್ನು ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು: ಪುಷ್ಪಾ ರೇವತಿಕುಮಾರ್, ಮಂಜುಳ ವೀರಭದ್ರಪ್ಪ ಮತ್ತು ಕುಟುಂಬವರ್ಗದವರು

ನಾಲ್ಕನೇ ವರ್ಷದ ಪುಣ್ಯಸ್ಮರಣೆ



ಶ್ರೀ ಕಿರಣ್ ಕುಮಾರ್. ಸಿ
(ಮಾಲೀಕರು ಪಾರ್ವತಿ ಸೂಪರ್ ಫ್ಯೂಲ್ಸ್, ಬಿಡದಿ
ದಿ. ಶ್ರೀ ಪಾರ್ವತಮ್ಮ ಮತ್ತು
ದಿ. ಶ್ರೀ ಚನ್ನಯ್ಯ (ನಿ.ಅರಣ್ಯಾಧಿಕಾರಿ)
ಇವರ ದ್ವಿತೀಯ ಪುತ್ರ (02–04–2018)
ನಾಲ್ಕನೇ ವರ್ಷದ ಪುಣ್ಯಸ್ಮರಣೆ, ಮಲ್ಲಿನಾಥಪುರ, ಬಿ.ಜಿ. ಪುರ ಹೋಬಳಿ, ಮಳವಳ್ಳಿ, ತಾ. ಮಂಡ್ಯ ಜಿಲ್ಲೆ
ಇಂತಿ ದುಃಖತಪ್ತರು ಪತ್ನಿ, ಮಗ, ಕುಟುಂಬದವರು ಹಾಗೂ ಪೆಟ್ರೋಲ್ ಬಂಕ್ ಸಿಬ್ಬಂದಿ ವರ್ಗ
ಮೊ. 9902230350, 9845010161

LOOKING FOR JOB OPPORTUNITY
Refer Classifieds on Wednesday

ನಿಧನ

ಶ್ರೀಮತಿ ಸರೋಜಮ್ಮ
ಗೌಡರ ಲೇಟ್ ಎನ್.ಆರ್. ಕೃಷ್ಣರೆಡ್ಡಿರವರ ಧರ್ಮಪತ್ನಿ
ದೊಡ್ಡನೆಕ್ಕುಂದಿ, ಬೆಂಗಳೂರು
ಇವರು ದಿನಾಂಕ: 01.04.2022ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಂತ್ಯಕ್ರಿಯೆಯನ್ನು ದಿನಾಂಕ: 02.04.2022 ಶನಿವಾರ, ಬೆಳಗ್ಗೆ 11.00 ಗಂಟೆಗೆ ದೊಡ್ಡನೆಕ್ಕುಂದಿ, ಔಟರ್ ರಿಂಗ್‌ರೋಡ್, ಗ್ರೇವ್‌ಯಾರ್ಡ್, ಬೆಂಗಳೂರು. ಇಲ್ಲಿ ನಡೆಸಲಾಗುವುದು.
ದುಃಖತಪ್ತರು: ಕುಟುಂಬವರ್ಗದವರು ಹಾಗೂ ಬಂಧುಗಳು
Ph: 9900090099

ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಲಾಂಛನ, ಮೆಸ್ಕಾಟ್ ಬಿಡುಗಡೆ

ಆನೆಯ ಬಲ; ವಿಧಾನಸೌಧದ ಸೊಬಗು

ಪ್ರಜಾವಾಣಿ ವಾರ್ತೆ

ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಲಾಂಛನ ಮತ್ತು ಮೆಸ್ಕಾಟ್ ಬಿಡುಗಡೆ ಸಮಾರಂಭದ ನಂತರ ಕಂಠೀರವ ಕ್ರೀಡಾಂಗಣದ ಆವರಣದಲ್ಲಿ ಮೆಸ್ಕಾಟ್‌ಗಳಾದ ವಿಜಯ (ಜಿಂಕೆ), ನಮ್ಮ ವೀರ (ಆನೆ) ಮತ್ತು ಜಯ (ಹುಲಿ) ಫೋಟೊಗೆ ಪೋಸ್ ನೀಡಿದವು –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಏಪ್ರಿಲ್ 24ರಿಂದ ಮೇ 3ರವರೆಗೆ ಉದ್ಯಾನ ನಗರಿಯಲ್ಲಿ ಕ್ರೀಡಾಕೂಟ
- ₹5 ಕೋಟಿ ವೆಚ್ಚದ ಸಿಂಥೆಟಿಕ್ ಟ್ರ್ಯಾಕ್ ಉದ್ಘಾಟನೆ

ಬೆಂಗಳೂರು: ಶಕ್ತಿ–ಸಮೃದ್ಧಿಯ ಸಂಕೇತವಾದ ಆನೆ ಮತ್ತು ನವದ್ರಾವಿಡ ವಾಸ್ತು ಶಿಲ್ಪ ಶೈಲಿಯದೆಂದು ಹೇಳಲಾಗುವ ವಿಧಾನಸೌಧದ ಚೆಲುವು ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ (ಕೆಐಯುಜಿ) ಲಾಂಛನಕ್ಕೆ ಮೆರುಗು ತುಂಬಿದೆ.

ಜೈನ್ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯುವ ಸಬಲೀಕರಣ–ಕ್ರೀಡಾ ಇಲಾಖೆಗಳು ಆಯೋಜಿಸಿರುವ ಕ್ರೀಡಾಕೂಟ ಇದೇ 24ರಿಂದ ಮೇ 3ರ ವರೆಗೆ ಉದ್ಯಾನ ನಗರಿಯಲ್ಲಿ ನಡೆಯಲಿದೆ. ಆನೆ ಮತ್ತು ವಿಧಾನಸೌಧ ಕಂಗೊಳಿಸುವ ಲಾಂಛನವನ್ನು ಶುಕ್ರವಾರ ಸಂಜೆ ಬಿಡುಗಡೆ ಮಾಡಲಾಯಿತು. 'ವೀರ' ಆನೆ, 'ಜಯ' ಹುಲಿ, 'ವಿಜಯ' ಜಿಂಕೆಯನ್ನು ಹೋಲುವ ಮೆಸ್ಕಾಟ್ ಮತ್ತು ಖೇಲೊ ಇಂಡಿಯಾ ಯೋಜನೆಯ ಲಾಂಛನದ ಜೆರ್ಸಿಗಳನ್ನು ಕೂಡ ಬಿಡುಗಡೆ ಮಾಡಲಾಯಿತು.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಬೆಳಕಿನ ಚಿತ್ತಾರ ಮತ್ತು ಸಂಗೀತದ ಝೇಂಕಾರದ ಸೊಬಗಿನ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ಲಾಂಛನ, ಮೆಸ್ಕಾಟ್ ಮತ್ತು ಜೆರ್ಸಿ ಬಿಡುಗಡೆ ಮಾಡಿದರು.

'ಎರಡು ವರ್ಷಗಳ ಹಿಂದೆ ಭುವನೇಶ್ವರದಲ್ಲಿ ಕೆಐಯುಜಿಯ ಮೊದಲ ಆವೃತ್ತಿ ನಡೆದಿತ್ತು. ಆಗ 17 ಸ್ಪರ್ಧೆಗಳು ಇದ್ದವು. ಈ ಬೆಂಗಳೂರಿನಲ್ಲಿ ನಡೆಯಲಿರುವ ಎರಡನೇ ಆವೃತ್ತಿಯ ಕೂಟದಲ್ಲಿ 20 ಸ್ಪರ್ಧೆಗಳು ಇರುತ್ತವೆ' ಎಂದು ಗೆಹಲೋತ್ ಹೇಳಿದರು. ಕೇಂದ್ರ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಅನುರಾಗ್ ಠಾಕೂರ್ 'ಈ ಬಾರಿ ಕ್ರೀಡಾಕೂಟದಲ್ಲಿ 4500ಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳಲಿದ್ದಾರೆ' ಎಂದರು. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಸಾಧನೆ ಮಾಡಲು ವಿಶ್ವವಿದ್ಯಾಲಯಗಳು ಪ್ರೇರಣೆಯಾಗಬೇಕು. ಆದರೆ ಭಾರತದಲ್ಲಿ ವಿವಿಗಳು ಶಿಕ್ಷಣಕ್ಕೆ ಮಾತ್ರ ಆದ್ಯತೆ ನೀಡುತ್ತಿವೆ ಎಂದು ಅವರು 'ಶಿಕ್ಷಣ, ಪರಿಸರ ಮತ್ತು ಕ್ರೀಡೆಯ ಬಗ್ಗೆ ಯುವಜನರು ಸಮಾನ ಆಸಕ್ತಿ ಹೊಂದುವಂತೆ ಮಾಡಲು ವಿವಿಗಳು ಪ್ರಯತ್ನಿಸಬೇಕು' ಎಂದರು.

ರಾಜ್ಯದ ಯುವಸಬಲೀಕರಣ ಮತ್ತು ಕ್ರೀಡಾ ಸಚಿವ ನಾರಾಯಣಗೌಡ ಮಾತನಾಡಿ 'ಖೇಲೊ ಇಂಡಿಯಾ ವಿವಿ ಕ್ರೀಡಾಕೂಟಕ್ಕೆ ₹ 50 ಕೋಟಿ ನೀಡುವಂತೆ ಕೇಂದ್ರವನ್ನು ಕೋರಲಾಗಿದ್ದು ₹ 17 ಕೋಟಿ ಬಿಡುಗಡೆಯಾಗಿದೆ' ಎಂದು ತಿಳಿಸಿದರು.

ಸಚಿವ ಸಿ.ಎನ್.ಅಶ್ವತ್ಥನಾರಾಯಣ್, ಸಂಸದರಾದ ಪಿ.ಸಿ.ಮೋಹನ್, ತೇಜಸ್ವಿ ಸೂರ್ಯ, ಶಾಸಕ ಕೆ.ಗೋವಿಂದರಾಜ್, ಜೈನ್ ವಿವಿ ಕುಲಪತಿ ಚೆನ್ನರಾಜ್ ರಾಯ್‌ಚಂದ್ ಮತ್ತಿತರರು ಇದ್ದರು.

ಸಿಂಥೆಟಿಕ್ ಟ್ರ್ಯಾಕ್ ಉದ್ಘಾಟನೆ: ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ₹ 5 ಕೋಟಿ ವೆಚ್ಚದಲ್ಲಿ ಅಳವಡಿಸಿರುವ ಸಿಂಥೆಟಿಕ್ ಟ್ರ್ಯಾಕ್ ಉದ್ಘಾಟನೆಯೂ ಇದೇ ಸಂದರ್ಭದಲ್ಲಿ ನಡೆಯಿತು.

ಥಾಮಸ್ ಕಪ್: 'ಸಿ' ಗುಂಪಿನಲ್ಲಿ ಭಾರತ

ಬ್ಯಾಂಕಾಕ್ (ಎಪಿ): ಭಾರತ ಬ್ಯಾಡ್ಮಿಂಟನ್ ತಂಡವು ಥಾಮಸ್ ಕಪ್ ಟೂರ್ನಿಯ 'ಸಿ' ಗುಂಪಿನಲ್ಲಿ ಸ್ಥಾನ ಗಳಿಸಿದೆ. ಮಹಿಳೆಯರ ಉಬರ್ ಕಪ್‌ನಲ್ಲಿ ಭಾರತ 'ಡಿ' ಗುಂಪಿನಲ್ಲಿದೆ. ಮೇ 8ರಿಂದ 15ರ ವರೆಗೆ ಟೂರ್ನಿ ನಡೆಯಲಿದೆ.

ಬ್ಯಾಂಕಾಕ್‌ನಲ್ಲಿ ನಡೆಯಲಿರುವ ಟೂರ್ನಿಯ ಡ್ರಾವನ್ನು ಶುಕ್ರವಾರ ಪ್ರಕಟಿಸಲಾಗಿದೆ. ಥಾಮಸ್ ಕಪ್‌ನ ಹಾಲಿ ಚಾಂಪಿಯನ್ ಇಂಡೊನೇಷ್ಯಾ 'ಎ' ಗುಂಪಿನಲ್ಲಿದ್ದು ದಕ್ಷಿಣ ಕೊರಿಯಾ, ಥಾಯ್ಲೆಂಡ್ ಮತ್ತು ಸಿಂಗಪುರ ಇದೇ ಗುಂಪಿನಲ್ಲಿವೆ.

'ಬಿ' ಗುಂಪಿನಲ್ಲಿ ಡೆನ್ಮಾರ್ಕ್, ಚೀನಾ, ಫ್ರಾನ್ಸ್ ಮತ್ತು ಅಲ್ಜೀರಿಯಾ ಇದ್ದು 'ಸಿ' ಗುಂಪಿನಲ್ಲಿ ಭಾರತದೊಂದಿಗೆ ಚೀನಾ ಥೈಪೆ, ಜರ್ಮನಿ ಮತ್ತು ಕೆನಡಾ ಇದೆ. ಜಪಾನ್, ಮಲೇಷ್ಯಾ, ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ 'ಡಿ' ಗುಂಪಿನಲ್ಲಿವೆ.

ಉಬರ್ ಕಪ್‌ನ ಚಾಂಪಿಯನ್ ಚೀನಾ 'ಬಿ' ಗುಂಪಿನಲ್ಲಿದೆ. ಚೀನಾ ಥೈಪೆ, ಸ್ಪೇನ್ ಮತ್ತು ಆಸ್ಟ್ರೇಲಿಯಾ ಇದೇ ಗುಂಪಿನಲ್ಲಿದ್ದು 'ಎ' ಗುಂಪಿನಲ್ಲಿ 2018ರ ಚಾಂಪಿಯನ್ ಜಪಾನ್ ಜೊತೆ ಇಂಡೊನೇಷ್ಯಾ, ಫ್ರಾನ್ಸ್ ಮತ್ತು ಜರ್ಮನಿ ತಂಡಗಳಿವೆ. 'ಸಿ' ಗುಂಪಿನಲ್ಲಿ ಥಾಯ್ಲೆಂಡ್, ಡೆನ್ಮಾರ್ಕ್, ಮಲೇಷ್ಯಾ ಮತ್ತು ಈಜಿಪ್ಟ್, 'ಡಿ' ಗುಂಪಿನಲ್ಲಿ ಭಾರತದೊಂದಿಗೆ ದಕ್ಷಿಣ ಕೊರಿಯಾ, ಕೆನಡಾ ಮತ್ತು ಅಮೆರಿ ತಂಡಗಳು ಇವೆ.

ಗಾಲ್ಫ್: ಅಗಸ್ಟಾ ನ್ಯಾಷನಲ್ ಫೈನಲ್ ಸುತ್ತಿಗೆ ಅವನಿ

ಅಗಸ್ಟಾ, ಅಮೆರಿಕ (ಪಿಟಿಐ): ಕರ್ನಾಟಕದ ಅವನಿ ಪ್ರಶಾಂತ್ ಅವರು ಅಗಸ್ಟಾ ನ್ಯಾಷನಲ್ ಗಾಲ್ಫ್ ಕ್ಲಬ್‌ನ ಫೈನಲ್ ಸುತ್ತಿಗೆ ಆಡುವ ಅರ್ಹತೆ ಗಿಟ್ಟಿಸಿದ್ದಾರೆ. ಇದರೊಂದಿಗೆ ಪ್ರತಿಷ್ಠಿತ ಟೂರ್ನಿಯ ಸ್ಪರ್ಧಾತ್ಮಕ ಸುತ್ತಿನಲ್ಲಿ ಆಡಲಿರುವ ಭಾರತದ ಮೊದಲ ಆಟಗಾರ್ತಿ ಎನ್ನುವ ಶ್ರೇಯ ಗಳಿಸಿದ್ದಾರೆ.

ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಮಹಿಳಾ ಅಮೆಚೂರ್ ಚಾಂಪಿಯನ್‌ಷಿಪ್ ಮೂಲಕ ಬೆಂಗಳೂರಿನ ಅವನಿ ಈ ಅವಕಾಶ ಪಡೆದರು. 72 ಸ್ಪರ್ಧಿಗಳಿದ್ದ ಅಂಗಣದಲ್ಲಿ ಅವರು 21ನೇ ಸ್ಥಾನ ಗಳಿಸಿದರು. ಅಗ್ರ 30 ಸ್ಥಾನ ಗಳಿಸಿದವರಿಗೆ ಫೈನಲ್ ಸುತ್ತಿಗೆ ಪ್ರವೇಶಿಸುವ ಅವಕಾಶ ಇತ್ತು.

'ಇಲ್ಲಿ ಉತ್ತಮ ಸಾಮರ್ಥ್ಯ ತೋರುವ ಗುರಿಯೊಂದಿಗೆ ಇಲ್ಲಿಗೆ ಆಗಮಿಸಿದ್ದೇನೆ. ಇದು ಮೊದಲ ಹೆಜ್ಜೆ. ಇನ್ನು ಒಂದು ಸುತ್ತು ಬಾಕಿ ಇದ್ದು, ಸ್ಪರ್ಧೆಗೆ ಉತ್ಸುಕನಾಗಿದ್ದೇನೆ' ಎಂದು ಅವನಿ ಹೇಳಿದ್ದಾರೆ.

ಅವನಿ ಪ್ರಶಾಂತ್

ಫೈನಲ್ ಸುತ್ತು ಶನಿವಾರ ನಡೆಯಲಿದೆ.

ಆದರೆ ಅಮೆರಿಕದಲ್ಲಿ ನೆಲೆಸಿರುವ ಭಾರತದ ಮೇಘಾ ಗನ್ನೆ ಅರ್ಹತೆ ಗಳಿಸಲು ವಿಫಲರಾದರು.

ಫಿಡೆ ಅಧ್ಯಕ್ಷರಿಗೆ ವಿಶ್ವನಾಥನ್ ಬೆಂಬಲ

ನವದೆಹಲಿ: ಫಿಡೆ ಅಧ್ಯಕ್ಷ ಅರ್ಕಡಿ ಡೊ ರ್ಕೊ ವಿಚ್ ಅವರ ಮರು ಆಯ್ಕೆಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಐದು ಬಾರಿಯ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ತಿಳಿಸಿದ್ದಾರೆ. ಇದು, ವಿಶ್ವನಾಥನ್ ಅವರು ಚೆಸ್‌ನ ಆಡಳಿತಕ್ಕೆ ಸಂಬಂಧಿಸಿದ ರಾಜಕೀಯದಲ್ಲಿ ಹೆಚ್ಚು ಆಸಕ್ತಿ ಹೊಂದಿರುವುದನ್ನು ಸೂಚಿಸುತ್ತದೆ.

ವಿಶ್ವನಾಥನ್ ಆನಂದ್

ಫಿಡೆ ಕಾಂಗ್ರೆಸ್ ಜುಲೈ 28ರಿಂದ ಆಗಸ್ಟ್ 10ರ ವರೆಗೆ ಚೆನ್ನೈಯಲ್ಲಿ ನಡೆಯಲಿದೆ. ಇದೇ ಸಂದರ್ಭದಲ್ಲಿ ಇಲ್ಲಿ ಚೆಸ್ ಒಲಿಂಪಿಯಾಡ್ ಕೂಡ ನಡೆಯಲಿದೆ.

ವಿಶ್ವನಾಥನ್ ಆನಂದ್ ಅವರು ಫಿಡೆ ಆಡಳಿತಕ್ಕೆ ಸಂಬಂಧಿಸಿದ ಪದಾಧಿಕಾರಿಗಳ ಚುನಾವಣೆಯಲ್ಲಿ ಸ್ಪರ್ಧಿಸುತ್ತಿಲ್ಲ. ಆದರೆ ಭವಿಷ್ಯದಲ್ಲಿ ಅವರು ಅತ್ತ ಸಾಗುವ ಸಾಧ್ಯತೆಗಳು ಇವೆ ಎನ್ನಲಾಗಿದೆ.

ಬ್ಯಾಸ್ಕೆಟ್‌ಬಾಲ್: ಭೂಮಿಕಾ, ಅರವಿಂದಗೆ ನಾಯಕತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೆನ್ನೈಯಲ್ಲಿ ಇದೇ ಭಾನುವಾರದಿಂದ ನಡೆಯಲಿರುವ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಕರ್ನಾಟಕದ ಪುರುಷ ಮತ್ತು ಮಹಿಳೆಯರ ತಂಡಗಳನ್ನು ಶುಕ್ರವಾರ ಪ್ರಕಟಿಸಲಾಗಿದೆ. ರಾಜ್ಯದ ಪುರುಷರ ತಂಡವನ್ನು ಅರವಿಂದ ಎ ಮತ್ತು ಮಹಿಳಾ ತಂಡವನ್ನು ಭೂಮಿಕಾ ಪಿ ಮುನ್ನಡೆಸುವರು.

ತಂಡಗಳು: ಪುರುಷರು: ಅರವಿಂದ ಎ (ನಾಯಕ), ಅನಿಲ್ ಕುಮಾರ್ ಬಿ.ಕೆ, ಹರೀಶ್ ಮುತ್ತು ಕುಮಾರ್, ಕ್ಲಿಂಟನ್ ಆ್ಯಂಡ್ರ್ಯೂ (ಎಲ್ಲರೂ ಬ್ಯಾಂಕ್ ಆಫ್ ಬರೋಡ), ಶಶಾಂಕ್ ರೈ, ಅಶ್ವಿಜ್ ವಶಿಷ್ಠ (ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್), ಮನೋಜ್ ಬಿ.ಎಂ, ಅಕ್ಷಯ್ ಕುಮಾರ್ (ಡಿವೈಇಎಸ್ ಬೆಂಗಳೂರು), ಧೀರಜ್ ರೆಡ್ಡಿ (ಜಿಎಸ್‌ಟಿ–ಕಸ್ಟಮ್ಸ್), ಅಚಿಂತ್ಯ ಕೃಷ್ಣ (ಬೀಗಲ್ಸ್ ಬಿ.ಸಿ), ಅಭಿಷೇಕ್ ಗೌಡ್ (ಸದರ್ನ್ ಬ್ಲೂಸ್), ಪ್ರತ್ಯಾಂಶು ತೋಮರ್ (ಯಂಗ್ ಒರಾಯನ್ಸ್ ಸ್ಪೋರ್ಟ್ಸ್ ಕ್ಲಬ್); ತಂಗಚ್ಚನ್ (ಕೋಚ್), ರಾಜ್‌ಕುಮಾರನ್ (ಸಹಾಯಕ ಕೋಚ್), ಪ್ರಭುದೇವ್ (ಮ್ಯಾನೇಜರ್).

ಮಹಿಳಾ ವಿಭಾಗ: ಭೂಮಿಕಾ ಪಿ (ನಾಯಕಿ), ಮಾನಸಾ ಬಿ.ಪಿ (ಡಿವೈಇಎಸ್ ವಿದ್ಯಾನಗರ), ಲೋಪಾಮುದ್ರ ತಿಮ್ಮಯ್ಯ, ಗ್ರೀಷ್ಮಾ ನಿರಂಜನ್, ಪಾವನಿ ಎಸ್ (ಮೌಂಟ್ಸ್ ಕ್ಲಬ್), ಚಂದನಾ ಜಿ, ಮೇಖಲಾ ಗೌಡ (ಬೀಗಲ್ಸ್ ಬಿ.ಸಿ), ರಿಣಿ ಎಲ್, ವರ್ಷನಂದಿನಿ, ಮೋಹನಬಾಲ (ನೈರುತ್ಯ ರೈಲ್ವೆ), ಲೇಖನಾ ಎಂ (ಯಂಗ್ ಒರಾಯನ್ಸ್), ಸಹನಾ ಎಸ್.ಎಂ (ಡಿವೈಇಎಸ್ ಮೈಸೂರು); ಶ್ರೀನಿವಾಸ ಮೂರ್ತಿ ಎಚ್ (ಕೋಚ್), ಸತ್ಯನಾರಾಯಣ (ಸಹಾಯಕ ಕೋಚ್), ಅಂಚೆ ಅಶ್ವತ್ಥ (ಮ್ಯಾನೇಜರ್).

ಫುಟ್‌ಬಾಲ್: ಮೈಕಲ್ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಕಲ್ ಗಳಿಸಿದ ಹ್ಯಾಟ್ರಿಕ್ ಗೋಲುಗಳು ಅಂಬೇಡ್ಕರ್ ಎಫ್‌ಸಿಗೆ ಜಯ ತಂದುಕೊಟ್ಟವು.

ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆ (ಬಿಡಿಎಫ್‌ಎ) ಸಿ ಡಿವಿಷನ್ ಲೀಗ್‌ನ 'ಐ' ಗುಂಪಿನ ಪಂದ್ಯದಲ್ಲಿ ಶುಕ್ರವಾರ ಅಂಬೇಡ್ಕರ್ ಎಫ್‌ಸಿ 4–0ಯಿಂದ ಸರ್ವಜ್ಞನಗರ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು.

ಮತ್ತೊಂದು ಹಣಾಹಣಿಯಲ್ಲಿ ಅಗರಂ ಎಫ್‌ಸಿ 1–0ಯಿಂದ ಕ್ವೀನ್ಸ್‌ಸ್ಟಾರ್ ವಿರುದ್ಧ ಜಯಿಸಿತು.

'ಎ' ಗುಂಪಿನ ಪಂದ್ಯದಲ್ಲಿ ಸರ್ಕಾರಿ ಮುದ್ರಣಾಲಯ ತಂಡವು ಎಕ್ಸೆಲಿಸಿಯರ್ಸ್ ಎಫ್‌ಸಿಯೊಂದಿಗೆ ಗೋಲುರಹಿತ ಡ್ರಾ ಸಾಧಿಸಿತು. 'ಡಿ' ಗುಂಪಿನ ಪಂದ್ಯಗಳಲ್ಲಿ ಯಂಗ್ ಜೆಮ್ಸ್ ಎಫ್‌ಸಿ 1–0ಯಿಂದ ವಿಜಯನಗರ ಎಫ್‌ಸಿ ಎದುರು ಗೆದ್ದರೆ, ಬಸವನಗುಡಿ ಎಫ್‌ಸಿಗೆ ವಿವೇಕಾನಂದ ಎಫ್‌ಸಿ ಎದುರು ವಾಕ್‌ಓವರ್ ಲಭಿಸಿತು.

ಕೆಎಸ್‌ಎಫ್‌ಎ 'ಸಿ' ಡಿವಿಷನ್ ಲೀಗ್ ಟೂರ್ನಿಯ ಜೆ ಗುಂಪಿನ ಪಂದ್ಯದಲ್ಲಿ ಬೆಂಗಳೂರು ಅರೋಸ್ 3–1ರಿಂದ ಎಫ್‌ಎಸ್‌ಕೆ ಎದುರು ಜಯಿಸಿತು. ಬ್ರದರ್ಸ್ ಎಫ್‌ಸಿ, ಸಮಂತ್ ಎಫ್‌ಸಿಯೊಂದಿಗೆ ಗೋಲುರಹಿತ ಡ್ರಾ ಸಾಧಿಸಿತು.

'ಎನ್' ಗುಂಪಿನ ಹಣಾಹಣಿಯಲ್ಲಿ ಜೊಗೊ ಬೊರಿಟೊ ಸಾಕರ್ಸ್ 2–0ಯಿಂದ ಜಿಆರ್‌ಕೆ ಫುಟ್‌ಬಾಲ್ ಯೂತ್ ಎಫ್‌ಸಿ ಎದುರು, 'ಓ' ಗುಂಪಿನ ಪಂದ್ಯದಲ್ಲಿ ವಿಕ್ಟೋರಿಯಾ ಎಫ್‌ಸಿ 3–0ಯಿಂದ ಕಮ್ಮನಹಳ್ಳಿ ವಿರುದ್ಧ ಜಯ ಸಾಧಿಸಿದವು.

'ಚಿನ್ನ ಗೆಲ್ಲುವ ಸಾಮರ್ಥ್ಯ ಭಾರತ ತಂಡಕ್ಕಿದೆ'

ನವದೆಹಲಿ: ಭಾರತ ಮಹಿಳಾ ಜೂನಿಯರ್ ತಂಡವು ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಚಿನ್ನದ ಪದಕ ಗೆಲ್ಲುವ ಸಾಮರ್ಥ್ಯ ಹೊಂದಿದೆ ಎಂದು ಸೀನಿಯರ್ ತಂಡದ ಆಟಗಾರ್ತಿ ಸುಶೀಲಾ ಚಾನು ಅಭಿಪ್ರಾಯಪಟ್ಟಿದ್ದಾರೆ.

ಪ್ರೊಚೆಫ್ ಭಾರತ ತಂಡವು ಜೂನಿಯರ್ ವಿಶ್ವಕಪ್ ಟೂರ್ನಿಯಲ್ಲಿ 'ಡಿ' ಗುಂಪಿನ ತನ್ನ ಮೊದಲ ಪಂದ್ಯದಲ್ಲಿ ಶನಿವಾರ ವೇಲ್ಸ್ ವಿರುದ್ಧ ಕಣಕ್ಕಿಳಿಯಲಿದೆ. 2013ರ ಆವೃತ್ತಿಯಲ್ಲಿ ಭಾರತ ಕಂಚಿನ ಪದಕ ಗೆದ್ದಾಗ ಸುಶೀಲಾ ತಂಡದ ನಾಯಕಿಯಾಗಿದ್ದರು.

'ಭಾರತ ತಂಡವು ಬಲಿಷ್ಠವಾಗಿದೆ. ಕ್ರೀಡಾಂಗಣ ಮತ್ತು ಕ್ರೀಡಾಂಗಣದ ಹೊರಗೆ ಪರಸ್ಪರ ಅರಿತುಕೊಂಡಿರುವ ಆಟಗಾರ್ತಿಯರಿದ್ದಾರೆ. ದೀರ್ಘಕಾಲದವರೆಗೆ ಒಟ್ಟಿಗೆ ತರಬೇತಿ ಪಡೆದಿದ್ದಾರೆ ಮತ್ತು ರಾಷ್ಟ್ರೀಯ ಮಹಿಳಾ ತಂಡದ ವಿರುದ್ಧ ಅಭ್ಯಾಸ ಪಂದ್ಯಗಳನ್ನೂ ಆಡಿದ್ದಾರೆ' ಭಾರತ ಕ್ರೀಡಾ ಪ್ರಾಧಿಕಾರದ ಬೆಂಗಳೂರು ಮತ್ತು ಭುವನೇಶ್ವರ ಶಿಬಿರಗಳಲ್ಲಿ ತಂಡಕ್ಕೆ ಉತ್ತಮ ತರಬೇತಿ ಸಿಕ್ಕಿದೆ' ಎಂದು ಹಾಕಿ ಇಂಡಿಯಾದ ಪಾಡ್‌ಕಾಸ್ಟ್‌ನಲ್ಲಿ ಸುಶೀಲಾ ಹೇಳಿದ್ದಾರೆ.

'ಒಲಿಂಪಿಕ್ಸ್‌ನಂತಹ ಪ್ರಮುಖ ಟೂರ್ನಿಗಳಲ್ಲಿ ತಂಡವನ್ನು ಪ್ರತಿನಿಧಿಸಿದವರಿದ್ದಾರೆ. ಹೀಗಾಗಿ ಭಾರತ ಚಿನ್ನದ ಪದಕ ಗೆಲ್ಲುವ ನೆಚ್ಚಿನ ತಂಡಗಳಲ್ಲಿ ಒಂದು' ಎಂದು ಸುಶೀಲಾ ಹೇಳಿದ್ದಾರೆ.

ಐಸಿಸಿ ಸಭೆಯಲ್ಲಿ ಚತುಷ್ಕೋನ ಸರಣಿ ಪ್ರಸ್ತಾವಕ್ಕೆ ರಮೀಜ್ ಸಿದ್ಧ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಮಹಾಸಭೆಯಲ್ಲಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಮುಖ್ಯಸ್ಥ ರಮೀಜ್ ರಾಜಾ ಅವರು ಚತುಷ್ಕೋನ ಕ್ರಿಕೆಟ್ ಸರಣಿಯ ಪ್ರಸ್ತಾವ ಮಂಡಿಸಲು ಸಿದ್ಧರಾಗಿದ್ದಾರೆ.

ರಮೀಜ್ ರಾಜಾ

ಭಾರತ ಮತ್ತು ಪಾಕಿಸ್ತಾನ ತಂಡಗಳನ್ನು ಒಳಗೊಂಡ ಚತುಷ್ಕೋನ ಕ್ರಿಕೆಟ್ ಟೂರ್ನಿ ಆಯೋಜನೆಯ ಕುರಿತು ರಮೀಜ್ ಈಚೆಗೆ ಒಲವು ವ್ಯಕ್ತಪಡಿಸಿದ್ದರು. ಆದರೆ ಪ್ರಸ್ತುತ ಐಸಿಸಿ ನಿಯಮದ ಪ್ರಕಾರ ಯಾವುದೇ ಸದಸ್ಯ ರಾಷ್ಟ್ರವು ತ್ರಿಕೋನ ಸರಣಿಯನ್ನು ಮಾತ್ರ ಆಯೋಜಿಸಬಹುದಾಗಿದೆ. ಐಸಿಸಿಗೆ ಮಾತ್ರ ಮೂರಕ್ಕಿಂತ ಹೆಚ್ಚು ತಂಡಗಳು ಭಾಗವಹಿಸುವ ಟೂರ್ನಿಯನ್ನು ಆಯೋಜಿಸಲು ಅವಕಾಶವಿದೆ.

ನಾಲ್ಕು ರಾಷ್ಟ್ರಗಳು ಸರದಿಯಂತೆ ಪ್ರತಿ ವರ್ಷ ಚತುಷ್ಕೋನ ಸರಣಿಯ ಆತಿಥ್ಯ ವಹಿಸಬೇಕು ಎಂದು ರಮೀಜ್ ಸಿದ್ಧಪಡಿಸಿರುವ ಯೋಜನೆಯಲ್ಲಿದೆಯೆನ್ನಲಾಗಿದೆ. ಆದರೆ ಈ ಸರಣಿಯ ಕುರಿತು ಬಿಸಿಸಿಐ ಹೆಚ್ಚು ಆಸಕ್ತಿ ತೋರಿಲ್ಲವೆನ್ನಲಾಗಿದೆ.

'ಭವಿಷ್ಯದ ಪ್ರವಾಸ ಮತ್ತು ಕಾರ್ಯಕ್ರಮಗಳ ದಟ್ಟಣೆ ಅಪಾರವಾಗಿದೆ. ಕಿಕ್ಕಿರಿದ ವೇಳಾಪಟ್ಟಿಯಲ್ಲಿ ಚತುಷ್ಕೋನ ಸರಣಿಯನ್ನು ಆಯೋಜಿಸುವ ಬಗ್ಗೆ ಐಸಿಸಿಯೂ ಆಸಕ್ತಿ ತೋರುವುದು ಅನುಮಾನ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಸ್ನೂಕರ್ ಟೂರ್ನಿ: ಶಹಬಾಜ್‌ಗೆ ಜಯ

ಬೆಂಗಳೂರು: ಉತ್ತಮ ಆಟವಾಡಿದ ಶಹಬಾಜ್ ಖಾನ್ ಅವರು ಬಿಎಸ್‌ಎ ಅಖಿಲ ಭಾರತ ಓಪನ್ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಆದಿತ್ಯ ಮೆಹ್ತಾ ಅವರಿಗೆ ಆಘಾತ ನೀಡಿದರು.

ಶುಕ್ರವಾರ ಶಹಬಾಜ್ ಅವರಿಗೆ 49–60, 88 (71)–21, 60–56, 62–25, 19–72, 6–87 (61), 75–32 (4–3)ರಿಂದ ಜಯ ಒಲಿಯಿತು.

ಇನ್ನುಳಿದ ಪಂದ್ಯಗಳಲ್ಲಿ ಶ್ರೀಕೃಷ್ಣ 4–1ರಿಂದ ಅನುರಾಗ್ ಗಿರಿ ಎದುರು, ಪಂಕಜ್ ಅಡ್ವಾಣಿ 4–1ರಿಂದ ಸುಮೇರ್ ಮ್ಯಾಗೊ ವಿರುದ್ಧ, ಇಶ್‌ಪ್ರೀತ್ ಸಿಂಗ್ 4–2ರಿಂದ ಸಂತೋಷ್ ನಾಯ್ಡು ವಿರುದ್ಧ ಗೆದ್ದರು.

8 ಸಿಕ್ಸರ್ ಸಿಡಿಸಿದ ರಸೆಲ್; ನಾಲ್ಕು ವಿಕೆಟ್ ಉರುಳಿಸಿದ ಉಮೇಶ್; ಮಯಂಕ್ ಬಳಗಕ್ಕೆ ನಿರಾಶೆ

ಕೋಲ್ಕತ್ತ ತಂಡಕ್ಕೆ ಸಿಹಿ; ಕಿಂಗ್ಸ್‌ಗೆ ಕಹಿ

ಮುಂಬೈ: ಎಂಟು ಸಿಕ್ಸರ್ ಸಿಡಿಸಿದ ಆ್ಯಂಡ್ರೆ ರಸೆಲ್ ಮತ್ತು ನಾಲ್ಕು ವಿಕೆಟ್ ಉರುಳಿಸಿದ ಉಮೇಶ್ ಯಾದವ್ ಆಟದ ಮುಂದೆ ಪಂಜಾಬ್ ಕಿಂಗ್ಸ್ ತಂಡವು ತತ್ತರಿಸಿತು. ಕೋಲ್ಕತ್ತ ನೈಟ್ ರೈಡರ್ಸ್ ಜಯದ ಸಂಭ್ರಮ ಆಚರಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ನಾಯಕತ್ವದ ಕೋಲ್ಕತ್ತ 6 ವಿಕೆಟ್‌ಗಳಿಂದ ಜಯಿಸಿತು. ಇದರೊಂದಿಗೆ ತಂಡವು ಟೂರ್ನಿಯಲ್ಲಿ ಎರಡನೇ ಜಯ ಸಾಧಿಸಿತು.

ಟಾಸ್ ಗೆದ್ದ ಕೋಲ್ಕತ್ತ ತಂಡದ ನಾಯಕ ಶ್ರೇಯಸ್ ಅಯ್ಯರ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಉಮೇಶ್ (4-1-23-4) ಬೌಲಿಂಗ್ ಮೋಡಿಯ ಮುಂದೆ ಪಂಜಾಬ್ ಕಿಂಗ್ಸ್ ತಂಡವು 18.2 ಓವರ್‌ಗಳಲ್ಲಿ 137 ರನ್‌ಗಳ ಸಾಧಾರಣ ಮೊತ್ತ ಗಳಿಸುವಲ್ಲಿ ಮಾತ್ರ ಸಫಲವಾಯಿತು. ಇದಕ್ಕುತ್ತರವಾಗಿ ಕೋಲ್ಕತ್ತ ತಂಡವು 14.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 141 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಕೋಲ್ಕತ್ತ ತಂಡಕ್ಕೆ ಒಂದು ಹಂತದಲ್ಲಿ ಆತಂಕ ಎದುರಾಗಿತ್ತು. ಪಂಜಾಬ್ ಬೌಲರ್‌ಗಳ ಛಲದ ಆಟದಿಂದಾಗಿ ಕೋಲ್ಕತ್ತ ತಂಡವು 7 ಓವರ್‌ಗಳಲ್ಲಿ 51 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತು. ಇದರಿಂದಾಗಿ ಪಂಜಾಬ್ ನಾಯಕ ಮಯಂಕ್ ಹುರುಪಾಗಿದ್ದರು. ಆದರೆ ಅವರ ಕನಸಿಗೆ ವಿಂಡೀಸ್ ಆಟಗಾರ ರಸೆಲ್ ತಣ್ಣೀರು ಸುರಿದರು. ಕೇವಲ 31 ಎಸೆತಗಳಲ್ಲಿ 70 ರನ್ ಗಳಿಸಿ ಅಜೇಯರಾಗುಳಿದ ರಸೆಲ್, ಬೌಲರ್‌ಗಳ ಬೆವರಿಳಿಸಿದರು. 225.81ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ರನ್ ಗಳಿಸಿದರು. ಅವರಿಗೆ ಉತ್ತಮ ಜೊತೆ ನೀಡಿದ ಸ್ಯಾಮ್ ಬಿಲಿಂಗ್ಸ್ (24; 23ಎ) ಗಮನ ಸೆಳೆದರು.

ಉಮೇಶ್ ಯಾದವ್

ಆ್ಯಂಡ್ರೆ ರಸೆಲ್ ಆಟದ ವೈಖರಿ– ಪಿಟಿಐ ಚಿತ್ರಗಳು

ಉಮೇಶ್ ಪವರ್ ಪ್ಲೇ: ಐಪಿಎಲ್ ಟೂರ್ನಿಯ ಇತಿಹಾಸದಲ್ಲಿ ಪವರ್ ಪ್ಲೇನಲ್ಲಿ ಒಟ್ಟು 50 ವಿಕೆಟ್‌ಗಳನ್ನು ಗಳಿಸಿದ ಸಾಧನೆಯನ್ನು ಉಮೇಶ್ ಯಾದವ್ ಮಾಡಿದರು. ಈ ಮೂಲಕ ಜಹೀರ್ ಖಾನ್ (52), ಸಂದೀಪ್ ಶರ್ಮಾ (52) ಹಾಗೂ ಭುವನೇಶ್ವರ್ ಕುಮಾರ್ (51) ಅವರ ಸಾಲಿಗೆ ಸೇರಿದರು. ಕಿಂಗ್ಸ್ ಎದುರಿನ ಪಂದ್ಯದಲ್ಲಿ ಅವರು ಇನಿಂಗ್ಸ್‌ನ ಮೊದಲ ಓವರ್‌ನಲ್ಲಿಯೇ ಮಯಂಕ್ ಅಗರವಾಲ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಕೇವಲ ಒಂದು ರನ್ ಗಳಿಸಿದ ಮಯಂಕ್ ನಿರಾಶೆಯಿಂದ ಡಗ್‌ಔಟ್‌ನತ್ತ ಹೆಜ್ಜೆ ಹಾಕಿದರು. ಲಿಯಾಮ್ ಲಿವಿಂಗ್‌ಸ್ಟೋನ್ (19 ರನ್), ಹರಪ್ರೀತ್ ಬ್ರಾರ್ (14; 18ಎ) ಮತ್ತು ರಾಹುಲ್ ಚಾಹರ್ ಅವರ ವಿಕೆಟ್‌ಗಳನ್ನೂ ಉಮೇಶ್ ಉರುಳಿಸಿದರು.

ಪಂಜಾಬ್ ತಂಡದ ಪರವಾಗಿ ಭನುಕಾ ರಾಜಪಕ್ಸ ಕೇವಲ 9 ಎಸೆತಗಳಲ್ಲಿ 31 ರನ್ ಗಳಿಸಿದರು. ಅದರಲ್ಲಿ ಮೂರು ಬೌಂಡರಿ ಮತ್ತು ಮೂರು ಸಿಕ್ಸರ್‌ಗಳಿದ್ದವು. ಇನ್ನೊಂದೆಡೆ ಶಿಖರ್ (16;15ಎ) ಒಂದು ಬೌಂಡರಿ ಮತ್ತು ಒಂದು ಸಿಕ್ಸರ್ ಬಾರಿಸಿದರು. ಕಗಿಸೊ ರಬಾಡ 25 ರನ್‌ಗಳನ್ನು ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಪಂಜಾಬ್ ಕಿಂಗ್ಸ್: 18.2 ಓವರ್‌ಗಳಲ್ಲಿ 137 (ಶಿಖರ್ ಧವನ್ 16, ಭಾನುಕ ರಾಜಪಕ್ಸ 31, ಲಿಯಾಮ್ ಲಿವಿಂಗ್‌ಸ್ಟೋನ್ 19, ಕಗಿಸೊ ರಬಾಡ 25; ಉಮೇಶ್ ಯಾದವ್ 23ಕ್ಕೆ4, ಟಿಮ್ ಸೌಥಿ 36ಕ್ಕೆ2, ಶಿವಂ ಮಾವಿ 39ಕ್ಕೆ1, ಸುನಿಲ್ ನಾರಾಯಣ್ 23ಕ್ಕೆ1) ಕೋಲ್ಕತ್ತ ನೈಟ್ ರೈಡರ್ಸ್: 14.3 ಓವರ್‌ಗಳಲ್ಲಿ 4ಕ್ಕೆ141 (ಅಜಿಂಕ್ಯ ರಹಾನೆ 12, ಶ್ರೇಯಸ್ ಅಯ್ಯರ್ 26, ಸ್ಯಾಮ್ ಬಿಲಿಂಗ್ಸ್ ಔಟಾಗದೆ 24, ಆ್ಯಂಡ್ರೆ ರಸೆಲ್ ಔಟಾಗದೆ 70, ರಾಹುಲ್ ಚಾಹರ್ 13ಕ್ಕೆ2, ಕಗಿಸೊ ರಬಾಡ 23ಕ್ಕೆ1, ಒಡೀನ್ ಸ್ಮಿತ್ 39ಕ್ಕೆ1) ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ 6 ವಿಕೆಟ್‌ಗಳ ಜಯ.

ಮುಂಬೈಗೆ ಸೂರ್ಯ ಬಲ

ಆತ್ಮವಿಶ್ವಾಸದಲ್ಲಿ ರಾಜಸ್ಥಾನ ರಾಯಲ್ಸ್ ತಂಡ

ಮುಂಬೈ(ಪಿಟಿಐ): ಮೊದಲ ಪಂದ್ಯದಲ್ಲಿ ಜಯದ ಬೆಲ್ಲದ ಸಿಹಿಯುಂಡು ಆತ್ಮವಿಶ್ವಾಸದ ಉತ್ತುಂಗದಲ್ಲಿರುವ ರಾಜಸ್ಥಾನ ರಾಯಲ್ಸ್ ಮತ್ತು ಆರಂಭದಲ್ಲಿಯೇ ಸೋಲಿನ ಕಹಿಯುಂಡಿರುವ ಮುಂಬೈ ಇಂಡಿಯನ್ಸ್ ಶನಿವಾರ ಮುಖಾಮುಖಿಯಾಗಲಿವೆ.

ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ಬಳಗವು ತನ್ನ ಮೊದಲ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಜಯಿಸಿತ್ತು. ಆ ಪಂದ್ಯದಲ್ಲಿ ಸಂಜು ಮತ್ತು ದೇವದತ್ತ ಪಡಿಕ್ಕಲ್ ಅಮೋಘ ಬ್ಯಾಟಿಂಗ್ ಮಾಡಿದ್ದರು. ವಿಂಡೀಸ್ ಆಟಗಾರ ಹೆಟ್ಮೆಯರ್ ಕೂಡ ಅಬ್ಬರಿಸಿದ್ದರು. ಅದರಿಂದಾಗಿ ದೊಡ್ಡ ಮೊತ್ತ ಪೇರಿಸಿತ್ತು. ಐಪಿಎಲ್‌ನ 'ಸ್ಟಾರ್' ಸ್ಪಿನ್ನರ್ ಯಜುವೇಂದ್ರ ಚಾಹಲ್ ಮತ್ತು ಕನ್ನಡಿಗ ಪ್ರಸಿದ್ಧ ಕೃಷ್ಣ ರಾಯಲ್ಸ್ ಗೆಲುವಿನ ಹಾದಿಯನ್ನು ಸುಗಮಗೊಳಿಸಿದ್ದರು. ಮುಂಬೈ ಎದುರಿನ ಪಂದ್ಯದಲ್ಲಿಯೂ ಅದೇ ತಂಡವನ್ನು ಕಣಕ್ಕಿಳಿಸುವುದು ಬಹುತೇಕ ಖಚಿತವಾಗಿದೆ.

ಆದರೆ, ರೋಹಿತ್ ಶರ್ಮಾ ನಾಯಕತ್ವದ ಮುಂಬೈ ಬಳಗವು ಡೆಲ್ಲಿ ಕ್ಯಾಪಿಟಲ್ಸ್ ಎದುರು ಬ್ಯಾಟಿಂಗ್‌ನಲ್ಲಿ ಮಿಂಚಿತ್ತು. ಆದರೆ, ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸಿತ್ತು. ಜಸ್‌ಪ್ರೀತ್ ಬೂಮ್ರಾ, ಡ್ಯಾನಿಲ್ ಸ್ಯಾಮ್ಸ್ ವಿಕೆಟ್ ಪಡೆಯುವಲ್ಲಿ ವಿಫಲರಾಗಿದ್ದರು. ಬಾಸಿಲ್ ಥಂಪಿ ಮತ್ತು ಮುರುಗನ್ ಅಶ್ವಿನ್ ಯಶಸ್ವಿಯಾಗಿದ್ದರೂ ತಂಡದ ಗೆಲುವು ಸಾಧ್ಯವಾಗಿರಲಿಲ್ಲ. ಆದರೆ ಬ್ಯಾಟಿಂಗ್‌ನಲ್ಲಿ ಹೆಚ್ಚು ಚಿಂತೆಯಿಲ್ಲ. ರೋಹಿತ್, ಇಶಾನ್ ಕಿಶನ್ ಮತ್ತು ತಿಲಕ್ ವರ್ಮಾ ಉತ್ತಮ ಲಯದಲ್ಲಿದ್ದಾರೆ. ಸೂರ್ಯಕುಮಾರ್ ಯಾದವ್ ಮರಳಿರುವುದು ತಂಡದ ಬಲ ಹೆಚ್ಚಿಸಿದೆ. ಬೌಲಿಂಗ್‌ನಲ್ಲಿ ಸುಧಾರಣೆಯಾದರೆ ಎದುರಾಳಿ ಬಳಗಕ್ಕೆ ಕಠಿಣ ಪೈಪೋಟಿಯೊಡ್ಡಲು ತಂಡಕ್ಕೆ ಸಾಧ್ಯವಾಗಲಿದೆ.

ಇಂದಿನ ಪಂದ್ಯಗಳು

ಮುಂಬೈ ಇಂಡಿಯನ್ಸ್–ರಾಜಸ್ಥಾನ ರಾಯಲ್ಸ್
ಸ್ಥಳ: ಡಾ.ಡಿ.ವೈ. ಪಾಟೀಲ ಕ್ರೀಡಾಂಗಣ, ನವಿಮುಂಬೈ
ಸಮಯ: ಮಧ್ಯಾಹ್ನ 3.30ರಿಂದ

ಗುಜರಾತ್ ಟೈಟನ್ಸ್–ಡೆಲ್ಲಿ ಕ್ಯಾಪಿಟಲ್ಸ್
ಸ್ಥಳ: ಎಂಸಿಎ, ಪುಣೆ
ರಾತ್ರಿ 7.30ರಿಂದ

ಭಾನುವಾರದ ಪಂದ್ಯ

ಚೆನ್ನೈ ಸೂಪರ್ ಕಿಂಗ್ಸ್–ಪಂಜಾಬ್ ಕಿಂಗ್ಸ್
ಸ್ಥಳ: ಬ್ರೆಬೋರ್ನ್ ಕ್ರೀಡಾಂಗಣ, ಮುಂಬೈ
ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಹಾಟ್‌ಸ್ಟಾರ್.

ಹಾರ್ದಿಕ್ ಬಳಗಕ್ಕೆ ರಿಷಭ್ ಸವಾಲು

ಪುಣೆ (ಪಿಟಿಐ): ಛಲದ ಹೋರಾಟಗಾರ ರಿಷಭ್ ಪಂತ್ ಮತ್ತು ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರ ನಾಯಕತ್ವದ ತಂಡಗಳು ಶನಿವಾರ ಮಹಾರಾಷ್ಟ್ರ ಕ್ರಿಕೆಟ್ ಮೈದಾನದಲ್ಲಿ ಮುಖಾಮುಖಿಯಾಗಲಿವೆ.

ಐಪಿಎಲ್ ಟೂರ್ನಿಯಲ್ಲಿ ಎರಡೂ ತಂಡಗಳು ತಲಾ ಒಂದು ಪಂದ್ಯ ಆಡಿವೆ. ರಿಷಭ್ ನಾಯಕತ್ವದ ಡೆಲ್ಲಿ ತಂಡವು ಮುಂಬೈ ಇಂಡಿಯನ್ಸ್ ಎದುರು ಮತ್ತು ಹಾರ್ದಿಕ ಪಾಂಡ್ಯ ಮುಂದಾಳತ್ವದ ಗುಜರಾತ್ ಟೈಟನ್ಸ್ ತಂಡವು ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಜಯಿಸಿವೆ.

ಹಾರ್ದಿಕ್ ಪಾಂಡ್ಯ

ಡೆಲ್ಲಿ ತಂಡದಲ್ಲಿ ಪೃಥ್ವಿ ಶಾ, ರಿಷಭ್, ಲಲಿತ್ ಯಾದವ್, ರೋವ್ಮನ್ ಪಾಲ್, ಆಲ್‌ರೌಂಡರ್ ಅಕ್ಷರ್ ಪಟೇಲ್, ಮನದೀಪ್ ಸಿಂಗ್, ಶಾರ್ದೂಲ್ ಠಾಕೂರ್ ಅವರು ತಂಡದ ಪ್ರಮುಖ ಶಕ್ತಿಯಾಗಿದ್ದಾರೆ. ಇದೀಗ ಮೂರು ದಿನಗಳ ಕ್ವಾರಂಟೈನ್ ಮುಗಿಸಿರುವ ಲುಂಗಿ ಗಿಡಿ, ಮುಸ್ತಫಿಜುರ್ ರೆಹಮಾನ್ ಮತ್ತು ಸರ್ಫರಾಜ್ ಖಾನ್ ಕೂಡ ಕಣಕ್ಕಿಳಿಯಲು ತುದಿಗಾಲಿನಲ್ಲಿ ನಿಂತಿದ್ದಾರೆ.

ಇದೇ ಮೊದಲ ಬಾರಿಗೆ ಐಪಿಎಲ್‌ನಲ್ಲಿ ಆಡುತ್ತಿರುವ ಗುಜರಾತ್ ತಂಡವೂ ಗೆಲುವಿನ ಆರಂಭದಿಂದ ಆತ್ಮವಿಶ್ವಾಸದಲ್ಲಿದೆ.

ಪ್ರೇಕ್ಷಕರ ಪ್ರವೇಶ: ಶೇ 50ಕ್ಕೆ ಹೆಚ್ಚಳ:ಮುಂಬೈ ಮತ್ತು ಪುಣೆಯಲ್ಲಿ ನಡೆಯುತ್ತಿರುವ ಐಪಿಎಲ್ ಟೂರ್ನಿಯ ಪಂದ್ಯಗಳನ್ನು ಕ್ರೀಡಾಂಗಣದಲ್ಲಿ ವೀಕ್ಷಿಸುವವರ ಸಂಖ್ಯೆಯನ್ನು ಇದೇ ಆರರಿಂದ ಶೇ 50ಕ್ಕೆ ಏರಿಸಲಾಗುತ್ತಿದೆ ಎಂದು ಟಿಕೆಟ್ ಮಾರಾಟದ ಉಸ್ತುವಾರಿ ವಹಿಸಿರುವ ಬುಕ್‌ಮೈ ಶೋ ಸಂಸ್ಥೆಯು ತಿಳಿಸಿದೆ.

ಆಸ್ಟ್ರೇಲಿಯಾ– ಇಂಗ್ಲೆಂಡ್ ತಂಡಗಳ ಮುಖಾಮುಖಿ ನಾಳೆ

ಮಹಿಳಾ ವಿಶ್ವಕಪ್ ಫೈನಲ್: ಲಕ್ಷ್ಮೀ ರೆಫರಿ

ಕ್ರೈಸ್ಟ್‌ಚರ್ಚ್ (ಪಿಟಿಐ): ಭಾರತದ ಜಿ.ಎಸ್. ಲಕ್ಷ್ಮೀ ಅವರು ಭಾನುವಾರ ನಡೆಯಲಿರುವ ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ರೆಫರಿಯಾಗಿ ಕಾರ್ಯನಿರ್ವಹಿಸುವರು.

ಹೆಗ್ಲಿ ಓವಲ್‌ನಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ತಂಡಗಳು ಮುಖಾಮುಖಿಯಾಗಲಿವೆ.

ಐಸಿಸಿ ಅಂತರರಾಷ್ಟ್ರೀಯ ಮ್ಯಾಚ್ ರೆಫರಿ ಪ್ಯಾನಲ್‌ನಲ್ಲಿ ಸ್ಥಾನ ಮೊದಲ ಭಾರತೀಯ ಮಹಿಳೆಯ ಎಂಬ ಹೆಗ್ಗಳಿಕೆ ಲಕ್ಷ್ಮೀ ಅವರದ್ದು. 2020ರಲ್ಲಿ ಯುಎಇಯಲ್ಲಿ ನಡೆದಿದ್ದ ಪುರುಷರ ವಿಶ್ವಕಪ್ ಲೀಗ್ 2 ಏಕದಿನ ಪಂದ್ಯದಲ್ಲಿ ಕಾರ್ಯನಿರ್ವಹಿಸಿದ್ದರು. ಈ ಸಾಧನೆ ಮಾಡಿದ ಮೊದಲ ಮಹಿಳೆಯೆಂಬ ಶ್ರೇಯವೂ ಅವರಿಗೆ ಇದೆ.

ಜಿ.ಎಸ್. ಲಕ್ಷ್ಮೀ

ದಕ್ಷಿಣ ಆಫ್ರಿಕಾದ ಲಾರೆನ್ ಏಜೆನ್‌ಬ್ಯಾಗ್ ಮತ್ತು ನ್ಯೂಜಿಲೆಂಡ್‌ನ ಕಿಮ್ ಕಾಟನ್ ಅವರು ಫೀಲ್ಡ್ ಅಂಪೈರ್ ಆಗಿ ಕಾರ್ಯನಿರ್ವಹಿಸಲಿದ್ದಾರೆ. ವೆಸ್ಟ್ ಇಂಡೀಸ್‌ನ ಜಾಕ್ವೆಲಿನ್ ವಿಲಿಯಮ್ಸ್ ಟಿವಿ ಅಂಪೈರ್ ಆಗಿದ್ದಾರೆ.

ಆಸ್ಟ್ರೇಲಿಯಾ ತಂಡವು ಟೂರ್ನಿಯಲ್ಲಿ ಒಂದೂ ಪಂದ್ಯದಲ್ಲಿ ಸೋತಿಲ್ಲ. ಸೆಮಿಫೈನಲ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಜಯಿಸಿತ್ತು. ಇಂಗ್ಲೆಂಡ್ ತಂಡವು ಲೀಗ್ ಹಂತದಲ್ಲಿ ಏಳು ಪಂದ್ಯಗಳಲ್ಲಿ ಆಡಿ ನಾಲ್ಕರಲ್ಲಿ ಗೆದ್ದಿತ್ತು. ನಾಲ್ಕರ ಘಟ್ಟದಲ್ಲಿ ದಕ್ಷಿಣ ಆಫ್ರಿಕಾ ಎದುರು ಜಯಿಸಿತ್ತು.

ಪಂದ್ಯದ ಆರಂಭ: ಬೆಳಿಗ್ಗೆ 6.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಐಪಿಎಲ್ ಮಾಧ್ಯಮ ಹಕ್ಕು ಬಿಡ್ ಎಲ್ಲರಿಗೂ ಮುಕ್ತ: ಧುಮಾಲ್

ನವದೆಹಲಿ(ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ 2023–2027ರ ಅವಧಿಯ ಮಾಧ್ಯಮ ಹಕ್ಕುಗಳಿಗಾಗಿ ಬಿಡ್ ಸಲ್ಲಿಸುವ ಮುಕ್ತ ಅವಕಾಶವನ್ನು ಎಲ್ಲರಿಗೂ ನೀಡಲಾಗಿದೆ. ಸಾಧಾರಣ ಆಟಗಾರನೂ ಬಿಡ್ ಸಲ್ಲಿಸಬಹುದಾಗಿದೆ. ವಿಶೇಷ ಮೀಸಲು ಪದ್ಧತಿ ತೆಗೆದಿರುವುದೇ ಇದಕ್ಕೆ ಕಾರಣ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಖಜಾಂಚಿ ಅರುಣ ಧುಮಾಲ್ ಹೇಳಿದ್ದಾರೆ.

ಬಿಸಿಸಿಐ ಈಚೆಗಷ್ಟೇ ಟೆಂಡರ್ ಆಹ್ವಾನಿಸಿದೆ. ಈ ಕುರಿತು ಮಾತನಾಡಿದ ಧುಮಾಲ್, 'ಕಳೆದ ಬಾರಿ ಸ್ಟಾರ್ ಇಂಡಿಯಾ ಪಡೆದ ಬಿಡ್‌ಗಿಂತಲೂ ಈ ಬಾರಿಯದ್ದು ದುಪ್ಪಟ್ಟು ಮೊತ್ತದ (₹ 33000 ಕೋಟಿ) ಮೂಲಬೆಲೆಯನ್ನು ನಿಗದಿ ಮಾಡಲಾಗಿದೆ' ಎಂದರು.

ಪ್ಯಾಕೇಜ್ ಎ (ಭಾರತ ಉಪಖಂಡದ ಟಿವಿ ಹಕ್ಕುಗಳು)ನಲ್ಲಿ ಪಂದ್ಯವೊಂದಕ್ಕೆ ₹ 49 ಕೋಟಿ, ಪ್ಯಾಕೇಜ್ ಬಿ (ಭಾರತ ಉಪಖಂಡದ ಡಿಜಿಟಲ್ ಹಕ್ಕುಗಳು) ಪಂದ್ಯವೊಂದಕ್ಕೆ ₹ 33 ಕೋಟಿ, ಸಿ ಪ್ಯಾಕೇಜ್ (ನಾನ್ ಎಕ್ಸ್‌ಕ್ಲುಸಿವ್ ಡಿಜಿಟಲ್ ಹಕ್ಕುಗಳು) ₹ 16 ಕೋಟಿ ಮತ್ತು ಡಿ ಪ್ಯಾಕೇಜ್ (ರೆಸ್ಟ್ ಆಫ್ ದಿ ವರ್ಲ್ಡ್ ಟಿವಿ ಮತ್ತು ಡಿಜಿಟಲ್ ರೈಟ್ಸ್) ನಲ್ಲಿ ಪ್ರತಿ ಪಂದ್ಯಕ್ಕೆ ₹ 3 ಕೋಟಿ ಮೂಲಬೆಲೆ ನಿಗದಿ ಮಾಡಲಾಗಿದೆ.

ಬಿಡ್‌ಗೆ ಸಂಬಂಧಿಸಿದ ಅರ್ಜಿ ದಾಖಲೆಗಳನ್ನು ಪಡೆಯಲು ₹ 25 ಲಕ್ಷ ಶುಲ್ಕ ಪಾವತಿಸಬೇಕು.

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಆ್ಯಂಡ್ರೆ ರಸೆಲ್	ಕೋಲ್ಕತ್ತ	95
ಫಫ್ ಡುಪ್ಲೆಸಿ	ಬೆಂಗಳೂರು	93
ಇಶಾನ್ ಕಿಶನ್	ಮುಂಬೈ	81

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಉಮೇಶ್	ಕೋಲ್ಕತ್ತ	8
ಟಿಮ್ ಸೌಥಿ	ಕೋಲ್ಕತ್ತ	5
ಹಸರಂಗ	ಬೆಂಗಳೂರು	5

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಕೋಲ್ಕತ್ತ	3	2	1	0	0	4
ರಾಜಸ್ಥಾನ	1	1	0	0	0	2
ಡೆಲ್ಲಿ	1	1	0	0	0	2
ಗುಜರಾತ್	1	1	0	0	0	2
ಲಖನೌ	2	1	1	0	0	2
ಬೆಂಗಳೂರು	2	1	1	0	0	2
ಪಂಜಾಬ್	2	1	1	0	0	2
ಚೆನ್ನೈ	2	0	2	0	0	0
ಮುಂಬೈ	1	0	1	0	0	0
ಹೈದರಾಬಾದ್	1	0	1	0	0	0

* ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket



ಪ್ರಜಾವಾಣಿ ಶನಿವಾರ, 2 ಏಪ್ರಿಲ್ 2022

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಕಲೆ: ಭಾವು ಪತ್ತಾರ್

> ಯುಗಾದಿಯ ಸಮಯದಲ್ಲಿ ವಸಂತ ತುಂಬಿಕೊಡುವ ಸೊಗಸನ್ನು, ಸಂತಸವನ್ನು ಆಸ್ವಾದಿಸುವಾಗ ಬಾಲ್ಯದ ನೆನಪುಗಳು ಮೆರವಣಿಗೆ ಹೊರಡುತ್ತವೆ. ಈ ಬಾರಿಯ ಹಬ್ಬದ ಸಂಭ್ರಮದಲ್ಲಿ ಅಂಥ ನೆನಪುಗಳ 'ಬೇವು–ಬೆಲ್ಲ'ವನ್ನು ಸವಿಯೋಣ ಬನ್ನಿ...

ಯುಗ ಯುಗಗಳೇ ಸಾಗಿದರೂ ಯುಗಾದಿಯ ನೆನಪೇ ಸುಂದರ...

ಡಾ.ಮಂಜುಳಾ ಹುಲ್ಲಹಳ್ಳಿ

ಮಾಗಿಯ ಚಳಿಯನ್ನು ಸಂಪೂರ್ಣವಾಗಿ ನಿವಾರಿಸಿ, ಗಿಡ–ಮರ–ಬಳ್ಳಿಗಳಿಗೆ ಚಿಗುರಿನ ನವಿರಂಗಿ ತೊಡಿಸಿ, ಗಿಳಿ–ಕೋಗಿಲೆ–ಗೊರವಂಕದಂತಹ ನೂರಾರು ಹಕ್ಕಿಗಳ ಕಲರವಕ್ಕೆ ಹೊಸ ಭಾಷ್ಯ ಬರೆಯುತ್ತ; ಬೇವಿನ ಹೂಗಳ ಪರಿಮಳಕ್ಕೆ ಮಾವಿನ ಸೊಂಪು, ಮಲ್ಲಿಗೆ ಬಯಲಿನ ಕಂಪು, ಗಾಳಿಯ ತಂಪು ಎಲ್ಲವೂ ಒಟ್ಟಾಗಿ ಒದಗಿಬರುವ ಅಪೂರ್ವ ದಿನವೇ ಯುಗಾದಿ ಹಬ್ಬ.

ಯುಗಾದಿ ಹಬ್ಬವನ್ನು ನೆನದಾಗಲೆಲ್ಲ ಮನಸ್ಸು ಬಾಲ್ಯದಂಗಳಕ್ಕೆ ಜಿಗಿಯುತ್ತದೆ. ಈ ಹಬ್ಬದ ದಿನ ಮುಂಜಾನೆ ಬೇಗನೆ ಎದ್ದು, ಎಣ್ಣೆ ಸ್ನಾನ ಮಾಡಿ, ತೋಯ್ದ ಉದ್ದ ಕೂದಲನ್ನು ಬೆನ್ನ ತುಂಬೆಲ್ಲಾ ಹರಡಿಕೊಂಡು, ಹೊಸ ಬಟ್ಟೆ ಧರಿಸಿ ತುಂಬು ಆನಂದವನ್ನು ಮನದಾಳದಿಂದ ಅನುಭವಿಸುತ್ತಾ ನೆರಿಗೆ ಲಂಗಗಳನ್ನು ಕಾಲುಗಳಿಂದ ಚಿಮ್ಮಿಸುತ್ತಾ ನಡೆಯುವುದೆಂದರೆ ಜಗವನ್ನೇ ಗೆದ್ದ ಸಂಭ್ರಮ. ಹಬ್ಬದ ಹೆಸರಿನಲ್ಲಿ ಊರಿನ ಮನೆ ಮನೆಗೂ ಹೊಕ್ಕು ಹಿರಿಯರಿಗೆ ಬೇವು–ಬೆಲ್ಲ ನೀಡಿ ಅವರ ಪಾದಗಳಿಗೆ ನಮಿಸಿ ಆಶೀರ್ವಾದ ಪಡೆಯುತ್ತಿದ್ದದ್ದು ಅಪರೂಪದ ಸವಿನೆನಪು. ಆ ಹಿರಿಯರ ಮುಖಗಳನ್ನೆಲ್ಲಾ ಈ ನೆನಪುಗಳಲ್ಲೇ ಅವಲೋಕಿಸಬೇಕು.

ಈ ಹಬ್ಬದಲ್ಲಿ ಗಿಡ–ಮರಗಳಲ್ಲಿ ಚಿಗುರಿನ ಸಂಭ್ರಮವಿದ್ದರೆ, ನಮ್ಮೂರಿನ ದೇವಾಲಯಗಳ ಮಹಾದ್ವಾರಗಳು ಮಾವು–ಬೇವು ತೋರಣಗಳಿಂದ ಕಂಗೊಳಿಸುತ್ತಿದ್ದವು. ದೇಗುಲದ ಒಳಗೆಲ್ಲ ಥರಥರದ ಹೂಮಾಲೆಗಳ ತೋರಣಗಳು. ಗರ್ಭಗುಡಿಯ ಮಂದಾರತಿ, ಅರ್ಚಕರ ಮಂತ್ರ ಘೋಷಗಳು, ಕರ್ಪೂರ ಸುಗಂಧ ಕಡ್ಡಿಗಳ ಪರಿಮಳ, ದೇಗುಲದ ಒಳಹೊರಗೆಲ್ಲ ಅಡ್ಡಾಡುವ ಜನರು, ಅಂಗಳದ ತುಂಬೆಲ್ಲ ರಾರಾಜಿಸುತ್ತಿದ್ದ ರಂಗವಲ್ಲಿಗಳು, ಇವುಗಳ ಮಧ್ಯೆ ಎಲ್ಲರ ಕೇಂದ್ರ ಬಿಂದುವಾಗಿ ಹೊಳೆದು ಮೆರೆಯುತ್ತಿದ್ದ ಮಲ್ಲಿಕಾರ್ಜುನ ಮತ್ತು ವರದರಾಜರು ಈಗಲೂ ಕಣ್ತುಂಬಿ ಬರುತ್ತಾರೆ.

ಹೀಗೆ ಯುಗಾದಿ ಹಬ್ಬದ ರಂಗಿನ ಸಂಭ್ರಮ ಮೆಲುಕು ಹಾಕುವಾಗ, ಇದೇ ಹಬ್ಬದ ದಿನ ಬೆಳ್ಳಂಬೆಳಗ್ಗೆಯೇ ಹೊನ್ನೇರು ಕಟ್ಟುತ್ತಿದ್ದ ಅಪ್ಪ ನೆನಪಾಗುತ್ತಾರೆ. ಹೊನ್ನೇರು ಕಟ್ಟುವುದೆಂದರೆ ಏನೆಂಬ ನನ್ನ ಪ್ರಶ್ನೆಗೆ ಅಮ್ಮ 'ಚಿನ್ನದ ಉಂಗುರವನ್ನು ನೇಗಿಲಿನ ಮೊನೆಗೆ ಕಟ್ಟಿ ಮೊದಲ ಉಳುಮೆ ಮಾಡುವುದು' ಎಂದಳು. ಅಷ್ಟಕ್ಕೆ ನನ್ನ ಕಲ್ಪನೆಯ ರಮ್ಯತೆ ಮುಗಿಲು ಮುಟ್ಟಿಯೇ ಬಿಟ್ಟಿತ್ತು! ಅಲ್ಲಿಂದ ಮುಂದೆ 'ನನ್ನ ಅಪ್ಪ ಚಿನ್ನದ ಉಂಗುರ ಬಿತ್ತಿ ಅನ್ನ ಬೆಳೆಯುತ್ತಾರೆ' ಎಂದು ಹೇಳಿಕೊಂಡೇ ತಿರುಗುತ್ತಿದ್ದೆ!

ಊರಿನ ಬೀದಿ ಬೀದಿಗಳಲ್ಲಿ ದೊಡ್ಡವರು ಮಕ್ಕಳೆನ್ನದೆ ಪಂಥ ಕಟ್ಟಿಕೊಂಡು ಆಡುತ್ತಿದ್ದ ಕವಡೆ, ಪಂಜ, ಇಸ್ಪೀಟು ಮತ್ತಿತರ ಸೋಲು–ಗೆಲುವು ನಿರ್ಧರಿಸುವ ಆಟಗಳು ಎಲ್ಲೆಂದರಲ್ಲಿ, ಸ್ಥಳ ಸಿಕ್ಕಲ್ಲೆಲ್ಲ ನಡೆಯುತ್ತಿದ್ದವು. ಕುತೂಹಲ ತಡೆಯಲಾರದೆ ಅವನ್ನು ನೋಡಲು ನಾನೂ ನಿಂತೆ. ನಂತರದ ಹಬ್ಬವನ್ನು ಹೇಗೆ ಹೇಳುವುದು! ಮನೆಗೆ ಹೋದ ಕೂಡಲೇ ಕಂಡಲ್ಲೆಲ್ಲ ನಿಲ್ಲುವೆಯಾ ಎಂದು ಅಮ್ಮ ಕೊಟ್ಟ 'ಕಜ್ಜಾಯ'ಗಳನ್ನು(ಏಟು)

ತಿಂದು ಹಬ್ಬದೂಟವನ್ನೂ ಮಾಡದೆ ಅಳುತ್ತಾ ಮಲಗಿದುದು ಪ್ರತಿ ಹಬ್ಬದಲ್ಲೂ ಧುತ್ತೆಂದು ಎದುರು ನಿಲ್ಲುತ್ತದೆ.

ನನ್ನ ಬಾಲ್ಯ ಹಳ್ಳಿಯ ಊರೊಟ್ಟಿನ ಯುಗಾದಿ ಹಬ್ಬದ ಸ್ಮರಣೆಯೋಕುಳಿ. ಆದರೆ, ಈಗಿನ ನಮ್ಮ ನಗರಗಳಲ್ಲಿ ಯುಗಾದಿ ಹಬ್ಬದ ಆಚರಣೆ ಮನೆ ಮನೆಗೂ ಭಿನ್ನವಾಗಿರುತ್ತದೆ. ಆಗ ಯುಗಾದಿ ಹಬ್ಬದ ಆಚರಣೆಗೆ ಅದೆಷ್ಟು ನೀತಿ ನಿಯಮಗಳು. ಎಲ್ಲವನ್ನೂ ಪರಿಪಾಲಿಸಿ, ತಂಗಿ ತಮ್ಮಂದಿರನ್ನು ಸುಧಾರಿಸಿ ಅಮ್ಮನಿಂದ ಸೈ ಅನ್ನಿಸಿ ಕೊಳ್ಳುವುದೇ ದೊಡ್ಡ ಸವಾಲಾಗಿತ್ತು. ಆದರೀಗ ಆ ರೀತಿಯ ತೊಡಕುಗಳೇ ಇಲ್ಲ. ಇಂದಿನ ನಮ್ಮ ಯುಗಾದಿ ಬೇರೆ ಹಬ್ಬಗಳಂತೆ ನೀತಿ ನಿಯಮಾವಳಿಗಳ ಪ್ರಭು ಸಂಹಿತೆಯದಲ್ಲ. ಮನೆಮನೆಯ ತಪಸ್ವಿನಿಯರಾದ ಗೃಹಿಣಿಯರಿಗೆ 'ನಿಮಗೆ ಸರಿ ಅನಿಸಿದ್ದನ್ನು ಸರಿಯಾದ ರೀತಿಯಲ್ಲಿ ಮಾಡಿ' ಎನ್ನುವ ಮಿತ್ರ ಸಂಹಿತೆ. ಉದ್ಯೋಗಸ್ಥ ಮಹಿಳೆಯರ ಪಾಲಿಗಂತೂ ಅವರ ಮನ ಬಯಸಿದಂತೆ ಆಚರಿಸಲು ಅವಕಾಶ ನೀಡುವ ಕಾಂತಾಸಂಹಿತೆಯೇ!

ಈಗಿನ ಯುಗಾದಿಯಲ್ಲಿ ಬಾಲ್ಯದಲ್ಲಿದ್ದ ಸಂಭ್ರಮವಿಲ್ಲ. ಆದರೆ, ಬೆಳಿಗ್ಗೆ ಎದ್ದು, ಮನೆ ಗುಡಿಸಿ, ಸಾರಿಸಿ, ರಂಗವಲ್ಲಿ ಇರಿಸಿ, ಮಿಂದು ಮಡಿಯುಟ್ಟು, ಮನೆದೇವರನ್ನು ಪೂಜಿಸಿ, ಬೇವು ಬೆಲ್ಲ ಮಿಶ್ರಣದ ನೈವೇದ್ಯವನ್ನು ಸಲ್ಲಿಸಿದರೆ ಒಂದು ಹಂತ ಮುಗಿದಂತೆ. ಒಬ್ಬಟ್ಟು, ಚಿತ್ರಾನ್ನ, ಹೆಸರುಬೇಳೆ ಕೋಸಂಬರಿ, ಒಬ್ಬಟ್ಟಿನ ಸಾರು, ಮೊಸರನ್ನ ಮಾಡಿ ಮನೆ ಜನರನ್ನು ಸಂತೃಪ್ತಗೊಳಿಸಿದರೆ ಮತ್ತೊಂದು ಪ್ರಧಾನ ಹಂತದ ಸಮಾಪ್ತಿ!

ಹಬ್ಬದ ಕಾರ್ಯವನ್ನು ಪೂರೈಸಿ, ಸಮೀಪದ ದೇವಾಲಯಕ್ಕೆ ಭೇಟಿ ಕೊಟ್ಟು, ಬೇವು–ಬೆಲ್ಲ ಸವಿದು ಸಾಧ್ಯವಾದರೆ ಪಂಚಾಂಗ ಶ್ರವಣ ಕೇಳಿ ಉಳಿದಂತೆ ನೆಮ್ಮದಿಯ ವಿಶ್ರಾಂತಿ ಪಡೆಯಲು ಸಾಧ್ಯ ಮಾಡಿಕೊಡುವ ಈ ಹಬ್ಬವೆಂದರೆ ಈಗಲೂ ನಿಜಕ್ಕೂ ಮನದ ಮೆಚ್ಚು!

ಇಂಥ ಯುಗಾದಿಯ ಸಂಭ್ರಮದಲ್ಲಿ 'ವಸಂತ' ತುಂಬಿಕೊಡುವ ಸೊಗಸನ್ನು ಆಸ್ವಾದಿಸುವ ದಾಹ ಜನ್ಮಜನ್ಮಾಂತರಗಳನ್ನು ಎತ್ತಿ ಬಂದರೂ ತೀರುವುದಿಲ್ಲ ಎನ್ನುವುದೇ ಸತ್ಯ. ಅದಕ್ಕೇ ನಮ್ಮ ಯುಗದ ಆದಿಯ ಬಂಧು ಸನತ್ಕುಮಾರದೇವನನ್ನು ಕವಿ ಬೇಂದ್ರೆ ಕೇಳಿದ್ದು, 'ನಮಗೆ ಒಂದೇ ಒಂದು ಜನ್ಮವನ್ನು, ಒಂದೇ ಬಾಲ್ಯ, ಒಂದೇ ಹರೆಯವನ್ನು ಕೊಟ್ಟು ಸುಮ್ಮನಾದೆಯಲ್ಲ ಮಹಾನುಭಾವ, ನಮಗೂ ವರುಷ ವರುಷಕ್ಕೂ ಹೊಸತು ಜನ್ಮ, ಹರುಷಕೊಂದು ಹೊಸತಿನ ನೆಲೆಯನ್ನು ನೀಡಬಾರದಿತ್ತಾ' ಎಂದು!

ಅದಾಗುವುದಿಲ್ಲವಲ್ಲ! ಹೋಗಲಿ ಬಿಡಿ. ಇರುವುದನ್ನು ಇರುವಂತೆಯೇ ಒಪ್ಪಿಕೊಂಡು, ಅಪ್ಪಿಕೊಂಡು ಬೇವು–ಬೆಲ್ಲದಂತೆ ನೋವು–ನಲಿವುಗಳನ್ನು ಮೆಲ್ಲುತ್ತಾ ಮುಂದೆ ಸಾಗುವ, ಸಾಗುತ್ತಲೇ ಇರುವ!

ಈ ಯುಗಾದಿ ಮತ್ತೇ ಬರುತ್ತದೆ!!!

ಯುಗಾದಿಗೆ ಸಿಹಿ ತಿನಿಸಿನ ತೋರಣ

ವೇದಾವತಿ. ಎಚ್. ಎಸ್.

ಸೂರ್ಯಕಲಾ

ಬೇಕಾಗುವ ಸಾಮಗ್ರಿಗಳು: ಕರಿಯಲು ಎಣ್ಣೆ, ಹಿಟ್ಟು ತಯಾರಿಸಲು: ಮೈದಾ – 2ಕಪ್ (250 ಗ್ರಾಂ), ತುಪ್ಪ – 3 ಟೇಬಲ್ ಚಮಚ, ಉಪ್ಪು – ಕಾಲು ಟೀ ಚಮಚ, ನೀರು – ಅಂದಾಜು ಅರ್ಧ ಕಪ್.

ಸಕ್ಕರೆ ಪಾಕ ತಯಾರಿಸಲು: ಸಕ್ಕರೆ – ಒಂದೂವರೆ ಕಪ್, ನೀರು – ಒಂದೂವರೆ ಕಪ್, ಏಲಕ್ಕಿ ಪುಡಿ – ಅರ್ಧ ಟೀ ಚಮಚ, ಕೇಸರಿ ದಳ – ಅರ್ಧ ಟೀ ಚಮಚ, ನಿಂಬೆರಸ – 1 ಟೀ ಚಮಚ

ಹೂರಣ ತಯಾರಿಸಲು: ಸಿಹಿ ಇಲ್ಲದ ಕೋವಾ – 200 ಗ್ರಾಂ, ಚಿಕ್ಕದಾಗಿ ಕತ್ತರಿಸಿದ ಗೋಡಂಬಿ, ಬಾದಾಮಿ, ಪಿಸ್ತಾ ಎಲ್ಲವನ್ನೂ 10ರಂತೆ ತೆಗೆದುಕೊಳ್ಳಿ, ಪುಡಿ ಮಾಡಿದ ಸಕ್ಕರೆ 3 ಟೇಬಲ್ ಚಮಚ, ಏಲಕ್ಕಿ ಪುಡಿ – ಕಾಲು ಟೀ ಚಮಚ.

ತಯಾರಿಸುವ ವಿಧಾನ: ಕೋವಾವನ್ನು ಪುಡಿ ಮಾಡಿಕೊಳ್ಳಿ. ತಿಳಿಸಿರುವ ಡ್ರೈಫ್ರೂಟ್ಸ್ ಸೇರಿಸಿ. ಸಕ್ಕರೆಪುಡಿಯನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಈ ಮಿಶ್ರಣದಿಂದ ಚಿಕ್ಕ ಚಿಕ್ಕ ಉಂಡೆಯನ್ನು ತಯಾರಿಸಿಟ್ಟುಕೊಳ್ಳಿ. ಬೌಲಿಗೆ ಮೈದಾಹಿಟ್ಟನ್ನು ಹಾಕಿ ಜೊತೆಗೆ ತುಪ್ಪ, ಉಪ್ಪನ್ನು ಸೇರಿಸಿ 2 ರಿಂದ 3 ನಿಮಿಷ ಕೈಯಲ್ಲಿ ಚೆನ್ನಾಗಿ ಮಿಶ್ರಣ ಮಾಡಿ. ನಂತರ ನೀರನ್ನು ಸ್ವಲ್ಪ ಸ್ವಲ್ಪವೇ ಹಾಕಿ ಹಿಟ್ಟನ್ನು ಗಟ್ಟಿಯಾಗಿ ಕಲಸಿಕೊಳ್ಳಿ. 20 ನಿಮಿಷ ಮುಚ್ಚಿಡಿ. ತಯಾರಿಸಿದ ಹಿಟ್ಟಿನಿಂದ ದೊಡ್ಡ ದೊಡ್ಡ ಉಂಡೆಗಳನ್ನು ತಯಾರಿಸಿಕೊಳ್ಳಿ. ಚಪಾತಿಯಂತೆ ಲಟ್ಟಿಸಿಕೊಳ್ಳಿ. ತುಂಬಾ ತೆಳುವಾಗಿ ಅಥವಾ ದಪ್ಪವಾಗಿ ಇರದೇ ಒಂದೇ ರೀತಿಯಲ್ಲಿರಲಿ. ಚಿಕ್ಕ ಬೌಲಿನಿಂದ ಒತ್ತಿ ವೃತ್ತಾಕಾರದಲ್ಲಿ ಕತ್ತರಿಸಿಟ್ಟುಕೊಳ್ಳಿ. ಇದು ಚಿಕ್ಕ ಪೂರಿಯಂತೆ ಇರಲಿ. ಕತ್ತರಿಸಿಕೊಂಡ ಹಿಟ್ಟಿನ ಕೊನೆಯ ಸುತ್ತಲೂ ನೀರನ್ನು ಹಾಕಿ. ಎಲ್ಲದಕ್ಕೂ ಹಾಗೇ ಮಾಡಿ. ಮಧ್ಯದಲ್ಲಿ ಹೂರಣದ ಉಂಡೆಯನ್ನಿಡಿ. ಅದರ ಮೇಲೆ ಇನ್ನೊಂದು ವೃತ್ತಾಕಾರದ ಚಿಕ್ಕ ಪೂರಿಯನ್ನಿಡಿ. ಸುತ್ತಲೂ ಕೊನೆಯನ್ನು ಗಟ್ಟಿಯಾಗಿ ಒತ್ತಿ. ನಂತರ ಕೊನೆಯನ್ನು ಮಡುಚುತ್ತಾ ಬನ್ನಿ. ಎಲ್ಲವನ್ನೂ ಹಾಗೇ ತಯಾರಿಸಿಟ್ಟು ಕೊಳ್ಳಿ. ಸಕ್ಕರೆಗೆ ನೀರನ್ನು ಸೇರಿಸಿ ಕುದಿಸಿ. ಕೇಸರಿದಳ ಮತ್ತು ಏಲಕ್ಕಿಪುಡಿಯನ್ನು ಹಾಕಿ 5 ನಿಮಿಷ ಕುದಿಸಿ. ಪಾಕ ಅಂಟಿರಲಿ. ಕೊನೆಯಲ್ಲಿ ನಿಂಬೆರಸ ಸೇರಿಸಿ ಮಿಶ್ರಣ ಮಾಡಿ. ಪಾಕವನ್ನು ಮುಚ್ಚಿಡಿ.

ಎಣ್ಣೆಯನ್ನು ಬಿಸಿ ಮಾಡಿ. ತಯಾರಿಸಿದ ಸೂರ್ಯಕಲಾವನ್ನು ಹಾಕಿ. ಸಣ್ಣ ಉರಿಯಲ್ಲಿ ಎರಡೂ ಬದಿಯನ್ನು ಬೇಯಿಸಿ. ಕೆಂಬಣ್ಣ ಬಂದ ನಂತರ ಎಣ್ಣೆಯಿಂದ ತೆಗೆಯಿರಿ. ಬೆಚ್ಚಗಿರುವ ಸಕ್ಕರೆ ಪಾಕಕ್ಕೆ ಸೂರ್ಯಕಲಾವನ್ನು ಹಾಕಿ 5 ನಿಮಿಷ ಸಕ್ಕರೆ ಹೀರುವಂತೆ ಪಾಕದಲ್ಲಿ ನೆನೆಸಿಡಿ. ಕೊನೆಯಲ್ಲಿ ಪಿಸ್ತಾದಿಂದ ಅಲಂಕರಿಸಿ ಸವಿಯಲು ಕೊಡಿ. ರುಚಿಕರವಾದ ಸೂರ್ಯಕಲಾವನ್ನು ಹಬ್ಬಕ್ಕೆ ತಯಾರಿಸಿ ಸವಿಯಿರಿ.

ನಳಪಾಕ

ಬಾಸುಂದಿ

ಬೇಕಾಗುವ ಸಾಮಗ್ರಿಗಳು: ಹಾಲು– 2 ಲೀಟರ್, ಕೇಸರಿದಳ – 1 ಟೀ ಚಮಚ, ಚಿಕ್ಕದಾಗಿ ಕತ್ತರಿಸಿದ ಬಾದಾಮಿ, ಗೋಡಂಬಿ, ಪಿಸ್ತಾ ಹತ್ತರಂತೆ ಹಾಕಿ, ಸಕ್ಕರೆ – ಅರ್ಧ ಕಪ್, ಏಲಕ್ಕಿಪುಡಿ – ಅರ್ಧ ಟೀ ಚಮಚ .

ತಯಾರಿಸುವ ವಿಧಾನ: ದಪ್ಪ ತಳದ ಬಾಣಲೆಗೆ ಹಾಲನ್ನು ಹಾಕಿ ಕುದಿ ಬರಿಸಿ. ಕೇಸರಿದಳವನ್ನು ಹಾಕಿ ಮಿಶ್ರಣ ಮಾಡಿ. ಮಧ್ಯಮ ಉರಿಯಲ್ಲಿ ಹಾಲು ಕುದಿ ಬಂದಾಗ ಕಟ್ಟಿದ ಕೆನೆಯನ್ನು ತೆಗೆದು ಹಾಲಿನ ಮಧ್ಯದಲ್ಲಿ ಹಾಕುತ್ತಾ ಬನ್ನಿ. ಹೀಗೆ ಪ್ರತಿ ಬಾರಿಯೂ ಮಾಡುತ್ತಾ ಬನ್ನಿ. ಹಾಲು ಕೆನೆಯೊಂದಿಗೆ ಗಟ್ಟಿಯಾಗುತ್ತಾ ಬಂದಾಗ ಕತ್ತರಿಸಿದ ಗೋಡಂಬಿ, ಬಾದಾಮಿ, ಪಿಸ್ತಾವನ್ನು ಹಾಕಿ ಮಿಶ್ರಣ ಮಾಡಿ. ಹಾಲು ಗಟ್ಟಿಯಾಗಲು ಅರ್ಧ ಗಂಟೆ ಬೇಕಾಗುತ್ತದೆ. ನಂತರ ಸಕ್ಕರೆಯನ್ನು ಸೇರಿಸಿ. 5 ನಿಮಿಷ ಕುದಿಸಿ. ಏಲಕ್ಕಿ ಪುಡಿಯನ್ನು ಸೇರಿಸಿ ಮಿಶ್ರಣ ಮಾಡಿ. ಹಾಲು ದಪ್ಪವಾದ ಬಳಿಕ ಒಲೆಯಿಂದ ಇಳಿಸಿ. ಪೂರ್ತಿ ಆರಲು ಬಿಡಿ. ಈಗ ಬಾಸುಂದಿ ಸವಿಯಲು ಸಿದ್ಧ. ಇದನ್ನು ಫ್ರಿಜ್‌ನಲ್ಲಿಟ್ಟು ತಣ್ಣಗೆ ಮಾಡಿ ಸವಿಯಬಹುದು ಅಥವಾ ಹಾಗೆಯೇ ಸವಿಯಬಹುದು.

ಮಾವಿನ ಹಣ್ಣಿನ ರಬ್ಡಿ

ಬೇಕಾಗುವ ಸಾಮಗ್ರಿಗಳು: ಬ್ರೆಡ್ ಸ್ಲೈಸ್ – 3, ದಪ್ಪನೆಯ ಹಾಲು – ಅರ್ಧ ಲೀಟರ್, ಹಾಲಿನ ಪುಡಿ – 4 ಟೇಬಲ್ ಚಮಚ, ಕತ್ತರಿಸಿದ ಬಾದಾಮಿ, ಪಿಸ್ತಾ, ಗೋಡಂಬಿ ಎಲ್ಲವೂ ಒಂದೊಂದು ಟೀ ಚಮಚ, ಸಕ್ಕರೆ – ಕಾಲು ಕಪ್, ಏಲಕ್ಕಿ ಪುಡಿ – 1ಟೀ ಚಮಚ, ತುಪ್ಪ – ಅರ್ಧ ಟೀ ಚಮಚ, ಮಾವಿನ ಹಣ್ಣಿನ ಗಟ್ಟಿ ರಸ – ಅರ್ಧ ಕಪ್ ಅಥವ ಒಂದು ಮಾವಿನ ಹಣ್ಣಿನ ರಸ, ಒಂದು ಮಾವಿನ ಹಣ್ಣಿನ ಚಿಕ್ಕ ಚಿಕ್ಕ ತುಂಡುಗಳು.

ತಯಾರಿಸುವ ವಿಧಾನ: ಮೊದಲು ಬ್ರೆಡಿನ ಸುತ್ತಲೂ ಕತ್ತರಿಸಿಕೊಳ್ಳಿ. ಬಿಳಿಯ ಭಾಗವನ್ನು ಮಿಕ್ಸಿಯಲ್ಲಿ ಪುಡಿ ಮಾಡಿಕೊಳ್ಳಿ. ಹಾಲನ್ನು ದಪ್ಪ ತಳದ ಪಾತ್ರೆಯಲ್ಲಿ ಹಾಕಿ ಕಾಯಿಸಿಕೊಳ್ಳಿ. ಕಾದ ಹಾಲಿಗೆ ಬ್ರೆಡ್‌ನ ಪುಡಿಯನ್ನು ಹಾಕಿ ಮಿಶ್ರಣ ಮಾಡಿ. ಸಕ್ಕರೆಯನ್ನು ಸೇರಿಸಿ. ನಂತರ ಕತ್ತರಿಸಿದ ಗೋಡಂಬಿ, ಬಾದಾಮಿ ಮತ್ತು ಪಿಸ್ತಾವನ್ನು ಸೇರಿಸಿ. ಈ ಮಿಶ್ರಣಕ್ಕೆ ತುಪ್ಪವನ್ನು ಸೇರಿಸಿ. ಮಿಶ್ರಣವು ಗಟ್ಟಿಯಾಗುತ್ತ ಬಂದಾಗ ಒಲೆಯಿಂದ ಇಳಿಸಿ ಆರಲು ಬಿಡಿ. ಆರಿದ ನಂತರ ಮಾವಿನ ಹಣ್ಣಿನ ಗಟ್ಟಿಯಾದ ರಸವನ್ನು ಹಾಕಿ ಮಿಶ್ರಣ ಮಾಡಿ. ನಂತರ ಚಿಕ್ಕದಾಗಿ ಕತ್ತರಿಸಿದ ಮಾವಿನ ಹಣ್ಣಿನ ಹೋಳುಗಳನ್ನು ಸೇರಿಸಿ ಮಿಶ್ರಣ ಮಾಡಿ. ಕೊನೆಯಲ್ಲಿ ಅಲಂಕಾರ ಮಾಡಲು ಚಿಕ್ಕದಾಗಿ ಕತ್ತರಿಸಿದ ಮಾವಿನ ಹಣ್ಣಿನ ಹೋಳುಗಳು, ಬಾದಾಮಿ, ಗೋಡಂಬಿ, ಪಿಸ್ತಾವನ್ನು ಹಾಕಿ ಸವಿಯಲು ಕೊಡಿ.



ಬೇವು–ಬೆಲ್ಲದ 'ಔಷಧ' ಗುಣ

ಡಾ. ಸುಮಾ ಎಚ್.ಆರ್

ಸಂಕ್ರಾಂತಿ ಹಬ್ಬದಂದು 'ಎಳ್ಳು– ಬೆಲ್ಲ', ಯುಗಾದಿ ಹಬ್ಬಕ್ಕೆ 'ಬೇವು–ಬೆಲ್ಲ' ಸವಿಯುವ ಸಂಪ್ರದಾಯವಿದೆ. ಚೈತ್ರ ಮಾಸದ ಮೊದಲನೆಯ ದಿನ ಬರುವ ಈ ಹಬ್ಬದಂದು ಜನರು ಬೇವು ಮತ್ತು ಬೆಲ್ಲವನ್ನು ಸಮ ಪ್ರಮಾಣದಲ್ಲಿ ಸೇವಿಸುತ್ತಾರೆ; ಸಂತೋಷ ಮತ್ತು ದುಃಖವನ್ನು ವರ್ಷವಿಡೀ ಸಮಾನವಾಗಿ ಸ್ವೀಕರಿಸಬೇಕೆಂಬ ಸಂಕೇತವಾಗಿ.

ಯುಗಾದಿ ಹಬ್ಬದಲ್ಲಿ ಬೇವು–ಬೆಲ್ಲ ಸೇವಿಸುವುದು ಕೇವಲ ಸಂಪ್ರದಾಯವಷ್ಟೇ ಅಲ್ಲ. ಇದರ ಹಿಂದೆ ಆರೋಗ್ಯ ವಿಜ್ಞಾನವೂ ಅಡಗಿದೆ.

ಬೇವು ರುಚಿಯಲ್ಲಿ ಕಹಿ. ದೇಹದಲ್ಲಿರುವ ಕಫ ಕರಗಿಸುವ ಗುಣ ಹೊಂದಿದೆ. ಮಾತ್ರವಲ್ಲ, ದೇಹವನ್ನು ತಂಪಾಗಿಸುತ್ತದೆ. ಬೆಲ್ಲ, ರುಚಿಯಲ್ಲಿ ಸಿಹಿ. ಬಿಸಿಯಾಗಿರುವ ದೇಹವನ್ನು ತಂಪಾಗಿಸುವ ಗುಣವನ್ನು ಹೊಂದಿದೆ. ವಸಂತ ಋತುವಿನಲ್ಲಿ ಯುಗಾದಿ ಹಬ್ಬ ಬರುತ್ತದೆ. ಈ ವೇಳೆ ತಾಪಮಾನ ತೀವ್ರವಾಗಿದ್ದು, ದೇಹವೂ ಬಿಸಿಯಾಗುತ್ತಿರುತ್ತದೆ. ಬಿಸಿಯಾದ ದೇಹವನ್ನು ಬೇವು–ಬೆಲ್ಲದ ಮಿಶ್ರಣ ತಂಪಾಗಿಸುತ್ತವೆ.

- ಯುಗಾದಿ ಹಬ್ಬದಲ್ಲಿ ಬೇವಿನ ಕುಡಿ ಮತ್ತು ಹೂವುಗಳನ್ನು ಸೇವಿಸುವ ಅಭ್ಯಾಸವಿದೆ. ಈ ಎಲೆ ಮತ್ತು ಹೂವುಗಳ ಸೇವನೆಯಿಂದ ಕಫ ಪಿತ್ತ ಕಡಿಮೆಯಾಗುತ್ತದೆ. ಹಸಿವು ಹೆಚ್ಚಾಗುತ್ತದೆ. ಅಷ್ಟೇ ಅಲ್ಲ, ಜಂತು ಹುಳುಗಳು ನಾಶವಾಗುತ್ತವೆ.
- ಬೆಲ್ಲ, ದೇಹದಲ್ಲಿನ ವಾತ ಪಿತ್ತವನ್ನು ಶಮನ ಮಾಡುತ್ತದೆ. ಅಷ್ಟೇ ಅಲ್ಲ, ಕಬ್ಬಿಣ, ಕ್ಯಾಲ್ಸಿಯಂ, ಫಾಸ್ಫರಸ್ ರೂಪದಲ್ಲಿ ಮಹಿಳೆಯರನ್ನು ಪೋಷಿಸುತ್ತ, ರಕ್ತಹೀನತೆ, ಆಯಾಸ ಮತ್ತು ಮಲಬದ್ಧತೆಯನ್ನು ಕಡಿಮೆ ಮಾಡುತ್ತದೆ.
- ಬೇಸಿಗೆಯಲ್ಲಿ ಬೆವರಿನಿಂದ ಉಂಟಾಗುವ ಪೋಷಕಾಂಶಗಳ ಕೊರತೆಯನ್ನೂ ಬೆಲ್ಲವು ನೀಗಿಸುತ್ತದೆ.

ಈ ಕಾರಣಗಳಿಗಾಗಿ ಯುಗಾದಿ ಸಮಯದಲ್ಲಿ ಸವಿಯುವ ಬೇವು ಮತ್ತು ಬೆಲ್ಲದ ಮಿಶ್ರಣ ವಾತ, ಪಿತ್ತ, ಕಫ ಮೂರು ದೋಷಗಳನ್ನೂ ಶಮನಗೊಳಿಸುತ್ತದೆ.

ಇದು ಹಬ್ಬದ ನೆಪದಲ್ಲಿ ಸೇವಿಸುವ ಆಹಾರವಾಗಿದ್ದರೂ, ಆರೋಗ್ಯದ ವಿಷಯದಲ್ಲಿ ದೇಹದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸುವ ಔಷಧವೂ ಆಗಿದೆ. ನಮ್ಮ ಪೂರ್ವಜರು ಅನುಸರಿಸಿದ ಸಂಪ್ರದಾಯವು ಕೇವಲ ಸಂಪ್ರದಾಯವಾಗದೆ, ಮಹಿಳೆಯರ ಆರೋಗ್ಯ ರಕ್ಷಾ ಕವಚವೂ ಆಗಿದೆ.

(ಲೇಖಕಿ ಆಯುರ್ವೇದ ತಜ್ಞರು)

ಪೋಷಕರಿಲ್ಲದ ನೋವು ಮರೆಯುವುದು ಹೇಗೆ?

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

- **ನನ್ನ ತಂದೆ ತೀರಿ ಹೋಗಿ 7 ವರ್ಷವಾಯಿತು. ಈಗ ತಾಯಿ ಕೂಡ ತೀರಿ ಹೋಗಿದ್ದಾರೆ. ನನಗೆ ಉತ್ತಮ ಸ್ನೇಹಿತರೂ ಇಲ್ಲ. ಅಮ್ಮನೇ ಉತ್ತಮ ಸ್ನೇಹಿತೆಯಾಗಿದ್ದಳು. ಸಂಬಂಧಿಕರೂ ಇದ್ದೂ ಇಲ್ಲದಂತಿದ್ದಾರೆ. ನನಗೆ ತುಂಬಾ ಬೇಸರವಾಗಿ ಜೀವನ ಸಾಕು ಅನ್ನಿಸುತ್ತಿದೆ. ಪರಿಹಾರ ಸೂಚಿಸಿ.**

ಹೆಸರು, ಊರು ತಿಳಿಸಿಲ್ಲ

ನೀವು ಬಹಳ ಬೇಸರದಲ್ಲಿದ್ದೀರೆಂದು ನಿಮ್ಮ ಪತ್ರದ ಧಾಟಿಯಿಂದಲೇ ತಿಳಿಯುತ್ತದೆ. ನಿಮ್ಮ ಲಿಂಗ, ವಯಸ್ಸು, ವಿದ್ಯಾರ್ಹತೆ, ಉದ್ಯೋಗ ಮುಂತಾದ ಯಾವ ವಿವರಗಳನ್ನೂ ನೀಡಿಲ್ಲ. ಪೋಷಕರನ್ನು ಸಣ್ಣವಯಸ್ಸಿನಲ್ಲಿಯೇ ಕಳೆದುಕೊಂಡಾಗ ಆಗುವ ದುಃಖ ಮತ್ತು ಕಾಡುವ ಅಸಹಾಯಕತೆಗಳು ತುಂಬಾ ಆಳವಾಗಿರುತ್ತವೆ. ಈ ನೋವು ಮರೆಯಲು ಬಹಳಷ್ಟು ಸಮಯಬೇಕು. ಪೋಷಕರು ಬದುಕಿದ್ದಾಗಲೂ ನಿಮ್ಮ ಕ್ಷಮತೆ ಆಸಕ್ತಿ ಮುಂತಾದವುಗಳ ಮೂಲಕ ಸ್ವಂತಿಕೆಯನ್ನು ಗುರುತಿಸಿಕೊಂಡು ಬೇರೆಯ ಸ್ನೇಹ–ಸಂಬಂಧಗಳನ್ನು ನೀವು ಹುಡುಕಿಕೊಂಡಂತಿಲ್ಲ.

ಹಾಗಾಗಿ ಈಗ ಏಕಾಂಗಿತನ ಹೆಚ್ಚಾಗಿ ಕಾಡುತ್ತದೆ. ಈಗಲೂ ಸಮಯ ಮಿಂಚಿಲ್ಲ. ಸ್ವತಂತ್ರವಾಗಿ ಬದುಕಬಲ್ಲ ಪ್ರಕೃತಿದತ್ತ ಮಾನಸಿಕ ಸಾಮರ್ಥ್ಯ ನಿಮ್ಮೊಳಗಿದೆ. ಅದನ್ನು ಗುರುತಿಸಿ ಉತ್ತೇಜಿಸಬೇಕು. ನಿಮ್ಮ ಜೀವನದ ಆಯ್ಕೆ, ಆಸಕ್ತಿ, ಸಾಧ್ಯತೆಗಳನ್ನು ಗುರುತಿಸಿ ಹೊಸ ಹೊಸ ಅವಕಾಶಗಳಿಗೆ ತೆರೆದುಕೊಳ್ಳಿ. ನಿಧಾನವಾಗಿ ಹೊಸ ಸ್ನೇಹ ಸಾಧ್ಯತೆಗಳು ಕಾಣುತ್ತವೆ. ನಿಮ್ಮ ಸ್ನೇಹಕ್ಕೆ ಕೈಚಾಚುವವರು ಸುತ್ತಲೂ ಸಾಕಷ್ಟು ಜನರಿದ್ದಾರೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ

bhoomika@prajavani.co.in

fabindia 60 YEARS OF CELEBRATING INDIA ESTABLISHED 1960

CLEARANCE SALE

FLAT 50% OFF* ON SELECT MERCHANDISE

Till 10th April 2022 | 10 am - 8 pm

Venues:
Safina Plaza, No.84/85, Infantry Road, Bangalore
The Canara Union, No.42, 8th Main, Canara Union Road, Malleswaram, Bangalore

fabfamily | fabindia.com
ALL COVID-19 PROTOCOLS WILL BE TAKEN CARE OF
*T&C Apply

Surya Agency Private Limited

ಫಲವತ್ತತೆ ಕುರಿತು ಕೆಲ ವಿಸ್ಮಯಕಾರಿ ಮಾಹಿತಿಗಳು

- 35 ವರ್ಷದ ನಂತರ ಮಹಿಳೆಯು ಗರ್ಭ ಧರಿಸುವ ಸಾಧ್ಯತೆಗಳು ಗಣನೀಯವಾಗಿ ಕುಗ್ಗಲಿದೆ.
- ಧೂಮಪಾನ, ಮದ್ಯಪಾನ ಮತ್ತು ಕೆಫೀನ್ (ಚಹಾ ಎಲೆಯಲ್ಲಿನ ಅಂಶ) ಸೇವನೆಯು ಫಲವತ್ತತೆ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ
- ಪ್ರತಿ ಋತುಸ್ರಾವದಲ್ಲಿ ಸುಮಾರು 1000 ಅಂಡಾಣುಗಳು ನಾಶಗೊಳ್ಳುತ್ತವೆ.
- ಕಡಿಮೆ ಅಥವಾ ಅಧಿಕ ತೂಕ ಹಾಗೂ ಫಲವತ್ತತೆಯ ಪ್ರಮಾಣ ಕುಗ್ಗುವಿಕೆಗೂ ನೇರ ಸಂಬಂಧವಿದೆ.



ನಮ್ಮ ಧ್ಯೇಯ: ನಿಮ್ಮ ಕನಸುಗಳಿಗೆ ಜೀವ ನೀಡಿ.

ಯುಗಾದಿಯ ವಿಶೇಷ ಕೊಡುಗೆ

ಐವಿಎಫ್ ಪ್ಯಾಕೇಜ್‌ಗಳ ಮೇಲೆ ವಿಶೇಷ ಕೊಡುಗೆ ಪಡೆಯಿರಿ

ಏಪ್ರಿಲ್ ತಿಂಗಳು ಪೂರ್ಣ ಮೊದಲ ಒಪಿಡಿ ಭೇಟಿ ಸೇವೆ ಉಚಿತ.

ಸಂಪರ್ಕಿಸಿ 97314 41111

ನಮ್ಮನ್ನು ಏಕೆ ಆಯ್ಕೆ ಮಾಡಿಕೊಳ್ಳಬೇಕು?

ವೈಯಕ್ತಿಕ ಮತ್ತು ಸಮಗ್ರ ಆರೈಕೆ • ಸಂಪೂರ್ಣ ಖಾಸಗೀತನಕ್ಕೆ ಆದ್ಯತೆ • ಯುವೋತ್ಸಾಹ • ಯಶಸ್ಸಿನ ಅಪೂರ್ವ ದಾಖಲೆ

ಹೆಚ್ಚಿನ ಮಾಹಿತಿಗಳಿಗೆ ಸಂಪರ್ಕಿಸಿ: 97314 41111 ಅಥವಾ ವೀಕ್ಷಿಸಿ www.janyafertility.in

JANYA Fertility And Gyne Clinic

ಡಾ.ಪ್ರತಿಭಾ ಗೋವಿಂದಯ್ಯ
807, 2ನೇ ಮಹಡಿ (ಪ್ಯೂಮಾ ಸ್ಟೋರ್ ಮೇಲ್ಭಾಗ), 27ನೇ ಮುಖ್ಯರಸ್ತೆ, 1ನೇ ಸೆಕ್ಟರ್, ಎಚ್‌ಎಸ್‌ಆರ್ ಲೇಔಟ್, ಬೆಂಗಳೂರು 560 102.